ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 2
ಸಂಚಿಕೆ 3
ಜುಲೈ - ಸೆಪ್ಟೆಂಬರ್ 1973

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore.
Vol. 2. No. 3, July–September 1973. pp. 154 + iv.

Chief Editor: Dr. G. S. Sivarudrappa

ವಾರ್ಷಿಕ ಚಂದಾ : ರೂ. 6-00
ರೂ. 4-00 [ವಿದ್ಯಾರ್ಥಿಗಳಿಗೆ]

ಪ್ರಕಾಶಕರು : ಕೆ. ಸಿ. ಶಿವಪ್ಪ
ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ, ಬೆಂಗಳೂರು-560039

ಮುದ್ರಕರು: ಎಂ. ಎಸ್. ಚಿಂತಾಮಣಿ, ಈಸ್ಟರ್ನ್ ಪ್ರೆಸ್, ಬೆಂಗಳೂರು-560029

ಪರಿವಿಡಿ

ದಿಲ್ಲಿಯ ಚಳಿ

ಕ. ನೆಂ. ರಾಜಗೋಪಾಲ

ಜನವರಿಯಲ್ಲಿ
ದಿಲ್ಲಿಯ ಚಳಿಯಪ್ಪಾ ಚಳಿ:
ಕೂತರೆ ಚಳಿ ನಿಂತರೆ ಚಳಿ
ನಕ್ಕರೆ – ಅತ್ತರೆ ಕೂಡ
ಸಿಳ್ಳೆಹೊಡೆದು ಮುತ್ತಿಕ್ಕುವ ಚಳಿ
ಚಳಿಯಮ್ಮ ಚಳಿ.

ಇವಳೊಂದು ಗ್ರಹಚಾರ–
ಬಿಳಿರಕ್ತದ ಬೊಂಬೆ
ತುಂಬೆ ಹೂ ಪಾದರ ರಂಭೆ
ಮನೆಯಾಚೆ ನಡೆದರೆ ಸಂಗಾತಿ
ಮಾರುಕಟ್ಟೆಯಲ್ಲಿ ಮೂಗು ಮುಟ್ಟಿದ ವೇಳೆ
ಮುಂದ್ವಾದ ಬೆಚ್ಚನೆಯ ಮಾಲಿಗೆ
ಬೆರಳೊಂದನ್ನೆ ತೋರುವ
ರಸ್ತಾಯಿಯೊಳಗೆ ಸದ್ದಿಲ್ಲದೆ ಕಾಡುವ ಚೆಲುವೆ
ನಕ್ಕು ನಲಿಯುವ ಸ್ವಾರ್ಥದ ಚಿಲುಮೆ
ಸುಮ್ಮಗೆ ಮತ್ತೊಂದು ಕಪ್ಪು ಕಾಫಿಗೆ
ಕಣ್ಣಾಡಿಸುವ ಹೆಮ್ಮೆ.

ರಾಜಧಾನಿಯ ಹಾದಿ ಬೀದಿಯಲ್ಲೆಲ್ಲ
ಇವಳದೆ ಕಾರುಬಾರು
(ಕಾರೂ ಬಾರೂ ಇವಳದೇ)
ನಿರಾತಂಕ ನಿಶ್ಚಿಂತ ಕುಡಿದು ಬೀರು
ರಾಜಕೀಯ, ಸಾಮಾಜಿಕ, ಇತ್ಯಾದಿ ಸಾಮೂಹಿಕ ದರಬಾರು
ಆಜು ಬಾಜಿನಲ್ಲಿ ತಣ್ಣನೆ ನುಣ್ಣನೆ ತಕರಾರು.

ದಿಲ್ಲಿಯ ಈ ಕನ್ಯೆಗೇನೆನ್ನಲಿ–
ಇವಳ ಸ್ನೇಹಕ್ಕೆ ಹಿಂದಿಲ್ಲ ಮುಂದಿಲ್ಲ
ಭಾನುವಾರದ ಬಿಡುವಂತೂ ಇಲ್ಲ
ಮೈಗೆ ಮೈ ಅಂಟುವುದಿಲ್ಲ
ಕಣ್ಣೊಳಗೆ ಕುದಿಯೇರುವುದಿಲ್ಲ:
ಇವಳ ಕಾಮನ ಬಿಲ್ಲಿನ ಬಣ್ಣಗಳೆಲ್ಲ
ತಣ್ಣಗೆ – ಬೆಳ್ಳಗೆ – ತೆಳ್ಳಗೆ
ಚಿಂತೆಯೂ ಕೂಡ ಗೂಡಿಗೆ ಸರಿದು
ಗರಿಮುದುರಿದ ಜೀವಕ್ಕೆ
ಕಾವು ಕೂತ ಹಾಗೆ–
ಸಟೆಯಿಲ್ಲದ ದಿಟವಲ್ಲದ 'ಮೆತ್ತಗೆ'.

ನಮ್ಮ ರಾಜಧಾನಿಯಲ್ಲಿ
ಇವಳ ಲೌಕಿಕವೂ ಚಳಿ
ಅಲೌಕಿಕ ಕೂಡ ಐಸ್ಕ್ರೀಮಿನ ತಳಿ
ಇಂಥವಳ ದೆಸೆಯಿಂದ
ಯಮುನೆಯು ಕೂಡ ಹರಿದಾಡುವ ಚಳಿ
ಇಂಥ ದಂಡೆಯ ಮೇಲೆ
ಗಾಂಧಿ ನೆಹರೂ ಕೂಡ ತಣ್ಣಗೆ ಮಲಗಿ
ಯಾರನ್ನೂ ಬಿಡದೆ
ಏನನ್ನೂ ಲೆಕ್ಕಿಸದೆ
ಮುತ್ತಿಕ್ಕುವ
ಚಳಿಯಮ್ಮ ಚಳಿ ಚಳಿಯಪ್ಪಾ ಚಳಿ.

ಪಂಪನ ಅಲಂಕಾರಧ್ವನಿ

ಎಂ. ವಿ. ಸೀತಾರಾಮಯ್ಯ

I

ಕನ್ನಡದಲ್ಲಿ ಧ್ವನಿತತ್ತ್ವ ನಿರೂಪಣೆಗೆ ಮೀಸಲಾದ ಏಕಮಾತ್ರ ಗ್ರಂಥ 'ಶಾರದಾವಿಲಾಸ'; 'ರಸರತ್ನಾಕರ'ದ ಕರ್ತೃ ಸಾಳ್ವನೇ (ಕ್ರಿ. ಶ. ಸು 1550) ಇದನ್ನೂ ಬರೆದಿರಬಹುದೆಂದು ವಿದ್ವಾಂಸರಲ್ಲಿ ಅಭಿಪ್ರಾಯವಿದೆ. ಈಗ ದೊರೆತಿರುವಷ್ಟು ಗ್ರಂಥಭಾಗದಲ್ಲಿ 'ಕಾವ್ಯಪ್ರಕಾಶಿಕೆ' (=ಮಮ್ಮಟನ ಕಾವ್ಯ ಪ್ರಕಾಶ) ಮುಂತಾದ ಸಂಸ್ಕೃತ ಲಕ್ಷಣ ಗ್ರಂಥಗಳನ್ನು ಅನುಸರಿಸಿ ಧ್ವನಿ ಪ್ರಕ್ರಿಯೆಯನ್ನು ತಕ್ಕಮಟ್ಟಿಗೆ ಸವಿವರವಾಗಿ ತಿಳಿಸಿರುವುದು ಕಂಡುಬರುತ್ತದೆ. 'ಕನ್ನಡ ಕುವಲಯಾನಂದ'ದಲ್ಲಿ ಜಾಯಗೌಂಡನು (ಕ್ರಿ. ಶ. 1716–1758)[1] ಅರ್ಥಾಲಂಕಾರಗಳನ್ನು ನಿರೂಪಿಸುವುದಕ್ಕೆ ಮೊದಲು ಧ್ವನಿ, ಗುಣೀಭೂತಧ್ವನಿ. ಚಿತ್ರ – ಈ ಬಗೆಗೆ ನಾಲ್ಕು ಮಾತು ಹೇಳಿದ್ದಾನೆ.

'ಶಾರದಾವಿಲಾಸ'ಕ್ಕಿಂತ ಬಹುಹಿಂದೆಯೆ, ಶ್ರೀವಿಜಯನ 'ಕವಿರಾಜಮಾರ್ಗ'ದಲ್ಲಿ (ಕ್ರಿ.ಶ. ಸು. 860–70) ಮೊತ್ತ ಮೊದಲಿಗೆ ಧ್ವನಿಯ ಪ್ರಸ್ತಾಪವಿದೆ. "ಕನ್ನಡದ 'ಕವಿರಾಜಮಾರ್ಗ'ವೂ ಸಂಸ್ಕೃತದ 'ಧ್ವನ್ಯಾಲೋಕ'ವೂ ಬಹುಶಃ ಏಕಕಾಲದಲ್ಲಿ ರಚಿತವಾದುದೆಂಬುದನ್ನೂ, ಕನ್ನಡನಾಡಿಗೂ ಕಾಶ್ಮೀರಕ್ಕೂ ಇರುವ ಸಾವಿರಾರು ಮೈಲಿಗಳ ದೂರವನ್ನು ನೆನೆದರೆ, ಧ್ವನಿಯ ಮಾತು ಇಷ್ಟೊಂದು ಬೇಗ ಕನ್ನಡದ ಗ್ರಂಥದಲ್ಲಿ ಬಂದಿರುವುದು ಸೋಜಿಗವೆನಿಸುತ್ತದೆ. ಆನಂದ ವರ್ಧನನಿಗಿಂತ ಹಿಂದೆಯೇ ಧ್ವನಿಯ ಪ್ರಸ್ತಾಪ ಎದ್ದಿತ್ತೆಂಬ ವಾದಕ್ಕೆ ಇದು ಪುಷ್ಟಿಕೊಡುತ್ತದೆ" ಎಂಬ ಪ್ರೊ॥ ತೀ. ನಂ. ಶ್ರೀ.ಯವರ ಮಾತನ್ನು ('ಭಾರತೀಯ ಕಾವ್ಯ ಮೀಮಾಂಸೆ'; 3ನೆಯ ಮುದ್ರಣ, 1968, ಪು. 490–91) ಸ್ಮರಿಸಿ, ಪಂಪನ ಕಡೆಗೆ ತಿರುಗಬಹುದು.[2]

---

1 'ಕನ್ನಡ ಕುವಲಯಾನಂದ' ಈಚೆಗೆ (1970) ಡಾ॥ ಎಸ್. ಸಿ. ನಂದೀಮಠ ಅವರಿಂದ ಸಂಪಾದಿತವಾಗಿ ಪ್ರಕಟವಾಗಿದೆ.

2 'ಕವಿರಾಜಮಾರ್ಗಕಾರನು' 'ಧ್ವನಿಯೆಂಬುದಳಂಕಾರಂ' ಎಂದು ಹೇಳಿ, 'ಧ್ವನಿ'ಯನ್ನು ಅಲಂಕಾರ ಮಾಲಿಕೆಗೆ ಸೇರಿಸಿಬಿಟ್ಟಿದ್ದಾನೆ. ಈ ಉಕ್ತಿಯ ಬಗೆಗೆ ಸಾಕಷ್ಟು ಚರ್ಚೆಯಾಗಿದೆ. ಈ ವಿಷಯ ಇಲ್ಲಿಗೆ ಅಪ್ರಸಕ್ತ. ಕುತೂಹಲವುಳ್ಳವರು 'ಭಾರತೀಯ ಕಾವ್ಯಮೀಮಾಂಸೆ (ಪರಿಶಿಷ್ಟಭಾಗ), ಡಾ॥ ಕೆ. ಕೃಷ್ಣಮೂರ್ತಿಯವರ 'ಆನಂದವರ್ಧನನ ಕಾವ್ಯಮೀಮಾಂಸೆ,' (1969 ರ ಮುದ್ರಣ, ಪು. 49–50), ಮತ್ತು 'ಕನ್ನಡದಲ್ಲಿ ಕಾವ್ಯತತ್ತ್ವ'(1964: ಪು. 9–11, ಪು. 37), 'ಕವಿರಾಜಮಾರ್ಗ'ದ ತೃತೀಯ ಮುದ್ರಣ (1968) ದ ಟಿಪ್ಪಣಿ ಭಾಗ (ಪು. 357–365)—ಇವನ್ನು ನೋಡಬಹುದು.

2

ಕನ್ನಡದಲ್ಲಿ 'ಧ್ವನಿ' ಎಂಬ ಮಾತನ್ನು ನಾವು ಕುತೂಹಲದಿಂದ ಎರಡನೆಯ ಸಲ ಸಂಧಿಸುವುದು ಪಂಪನ ಆದಿಪುರಾಣದಲ್ಲಿ (ಕ್ರಿ. ಶ. 941). ಇನ್ನೂ ಖಚಿತವಾಗಿ ಹೇಳುವುದಾದರೆ, ಅಲ್ಲಿ ಧ್ವನಿ ಸಂಬಂಧವಾಗಿ ಬಂದಿರುವ ಮಾತು, 'ಧ್ವನಿಯೆನಿಸಿದಲಂಕಾರ ಧ್ವನಿ' ಎಂದು. ಈ ಮಾತನ್ನು ಕಂಡಕೂಡಲೆ ಆನಂದವರ್ಧನನ ಧ್ವನಿಪ್ರಕ್ರಿಯೆಯ ಪರಿಚಯವುಳ್ಳ ಯಾರಿಗಾದರೂ – ಪಂಪನ ಪದ್ಯದಲ್ಲಿ 'ಅಲಂಕಾರಧ್ವನಿ' ವಿವಕ್ಷಿತವಾಗಿದೆ ಎಂದು ತಟ್ಟನೆ ಹೊಳೆಯದಿರದು. ಈ ಅಂಶವನ್ನು ಮೊತ್ತಮೊದಲು ಹಾಗೆಂದು ಭಾವಿಸಿ, ಪಂಪನು ತನ್ನ ಪದ್ಯದಲ್ಲಿ 'ಅಲಂಕಾರಧ್ವನಿ'ಯನ್ನೇ ಕುರಿತಿದ್ದಾನೆ ಎಂದು ತಿಳಿಸಿದವರು ಡಾ|| ಕೆ. ಕೃಷ್ಣಮೂರ್ತಿಯವರು. "ಪಂಪನ ಮನಸ್ಸಿನಲ್ಲಿ ಈ ಪಾರಿಭಾಷಿಕ ಪದವೂ ಇದ್ದಿತೇ?" ಎಂದು ತೀ. ನಂ. ಶ್ರೀ. ಯವರ ಸಂದೇಹ. (ಭಾ.ಕಾ. ಮೀಮಾಂಸೆ, ಪು. 494). ಈ ಇಬ್ಬರು ವಿದ್ವಾಂಸರ ವಾದಗಳನ್ನು ಪರಿಶೀಲಿಸಿ ನಮ್ಮ ಅಭಿಪ್ರಾಯವನ್ನು ತಿಳಿಸುವ ಮೊದಲು, ಪಂಪನ ಪ್ರಸಕ್ತ ಪದ್ಯವನ್ನೂ ಅದು ಬರುವ ಸಂದರ್ಭವನ್ನೂ ಗಮನಿಸಬಹುದು.

3

ಆದಿನಾಥನು ತಪಸ್ಸು ಮಾಡುತ್ತಿದ್ದಾಗ ಅವನಿಗೆ ತಪೋವಿಘ್ನವುಂಟುಮಾಡಿದ ನಮಿ ವಿನಮಿಗಳನ್ನು ಧರಣೇಂದ್ರನು ವಿಮಾನದಲ್ಲಿ ಕರೆದೊಯ್ದು ರಜತಾಚಲಕ್ಕೆ (ವಿಜಯಾರ್ಧ ಪರ್ವತಕ್ಕೆ) ತೆರಳುತ್ತಾನೆ; ಅವರಿಗೆ ಪರ್ವತ ಪ್ರಾಂತವನ್ನು ತೋರಿಸುತ್ತ ಹೋಗುತ್ತಾನೆ. ಆ ಸಂದರ್ಭದಲ್ಲಿ, ವಿವರಪೂರ್ಣ ರಜತಾಚಲ ವರ್ಣನೆ ಬರುತ್ತದೆ. ಪ್ರಸಕ್ತಭಾಗ ಇದು: [3]

ಕಾಮರಾಗಮಯಮಾಯ್ತೇನೀ ನಗಂ ರಮ್ಯಮೋ (9–116).

ಮಿಡಿವಂ ಬೀಣೆಯನಿವನಿವ–
ಳೊಡನೆಸೆವಳ್ ಬೆರಲ ಕೊರಲ ಕೂಟಂ ಬೆರಲಂ
ಮಿಡಿಯಿಸಿದುದೆನಿಸಿ ರಾಗದ
ತೊಡರೊಳ್ ತೊಡರ್ದಿಪ್ಪುವಲ್ಲಿ ಕಿನ್ನರ ಯುಗಲಂ (9–117)

---

[3] ಡಾ|| ಕೃಷ್ಣಮೂರ್ತಿಯವರೂ ಪ್ರೊ|| ತೀ. ನಂ. ಶ್ರೀ ಯವರೂ ಪಂಪನ ಪ್ರಸಕ್ತ ಪದ್ಯವನ್ನು ಮಾತ್ರ ಉದ್ಧರಿಸಿಕೊಟ್ಟಿದ್ದಾರೆ. ಪ್ರಕರಣದ ಹೆಚ್ಚಿನ ಪರಿಚಯವಾಗಲೆಂದು, ಪದ್ಯದ ಹಿಂದಿನ ಇನ್ನೆರಡು ಪದ್ಯಗಳನ್ನು ಇಲ್ಲಿ ಕೊಟ್ಟಿದೆ. ಪದ್ಯಗಳ ಪಾಠ ಪ್ರೊ|| ಕೆ. ಜಿ. ಕುಂದಣಗಾರರು ಸಂಪಾದನೆಮಾಡಿರುವ ಮುದ್ರಣದ್ದು. (ಪ್ರಕಾಶಕರು: ಅನಂತ ಅಣ್ಣಾರಾವ್ ಚೌಗುಲೆ, ಶ್ರೀ ಚಂದ್ರಪ್ರಭ ಪ್ರಿಂಟಿಂಗ್ ಪ್ರೆಸ್, ಬೆಳಗಾಂವಿ; 1953).

ಶ್ರುತಿಸೌಖ್ಯಾವಹವಲ್ಲಕೀ ಕ್ವಣಿತದೊಳ್ ಕರ್ಪೂರ ಪಾಲೀ ವಿಮಿಶ್ರಿತ ತಾಂಬೂಲ ರಸೋತ್ಕಟ ಪ್ರಮದದೊಳ್ ನಾನಾ ರಸಾಸ್ವಾದದೊಳ್ ರತರಾಗೋತ್ಸವಮಂಗ ಜೋತ್ಸವಮನಾಳ್ದಿರ್ಪನ್ನೆಗಂ ಸಿದ್ಧದಂಪತಿಗಳ್ ಕ್ರೀಡಿಸುತಿರ್ಪರೀ ನಗತಟಶ್ರೀಖಂಡ ಷಂಡಂಗಳೊಳ್ (9–118)

ಧ್ವನಿಯೆನಿಸಿದಲಂಕಾರ–
ಧ್ವನಿಯೆಸೆವಿನ* ಮೆಸೆವುದಲ್ಲಿ* ಮಧುರ ವಿಪಂಚೀ–
ಧ್ವನಿಯೊಡನನೇಕರಾಗ–
ಧ್ವನಿಯೆಸೆಸೊಗಯಿಪುದು ಕಿನ್ನರಧ್ವನಿ ನಗದೊಳ್.[4] (9–119)
[*ಪಾಠಾಂತರ: ಮೆಸೆವುದಿಲ್ಲ (ಅ). ಮೆಸೆವುವಿಲ್ಲಿ (ಅ II); ಮೆಸೆವುವಲ್ಲಿ (ಬ)].

ಡಾ॥ ಕೆ. ಕೃಷ್ಣಮೂರ್ತಿಯವರು 'ಆನಂದವರ್ಧನನ ಕಾವ್ಯಮೀಮಾಂಸೆ' ಎಂಬ ಗ್ರಂಥದಲ್ಲಿ – 'ಧ್ವನ್ಯಾಲೋಕ'ದ "ವಿಷಯವಾಗಿ ಯಾವ ಹೆಚ್ಚಿನ ವಿವರಗಳೂ ನೃಪತುಂಗನಿಗೆ[5] ತಿಳಿದಿದ್ದಂತೆ ಭಾಸವಾಗುವುದಿಲ್ಲ" ಎಂದೂ, "ಪಂಪನ ಕಾಲಕ್ಕೆ ಆಗಲೇ ಧ್ವನ್ಯಾಲೋಕದ ಪ್ರಕ್ರಿಯೆ ಪರಿಚಿತವಾಗಿತ್ತೆಂದೂ ನೃಪತುಂಗನ ಕಾಲದಲ್ಲಿದ್ದ ಅನಿಶ್ಚಿತ ಹಾಗೂ ಅಸ್ಪಷ್ಟ ಕಲ್ಪನೆ ದೂರವಾಗಿದ್ದಿತೆಂದೂ" ಹೇಳಿ. ಆದಿಪುರಾಣದ ಮೇಲ್ಕಂಡ ಪದ್ಯಕ್ಕೆ (9–119) "ಸ್ವರಸ" ವಾಗಿ ಹೀಗೆ ಅರ್ಥಮಾಡಿದ್ದಾರೆ:

"ಆ ಬೆಟ್ಟದಲ್ಲಿ ಕಿನ್ನರರು ಸಪ್ತತಂತ್ರೀ ವೀಣೆಗಳನ್ನು ಬಾರಿಸಿಕೊಂಡು ಹಾಡುತ್ತಿರುವಾಗ ಅನೇಕ ಬೇರೆ ಬೇರೆ ರಾಗಚ್ಛಾಯೆಗಳು ಏಕ ಕಾಲದಲ್ಲಿ ವ್ಯಂಗ್ಯವಾಗುತ್ತಿದ್ದುವು; ವ್ಯಂಗ್ಯಾರ್ಥದ ಚಮತ್ಕಾರವೇ ಪ್ರಧಾನವಾಗಿ 'ಧ್ವನಿ' ಕಾವ್ಯ (=ಉತ್ತಮ ಕಾವ್ಯ) ವೆನಿಸಿಕೊಳ್ಳಲು ಯೋಗ್ಯವಾದ 'ಅಲಂಕಾರ ಧ್ವನಿ'ಯಲ್ಲಿ ವಿಧವಿಧವಾದ ಅಲಂಕಾರಾಂತರಗಳು ಅಭಿವ್ಯಕ್ತವಾಗುವಂತೆ–ಎಂದು"

---

4 ಪಂಪನು ಆದಿಪುರಾಣ ರಚನೆಯಲ್ಲಿ ಜಿನಸೇನಾಚಾರ್ಯರ ಪೂರ್ವಪುರಾಣವನ್ನು ಅನುಸರಿಸಿದ್ದಾನೆ. ಮೂಲಕೃತಿಯೊಂದಿಗೆ ಪಂಪನದನ್ನು ಹೋಲಿಸಿ ನೋಡಿದಾಗ, ಈ ಮೂರು ಪದ್ಯಗಳೂ ಕವಿಯ ಸ್ವತಂತ್ರರಚನೆಗಳಾಗಿ ಕಂಡುಬಂದವು. ಅಷ್ಟೇ ಅಲ್ಲ. ಪುರಾಣದ ಈ ಭಾಗದಲ್ಲಿ. ಧ್ವನಿಶಬ್ದಕ್ಕೆ ಪರ್ಯಾಯಗಳಾದ ರವ. ಸ್ವನ. ಮುಂತಾದುವು ಪ್ರಯೋಗವಾಗಿದೆ ಹೊರತು 'ಧ್ವನಿ' ಶಬ್ದದ ಪ್ರಯೋಗವಿಲ್ಲ. ಇದರಿಂದ, ಇಲ್ಲಿ ಪಂಪನು 'ಧ್ವನಿ' ಶಬ್ದವನ್ನು 'ಸದ್ದು' ಎಂಬ ಸಾಮಾನ್ಯಾರ್ಥದಲ್ಲಿಯೂ ಪಾರಿಭಾಷಿಕಾರ್ಥದಲ್ಲಿಯೂ ಚಮತ್ಕಾರವಾಗಿ ಪ್ರಯೋಗಿಸಿರುವನೆಂದು ಊಹಿಸಲವಕಾಶವಿದೆ.

5 ಕವಿರಾಜಮಾರ್ಗದ ಕರ್ತೃ ನೃಪತುಂಗ ಎಂಬುದು ಅವರ ನಿಲುವು: ನಮ್ಮದು **ಶ್ರೀವಿಜಯ** ಎಂದು.

"ಈ ಅರ್ಥವೇ ಪಂಪನ ಮನಸ್ಸಿನಲ್ಲಿದ್ದಿರಬೇಕೆಂಬುದು ಸುನಿಶ್ಚಿತ" ಎಂಬುದು ಡಾ॥ಕೃಷ್ಣಮೂರ್ತಿಯವರ ಸ್ಪಷ್ಟವಾದ ನಿಲುವು: "'ಧ್ವನಿ'ಯೆಂಬ ಪದಕ್ಕೆ ನಾನಾರ್ಥಗಳನ್ನು ಸ್ವೀಕರಿಸಿದ ಹೊರತು ಪದ್ಯಕ್ಕೆ ಅರ್ಥಮಾಡಲು ಹೊರಡುವಂತೆಯೇ ಇಲ್ಲ. …ಈ ನಾನಾರ್ಥಗಳನ್ನೊಪ್ಪಿಕೊಂಡರೆ ಮಾತ್ರ ಪದ್ಯದಲ್ಲಿರುವ ಉಪಮಾನೋಪಮೇಯಗಳಿಗೆ ಸಾಮಂಜಸ್ಯ ಸಾಧ್ಯ" ಎಂಬುದು ಅವರು ತಮ್ಮ ನಿಲುವಿಗೆ ಕೊಡುವ ಕಾರಣ.

ಪ್ರೊ. ತೀ. ನಂ. ಶ್ರೀ. ಯವರು ಡಾ॥ ಕೃಷ್ಣಮೂರ್ತಿಯವರ ಅರ್ಥ ವಿವರಣೆಯನ್ನು ಗಮನಿಸಿ, ಅವರ ನಿರ್ಧಾರದ ಬಗೆಗೆ. "ಇದು ಇಷ್ಟು 'ಸುನಿಶ್ಚಿತ'ವೆಂದು ನಮಗೆ ತೋರುವುದಿಲ್ಲ" ಎಂದು ಅಭಿಪ್ರಾಯ ಪಟ್ಟು. ಪದ್ಯದ ಆಶಯವನ್ನು ಹೀಗೆ ವಿವರಿಸಿದ್ದಾರೆ:

> "ಆ ಬೆಟ್ಟದಲ್ಲಿ ಕಿನ್ನರರು ಬಾಜಿಸುವ ಮಧುರವಾದ ವೀಣೆಯ ಧ್ವನಿಯೊಂದಿಗೆ ಅವರು ಹಾಡುವ ಅನೇಕ ರಾಗಗಳ ಧ್ವನಿಯೂ ಕಲೆತು ಕೇಳಿಬರುವಾಗ. ಆ ಗಾಯನ ವಾದನ ಕಾಲದಲ್ಲಿ ಕಿನ್ನರ ಸ್ತ್ರೀಪುರುಷರ ಬಳೆ ಕಡಗ ಮೊದಲಾದ ಅಲಂಕಾರಗಳು ಅಲುಗಾಡಿ ಅವುಗಳ ಧ್ವನಿಯೂ ಇಂಪಾಗಿ ಕೇಳಿಸುತ್ತಿದ್ದಿತು: ಹೀಗೆ ಇಲ್ಲಿ ಮೂರು ಧ್ವನಿಗಳ ಮಿಳನವು ಮನೋಹರವಾಗಿದ್ದಿತು—ಎಂಬುದು ಇಲ್ಲಿ ಕವಿಯ ಮುಖ್ಯಾಶಯ".

ಪಂಪನ ಪದ್ಯಕ್ಕೆ ಕೃಷ್ಣಮೂರ್ತಿಯವರು ನೀಡಿರುವ ವಿವರಣೆಯನ್ನು ತೀ. ನಂ. ಶ್ರೀ. ಯವರು ಒಪ್ಪದಿರಲು ಮುಖ್ಯ ಕಾರಣ. "ಪಂಪನಿಂದ ಸುಮಾರು ಎರಡು ಶತಮಾನಗಳ ಈಚೆಗಿದ್ದ 'ಕಾವ್ಯಾವಲೋಕನ'ಕಾರನೇ ಧ್ವನಿಯ ಮಾತನ್ನು ಎತ್ತದಿರುವುದನ್ನು ನೋಡಿದರೆ. ಪಂಪನಕಾಲಕ್ಕಾಗಲೇ 'ಧ್ವನ್ಯಾಲೋಕ'ವು ಕನ್ನಡ ನಾಡಿನಲ್ಲಿ ಪ್ರಚುರವಾಗಿದ್ದಿತೆಂದು ನಂಬುವುದು ಕಷ್ಟ" ಎಂಬ ಅವರ ಸಂದೇಹ. ಆದ್ದರಿಂದ. "ಪಂಪನ ಪದ್ಯಕ್ಕೆ 'ಧ್ವನ್ಯಾಲೋಕ'ದ ಪೂರ್ಣ ಪ್ರಕ್ರಿಯೆಯನ್ನು ಅನ್ವಯಿಸಿ" ಕೃಷ್ಣಮೂರ್ತಿಯವರು ಕೊಟ್ಟಿರುವ ವಿವರಣೆಯನ್ನು ಅವರು ಸ್ವೀಕರಿಸಲು ಸಿದ್ಧರಾಗಿಲ್ಲ.

4

ಆನಂದವರ್ಧನನು ಪ್ರತಿಪಾದಿಸಿದ್ದ ಧ್ವನಿಪ್ರಕ್ರಿಯೆ ಪಂಪನಿಗೆ ತಿಳಿದಿದ್ದಿತೇ ಇಲ್ಲವೇ ಎಂಬುದು ವಿಚಾರಣೀಯವಾದ ಅಂಶ. ನೃಪತುಂಗನ ಕಾಲದಲ್ಲೇನೋ ಧ್ವನಿಯ ಪ್ರಸ್ತಾವ 'ಕರ್ಣಾಕರ್ಣಿಕೆ'ಯಾಗಿ. ಅಥವಾ 'ಪ್ರವಾದ'ಮಾತ್ರವಾಗಿ, ಕನ್ನಡ ನಾಡಿನಲ್ಲಿ ಪ್ರಚುರವಾಗಿದ್ದಿರಬಹುದು ಎಂಬ ಬಗೆಗೆ ಈ ಇಬ್ಬರದೂ ಒಮ್ಮತ. ಆದರೆ. ಕಾವ್ಯಾವಲೋಕನದಲ್ಲಿ ಧ್ವನಿಯ ಪ್ರಸ್ತಾವ ಇಲ್ಲವೆಂಬ ಮಾತ್ರಕ್ಕೆ ಪಂಪನಿಗೆ ಧ್ವನಿತತ್ತ್ವ ತಿಳಿದಿರಲಿಲ್ಲವೆಂದು ತೀರ್ಮಾನಿಸುವುದು ಸರಿಯೆನಿಸದು. ಹಾಗೆಯೇ. ಪಂಪನ ಆದಿಪುರಾಣದ (ಇದು ಲಕ್ಷಣ ಗ್ರಂಥವಲ್ಲ. ಕಾವ್ಯ) ವಿವಾದಾಸ್ಪದವಾದ ಒಂದು ಪದ್ಯದ ಉಕ್ತಿ ಬಲದ

ಮೇಲೆ. "ಆನಂದವರ್ಧನನ ನವೀನ ವಿಚಾರಸರಣಿ ಎಷ್ಟುಬೇಗ ಭರತಖಂಡವ್ಯಾಪ್ತವೂ ಪಸರಿಸಿತೆನ್ನಲು ಇದಕ್ಕಿಂತಲೂ ಬೇರೆ ನಿದರ್ಶನದ ಕಾರಣವಿಲ್ಲ" ಎಂಬ ಕೃಷ್ಣಮೂರ್ತಿ ಯವರ ಮಾತಿಗೂ ಆಧಾರ ಸಾಲದು ಎನಿಸುತ್ತದೆ. "ನಾಗವರ್ಮನ ಕಾವ್ಯಾವಲೋಕನ ದಲ್ಲಿ ಇವರ ಪ್ರಸ್ತಾಪವೇ ಬಾರದುದು ವಿಸ್ಮಯಜನಕವಾದ ಅಂಶ" ಎಂದೇನೋ ಇವರು ಒಪ್ಪುತ್ತಾರೆ.[6]

ಆದಿಪುರಾಣದ ಕಾಲ ಕ್ರಿ.ಶ. 941. ಇದಕ್ಕೂ 'ಧ್ವನ್ಯಾಲೋಕದ' ಕಾಲಕ್ಕೂ 50–60 ವರ್ಷಗಳಷ್ಟು ಅಂತರ. ಈ ಅವಧಿಯಲ್ಲಿ ಧ್ವನ್ಯಾಲೋಕದ ಖಂಡನ ಮಂಡನಗಳೆರಡೂ ನಾಗುತ್ತಿದ್ದುವು. ಈ ಅನಿಶ್ಚಿತ ಸ್ಥಿತಿಯಲ್ಲಿ ಆನಂದವರ್ಧನನ ಧ್ವನಿಪ್ರಕ್ರಿಯೆ ಕನ್ನಡ ನಾಡಿನಲ್ಲಿ ಪ್ರಚಾರಗೊಂಡು, ಪಂಪನಿಂದ ಸ್ವೀಕೃತವಾಗಿತ್ತು ಎಂದು (ವಿಭಿನ್ನವ್ಯಾಖ್ಯಾನಕ್ಕೆ ಆಸ್ಪದಕೊಡುವ ಪಂಪ ಪದ್ಯವೊಂದರ ಆಧಾರದ ಮೇಲೆ) ತೀರ್ಮಾನಿಸುವುದು ಸಮರ್ಥನೀಯವಾಗದು.[7] ಅಭಿನವಗುಪ್ತನು (10ನೆಯ ಶತಮಾನದ ಕೊನೆ ಮತ್ತು 11ನೇಯ ಶತಮಾನದ ಮೊದಲು) ಧ್ವನಿ ಸಿದ್ಧಾಂತವನ್ನು ನಿರ್ವಿವಾದವಾಗಿ ಸ್ಥಾಪನೆಮಾಡಿದಮೇಲೆ, ಅದು ಕಾಶ್ಮೀರದಿಂದ ಹೊರಟು ಭರತ ಖಂಡದ ಇತರ ಭಾಗಗಳಲ್ಲೂ ಕ್ರಮಕ್ರಮವಾಗಿ ಬೇರೂರಿತೆಂದು ಅನುಮಾನಿಸುವುದು ಸಂಭಾವ್ಯವಾಗಿ ಕಾಣುತ್ತದೆ. ಪಂಪನ ಕಾಲಕ್ಕೆ ಅದು ಕರ್ಣಾಟಕದಲ್ಲಿ ರೂಢಮೂಲ ವಾಗಿದ್ದಿದ್ದರೆ, ರಾಜಶೇಖರನ (ಕ್ರಿ.ಶ. 10ನೆಯ ಶ. ಮಾ.) ಗ್ರಂಥದಿಂದ ಕವಿಸಮಯ ಪ್ರಕರಣವನ್ನು ಸ್ವೀಕರಿಸಿದ ಲಕ್ಷಣಕಾರ ನಾಗವರ್ಮನು (12ನೇ ಶ.ಮಾ.) ಧ್ವನಿಯ ಪ್ರಾಸಂಗಿಕ ಪ್ರಸ್ತಾವವನ್ನಾದರೂ ಮಾಡದಿರುತ್ತಿರಲಿಲ್ಲ. ಈ ಅಂಶವನ್ನು ಗಮನಿಸಿದರೆ, ನಾಗವರ್ಮನ ಕಾಲದಲ್ಲೂ ಧ್ವನಿಸಿದ್ಧಾಂತ ಇನ್ನೂ ಕನ್ನಡ ದೇಶದಲ್ಲಿ ಪ್ರತಿಷ್ಠಿತವಾಗಿರಲಿಲ್ಲ ವೆನ್ನಬೇಕಾಗುತ್ತದೆ. ಹೀಗಿರುವಲ್ಲಿ, ಲಕ್ಷಣಕಾರ ನಾಗವರ್ಮನು ಕಾವ್ಯ ಧ್ವನಿಯ ವಿಚಾರವನ್ನು ಎತ್ತದಿರುವುದು ಎಷ್ಟು ವಿಸ್ಮಯಕರವೋ ಕವಿ ಪಂಪನು ತನ್ನ ಕಾವ್ಯದಲ್ಲಿ ಧ್ವನಿಪ್ರಕ್ರಿಯೆಯನ್ನು ಉಪಮಾನವಾಗಿ ಬಳಸಿಕೊಂಡನೆನ್ನುವುದು ಅಷ್ಟೇ ವಿಸ್ಮಯಕರ. ಆದ್ದರಿಂದಲೇ, ತೀ. ನಂ. ಶ್ರೀ. ಯವರು ಧ್ವನಿ ತತ್ತ್ವ ಭಿನ್ನವಾದ ಅರ್ಥವನ್ನು ಪದ್ಯದಲ್ಲಿ ಹೊರಡಿಸಲು ಪ್ರಯತ್ನಿಸಿರಬೇಕೆಂದು ತೋರುತ್ತದೆ.

5

ಪದ್ಯಕ್ಕೆ ಅನ್ವಯಾನುಸಾರ ಅರ್ಥಮಾಡಿ, ಅನಂತರ 'ಅಲಂಕಾರಧ್ವನಿ'ಯ ವಿಶೇಷಾರ್ಥವನ್ನು ಹುಡುಕಹೊರಡುವುದು ಸರಿಯಾದ ಕ್ರಮ. ಮೇಲಿನ ಅರ್ಥ ವಿವರಣೆಗಳಲ್ಲಿ

---

6 'ಆನಂದವರ್ಧನನ ಕಾವ್ಯಮೀಮಾಂಸೆ', ಪು. 51.

7 ಕವಿರಾಜಮಾರ್ಗದ ಕಾಲದಲ್ಲಂತೂ ಧ್ವನಿಸಿದ್ಧಾಂತ ಕರ್ಣಾಟಕದಲ್ಲಿ ವಾದಗ್ರಸ್ತ ಸ್ಥಿತಿಯಲ್ಲಿ ಇದ್ದಿರಬೇಕು. ಹಾಗಿಲ್ಲದಿದ್ದರೆ, 'ಧ್ವನಿಯೆಂಬುದಲಂಕಾರಂ' ಎಂಬ ಭಿನ್ನ ದೃಷ್ಟಿಯ ಸಮರ್ಥೋಕ್ತಿ ಕೇಳಿಬರುತ್ತಿರಲಿಲ್ಲ.

ಅನ್ವಯ ಹಿಡಿಯುವ ಪ್ರಯತ್ನ ನಡೆದಿಲ್ಲ. ಆದ್ದರಿಂದ, ಅರ್ಥಕ್ಲೇಶಕ್ಕೆ ಅವಕಾಶವಾಗಿದೆ. ಪದ್ಯದ ಅನ್ವಯ ಕ್ರಮ ಹೀಗೆ[8].

ಅಲ್ಲಿ ಮಧುರ **ವಿಪಂಚೀಧ್ವನಿ 'ಧ್ವನಿ'**ಯೆನಿಸಿದ
ಅಲಂಕಾರಧ್ವನಿ ಎಸೆವಿನಂ ಎಸೆವುದು; (ನಗದೊಳ್)
ಒಡನೆ **ಕಿನ್ನರಧ್ವನಿ** ಅನೇಕ **ರಾಗಧ್ವನಿ**ಯೆನೆ
ಸೊಗಯಿಪ್ಪುದು.

ಈ ಅನ್ವಯ ಕ್ರಮದಲ್ಲಿ – 'ವಿಪಂಚೀಧ್ವನಿ ಎಸೆವುದು.' 'ಕಿನ್ನರಧ್ವನಿ ಸೊಗಯಿಪ್ಪುದು' ಎಂಬ ಎರಡು ಪ್ರತ್ಯೇಕ ವಾಕ್ಯಗಳಲ್ಲಿ ಏಕಕಾಲದಲ್ಲಿ (='ಒಡನೆ') ನಡೆಯುವ ಎರಡು ಕ್ರಿಯೆಗಳು (=ಎಸೆವುದು, ಸೊಗಯಿಪ್ಪುದು) ವರ್ಣಿತವಾಗಿವೆ. ಡಾ|| ಕೃಷ್ಣಮೂರ್ತಿಯವರು ಗ್ರಹಿಸಿರುವಂತೆ ಮೊದಲ ವಾಕ್ಯವನ್ನು ಉಪಮಾನ ವಾಕ್ಯವಾಗಿ ಇಟ್ಟುಕೊಂಡರೆ, 'ಎಸೆವುದು' ಎಂಬ ಕ್ರಿಯಾಪದಕ್ಕೆ ಉಪಪತ್ತಿಯನ್ನು ಕಲ್ಪಿಸಲಾಗುವುದಿಲ್ಲ. ಆದ್ದರಿಂದ, ಪದ್ಯದಲ್ಲಿ ಉಪಮಾನೋಪಮೇಯಗಳು ಇಲ್ಲ ಎಂಬುದು ಸ್ಪಷ್ಟ. ಎಂದ ಮೇಲೆ, 'ಎಸೆವಿನಂ' ಎಂಬ ಪದದಲ್ಲಿ 'ಇನಂ' ಎಂಬುದು 'ಸತಿಸಪ್ತಮಿ'ಯ ಅರ್ಥದಲ್ಲಿ ಬಂದಿದ್ದು, ಪದಕ್ಕೆ 'ಶೋಭಿಸುತ್ತಿರಲು', 'ಶೋಭಿಸುವಲ್ಲಿ' ಎಂದು ಅರ್ಥಮಾಡುವುದು ಉಚಿತ: ಸಾದೃಶ್ಯಾರ್ಥ ಹೊಂದುವುದಿಲ್ಲ – ಸತಿಸಪ್ತಮಿಯ ಅರ್ಥವನ್ನು ಸ್ವೀಕರಿಸುವುದರಿಂದ ಮಾತ್ರ 'ಎಸೆವುದು' ಎಂಬ ಮುಂದಿನ ಕ್ರಿಯಾಪದ ಸೋಪಪತ್ತಿಕವಾಗುತ್ತದೆ. (ಪದ್ಯದಲ್ಲಿ ಉಪಮಾನೋಪಮೇಯಗಳು ಇಲ್ಲ ಎಂದರೂ, 'ಅಲಂಕಾರಧ್ವನಿ' ಎಂದರೇನು ಎಂಬ ಸಮಸ್ಯೆ ಉಳಿದೇ ಉಳಿಯುತ್ತದೆ. ಇದನ್ನು ಮುಂದೆ ವಿಚಾರಮಾಡಿದೆ.)

ಇನ್ನು ತೀ. ನಂ. ಶ್ರೀ. ಯವರ ಅರ್ಥವಿವರಣೆಯನ್ನು ಪರಿಶೀಲಿಸಬಹುದು:

ಅವರ ವಿವರಣೆಯ ಪ್ರಕಾರ, ಮೂರು 'ಧ್ವನಿ'ಗಳು 'ಶಬ್ದಮಾಡುತ್ತಿದ್ದುವು' (='ಎಸೆ'ಯುತ್ತಿದ್ದುವು)[9]. ಇವರು ಹೊರಡಿಸುವ ಅರ್ಥವನ್ನು ಅನ್ವಯಕ್ರಮದಲ್ಲಿ ಹೀಗೆ ಕೂಡಿಸಬಹುದು: "(ಧ್ವನಿಯೆನಿಸಿದ) ಅಲಂಕಾರಧ್ವನಿ (=ಬಳೆ ಕಡಗ ಮೊದಲಾದ ಒಡವೆಗಳ ಧ್ವನಿ) ಕೇಳಿಬರುವಂತೆ, ಮಧುರ ವಿಪಂಚೀಧ್ವನಿ ಶಬ್ದಮಾಡುತ್ತಿತ್ತು (ಅಥವಾ ಶೋಭಿಸುತ್ತಿತ್ತು): ಅದರೊಂದಿಗೆ ಕಿನ್ನರರ ಅನೇಕ ರಾಗಗಳ ಧ್ವನಿಯೂ ಕಲೆತು ಮನೋಹರವಾಗಿತ್ತು (=ಸೊಗಯಿಪ್ಪುದು)".

---

[8] ಪದ್ಯದ ಈಗಿನ ಪಾಠ ಸರ್ವಸಮ್ಮತವಾಗಿ ಉಳಿದುಬಂದಿದೆ. ಅದು ನಮಗೂ ಸಮ್ಮತ. ಆದ್ದರಿಂದ, ಪಾಠಾಂತರಗಳನ್ನು ಗಮನಿಸಿಲ್ಲ.

[9] "ಹಳಗನ್ನಡದಲ್ಲಿ, ಎಸೆ=ಶಬ್ದಮಾಡು: ತಮಿಳಿನ 'ಇಶೈ' ಧಾತುವನ್ನು ಹೋಲಿಸಿ". (ಛಾ. ಕಾ. ಪಿ., ಪು. 495, ಅಡಿ ಟಿಪ್ಪಣಿ). 'ಇಶೈ' ಎಂದರೆ ಸಂಗೀತ, ಗಾನ ಎಂದೂ ಆಗುತ್ತದೆ.

ಈ ವಿವರಣೆಯ ಸಂಬಂಧವಾಗಿ ಮುಖ್ಯವಾಗಿ ಮೂರು ಆಕ್ಷೇಪಣೆಗಳಿಗೆ ಅವಕಾಶವಿದೆ:

(1) 'ಅಲಂಕಾರ ಧ್ವನಿ' ಎಂಬುದಕ್ಕೆ ಭೂಷಣಧ್ವನಿ ಎಂಬ ಅರ್ಥವನ್ನು ಸ್ವೀಕರಿಸಿದರೆ, ಕೃಷ್ಣಮೂರ್ತಿಯವರು ಅಭಿಪ್ರಾಯ ಪಟ್ಟಿರುವಂತೆ, 'ಧ್ವನಿಯೆನಿಸಿದ' ಎಂಬ ವಿಶೇಷಣ ಹೊಂದಿಕೆಯಾಗುವುದು ಕಷ್ಟ.

(2) 'ಅಲಂಕಾರಧ್ವನಿ' ಎಂಬ ಪದದಲ್ಲಿ 'ಅಲಂಕಾರ'ಕ್ಕೆ 'ಬಳೆ ಕಡಗ ಮುಂತಾದ ಅಲಂಕಾರಗಳು' ಎಂದು ಅರ್ಥವಿಸುವುದು ತೀರ ಸರಳವಾಗಿ ಕಾಣುತ್ತದೆ. ಅಲ್ಲದೆ, 'ಅಲಂಕಾರ' ಎಂದರೆ 'ಆಭರಣ' (=ಒಡವೆ) ಎಂಬ ಸಾಮಾನ್ಯಾರ್ಥ ಬೋಧೆಯಾಗುತ್ತದೆಯೇ ಹೊರತು ಬಳೆ, ಕಡಗ ಎಂಬ ವಿಶಿಷ್ಟ ಅರ್ಥಗಳಿಗೆ ಅವಕಾಶವಿಲ್ಲ. 'ಶಬ್ದಕುಶಲನಾದ ಪಂಪ' (ಇದು ತೀ. ನಂ. ಶ್ರೀ. ಯವರು ಮಾತು) ಪ್ರಕರಣೋಚಿತವಲ್ಲದ ಪದಗಳನ್ನು ಉಪಯೋಗಿಸಲಾರ. ಪದ್ಯದಲ್ಲಿ 'ಅಲಂಕಾರ ಧ್ವನಿ ಎಸೆವಿನಂ' ಎಂಬ ಮಾತುಗಳನ್ನು 'ವಿಪಂಚೀಧ್ವನಿ'ಯೊಂದಕ್ಕೆ ಮಾತ್ರ ಅನ್ವಯಮಾಡಬೇಕು: ಏಕೆಂದರೆ ವೀಣೆಬಾರಿಸುವಾಗ ಬಳೆ ಕಡಗಗಳು ಅಲುಗಾಡಿ ಸದ್ದಾಗುವುದು ಸ್ವಾಭಾವಿಕ: ಒಂದು ವೇಳೆ. ಆ ಮಾತುಗಳನ್ನು 'ಕಿನ್ನರಧ್ವನಿ' (ಗಾಯನಧ್ವನಿ) ಪದದೊಂದಿಗೂ ಅನ್ವಯಮಾಡಬಹುದು ಎಂದು ಕೊಂಡರೂ. ದೇಹದ 'ಅಲಂಕಾರಗಳು' (=ಒಡವೆಗಳು) ಅಲುಗಾಡುವ ಮಟ್ಟಿಗೆ ಕಿನ್ನರರು ಮೈಯನ್ನು ಒಲೆದಾಡಿಸುತ್ತಿದ್ದರು ಎಂದು ಭಾವಿಸುವುದು ಸ್ವಾರಸ್ಯವಾದ ಕಲ್ಪನೆಯಾಗಿರದು. ಆದ್ದರಿಂದ ಅಲಂಕಾರ ಶಬ್ದಾರ್ಥವನ್ನು ಹಸ್ತಾಭರಣಕ್ಕೆ ಮಾತ್ರ ಸೀಮಿತಗೊಳಿಸಬೇಕಾಗುತ್ತದೆ: ಆದರೆ ಅಲಂಕಾರ ಶಬ್ದಕ್ಕೆ ಆ ಅರ್ಥವಿಲ್ಲ.[10] ಪಂಪನು ತಪ್ಪು ಅರ್ಥ ಬರುವಂತೆ ಪದಪ್ರಯೋಗಮಾಡಿರಲಾರ. ಹೀಗೆ. 'ಅಲಂಕಾರ' ಶಬ್ದಕ್ಕೆ ಇಲ್ಲಿ ಯಾವುದೇ ರೀತಿಯಲ್ಲಿ ಒಡವೆಗಳ ಅರ್ಥವನ್ನು ಕಲ್ಪಿಸುವುದರಲ್ಲಿ ಕ್ಲೇಶಗಳು ಕಂಡುಬರುತ್ತವೆ. ಅಲ್ಲದೆ. ಜಿನಸೇನಾಚಾರ್ಯರ ಪ್ರಯೋಗಗಳು ಕಣ್ಣ ಮುಂದಿರುವಾಗ. ಅವನು ಅನುಚಿತ ಶಬ್ದದ ಪ್ರಯೋಗವನ್ನು ಮಾಡುವ ಸಂಭವವಿಲ್ಲ.[11]

---

10 'ಭೂಷಣಂ ಸ್ಯಾದಲಂಕ್ರಿಯಾ' 'ಅಲಂಕಾರಾಸ್ತ್ವಾಭರಣಂ ಪರಿಷ್ಕಾರೋ ವಿಭೂಷಣಂ ಮಂಡನಂ': 'ಆವಾಪಕಃ ಪರಿಹಾರ್ಯಃ ಕಟಕಂ ವಲಯಂ' (ಕೈಬಳೆಯ ಬೇರೆ ಬೇರೆ ಹೆಸರುಗಳು)–ಅಮರಕೋಶ

11 ಈ ಸನ್ನಿವೇಶದಲ್ಲಿ. ಪೂರ್ವಪುರಾಣದ ಕೆಲವು ಪದ್ಯಗಳು:
ಲತಾಭವನ ವಿಶ್ರಾಂತ ಕಿನ್ನರೋದ್ಗೀತಿ ನಿಃಸ್ವನೈಃ ।
ಸಮಾರಮ್ಯಸ್ತನೋದ್ದೇಶಾಸ್ಥಾಸಮಧಿಮೇಖಲಾಂ ॥ (18-56)
ಮದಕಲ ಕಲಕಂಠೀ ಡಿಂಡಿಮಾರಾವರಮ್ಯಾ ।
ಮಧುರ ವಿರುತ ಭೃಂಗೀ ಮಂಗಲೋದ್ಗೀತಿಹೃದ್ಯಾ ।
ಪರಿಧೃತಕುಸುಮಾರ್ಘಾಸ್ಸಂಪದ್ಭಿರ್ಮರುದ್ಭಿಃ ।
ಫಣಿಪತಿಮಿವ ದೂರಾತ್ಪ್ರತ್ಯುದೀಯುರ್ವನಾಂತಾಃ ॥ (18-208)

(3) 'ಅನೇಕ ರಾಗಧ್ವನಿಯೆನೆಸೊಗಯಿಪ್ಪುದು ಕಿನ್ನರ ಧ್ವನಿ' ಎಂಬ ಕಡೆಯೂ 'ಅನೇಕ ರಾಗಗಳ ಧ್ವನಿ ಎಂದು ಅರ್ಥಮಾಡುವಾಗಲೂ ಅದು ತೀರ ಸರಳವಾಗಿ. 'ಅನೇಕ ರಾಗಧ್ವನಿಯೆನೆ' ಎಂಬಲ್ಲಿ ವಿವಕ್ಷಿತವಾಗುವ ಉತ್ಪ್ರೇಕ್ಷೆ ಗಮ್ಯವಾಗಿಲ್ಲ.

ಪಂಪನ ಪದ್ಯದಲ್ಲಿ 'ಅಲಂಕಾರಧ್ವನಿಗೆ' ಡಾ||ಕೃಷ್ಣಮೂರ್ತಿಯವರು ಹೇಳುವಂತೆ 'ಪಾರಿಭಾಷಿಕಾರ್ಥ ಕಲ್ಪನೆಯ ಯತ್ನ' ಮಾಡಿದರೆ ಮಾತ್ರ ಬೇರೆ ಬೇರೆ ಅರ್ಥಗಳಲ್ಲಿ 'ಧ್ವನಿ' ಶಬ್ದ ಪ್ರಯೋಗದ ಔಚಿತ್ಯವು ವೇದ್ಯವಾಗುವುದು. (ಅಡಿಟಿಪ್ಪಣಿ ನಾಲ್ಕನ್ನು ನೋಡಿ.) ಆದರೆ, ಕಾವ್ಯಮೀಮಾಂಸೆಯ 'ಅಲಂಕಾರಧ್ವನಿಯ' ಪ್ರಕ್ರಿಯೆಯನ್ನು ಅವಲಂಬಿಸುವುದು ಅನುಚಿತವೆಂಬುದನ್ನು ಈ ಹಿಂದೆಯೇ ಸೂಚಿಸಿದೆ. ಪ್ರಕರಣೋಚಿತವಾಗಿ ಅನ್ವಯಿಸಬಹುದಾದ ಏಕೈಕ ಪರಿಭಾಷೆ ಎಂದರೆ ಸಂಗೀತಶಾಸ್ತ್ರದ್ದು. ಗಾಯನವಾದನ ಸಂದರ್ಭವೊಂದನ್ನು ವರ್ಣಿಸುವಾಗ ಸಂಗೀತಶಾಸ್ತ್ರದ ಪ್ರಕ್ರಿಯೆಯನ್ನು ಪಂಪನು ಉಪಯೋಗಿಸಿಕೊಂಡಿದ್ದರೆ. ಅದು ಸಮುಚಿತವಾಗಿ ಕಾಣುತ್ತದೆ.

ಪಂಪನು ಪದ್ಯದಲ್ಲಿ 'ಧ್ವನಿ'. 'ಅಲಂಕಾರ ಧ್ವನಿ'. ವಿಪಂಚೀ ಧ್ವನಿ'. 'ರಾಗಧ್ವನಿ'. 'ಕಿನ್ನರ ಧ್ವನಿ', – ಎಂದು ಧ್ವನಿಶಬ್ದವನ್ನು ಐದು ಕಡೆ ಪ್ರಯೋಗಿಸಿದ್ದಾನೆ. ಸಂಗೀತ ಶಾಸ್ತ್ರ ಪ್ರಕ್ರಿಯೆಯನ್ನು ಅನ್ವಯಿಸಿ. ಈ ಎಲ್ಲ ಪ್ರಯೋಗಗಳನ್ನು ಸಮನ್ವಯಗೊಳಿಸಿ, ಪದ್ಯದಲ್ಲಿ ಪಂಪನ ಆಶಯವೇನಿರಬಹುದೆಂಬುದನ್ನು ವಿಶದಪಡಿಸಲು ಮುಂದೆ ಪ್ರಯತ್ನಿಸಿದೆ.

ಪಂಪನು ನಾಟ್ಯಶಾಸ್ತ್ರಾದಿ ಅನೇಕ ಶಾಸ್ತ್ರಗಳ ಪರಿಜ್ಞಾನವನ್ನು ಹೊಂದಿದ್ದನು ಎಂಬುದಕ್ಕೆ ಅವನ ಗ್ರಂಥಗಳಲ್ಲಿ ಪ್ರಮಾಣಗಳಿವೆ. ಅವನು ಸಂಗೀತ ಶಾಸ್ತ್ರದಲ್ಲೂ ಪರಿಣತನಾಗಿದ್ದಿರಬೇಕು. ಈಗ ತಿಳಿದಿರುವ ಮಟ್ಟಿಗೆ ಅತ್ಯಂತ ಪ್ರಾಚೀನವಾದ ಸಂಗೀತಶಾಸ್ತ್ರ ಗ್ರಂಥ ಎಂದರೆ – ಮತಂಗಮುನಿಪ್ರಣೀತ 'ಬೃಹದ್ದೇಶೀ'. ಇವರ ಕಾಲ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ. ಕ್ರಿ ಶ 5ನೆಯ ಶತಮಾನದಿಂದ ಹಿಡಿದು ಸುಮಾರು 11–12ನೆಯ ಶತಮಾನದವರೆಗೂ ಇವರ ಕಾಲವನ್ನು ವಿದ್ವಾಂಸರು

ತತಃ ಕಿನ್ನರ ಗೀತಾಖ್ಯಂ ಪರಮುದ್ಬುದ್ಧಿನ ಲಕ್ಷ್ಯತೇ ।
ಯಸ್ಮೋದ್ಯಾನಾನಿ ಸೇವ್ಯಾನಿ ಗೀತೈಃ ಕಿನ್ನರಯೋಷಿತಾಂ ॥ (19–22)

ಚಲವಲಯ ರವೈರವಾತ ತ್ರೈರನುಗತ ನೂಪುರ ಹಾರಝಂಕೃತೈಃ ।
ಸುಪಲಿಗಮುಮಿಹಾಂ ಬರೇ ಚಲೀ ರತಮತಿ ದರ್ಶಿ ವನೇಷು ಕಿನ್ನರೈಃ ॥
(19–139)

ಗಾಯಂತೀನಾಂ ಕಿನ್ನರೀಣಾಂ ವನಾಂತೇ ಶೃಣ್ವದ್ಗೀತಂ ಹಾರಿಣಂ ಹಾರಿಯೂಥಂ ।
ಅರ್ಧಗ್ರಸ್ತೋತ್ಸೃಷ್ಟ ನಿರ್ಯತ್ನಸಾಗ್ರಗ್ರಾಸಂ ಕಿಂಚಿನ್ಮೀಲಿತಾಕ್ಷಂ ತಮಾಸ್ತೇ ॥
(19–157)

ಎಳೆದಾಡಿದ್ದಾರೆ. ಪಂಪನಿಗೆ ಈ ಗ್ರಂಥದ ಪರಿಚಯವಿದ್ದಿತೆಂದು ಊಹಿಸಲು ಆಧಾರವಿಲ್ಲ. (ಅಲ್ಲದೆ, ಇದು ಪಂಪನಿಗಿಂತ ಈಚಿನದು ಎಂದು ಹೇಳಲೂ ಅವಕಾಶವಿದೆ.) ಆದರೆ, ಬೃಹದ್ದೇಶಿಯಲ್ಲಿ ವಿವರಿಸಿರುವ ಸಂಗೀತ ಶಾಸ್ತ್ರದ ಪರಿಭಾಷೆಯಲ್ಲಿ ನಮ್ಮ ಪದ್ಯದ ಸಂಗೀತಧ್ವನಿಯ ವಿಷಯವಾಗಿ ಸಮರ್ಥನೆ ದೊರೆಯುತ್ತದೆ. ಸಂಗೀತ ಶಾಸ್ತ್ರದ ಬೆಳಕಿನಲ್ಲಿ ಪದ್ಯದ ಅರ್ಥವನ್ನು ವಿವರಿಸುವ ಮುನ್ನ ಸಂಗೀತದಲ್ಲಿ ಧ್ವನಿಯು ವಿಚಾರವಾಗಿ ತಿಳಿದುಬಂದಿರುವ ವಿಷಯವನ್ನು ಗಮನಿಸುವುದು ಅಗತ್ಯ.

6

ನಮಗೆ ತಿಳಿದುಬಂದ ಮಟ್ಟಿಗೆ ಭರತನ ನಾಟ್ಯಶಾಸ್ತ್ರದಲ್ಲಿ ಸಂಗೀತ ಮತ್ತು ಕಾವ್ಯಕಲೆಗಳಿಗೆ ಸಂಬಂಧಪಟ್ಟಂತೆ 'ಅಲಂಕಾರಧ್ವನಿ'ಯ[12] ಪ್ರಸ್ತಾವ ಇದ್ದಂತಿಲ್ಲ.

---

12 ಪದ್ಯದ ವಿಚಾರವಾಗಿ ವ್ಯಕ್ತಪಡಿಸಿರುವ ಭಾವಾಭಿಪ್ರಾಯಗಳನ್ನೂ, ಸಂಗೀತ ಧ್ವನಿಯ ಬಗೆಗೆ ಬೃಹದ್ದೇಶಿಯಲ್ಲಿ ದೊರಕುವ ಕೆಲವು ಉಕ್ತಿಗಳನ್ನೂ ಗಮನಕ್ಕೆ ತಂದು, 'ಅಲಂಕಾರಧ್ವನಿ'ಯ ಬಗೆಗೆ ತಿಳಿವಳಿಕೆ ಕೊಡಬೇಕೆಂದು ಕೆಲವುಂದಿ ಸಂಗೀತಶಾಸ್ತ್ರ ಪರಿಣತರಿಗೆ ಪತ್ರಬರೆದೆನು. 'ಅಲಂಕಾರಧ್ವನಿ' ಎಂಬ ಪಾರಿಭಾಷಿಕ ಪದ ತಮ್ಮ ಗಮನಕ್ಕೆ ಬಂದಿಲ್ಲವೆಂದು ಪೂಜ್ಯರಾದ ವಿದ್ವಾನ್ ರಾಳ್ಲಪಲ್ಲಿ ಅನಂತ ಕೃಷ್ಣಶರ್ಮರೂ. ಶ್ರೀ ಬಿ. ವಿ. ಕೆ. ಶಾಸ್ತ್ರಿಯವರೂ ತಿಳಿಸಿದರು.

ವೈಣಿಕವಿದ್ವಾನ್ ಶ್ರೀ. ಎಲ್ ರಾಜಾರಾಯರು ಹೀಗೆ ತಿಳಿಸಿದರು: "ನಾದದಿಂದ ಶ್ರುತಿ: ಶ್ರುತಿಗಳ ನಾನಾ ರೀತಿಗಳ ಒಕ್ಕೂಟದಿಂದ ಸ್ವರಗಳು: ಈ ಸ್ವರಗಳೇ ಧ್ವನಿ ಎಂದು ವ್ಯವಹರಿಸಲ್ಪಡುತ್ತವೆ. ಆದ್ದರಿಂದ. ಈ ಧ್ವನಿ ಎಂಬ ಸ್ವರಗಳು ನಾನಾ ರೀತಿಯಲ್ಲಿ ಮೇಳೈಸಿದಾಗ ಅವು ಅಲಂಕಾರಗಳೆನಿಸುತ್ತವೆ. ನಾನಾ ರೀತಿಯ ಅಲಂಕಾರಗಳ ಪ್ರಯೋಗಗಳಿಂದ ರಾಗಕ್ಕೆ ರಂಜನ ಗುಣ ಬಂದು ರಾಗಗಳು ಭಾವಪ್ರಧಾನವಾಗುತ್ತವೆ. ಈ ಅಲಂಕಾರಗಳನ್ನು ಗಮಕಗಳೆಂದೂ ಕರೆಯುವ ಸಂಪ್ರದಾಯ ಈಗ ರೂಢಿಯಲ್ಲಿದೆ. ರಾಗಗಳು ಬದಲಾಯಿಸಿದಂತೆ ಈ ಧ್ವನಿಗಳ ಅಥವಾ ಸ್ವರಗಳ ಶ್ರುತಿ ಸಂಖ್ಯೆಗಳು ಬದಲಾಯಿಸಿ, ರಾಗಗಳಿಗೆ ಭಾವಪ್ರತ್ಯೇಕತೆ ಉಂಟಾಗುತ್ತದೆ". (ಈ ವಿವರಣೆಯಿಂದ. ರಾಗಗಳ ಭಾವಾಂಶ ಅಲಂಕಾರ ಪ್ರಯೋಗದ ವೈವಿಧ್ಯದ ಪರಿಣಾಮ. ಅಥವಾ ವ್ಯಂಗ್ಯಾಂಶ ಎಂದು ವ್ಯಕ್ತವಾಗುತ್ತದೆ. ಆದ್ದರಿಂದ. ರಾಗ ಭಾವವನ್ನು ಅಲಂಕಾರಧ್ವನಿ ಎಂದು ವ್ಯವಹರಿಸಬಹುದು.)

ಮೈಸೂರಿನ ಪ್ರೊ॥ ಆರ್. ಸತ್ಯನಾರಾಯಣ ಅವರು ತಮ್ಮ 26-8-1979ರ ಪತ್ರದೊಂದಿಗೆ ಪಂಪನ ಪದ್ಯದ ಸಂಬಂಧವಾಗಿ ತಮ್ಮ ವಿಚಾರಗಳನ್ನೊಳಗೊಂಡ ಒಂದು ದೀರ್ಘ ಟಿಪ್ಪಣಿಯನ್ನು ಬರೆದು ಕಳಿಸಿ ಉಪಕರಿಸಿದರು. ವಿಷಯವನ್ನು ಅರ್ಥಮಾಡಿಕೊಳ್ಳಲು ಅವರ ಟಿಪ್ಪಣಿ ನನಗೆ ತುಂಬ ನೆರವಾಗಿದೆ. ಅವರ ಟಿಪ್ಪಣಿಯಿಂದ ಪ್ರಕೃತೋಪಯೋಗಿತ ಭಾಗವನ್ನು ಇಲ್ಲಿ ಎತ್ತಿ ಬರೆದಿದೆ:

"......ಪಂಪನು ಈ ಸಂದರ್ಭದಲ್ಲಿ ಕೇವಲ ರಾಗಾಲಪ್ತಿಗಿಂತ ಸಾಹಿತ್ಯಭಾವವೂ ಗೇಯಭಾವವೂ ಸೇರಿಕೊಂಡಿರುವ ರೂಪಕಾಲಪ್ತಿಯನ್ನು ಹೇಳಿದ್ದಾನೆಂದು ಇಟ್ಟುಕೊಳ್ಳುವುದು ಹೆಚ್ಚು ಸಮಂಜಸ. ......ಕಾವ್ಯವನ್ನು ಹಾಡುತ್ತಿದ್ದರು ಎಂದಿಟ್ಟುಕೊಂಡರೆ ಅವರಲ್ಲಿ ಧ್ವನಿಯೆಂಬ ಅಲಂಕಾರವು ಅವರ ಶಾರೀರದ ಧ್ವನಿಯಲ್ಲಿ ಎಂದರೆ ಸ್ವರಭಾರವ್ಯತ್ಯಾಸದಲ್ಲಿ ಪ್ರಕಾಶಿಸುತ್ತಿತ್ತು ಎಂದಾಗುತ್ತದೆ.

......ಇಲ್ಲಿ ಅಲಂಕಾರ ಶಬ್ದವನ್ನು ಪಂಪನು ಶ್ಲೇಷೆಯಲ್ಲಿ ಬಳಸಿರುವಂತೆ ನನಗೆ ತೋರುತ್ತದೆ ......ಕಾವ್ಯದಲ್ಲೂ ಸಂಗೀತದಲ್ಲೂ ಅಲಂಕಾರವು ಧ್ವನಿಯೇ: ಧ್ವನಿಯೇ ಶ್ರುತಿ. ಸ್ವರ. ವರ್ಣ. ಅಲಂಕಾರ, ಮೂರ್ಛನಾ. ತಾನ ಮೊದಲಾದ ರೂಪಗಳಲ್ಲಿ ಅಭಿವ್ಯಕ್ತವಾಗುತ್ತದೆ. ಬೃಹದ್ದೇಶಿಯ ಆಧಾರ ಪ್ರತಿಜ್ಞೆಯೇ ಇದು.........ಅಲಂಕಾರಧ್ವನಿಯೆಂಬ ಶಬ್ದವು

"ಅವರಲ್ಲಿ ಧ್ವನಿತತ್ತ್ವದ ಹೆಸರು ಇಲ್ಲದಿದ್ದರೂ ಅದರ ನಿರೂಪಣೆಗೆ ಬೀಜರೂಪದ ಭಾವನೆಗಳು ಅವರಲ್ಲಿ ಅಡಕವಾಗಿವೆ."[13] ಆನಂದವರ್ಧನನಿಗೆ ಪೂರ್ವದಲ್ಲಿ ಉದ್ಭಟನ ಕಾವ್ಯಾಲಂಕಾರ ಸಾರ ಸಂಗ್ರಹದಲ್ಲಿ ಧ್ವನಿತತ್ತ್ವದ ಸುಳಿವು ಕಂಡುಬರುತ್ತದೆ.[14]

ಸಂಗೀತ ಶಾಸ್ತ್ರದಲ್ಲಿ ಒಂದು ಕಡೆ ಸಹ ಹೇಳಲ್ಪಟ್ಟಿಲ್ಲ. ಅಲಂಕಾರವನ್ನು ಧ್ವನಿಯೆಂದು ಹೇಳಿರುವುದು ಮಾತ್ರ ಕಂಡುಬರುತ್ತದೆ. ಆದುದರಿಂದ ಅಲಂಕಾರ ಶಬ್ದವನ್ನು ಪ್ರಥಮಾಂತವಾಗಿಟ್ಟುಕೊಂಡರೆ ಮಾತ್ರ ಅರ್ಥವು ಉಪಪನ್ನವಾಗುತ್ತದೆ. ಇನ್ನು ಧ್ವನಿ ಶಬ್ದದ ಉಳಿದ ಶ್ಲೇಷೆಗಳನ್ನು ಪರೀಕ್ಷಿಸಬಹುದು; ವಿಪಂಚೀಧ್ವನಿ ಎಂಬಲ್ಲಿ ಧ್ವನಿಗೆ ನಾದ ಎಂದೇ ಅರ್ಥ ...ರಾಗಧ್ವನಿಯಲ್ಲಿನ ಧ್ವನಿಯನ್ನು ಈ ಸ್ಥೂಲಾರ್ಥದಲ್ಲಿಯಾದರೂ ಗ್ರಹಿಸಬಹುದು: ಮತಂಗನು ಹೇಳಿದ 'ಧ್ವನಿಭೇದೇನ ವಾಪುನಃ', 'ರಾಗಜನಕೋಧ್ವನಿಃ ಸ್ವರಃ' ಇತ್ಯಾದಿಗಳಲ್ಲಿನ ವಿಶೇಷ ಪಾರಿಭಾಷಿಕಾರ್ಥದಲ್ಲಿಯಾದರೂ, ತಾನ ಮೂರ್ಛನೆಗಳಂತೆ ರಾಗವೂ ಧ್ವನಿಯ ಒಂದು ಪ್ರಕಾರ ಎಂಬ ಸಾಮಾನ್ಯಾರ್ಥದಲ್ಲಿಯಾದರೂ ಗ್ರಹಿಸಬಹುದು. ಇಲ್ಲಿ 'ಅನೇಕ ರಾಗಧ್ವನಿ' ಎಂಬುದರಲ್ಲಿನ ಅನೇಕ ಶಬ್ದಕ್ಕೆ ಇತರ ವಿಮರ್ಶಕರು ಪ್ರಸ್ತಿಯಾದ ಅರ್ಥವಿಸ್ತಾರವನ್ನು ಕೊಟ್ಟಿಲ್ಲ. 'ಅನೇಕರಾಗ'ವನ್ನು ಎರಡು ರೀತಿಯಲ್ಲಿ ಹೊಂದಿಸಬಹುದು. ಕಾವ್ಯವನ್ನು ವೀಣೆಯಿಂಚರದೊಡನೆ ಹಾಡುತ್ತಿದ್ದಾಗ ಅದನ್ನು ರಾಗಮಾಲಿಕೆಯಲ್ಲಿ ಹಾಡುತ್ತಿದ್ದರು ಎಂಬುದು ಒಂದು ಅರ್ಥ. ಎರಡನೆಯ ಅರ್ಥವು ಸಂಗೀತಪರಿಭಾಷೆಯಿಂದ ಹುಟ್ಟುವಂತಹದು. ಪಂಪನ ಕಾಲದಲ್ಲಿ ಗ್ರಾಮ ಸಂಗೀತವು ಪ್ರಚಲಿತವಾಗಿತ್ತು: ಆದುದರಿಂದ ವಿವಿಧ ಸ್ವರ ವಿಕೃತಿಗಳನ್ನು ಮೂರ್ಛನಾ ತಂತ್ರದಿಂದ ಪಡೆಯಬೇಕಾಗಿತ್ತು......ಮೂರ್ಛನೆಗಳಿಂದ ತಾನಗಳು ತಾನಗಳಿಂದ ಅಲಂಕಾರಗಳು—ಸಂಗೀತ ಶಾಸ್ತ್ರದಲ್ಲಿ ಹೀಗೆ ಇವುಗಳ ನಿಷ್ಪತ್ತಿ. ಎಂದರೆ ಅಲಂಕಾರಗಳ ಪ್ರಯೋಗದಿಂದ ಈ ಶ್ರುತಿಭೇದ ಕಲ್ಪನೆಯ ಮೂಲಕ ಬೇರೆಬೇರೆ ರಾಗಗಳ ಛಾಯೆಗಳನ್ನು ಕಿನ್ನರರು ಪಡೆಯುತ್ತಿದ್ದರು ಎಂಬ ಅರ್ಥವು ಇಲ್ಲಿ ಸಲ್ಲುತ್ತದೆ. ಇವೆರಡು ಅರ್ಥಗಳೂ ಇಲ್ಲಿ ಅನ್ವಿತಗಳೇ ಆಗಿವೆ. ಐದನೆಯ ಧ್ವನಿಯು ಕಂಠಧ್ವನಿ ಎಂಬರ್ಥದಲ್ಲಿ ಸಾರ್ಥಕವೇ ಆಗಿದೆ.

"ಒಟ್ಟಿನಲ್ಲಿ ಪದ್ಯದ ಅರ್ಥವನ್ನು ಹೀಗೆ ಬಿಡಿಸಬಹುದು:

"ಆ ಜೆಟ್ಟದಲ್ಲಿ ಕಿನ್ನರರು ವಿಪಂಚಿಯನ್ನು ನುಡಿಸಿಕೊಂಡು ಕಾವ್ಯಸಂದರ್ಭವುಳ್ಳ ಹಾಡನ್ನು ಹಾಡುತ್ತಿದ್ದರು. ಹಾಡಿನ ಕಾವ್ಯಾರ್ಥದಲ್ಲಿನ ಧ್ವನಿಯೆಂಬ ಅಲಂಕಾರವೂ ಅವರ ಶಾರೀರದಲ್ಲಿನ ಸ್ವರಭಾರಗಳಿಂದ ವಿಶೇಷವಾಗಿ ಅಭಿವ್ಯಕ್ತವಾಗಿ ಪ್ರಕಾಶಿಸುತ್ತಿತ್ತು. ವಿಪಂಚೀಧ್ವನಿಯೊಡನೆ ಅನೇಕ ರಾಗಗಳಲ್ಲಿ ಅವರು ಹಾಡುಗಳನ್ನು (ಅಥವಾ ಹಾಡನ್ನು) ಹಾಡುತ್ತಿದ್ದರು. ಅನೇಕ ರಾಗಗಳಿಗೆ ಸಾಧಾರಣವಾದ ಅಲಂಕಾರಗಳನ್ನು ಪ್ರಯೋಗಿಸುತ್ತಿದ್ದುದರಿಂದ ಅನೇಕ ರಾಗಗಳ ಛಾಯೆಯೂ ಅಲ್ಲಿ ತೋರಿಬರುತ್ತಿತ್ತು.

[ಶ್ರೀ ಸತ್ಯನಾರಾಯಣ ಅವರು 'ಧ್ವನಿಯೆನಿಸಿದಲಂಕಾರ' ಎಂಬ ಮೊದಲ ಸಾಲಿನಲ್ಲಿ 'ಅಲಂಕಾರ' ಶಬ್ದವನ್ನು 'ಅಲಂಕಾರಂ' ಎಂದು ಪ್ರಥಮಾ ವಿಭಕ್ತ್ಯಂತವಾಗಿ ತಿದ್ದುಪಾಟುಮಾಡಿಕೊಂಡರೆ, ಸರಿಯಾಗಿ ಅರ್ಥಮಾಡಬಹುದೆಂದು ಸೂಚಿಸಿದ್ದಾರೆ. ಇದಕ್ಕೆ ಪಾಠಾಂತರಗಳ ಸಮರ್ಥನೆಯಿಲ್ಲ. ಅಲ್ಲದೆ. ತಿದ್ದುಪಾಟುಮಾಡದದೆಯೇ ಅನ್ವಯಮಾಡಬಹುದೆಂಬುದನ್ನು ಓಂದೆ ಕಾಣಿಸಿದೆ. ಆದ್ದರಿಂದ. ಶ್ರೀಯುತರ ಅರ್ಥವಿವರಣೆ ಪೂರ್ತಿಯಾಗಿ ಸ್ವೀಕೃತವಾಗುವುದಿಲ್ಲ.]

13 ಶ್ರೀ. ಜಿ. ಹನುಮಂತರಾವ್: 'ಸಂಗೀತದಲ್ಲಿ ಧ್ವನಿಯ ಆಲೋಕ' (ಉಪಾಯನ: ಪ್ರೊ॥ ಡಿ. ಎಲ್. ನರಸಿಂಹಾಚಾರ್ಯರಿಗೆ ಅರ್ಪಿಸಿದ ಸಂಭಾವನಾಗ್ರಂಥ. 1967 ಪು. 437 ಮುಂದಿನ ಅನೇಕ ಅಭಿಪ್ರಾಯಗಳಿಗೆ ಈ ವಿದ್ವತ್ಪೂರ್ಣ ಲೇಖನಕ್ಕೆ ಲೇಖಕನು ಋಣಿಯಾಗಿದ್ದಾನೆ.)

14 ಪರ್ಯಾಯೋಕ್ತಂ ಯದನ್ಯೇನ ಪ್ರಕಾರೇಣಾಭಿಧೀಯತೇ ।
ವಾಚ್ಯವಾಚಕವೃತ್ತಿಭ್ಯಾಂ ಶೂನ್ಯೇನಾವಗಮಾತ್ಮನಾ ॥ (iv—6)

ಕಾವ್ಯಮೀಮಾಂಸೆಯಲ್ಲಿ ಧ್ವನಿತತ್ತ್ವವನ್ನು ಮೊತ್ತಮೊದಲು ಪ್ರಸ್ಥಾಪಿಸಿದ ಕೀರ್ತಿ ನಿರ್ವಿವಾದವಾಗಿ ಆನಂದವರ್ಧನನದು. ಧ್ವನಿತತ್ತ್ವ ಪೂರ್ವಪರಂಪರೆಯಿಂದಾಗಿ ಸಾಗಿ ಬಂದಿದೆ ಎಂಬ ಮಾತನ್ನು ಆನಂದವರ್ಧನ ಮೊದಲ ಕಾರಿಕೆಯಲ್ಲೇ ಒಪ್ಪಿಕೊಂಡಿದ್ದಾನೆ. ("ಕಾವ್ಯಸ್ಯಾತ್ಮಾ ಧ್ವನಿರಿತಿ ಬುಧೈರ್ಯಃ ಸಮಾಮ್ನಾತಪೂರ್ವಃ" ಇತ್ಯಾದಿ.) ವಾಚ್ಯಾರ್ಥ ಭಿನ್ನವಾದ ವಾಚ್ಯಾರ್ಥ ವಿಮುಖವಾದ ವ್ಯಂಗ್ಯಾರ್ಥಕ್ಕೆ 'ಧ್ವನಿ' ಎಂಬ ಪಾರಿಭಾಷಿಕ ಪದವನ್ನು ಆನಂದವರ್ಧನನು ಸಂಗೀತಶಾಸ್ತ್ರದಿಂದಲೇ ಸ್ವೀಕರಿಸಿರಬಹುದು. ಕೇವಲ ವಾಚ್ಯವಾಚಕಗಳ (ಎಂದರೆ ಶಬ್ದಾರ್ಥಗಳ) ಜ್ಞಾನದಿಂದಲೇ 'ಕಾವ್ಯಾರ್ಥ'ವು ಗೋಚರ ವಾಗುವುದಿಲ್ಲವೆನ್ನುವುದಕ್ಕೆ ಅವನು – "ಸ್ವರ ಶ್ರುತಿ ಮುಂತಾದ ಸಂಗೀತಶಾಸ್ತ್ರದ ಪ್ರಕ್ರಿಯೆಗಳನ್ನು ಮಾತ್ರ ಓದಿಕೊಂಡವರಿಗೆ ಹಾಡುಗಳ ವ್ಯಂಗ್ಯಾಂಶವು ತಿಳಿಯದೆಯೇ ಹೋಗುವಂತೆ" ಎಂದು ಸಂಗೀತದ ದೃಷ್ಟಾಂತವನ್ನು ಕೊಡುತ್ತಾನೆ.[15] ಸಂಗೀತದ ವ್ಯಂಗ್ಯಾಂಶವೇ ಧ್ವನಿ ಎಂಬ ಕಲ್ಪನೆಯೂ ಅದಕ್ಕೆ ಆ ಹೆಸರೂ ಆನಂದವರ್ಧನನಿಗಿಂತ ಪೂರ್ವದಲ್ಲಿಯೂ ಸಂಗೀತಶಾಸ್ತ್ರ ಪ್ರಪಂಚದಲ್ಲಿ ಬಳಕೆಯಲ್ಲಿದ್ದಿತು. ಮತಂಗನ ಬೃಹದ್ದೇಶಿಯೆ ಉಪಲಬ್ಧವಾಗಿರುವ ಆದ್ಯ ಸಂಗೀತಶಾಸ್ತ್ರಗ್ರಂಥವಾದರೂ[16] ಅದರಲ್ಲಿಯೇ ವಿಶ್ವಾವಸು. ದತ್ತಿಲ. ಕೋಹಲ ಮುಂತಾದ ಪೂರ್ವಲಕ್ಷಣಕಾರರ ಮತಗಳನ್ನು ಅವನು ಎತ್ತಿಹೇಳುತ್ತಾನೆ. ಅವರ ಉಕ್ತಿಗಳಲ್ಲಿ ಧ್ವನಿಯ ಸೂಚನೆಗಳಿವೆ.[17] ಆದರೆ, ಶ್ರೀ ಹನುಮಂತರಾಯರು ತಿಳಿಸುವಂತೆ. "ರಾಗಾರೂಪದಲ್ಲಿ. ರಾಗಲಕ್ಷಣದಲ್ಲಿ ಅದು ಪ್ರತಿಷ್ಠಿತವಾಗಿರುವುದು ಮತಂಗನಲ್ಲಿ": "ಮತಂಗನು ಸಂಗೀತದ ಎಲ್ಲ ಅಂಗಗಳನ್ನೂ ಅವಸ್ಥೆಗಳನ್ನೂ ಪರಾಮರ್ಶಿಸಿ ಧ್ವನಿದೇಶೀ ಎಂಬ ಹೊಸಲಕ್ಷಣವನ್ನು ನಿರ್ಧರಿಸಿರುತ್ತಾನೆ. ಬೃಹದ್ದೇಶೀ ಅನ್ವರ್ಥನಾಮ; ಅದು ಬೃಹತ್ತಾದ ಧ್ವನಿಯನ್ನು ಉಪದೇಶಿಸುವ ಗ್ರಂಥ."[18] ಮತಂಗನ ಧ್ವನಿ ವಿವೇಕವನ್ನು ಅನ್ವಯಿಸಿ ಪಂಪನ ಪದ್ಯದ ಅರ್ಥವನ್ನು ವಿಚಾರಮಾಡುವ ಮುನ್ನ. 'ಬೃಹದ್ದೇಶಿ'ಯಲ್ಲಿ ಧ್ವನಿ ತತ್ತ್ವವನ್ನು ಪ್ರತಿಪಾದಿಸುವ ಕೆಲವು ಉಕ್ತಿಗಳನ್ನು ಗಮನಿಸುವುದು ಅಪ್ರಸ್ತುತವಾಗಲಾರದು.

(ಉದ್ಭಟನು ಮೊದಲ ಲಕ್ಷಣ ವಾಕ್ಯವನ್ನು ಭಾಮಹನಿಂದ ಸ್ವೀಕರಿಸಿದ್ದರೂ. ಎರಡನೆಯ ವಾಕ್ಯದಲ್ಲಿ ಸ್ವಂತ ವಿವರಣೆ ನೀಡಿರುವುದು ಗಮನಾರ್ಹ).

15 'ಕನ್ನಡ ಧ್ವನ್ಯಾಲೋಕ ಮತ್ತು ಲೋಚನ ಸಾರ': ಡಾ॥ ಕೆ. ಕೃಷ್ಣಮೂರ್ತಿ 7 ನೆಯ ಕಾರಿಕೆಯ ವೃತ್ತಿಯನ್ನು ನೋಡಿ. ಪು. 21.

16 ದತ್ತಿಲ ಕೃತ ಗ್ರಂಥಪ್ರತಿಯೊಂದು ಉಪಲಬ್ಧವಾಗಿದೆಯೆಂದೂ ಅದನ್ನು ಪ್ರಕಟಿಸಲಾಗುವುದೆಂದೂ ಬೃಹದ್ದೇಶಿಯ ಸಂಪಾದಕರಾದ ಕೆ. ಸಾಂಬಶಿವಶಾಸ್ತ್ರಿಗಳು (1928 ರಲ್ಲಿಯೇ) ತಿಳಿಸಿದ್ದರು. ಅದು ಪ್ರಕಟವಾಗಿರಬಹುದು; ನಮಗೆ ತಿಳಿದು ಬಂದಿಲ್ಲ.

17 ನೋಡಿ: 'ಸಂಗೀತದಲ್ಲಿ ಧ್ವನಿಯ ಆಲೋಕ': 'ಉಪಾಯನ' ಗ್ರಂಥದಲ್ಲಿ 445ನೆಯ ಪುಟದ 42ನೆಯ ಅಡಿಟಿಪ್ಪಣಿ.

18 ನೋಡಿ: ಅದೇಗ್ರಂಥ, ಪು. 439. (ಮತಂಗನ ಧ್ವನಿ ವಿವೇಕವನ್ನು ಬಹುಶಃ ಮೊತ್ತಮೊದಲು ಬೆಳಕಿಗೆ ತಂದಿರುವ ಕೀರ್ತಿ ಶ್ರೀ ಹನುಮಂತರಾಯರಿಗೆ ಸಲ್ಲುತ್ತದೆ.)

7

ಬೃಹದ್ದೇಶಿಯ ಹೆಸರೇ ಸೂಚಿಸುವಂತೆ ನಾದ. ಶ್ರುತಿ. ಸ್ವರ, ವರ್ಣ. ಮೂರ್ಛನಾ, ಅಲಂಕಾರ. ರಾಗ ಮುಂತಾದ ವಿವಿಧ ಪ್ರಾಕಾರಗಳಲ್ಲಿ ಪ್ರಕಾಶವಾಗುವ. ವ್ಯಾಪಕವಾದ (ಸಂಗೀತ) ಧ್ವನಿಪ್ರಪಂಚದ ನಿರೂಪಣೆಯೆ ಗ್ರಂಥಕಾರನ ಉದ್ದೇಶ. ಮತಂಗನ ದೃಷ್ಟಿಯಲ್ಲಿ 'ದೇಶಿ' ಎಂದರೆ 'ಧ್ವನಿ': ಜಗತ್ತಿನಲ್ಲಿ ಧ್ವನಿ ವ್ಯಾಪಿಸದೆ ಇರುವ ಎಡೆಯೇ ಇಲ್ಲ.[19] ಇದು ಧ್ವನಿಸಾಮಾನ್ಯದ ಲಕ್ಷಣಸ್ವರೂಪ. ಶಬ್ದಬ್ರಹ್ಮವೇ ಧ್ವನಿಮೂಲ. ಸವಿಶೇಷವಾದ ಧ್ವನಿ ಶ್ರುತಿ. ಸ್ವರ. ವರ್ಣ ಅಲಂಕಾರ ಇತ್ಯಾದಿಯಾಗಿ ಅಭಿವ್ಯಕ್ತವಾಗುತ್ತದೆ. 'ಶ್ರವಣೇಂದ್ರಿಯ ಗ್ರಾಹ್ಯತ್ವಾತ್ ಧ್ವನಿರೇವ ಶ್ರುತಿರ್ಭವೇತ್' ಎಂಬ ವಿಶ್ವಾವಸುವಿನ ಮತವನ್ನು (ಬೃ. ದೇ.. ಪು–4) ಮತಂಗ ಉದ್ಧರಿಸುತ್ತಾನೆ. ಧ್ವನಿ ಶ್ರುತಿಗಳಾಗಿ. ಶ್ರುತಿಗಳು ಸಪ್ತಸ್ವರಗಳಾಗಿ ಪರಿಣಮಿಸುತ್ತವೆ.

ಶ್ರುತಯಃ ಸ್ವರರೂಪೇಣ ಪರಿಣಮಿಂತಿ(?) ನಸಂಶಯಃ।
ಪರಿಣಮತೇ (?) ಯಥಾಕ್ಷೀರಂ ದಧಿರೂಪೇಣ ಸರ್ವಥಾ ॥
ಷಡ್ಜಾದಯಃ ಸ್ವರಾಃ ಸಪ್ತ ವ್ಯಜ್ಯಂತೇ ಶ್ರುತಿಭಿಃ ಸದಾ ।
ಅಂಧಕಾರ ಸ್ಥಿತಾ ಯದ್ವತ್ ಪ್ರದೀಪೇನ ಘಟಾದಯಃ ॥

—ಬೃ. ದೇ., 35–36. ಪು–8.

ರಾಗಜನಕವಾದ ಧ್ವನಿಯೆ ಸ್ವರ. ಸಪ್ತಸ್ವರಗಳ ಸ್ಥಾಯಿ. ಸಂಚಾರಿ. ಆರೋಹ, ಅವರೋಹ ಕ್ರಮಗಳಿಂದ ಮೂರ್ಛನ. ತಾನ. ವರ್ಣಗಳು ಸಿದ್ಧಿಸುತ್ತವೆ. ವರ್ಣಗಳಲ್ಲಿ ವೀಣಾವರ್ಣ ಮತ್ತು ಗಾನವರ್ಣ ಎಂಬ ವಿವಕ್ಷೆ ಗಮನಾರ್ಹ. ವರ್ಣದ ಹಂತದಲ್ಲಿ ಧ್ವನಿ ಗಾನವೆನಿಸುತ್ತದೆ. ವರ್ಣ ಎಂದರೆ ಗಾನವೇ. ಗಾನದಲ್ಲಿ ಅಲಂಕಾರಕ್ಕೆ ವಿಶೇಷ ಪ್ರಾಧಾನ್ಯ. ಅಲಂಕಾರವಿಲ್ಲದ ಗಾನ ಶೋಭಿಸುವುದಿಲ್ಲ. ಅಲಂಕಾರ ವರ್ಣದಲ್ಲಿ ನೆಲೆಸಿದ್ದಾಗ ಅದು ಮನೋಹರ. ಸ್ವರವರ್ಣ ವಿಶೇಷದಿಂದಲೂ ಧ್ವನಿ ಭೇದದಿಂದಲೂ ರಂಜಿಸುವುದೇ ರಾಗ. ವರ್ಣಾಲಂಕಾರ ರಾಗಗಳು ಧ್ವನಿಭೇದಗಳಾದ್ದರಿಂದಲೇ ಇವೆಲ್ಲಕ್ಕೂ ಧ್ವನಿ ಎಂಬ ಹೆಸರು. ಈ ಸಂಗೀತಾರ್ಥಗಳು ಕಾವ್ಯಾರ್ಥದಂತೆ ವ್ಯಂಜನಾಬಲದಿಂದ ಪ್ರತೀಯಮಾನವಾಗತಕ್ಕವು (ಧ್ವನಿತವಾಗತಕ್ಕವು). "ಸ್ವರಾಃ ವ್ಯಜ್ಯಂತೇ ಶ್ರುತಿಭಿಃ" ಎಂಬ ಮಾತಿನಲ್ಲಿ ಈ ಅಭಿಪ್ರಾಯ ಗಮ್ಯವಾಗಿದೆ. ಸಂಗೀತದಲ್ಲಿ ವರ್ಣಾಲಂಕಾರಾದಿಗಳು ವ್ಯಂಗ್ಯಾಂಶಗಳು: 'ಧ್ವನಿತ'ವಾದ ಧ್ವನಿಗಳು.

---

19 ಧ್ವನಿಯೋನಿಃ ಪರಾಜ್ಞೇಯಾ ಧ್ವನಿಃ ಸರ್ವಸ್ಯ ಕಾರಣಂ ।
ಆಕ್ರಾಂತಂ ಧ್ವನಿನಾ ಸರ್ವಂ ಜಗತ್ ಸ್ಥಾವರ ಜಂಗಮಂ ॥11॥
ಧ್ವನಿಸ್ತು ದ್ವಿವಿಧಃ ಪ್ರೋಕ್ತೋ ವ್ಯಕ್ತಾವ್ಯಕ್ತ ವಿಭಾಗತಃ ॥
ವರ್ಣೋಪಲಂಭನಾದ್ ವ್ಯಕ್ತೋ ದೇಶೀ ಮುಖಮುಪಾಗತಃ ॥12॥

—ಬೃಹದ್ದೇಶಿ, ಪು. 2.

ಬೃಹದ್ದೇಶಿಯಲ್ಲಿ 'ಅಲಂಕಾರಧ್ವನಿ' ಎಂಬ ಸಮಸ್ತ ಪದ ಪ್ರತ್ಯೇಕವಾಗಿ ಎಲ್ಲಿಯೂ ಪ್ರಯೋಗವಾಗಿಲ್ಲ. 33 ಅಲಂಕಾರ ಪ್ರಭೇದಗಳಲ್ಲಿ ಒಂದಾದ 'ಪ್ರಸನ್ನ'ವನ್ನು 'ಪ್ರಸನ್ನಧ್ವನಿ' ಎಂದು ನಿರ್ದೇಶಿಸಿರುವುದರಿಂದ.[20] ಪ್ರತಿಯೊಂದು ಅಲಂಕಾರವನ್ನೂ ಧ್ವನಿಶಬ್ದದಿಂದ ವಿಶೇಷಿಸಬಹುದಾಗಿರುವುದಲ್ಲದೆ. ಅಲಂಕಾರ ಸಾಮಾನ್ಯಕ್ಕೂ ಧ್ವನಿಶಬ್ದವನ್ನು ಯೋಜಿಸಿ 'ಅಲಂಕಾರಧ್ವನಿ' ಎಂಬ ಪಾರಿಭಾಷಿಕ ಪದವನ್ನು ನಿಷ್ಪನ್ನಮಾಡಲು ಅವಕಾಶವಿದೆ. ಬೃಹದ್ದೇಶಿಯಲ್ಲೇ ಹೇಳಿರುವ 'ವರ್ಣಧ್ವನಿ' 'ಮೂರ್ಛನಾ ಧ್ವನಿ', 'ರಾಗಧ್ವನಿ' ಎಂಬೀ ಪ್ರಯೋಗಗಳು 'ಅಲಂಕಾರ ಧ್ವನಿ' ಶಬ್ದದ ಅಸ್ತಿತ್ವಕ್ಕೆ ಸಮರ್ಥನೆ ಕೊಡುತ್ತವೆ. ಹೀಗಿರುವುದರಿಂದ, ಬೃಹದ್ದೇಶಿಯಲ್ಲಿ ಈ ಶಬ್ದವು ಕೈಬಿಟ್ಟುಹೋಗಿದ್ದರೂ ಪಂಪನಕಾಲದಲ್ಲಿ ಪ್ರಚುರವಾಗಿದ್ದ ಸಂಗೀತಶಾಸ್ತ್ರದ ಪರಿಭಾಷೆಯಲ್ಲಿ 'ಅಲಂಕಾರಧ್ವನಿ' ಎಂಬ ಶಬ್ದವು ಸೇರಿದ್ದಿತೆಂದು ಅನುಮಾನಿಸಲು ಅಡ್ಡಿಯಿಲ್ಲ.[21] ಈ ಎಲ್ಲ ಸಮಸ್ತ

---

20 "ಇದಾನೀಮೇತೇಷಾಮಲಂಕಾರಾಣಾಂ ಲಕ್ಷಣ ಮುಚ್ಯತೇ । ತದ್ಯಥಾ—
ಮಂದ್ರಾದಾರಭ್ಯ ಮೇಸಾರೋಹಣಂ ತಾರಗತಿಂ ಯಾವದಸೌ
ಪ್ರಸನ್ನಾದಿಃ ಮಂದ್ರಶಬ್ದೇನ ಪ್ರಸನ್ನಧ್ವನಿರುಚ್ಯತೇ ।"

—ಬೃ. ದೇ. ಪು. 35.

21 ಪಾಲ್ಕುರಿಕೆ ಸೋಮನಾಥನ (ಕ್ರಿ. ಶ. ಸು. 1160-1240) ತೆಲುಗು ಬಸವ ಪುರಾಣದಲ್ಲಿ, ಸಕಲೇಶಮಾದರಸನು ವೀಣೆಯನ್ನು ನುಡಿಸುತ್ತಾ ಭಕ್ತಿಗೀತೆಗಳನ್ನು ಹಾಡುತ್ತಿದ್ದನೆಂದು ವರ್ಣಿಸುವ ಸಂದರ್ಭದಲ್ಲಿ ಧ್ವನಿಶಬ್ದ ಪಾರಿಭಾಷಿಕಾರ್ಥದಲ್ಲಿ ಪ್ರಯೋಗವಾಗಿದೆ:

.........ಸಕಲೇಶ ! ನಿತ್ಯಕಲ್ಯಾಣ!
ಯುವಧಾರು ಪ್ರಾಣನಾಯಕ ! ನಾದಮೂರ್ತಿ !
ಯಂಚನು ವಾಯಿಂಚುನಾರಾಗ ಮಂದ
ಯಂಚಿತಾಳಪ್ರಕಿಸಭಿಮುಖಿಂಡಗುಚು
ಸದಮಲ ಚಿತ್ತುಡೈ ಸಪ್ತಸ್ವರಮುಲ
ನುದಯಿಂಚು ಶ್ರುತುಲಿರುವದಿರೆಂಡುಗೂರ್ಚಿ
ಘನತರ ನಾರಾಟಕಾಪ್ರಳಂಬನೆಡು
ಧ್ವನಿಗೂಡ ಜೌದಳಂಬನು ಶಾರೀರಮುನ
ನನಿಬದ್ಧ ರೂಢಿಯೈ ನಾಳತಿಜೇಸಿ
ತನರೆಡು ಗಮಕಸಪ್ತಕಮು ಸಂಧಿಲ್ಲ
ಮಾನಿತಂಬಗು ಮಂದ್ರ ಮಧ್ಯಮ ತಾರಮುಲು.........

(ಶ್ರೀ ಬಂಡಾರು ತಮ್ಮಯ್ಯಗಾರು ಅವರಿಂದ ಸಂಪಾದಿತವಾಗಿ ವಾವಿಳ್ಳ ರಾಮಸ್ವಾಮಿಶಾಸ್ತ್ರಿಗಳಿಂದ ಪ್ರಕಟವಾಗಿರುವ ಬಸವಪುರಾಣ. 1952: ಪು. 207. ಈ ಉಲ್ಲೇಖ ದೊರೆತದ್ದು ಡಾ॥ ಎಲ್ ಬಸವರಾಜು ಅವರ 'ಶಿವದಾಸಗೀತಾಂಜಲಿ'ಯಲ್ಲಿ: ಇದರಲ್ಲಿ ಕನ್ನಡ ಅನುವಾದ ಇದೆ.)

ಇಲ್ಲಿ ಹೇಳಿರುವ 'ನಾರಾಟಕಾಪ್ರಳಮೆಂಬ ಧ್ವನಿ' ಯಾವ ಪ್ರಕಾರದ್ದು—ಎಂದರೆ. ಅಲಂಕಾರಧ್ವನಿಯೋ. ರಾಗಧ್ವನಿಯೋ. ಇತ್ಯಾದಿ—ಎಂಬುದು ಸ್ಪಷ್ಟವಿಲ್ಲ. ಪಂಪನಿಗಿಂತ ಬಹು ಈಚಿನದಾದರೂ 'ಧ್ವನಿ' ಎಂಬ ಪದ ಸಂಗೀತ ಪರಿ ಭಾಷೆಗೆ ಸೇರಿದ್ದು ಎಂಬ ಅಂಶ ಈ ಉಲ್ಲೇಖದಿಂದ ಸ್ಪಷ್ಟವಾಗುತ್ತದೆ.

ಪದಗಳಲ್ಲೂ ಧ್ವನಿ ವಿಶೇಷ್ಯವಾಗಿ. ವರ್ಣ ಅಲಂಕಾರ ರಾಗ ಮುಂತಾದವು ವಿಶೇಷಣಗಳಾಗಿ. ಕರ್ಮಧಾರಯ ಸಮಾಸವಾಗಿದೆ. (ವರ್ಣವೆಂಬ ಧ್ವನಿ. ಅಲಂಕಾರವೆಂಬ ಧ್ವನಿ. ಇತ್ಯಾದಿ). ವರ್ಣ ಧ್ವನಿ. ಅಲಂಕಾರ ಧ್ವನಿ. ಮುಂತಾದುವೆಲ್ಲವೂ 'ಧ್ವನಿ' ಪ್ರಭೇದಗಳೇ ಆಗುವುದರಿಂದ 'ಅಲಂಕಾರ ಧ್ವನಿ'ಯೂ ಒಂದು 'ಧ್ವನಿ'ಯೆ. ಇದರಲ್ಲಿ ಸಂದೇಹವಿಲ್ಲ. ಆದ್ದರಿಂದ, ಪಂಪನ ಪದ್ಯದ 'ಧ್ವನಿಯೆನಿಸುವ ಅಲಂಕಾರಧ್ವನಿ' ಎಂಬಲ್ಲಿ ಪುನರುಕ್ತಿ ದೋಷ ಘಟಿಸುವುದಿಲ್ಲ.

117 ನೆಯ ಪದ್ಯದಲ್ಲಿ 'ಕಿನ್ನರ ಯುಗಲ'ದ ಪ್ರಸ್ತಾಪ ಇರುವುದರಿಂದ ಇಲ್ಲಿಯೂ. ಓರ್ವ ಕಿನ್ನರ ದೇವತೆ ವೀಣೆಯನ್ನು ನುಡಿಸುತ್ತಿದ್ದು. ಇನ್ನೋರ್ವ ಕಿನ್ನರ ದೇವತೆ ಹಾಡುತ್ತಿದ್ದಳು ಎಂದು ಭಾವಿಸಬಹುದು. ಅಥವಾ. ಓರ್ವ ಕಿನ್ನರ ದೇವತೆಯೇ ಹಾಡಿಕೊಂಡು ವೀಣೆಯನ್ನು ಬಾರಿಸುತ್ತಿದ್ದಳು ಎಂದುಕೊಂಡರೂ ಬಾಧಕವಿಲ್ಲ. ಹೇಗೇ ಆದರೂ, ಪ್ರೊ. ಸತ್ಯನಾರಾಯಣರು ಊಹಿಸುವಂತೆ. ಪಂಪನು ಇಲ್ಲಿ ರಾಗಾಲಾಪ್ತಿಗಿಂತ ರೂಪಕಾಲಪ್ತಿಯನ್ನೇ ಉದ್ದೇಶಿಸಿದ್ದಾನೆ ಎಂದು ಹೇಳಲು ಅಡ್ಡಿಯಿಲ್ಲ.

ಇನ್ನು ಮೇಲ್ಕಂಡ ವಿವರಣೆಯ ಬೆಳಕಿನಲ್ಲಿ. ಪದ್ಯದಲ್ಲಿ ಬರುವ ಧ್ವನಿ ಶಬ್ದದ ಭಿನ್ನಪ್ರಯೋಗಗಳಿಗೆ ಈ ರೀತಿ ಅರ್ಥಮಾಡಬಹುದು.:

(1) **'ಧ್ವನಿ**ಯೆನಿಸಿದ': ಶ್ರುತಿ. ಸ್ವರ. ವರ್ಣ. ಅಲಂಕಾರ. ರಾಗ ಇತ್ಯಾದಿಗಳೆಲ್ಲವನ್ನೂ ಒಳಕೊಳ್ಳುವ ಧ್ವನಿಸಾಮಾನ್ಯ ವಾಚಕ. ಇದು ಇಲ್ಲಿ ಪಾರಿಭಾಷಿಕಪದ.

(2) **'ಅಲಂಕಾರಧ್ವನಿ'**: 'ಅಲಂಕಾರವೆಂಬ 'ಧ್ವನಿ'.[22] ಇದೂ ಪಾರಿಭಾಷಿಕ ಪದ. ವೀಣಾವಾದನ ಸಂದರ್ಭದಲ್ಲಿ ಈ ಪದ ಪ್ರಯೋಗ ಉಚಿತ.

(3) **ವಿಪಂಚೀ ಧ್ವನಿ:** 'ವಿಪಂಚೀ' ಎಂಬ ವೀಣೆಯ ಧ್ವನಿ. ಅಥವಾ ನಾದ.

---

22 'ಅಲಂಕಾರ' ಎಂದರೆ ಏನು?

"ಅಲಂಕಾರ ಶಬ್ದೇನ ಕಿಮುಚ್ಯತೇ । ಅಲಂಕಾರ ಶಬ್ದೇನ ಮಂಡನ (ನ)? ಮುಚ್ಯತೇ ।
ಯಥಾಕೇಯೂರಾದಿನಾಲಂಕಾರೇಣ ನಾರೀ ಪುರುಷೋ ವಾ ಮಂಡಿತಃ
ಶೋಭಾಮಾವಹೇತ್. ತಥಾ ಚಿತ್ರೈರಲಂಕಾರೈಃ ಪ್ರಸನ್ನಾ (ನ್ನಾ) ದಿ ಭಿರಲಂಕೃತಾ
ವರ್ಣಾತ್ರಯಾ ಗೀತಿರ್ಗಾತೃ ಶ್ರೋತೄಣಾಂ ಸುಖಾವಹಾ ಭವತೀತಿ ।
ವ್ಯುತ್ಪತ್ತಿಶ್ಚ ಯಥಾ – 'ಡುಕೃಞ್ ಕರಣೇ' ಧಾತುರಲಂ (ಕೃತ?) ಶಬ್ದ ಪೂರ್ವಃ
ಅಲಂಕೃತ ಮಲಂಕಾರಃ ಘಞನ್ತೋs ಯಮಲಂಕಾರ ಶಬ್ದ ಇತಿ । (ಬೃ. ದೇ. ಪು. 34–35.
ಇಲ್ಲಿ ಅಲಂಕಾರ = ಗಮಕ. ಈಗಿನ ಸಂಗೀತದಲ್ಲಿ. ಗಾತ್ರಗಾಯನ (ಬಾಯಿ ಹಾಡಿಕೆ)ಕ್ಕಿಂತ ವೀಣಾವಾದನದಲ್ಲಿ ಗಮಕಗಳಿಗೆ ಅವಕಾಶ ಹೆಚ್ಚು. ಅವುಗಳ ನುಡಿಕೆ ಸೊಗಸು ಎಂದು ಬಲ್ಲವರ ಮತ.

(4) **ಅನೇಕರಾಗ ಧ್ವನಿ:** ಮೇಲೆ (1) ಮತ್ತು (2) ರಲ್ಲಿ ಇರುವಂತೆ, 'ಅಲಂಕಾರ ಧ್ವನಿ'ಯ ಹಾಗೆ, 'ರಾಗಧ್ವನಿ'ಯನ್ನು ಪಾರಿಭಾಷಿಕಾರ್ಥದಲ್ಲಿ ಪ್ರಯೋಗಿಸಿದೆ. ರಾಗವೂ ಧ್ವನಿ ಪ್ರಭೇದ: ವ್ಯಂಜಿತವಾಗತಕ್ಕದ್ದು. ಇಲ್ಲಿಯೂ ಕರ್ಮಧಾರಯ ಸಮಾಸವನ್ನೇ ಹೇಳಬೇಕು.

(5) **ಕಿನ್ನರಧ್ವನಿ:** ಕಿನ್ನರರ ಕಂಠಧ್ವನಿ. ಮೇಲ್ಕಂಡ ಶಬ್ದಾರ್ಥ ವಿವರಣೆಯ ಆಧಾರದಮೇಲೆ ಪದ್ಯದ ಆಶಯವನ್ನುಹೀಗೆ ವಿವರಿಸಬಹುದು:

ಪರ್ವತ ಪ್ರಾಂತದಲ್ಲಿ ಕಿನ್ನರರು ವಿಪಂಚಿಯನ್ನು ನುಡಿಸುತ್ತ, ಅದರೊಂದಿಗೆ (ಗೀತವನ್ನು) ಹಾಡುತ್ತಿದ್ದರು. ಆಗ, ವಿಪಂಚೀವಾದನದಲ್ಲಿ 'ಧ್ವನಿ' ಎಂದು ವ್ಯವಹರಿಸಲ್ಪಡುವ 'ಅಲಂಕಾರ ಧ್ವನಿ' (=ಗಮಕ) ಶೋಭಿಸುವ ಹಾಗೆ (='ಎಸೆವಿನಂ') ಸವಿಯಾದ ವೀಣಾನಾದವು ಮರೆಯುತ್ತಿತ್ತು:[23] ಒಡನೆಯೇ (ಎಂದರೆ ಒಡಗೂಡಿ, ಜೊತೆಯಲ್ಲಿ) ಹಾಡುತ್ತಿದ್ದ ಕಿನ್ನರರ ಶಾರೀರದಲ್ಲಿ (=ಕಂಠಧ್ವನಿಯಲ್ಲಿ) (ರಾಗಗಳ ಬದಲಾವಣೆಯಿಂದ ಧ್ವನಿಗಳ ಅಥವಾ ಸ್ವರಗಳ ಶ್ರುತಿ ಸಂಖ್ಯೆಯಲ್ಲಿ ಬದಲಾವಣೆಯಾಗಿ, ತತ್ಪರಿಣಾಮವಾಗಿ ರಾಗಭಾವಗಳಲ್ಲಿ ಅನೇಕತ್ವ ಅಥವಾ ವೈವಿಧ್ಯವುಂಟಾಗಿ) ಅನೇಕ ರಾಗಭಾವಗಳು (='ಅನೇಕ ರಾಗಧ್ವನಿ') ಪ್ರಕಟವಾಗುತ್ತಿವೆಯೋ ಎಂಬಂತೆ, ಅವರ ಕಂಠಧ್ವನಿ (='ಕಿನ್ನರ ಧ್ವನಿ') ಸೊಗಸುತ್ತಿತ್ತು.

ಪರಿಶಿಷ್ಟ 1

ಈ ಲೇಖನವನ್ನು ಬರೆದ ಮೇಲೆ, ಈಚೆಗೆ ಪಂಪನ ಆದಿಪುರಾಣದಲ್ಲಿಯೇ (ii–77) ಇನ್ನೊಂದು ಪದ್ಯ ಗಮನಕ್ಕೆ ಬಂದಿತು. ಇದರಲ್ಲಿ 'ಅಲಂಕಾರ ಧ್ವನಿ'ಯ ಪ್ರಸ್ತಾವವಿಲ್ಲದಿದ್ದರೂ 'ಧ್ವನಿ'ಶಬ್ದದ ಪ್ರಯೋಗವಿದೆ. ಇಲ್ಲಿಯೂ 'ಧ್ವನಿ' ಶಬ್ದ ಪಾರಿಭಾಷಿಕಾರ್ಥದಲ್ಲಿಯೇ ಪ್ರಯೋಗವಾಗಿರುವಂತಿದೆ. ಪದ್ಯ ಇದು:

ಎಸೆದರ್ದೆಯೊಳ್ ಪಳಂಚುವ ಕಲಧ್ವನಿಯಿಂ ಪೊಸತೊಂದು ರಾಗಮಂ
ಪೊಸಯಿಸಿಸೋಂಕೆ ಸೋಂಕಿಲೊಳೆ ಬಂದಿರೆ ನಿಂದಧರೋತ್ತರಂಗಳೊಳ್
ಮಿಸುಪ ರಸಾಂತರಂಗಳನೊಡಂಬಡನಾಗದೆ ತನ್ನೊಳಿಂತುಪ್ರೋ
ಲಿಸುವೊಡೆ ಪ್ರೋಲಿಸಲ್ಕೆ ದೊರೆ ವೀಣೆಯುನಾ ಸುರತ ಪ್ರವೀಣೆಯುಂ ॥

---

[23] ಪ್ರೊ. ತೀ. ನಂ. ಶ್ರೀ ಯವರು ಹೇಳುವಂತೆ 'ಕೇಳಿಬರುತ್ತಿತ್ತು' ಎಂದು ಅರ್ಥಮಾಡಿದರೆ, 'ಎಸೆ' ಶಬ್ದಕ್ಕೆ ದ್ವಂದ್ವಾರ್ಥ ಕಲ್ಪಿತವಾಗಿ, ಎಸೆ ಶಬ್ದದ ಪುನರುಕ್ತಿ ಹೆಚ್ಚು ಸಾರ್ಥಕವಾಗಿ ಕಂಡುಬರುತ್ತದೆ.

ಇದು ಸ್ವಯಂಪ್ರಭೆಯ ವರ್ಣನೆ. "ಸುರತಪ್ರವೀಣೆ ಸ್ವಯಂಪ್ರಭೆಯನ್ನೂ ವೀಣೆಯನ್ನೂ (ಪರಸ್ಪರ) ಹೋಲಿಸುವುದಾದರೆ. ಹೋಲಿಸುವುದು ಸಮ" ಎಂದು ತೀರ್ಮಾನಿಸುವುದಕ್ಕೆ ಆಧಾರವಾಗಿರುವ. ಸ್ವಯಂಪ್ರಭೆಯ ಮತ್ತು ವೀಣೆಯ ಗುಣ ಸಾದೃಶ್ಯಗಳನ್ನು ಶ್ಲೇಷೆಯ ಮೂಲಕ ಪಂಪನು ಸೊಗಸಾಗಿ ವರ್ಣಿಸಿದ್ದಾನೆ.

ಶ್ಲೇಷಾರ್ಥಗಳು:

ಎಸೆ = (ವೀಣೆ, ಸ್ವಯಂಪ್ರಭೆ – ಇಬ್ಬರಿಗೂ ಅನ್ವಯ) ಶೋಭಿಸು ಅಥವಾ ಕೇಳಿಬರು.

ಕಲಧ್ವನಿ = ವೀಣೆ: ಇಂಪಾದ 'ಧ್ವನಿ' (ಪಾರಿಭಾಷಿಕ ಅರ್ಥದಲ್ಲಿ). ಸ್ವಯಂಪ್ರಭೆ: ಇಂಪಾದ ಕಂಠಧ್ವನಿ.

ಪೊಸತೊಂದು 'ರಾಗ'ಮಂ ಪೊಸಯಿಸಿ = ವೀಣೆ: ಸ್ವರಗಳ ಶ್ರುತಿಸಂಖ್ಯಾಭೇದಗಳಿಂದ ಹೊಸರಾಗಭಾವದ ಬೋಧೆಯನ್ನು ಹೊಸದಾಗಿ ಕಲ್ಪಿಸಿ (ಧ್ವನಿಸಿ) ಸ್ವಯಂಪ್ರಭೆ: ಹೊಸದೊಂದು ಅನುರಾಗ ಅಥವಾ ಪ್ರೇಮವನ್ನು ಇನ್ನೂ ಹೊಸದಾಗಿ ಕಾಣುವಂತೆ ಮಾಡಿ.

ಸೋಂಕಿಲೊಳ್* = ವೀಣೆ: ಸೋಂಕಿದ ಎಡೆ. ಸ್ಥಾನ: ಎಂದರೆ. ಮೀಟಿದ ಸ್ವರಸ್ಥಾನ. ಸ್ವಯಂಪ್ರಭೆ: ಸ್ಪರ್ಶಿಸಿದ ದೇಹಭಾಗ.

ಅಧರೋತ್ತರಂಗಳ್: ವೀಣೆ: (ವೀಣೆಯ ಮೆಟ್ಟುಗಳ) ಕೆಳಭಾಗ ಮತ್ತು ಮೇಲ್ಭಾಗ: (ಇವುಗಳಲ್ಲಿ ನುಡಿಸುವ ಸ್ವರಸಂಚಾರದ) ಆರೋಹಣ ಅವರೋಹಣಗಳು. ಸ್ವಯಂಪ್ರಭೆ: (ದೇಹದ) ಕೆಳಭಾಗ ಮತ್ತು ಮೇಲ್ಭಾಗ.

ರಸಾಂತರಂಗಳ್ = ವೀಣೆ: ಬೇರೆ ಬೇರೆ ರಾಗಚ್ಛಾಯೆಗಳಿಂದ ಪ್ರತೀಯಮಾನವಾಗುವ ಬೇರೆ ಬೇರೆ ರಸಗಳು. ಸ್ವಯಂಪ್ರಭೆ: ಪ್ರೇಮ ಭಾವಪ್ರದರ್ಶನದ ವೈವಿಧ್ಯದಿಂದ ಅನುಭವಕ್ಕೆ ಬರುವ ಬೇರೆ ಬೇರೆ (ಶೃಂಗಾರದ) ರಸಭಾವಗಳು.

ಧ್ವನಿಪೂರ್ಣವಾದ ಈ ಪದ್ಯದ ತಾತ್ಪರ್ಯವನ್ನು ವಿವರಿಸುವುದಕ್ಕಿಂತ ರಸಿಕರ ಊಹೆಗೆ ಉಳಿಸುವುದು ಲೇಸು.

---

* ಆದಿಪುರಾಣದ ಸಂಪಾದಕರಾದ ಕೆ. ಜಿ. ಕುಂದಣಗಾರರು 'ಸೋಂಕಿದೊಡೆ' ಎಂಬ ಪಾಠವನ್ನು ಇಟ್ಟುಕೊಂಡಿದ್ದಾರೆ. 'ಸೋಂಕಿಲೊಳ್' ಎಂಬ 'ಬ' ಹಸ್ತಪ್ರತಿಯ ಪಾಠ ಪರಿಗ್ರಾಹ್ಯವೆಂದು ನಮ್ಮ ಎಣಿಕೆ. (ಸೋಂಕು + ಇಲ್ = ಸ್ಪರ್ಶಿಸುವ ಸ್ಥಳ ಸೋಕುವ ಎಡೆ).

ಪರಿಶಿಷ್ಟ 2

ಪಂಪನ 'ಅಲಂಕಾರ ಧ್ವನಿ' ಎಂಬ ಶಬ್ದ ಪ್ರಯೋಗವು ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ್ದು ಎಂಬುದನ್ನು ಈ ಕೆಳಗಿನ ಪದ್ಯದಲ್ಲಿನ 'ಅಲಂಕಾರ' ಶಬ್ದ ಪ್ರಯೋಗವೂ ಸಮರ್ಥಿಸುತ್ತದೆ:

ಗಮಕಂ ಪ್ರಯೋಗವಾಭೋ –
ಗಮಲಂಕಾರಂ ಪೊಗರ್ ನಯಂ ಮಿಱುಗು ಪೊದ –
ೞ್ದಿಮರೆ ಕೊಳೆ ಪಾಡುವಮರಿ ದ–
ಲಮರ್ದಂ ಮುಕ್ಕುಳಿಸಿಯುಗುವ್ವಿ ತೆಱನಂ ಪೋಲ್ತಳ್

(ಆದಿಪುರಾಣ: vii–16).

ನಾಭಿರಾಜನ ಪತ್ನಿ ಮರುದೇವಿ ಗರ್ಭಿಣಿಯಾದಾಗ ಸೌಧರ್ಮೇಂದ್ರನ ಅಪ್ಪಣೆಯಂತೆ ದೇವತಾ ಸ್ತ್ರೀಯರು ಆಕೆಯನ್ನು ಬಗೆಬಗೆಯ ವಿನೋದಗಳಿಂದ ಸಂತೋಷಪಡಿಸುತ್ತಾರೆ. ಮೇಲ್ಕಂಡ ಪದ್ಯದಲ್ಲಿ 'ಅಲಂಕಾರ' ಶಬ್ದ ಸಂಗೀತಕ್ಕೆ ಸಂಬಂಧಪಟ್ಟಿರುವುದು ಸ್ವಯಂ ಸ್ಪಷ್ಟವಾಗಿದೆ. ಗಮಕ, ಪ್ರಯೋಗ. ಆಭೋಗ. ಅಲಂಕಾರ ಇವು ನಾಲ್ಕು ಪಾರಿಭಾಷಿಕ ಪದಗಳು. ಗಮಕವನ್ನೇ ಅಲಂಕಾರ ವೆನ್ನುವುದೂ ಉಂಟು. ಈ ವಿವಿಧ ಗಾನ ಲಕ್ಷಣಗಳು ಮೊರಹೊಮ್ಮುತ್ತಿರಲು. ಅಮೃತವನ್ನು ಬಾಯಿಂದ ಹೊರಸೂಸುತ್ತಿರುವ ಹಾಗೆ ತೋರುವಷ್ಟು ಮಧುರವಾಗಿ ಅಮರಿಯೊಬ್ಬಳು ಹಾಡುತ್ತಿದ್ದಳು – ಎಂದು ಪದ್ಯದ ತಾತ್ಪರ್ಯ.

ಎಂ. ವಿ. ಸೀ.

ಒಂದು ಕಾಲಿಲ್ಲದ ಕತ್ತೆ

ವಿನಾಯಕ

ಟ್ರಕ್ಕು ಕಾರ್ ಸ್ಕೂಟರು ಬಸ್ಸು ಪರದಾಡುತಿವೆ
ಎತ್ತರದಿ; ಸೇತುವೆಯ ಕೆಳಗೆ ಎಂಜಿನ್‌ಗಾಡಿ
ಹಾಯ್ದಾಡಿ. ರೋಡಿನೆರಡೂ ಬದಿಗೆ ನಡೆದಾಡಿ
ದಾರಿಪೋಕರು. ಅಲ್ಲಿ ನಡುವೆ ನಿಂತಿದೆ ಸೃಷ್ಟಿ--
ಕರ್ತನಿಗೆ ಸೃಷ್ಟಿಯೊಡ್ಡಿರುವ ಘೋರ ಸಮಸ್ಯೆ:
ಮೂರು ಕಾಲ್‌ಮೇಲೆ ತೂಕವ ಹಿಡಿವ ರಾಸಭಿ.
ದೇವನಿರ್ಮಿತ ಸೃಷ್ಟಿಯಲಿ ಸಭ್ಯ ಪ್ರಾಣಿ.
ಅದರ ನಾಲ್ಕನೆ ಕಾಲು? ಎಲುಬಿಲ್ಲ, ತೊಗಲಿಲ್ಲ.
ಬರಿ ಮಾಂಸದ ಮುದ್ದೆ ಜೋತಾಡುತಿದೆ, ಇದೆ.

ಯಾವ ಕಸ್ತೂರಿ ಕಂಚುಗ ಹೊತ್ತಿತೋ ಕತ್ತೆ?
ಕತ್ತೆಕುರುಬನದಾವನದಕೇಟನಿಕ್ಕಿದನೊ?
ಹದ್ದು – ಕಾಗೆಗಳು ಬಂದಲ್ಲಿ ಸದ್ದಿಲ್ಲದಲೆ
ಮುರಿದ ಕಾಲದು ತಮ್ಮ ಮೃಷ್ಟಾನ್ನವೆಂದವೋ!
ನೋವಾಗಬಹುದು ಸತ್ತವರಿಗೂ. ಸಹಿಸಿಹುದು
ಪ್ರಾಣಿ ಜೀವಂತ ಯಮಯಾತನೆಯಿದನು ಬದುಕಿ:
ಪೂಲಿನ ಮೇಲೆ ಚೌಕದ ನಡುವೆ ನಿಂತಿಹುದು
ದೇವ ಚೌಕಾಲಿಯೇನನ್ನು ನಡೆಸುವನೆಂದು.

ನಾನೆಂದೆ: ಆನಂದ ಸಂಜಾತ ಸೃಷ್ಟಿಯಿದು.
ಸಚ್ಚಿದಾನಂದವೇ ತನ್ನ ಲೀಲೆಗೆ ತಾನು
ಸುಟಿಸಿರುವ ವೃಷ್ಟಿಯಿದು. ಇಲ್ಲಿ ಈ ಅನ್ಯಾಯ?
ಕಾಲೊಂದರ ಮೇಲೆ ಕಲಿಯುಗದಿ ನಿಲ್ಲುವದಂತೆ
ಧರ್ಮವೆಂಬುವ ಪ್ರಾಣಿ. ಈ ಕತ್ತೆಗಿರೆ ಮೂರು.
ತ್ರೇತಾಯುಗ ಬಂದಿಹುದೆಂದು ಹಿಗ್ಗಲೆ ನಾನು?
ಜನ್ಮಾಂಧ ಜನುಮವನು ಹೊತ್ತ ಬುವಿಯೊಳಗೆಲ್ಲಿ
ಧರ್ಮಮೂಲ ದಯೆ?

ವಿಷಾದಪೂರಿತ ನಸುನಗೆಯೊಂದನು ನಕ್ಕು
ವಿಶ್ವೇಶ್ವರನೆಂದ: ಜನ್ಮಾಂಧವಿರಬಹುದು
ವಿಶ್ವವಿದು, ನಾನಲ್ಲ. ನನ್ನ ಪ್ರತಿನಿಧಿಯೆಂದು
ಘಮಿಂಡಿಯಲಿ ಬಾಳಿ ಕಂಡುದೆಲ್ಲವನೇಳಿ
ಧರಾಂಗನೆಯ ತುಂಡರಿಸಿ ವಿಷವೃತ್ತಗಳ ಕಟ್ಟಿ
ಪಶುಪಕ್ಷಿಗಳನು ತನ್ನಶನವ್ಯಸನಕೆ ಮುಗಿಸಿ
ಯೋಜಿಸಿ ಮನುಕುಲದ ಬಾಳನ್ನೇ ಹೋಮಿಸಿ
ಮೆರೆವ ನರನನು ಕೇಳು. ನಿನ್ನನ್ನೆ ಕೇಳಿಕೋ:
ಜನ್ಮಾಂಧರಾರು, ನಿರ್ಘೃಣರಾರು, ಖಲರಾರು–
ಆನಂದದಿಂದುಗಮಿಸಿದ ಸೃಷ್ಟಿ ಪ್ರವಹಿಸಿದೆ
ಆನಂದೋದಧಿಯೆಡೆ ಹಿಗ್ಗಿ. ಮರೆತಿದನು
ಮನುಜ ತೊಳಲಿದನು ಬೇತಾಳ ಬಾವಿಯ ತೋಡಿ.

ಬಿತ್ತರಿಸಿದೆನು. ಮಾಯೆಯಾಟವನು ಬಿತ್ತರಿಸಿ:
ಮರೆಯುವೊಲು ನೀನಿತ್ತೆ ಮರವು ಮದ್ದನು – ನರನ
ಹೀಗಳೆವುದೇಕಿಂತು. ಬಯಸಿದೊಲು ನಡೆದಿರಲು?

ದೇವನೆಂದನು: ಅಲ್ಲ, ಹೀಗಳೆವ ಮಾತಲ್ಲ.
ಮರೆಯುವುದು ಸಹಜ ಮಾನವಗೆ. ಮರೆತರೆ ಹಾನಿ.
ಕುರಿತು ಮಿಡುಕಿರಲು ಕವಿ. ಅರಿತಿರಲು ಶರಣ.

ಪ್ರೊ. ರಾಮ್‌ಕುಮಾರ್ ಸಕ್ಸೇನ

ಎಂ. ಎಸ್. ಎಸ್. ರಾವ್

ಪ್ರೊ. ರಾಮ್‌ಕುಮಾರ್ ಸಕ್ಸೇನಾ ಅವರ ಅಕಸ್ಮಾತ್ ನಿಧನದಿಂದ ಸೆಪ್ಟೆಂಬರ್ 1. 1970ರಂದು ಭಾರತವು ಒಬ್ಬ ಮಹಾನ್ ಸಸ್ಯ ವಿಜ್ಞಾನಿ ಮತ್ತು ಶಿಕ್ಷಣವೇತ್ತರನ್ನು ಕಳೆದುಕೊಂಡಿತು. ಇಡೀ ಸಸ್ಯ ಜಗತ್ತೇ ತಳಮಳಗೊಂಡಿತು. ಇದಕ್ಕೆ ಕಾರಣ ಅವರು ನಮ್ಮ ದೇಶದಲ್ಲಿ ಒಬ್ಬ ಗಣ್ಯ ಸಸ್ಯಶಾಸ್ತ್ರಜ್ಞರಾಗಿದ್ದರು, ಎಂಬುದೊಂದೇ ಕಾರಣವಲ್ಲ. ಅದರ ಜೊತೆಗೆ ಅವರು ಎಲ್ಲ ವಿಷಯಗಳಲ್ಲೂ ಇನ್ನೊಬ್ಬರಿಗೆ ಸಹಾಯಮಾಡುವ ಮತ್ತು ಮೃದುಸ್ವಭಾವದ ಒಬ್ಬ ಸಂಪೂರ್ಣ ಸದ್ಗೃಹಸ್ಥರೂ ಆಗಿದ್ದರು. ಅವರ ವಿದ್ಯಾರ್ಥಿಗಳಿಗೆ ಮತ್ತು ಅವರ ಸಹಯೋಗಿಗಳಿಗೆ ಅವರ ಮರಣವು ಒಂದು ಅನಿರೀಕ್ಷಿತ ಮತ್ತು ತೀವ್ರ ಆಘಾತದ ಸುದ್ದಿಯಾಗಿ ಪರಿಣಮಿಸಿತು.

ಪ್ರೊ. ರಾಮಕುಮಾರ್ ಸಕ್ಸೇನ ಆಗಸ್ಟ್. 16. 1897 ರಂದು 'ಒರೈ' (ಯು.ಪಿ). ಯಲ್ಲಿ ಜನಿಸಿದರು. ಅವರ ಮೊದಲಿನ ಶಿಕ್ಷಣವು ಒರೈಯಲ್ಲಿಯೇ ಸಂಪೂರ್ಣಗೊಂಡಿತು. ಅವರು ಅಲ್ಲಿನ ಸರ್ಕಾರಿ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಯಾಗಿ ಮೆಟ್ರಿಕ್ಯುಲೇಶನ್ ಪಾಸಾದರು. ನಂತರ ಆಗ್ರಾದ 'ಸೆಂಟ್ ಜಾನ್ಸ್ ಕಾಲೇಜು' ಸೇರಿ 1920ರಲ್ಲಿ ಅಲ್ಲಿಂದ ಬಿ. ಎಸ್‌ಸಿ ಪದವಿ ಪಡೆದರು. ಅವರು ತಮ್ಮ ಸ್ನಾತಕೋತ್ತರ ಶಿಕ್ಷಣಕ್ಕಾಗಿ ಬನಾರಸ್ ಹಿಂದೂ ವಿಶ್ವವಿದ್ಯಾಲಯವನ್ನು ಸೇರಿದರು ಮತ್ತು 1922ರಲ್ಲಿ ಸಸ್ಯ ಶಾಸ್ತ್ರದಲ್ಲಿ ಎಮ್. ಎಸ್‌ಸಿ. ಪದವಿಯನ್ನು ಪ್ರಥಮ ವರ್ಗದಲ್ಲಿ ಗಳಿಸಿದರು. ನಂತರ ಶೀಘ್ರದಲ್ಲಿ ಅವರು ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಸಸ್ಯಶಾಸ್ತ್ರದ ಲೆಕ್ಚರರ್ ಆಗಿ ಸೇರಿದರು. 1959ರಲ್ಲಿ ಪ್ರಾಧ್ಯಾಪಕರು ಮತ್ತು ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ರಾಗಿ ನೇಮಕಗೊಂಡು ನಿವೃತ್ತರಾಗುವವರೆಗೂ ಆ ಸಂಸ್ಥೆಯಲ್ಲಿ ಅವರು ಸೇವೆ ಸಲ್ಲಿಸಿದರು.

ಸಸ್ಯಶಾಸ್ತ್ರದಲ್ಲಿ ಪ್ರೊ. ಸಕ್ಸೇನಾರ ಆಸಕ್ತಿಯು ಬಹಳ ವಿಶಾಲವಾಗಿತ್ತು. ಮತ್ತು 'ಆಲ್‌ರೌಂಡರ್' ಎಂದು ಹೆಸರಿಸಬಹುದಾದ ಕೆಲವೇ ಭಾರತೀಯ ಸಸ್ಯವಿಜ್ಞಾನಿಗಳಲ್ಲಿ ಅವರು ಒಬ್ಬರಾಗಿದ್ದರು. ಆದರೂ ಅವರ ಹೆಚ್ಚಿನ ಆಸಕ್ತಿಯು 'ಮೈಕಾಲಜಿ' ಮತ್ತು 'ಪ್ಲಾಂಟ್ ಪೆಥಾಲಜಿ' ಗಳ ವಿವಿಧ ಭಾಗಗಳ ಮೇಲೆ ಕೇಂದ್ರೀಕೃತವಾಗಿತ್ತು. ಜಗತ್ತಿನಲ್ಲಿಯೇ ಪ್ರಸಿದ್ಧರಾದ ಜೀವಕೋಶಶಾಸ್ತ್ರಜ್ಞ "ಪ್ರೊ. ಗಿಲಿಯಮಾರ್ಂಟ್" ರ ಕೆಳಗೆ

ಕೆಲಸಮಾಡಲು ಅವರು ಫ್ರಾನ್ಸಿಗೆ ತೆರಳಿದರು ಮತ್ತು 1935ರಲ್ಲಿ ಅತ್ಯುಚ್ಚವೆನಿಸಿದ 'ಡಾಕ್ಟರ್ ಆಫ್ ಸೈನ್ಸ್' ಪದವಿಯನ್ನು ಪ್ಯಾರಿಸ್ಸಿನ 'ಸೊರಬೋನ್' ವಿಶ್ವವಿದ್ಯಾಲಯದಿಂದ ಪಡೆದುಕೊಂಡರು. ಕೆಲ ಶಿಲೀಂಧ್ರಗಳ ಜೀವಕೋಶ ಕೇಂದ್ರದ ಹೊರಗಿನ ವಸ್ತುಗಳನ್ನು ವಿಶ್ಲೇಷಿಸುವದರಲ್ಲಿ ಉತ್ತಮ ಫಲಿತಾಂಶಗಳನ್ನು ಗಳಿಸಿ, ಆ ಕ್ಷೇತ್ರದಲ್ಲಿ ತಮ್ಮ ಹೆಸರನ್ನು ಶಾಶ್ವತವಾಗಿ ಉಳಿಸಿಕೊಂಡರು. 'ಪೈಥಿಯಮ್' ಎಂಬ ಶಿಲೀಂಧ್ರದಲ್ಲಿ (Pythium) 'ಮೈಟೊಕಾಂಡ್ರಿಯ'ದ ಮೇಲೆ ಅವರ ಸಂಶೋಧನ ಕಾರ್ಯವು ಈ ದಿಶೆಯಲ್ಲಿ ವಿಶೇಷ ಮಹತ್ವದ್ದಾಗಿದೆ. ಅವರು ಭೂಮಿಯ ಮೇಲಿನ ಶಿಲೀಂಧ್ರಗಳಲ್ಲಿ ಮತ್ತು ಬೇರುಗಳ ರೋಗಜನಕ ಶಿಲೀಂಧ್ರಗಳಲ್ಲಿ ಸಹ ಆಸಕ್ತಿವಹಿಸಿದರು. ಅಲಹಾಬಾದಿನಲ್ಲಿ ಮಣ್ಣಿನಲ್ಲಿಯ ಸೂಕ್ಷ್ಮಜೀವಿಗಳ ಅಭ್ಯಾಸಕ್ಕಾಗಿ ಅನೇಕ ವಿದ್ಯಾರ್ಥಿಗಳನ್ನು ತರಬೇತಿಗೊಳಿಸಿದರು.

ಪ್ರೊ. ಸಕ್ಸೇನಾ ಅನೇಕ ಸಂಘ ಸಂಸ್ಥೆಗಳೊಂದಿಗೆ ಸಂಬಂಧವಿರಿಸಿಕೊಂಡಿದ್ದರು. ಅವರು 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಸ್' (ಈಗಿನ 'ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ'), 'ದಿ ನ್ಯಾಷನಲ್ ಅಕ್ಯಾಡಮಿ ಆಫ್ ಸೈನ್ಸ್‌ಸ್ ಆಫ್ ಇಂಡಿಯ' ಮತ್ತು 'ಇಂಡಿಯನ್ ಬೊಟಾನಿಕಲ್ ಸೊಸೈಟಿ' ಮೊದಲಾದುವುಗಳ 'ಫೆಲೋ' ಆಗಿದ್ದರು.

ವಿವಿಧ ಕ್ಷೇತ್ರಗಳಲ್ಲಿ ಅವರು ಸಲ್ಲಿಸಿದ ಅಪಾರ ಸೇವೆಯನ್ನು ಮನ್ನಿಸಿ ಅವರಿಗೆ ಅನೇಕ ಗೌರವಗಳನ್ನು ಸಲ್ಲಿಸಲಾಯಿತು. ಅವರು 1953ರಲ್ಲಿ 'ಇಂಡಿಯನ್ ಸೈನ್ಸ್ ಕಾಂಗ್ರೆಸ್'ನ ಸಸ್ಯವಿಭಾಗದ ಅಧ್ಯಕ್ಷರಾಗಿ ಆಯ್ಕೆಗೊಂಡರು. ಅಲ್ಲದೆ 1954ರಲ್ಲಿ 'ಇಂಡಿಯನ್ ಬೊಟಾನಿಕಲ್ ಸೊಸೈಟಿ'ಯ ಅಧ್ಯಕ್ಷರೂ, 1968ರಲ್ಲಿ 'ಇಂಡಿಯನ್ ಫೈಟೋ ಪೆಥಲಾಜಿಕಲ್ ಸೊಸೈಟಿ'ಯ ಅಧ್ಯಕ್ಷರೂ ಆದರು. ಭಾರತದಲ್ಲಿ ಸಸ್ಯಶಾಸ್ತ್ರದ ಬೆಳವಣಿಗೆಗೆ ಅವರು ನೀಡಿದ ಅಮೂಲ್ಯ ಕೊಡುಗೆಗಳನ್ನು ಗಮನಿಸಿ 1967 ರಲ್ಲಿ ಅವರಿಗೆ 'ಬೀರಬಲ್ ಸಾಹನಿ ಸ್ಮಾರಕ ಪದಕ'ವನ್ನು ನೀಡಲಾಯಿತು. 1969ರಲ್ಲಿ ಅವರನ್ನು 'ನ್ಯಾಷನಲ್ ಅಕ್ಯಾಡಮಿ ಆಫ್ ಸೈನ್ಸ್‌ನ' ಅಧ್ಯಕ್ಷರಾಗಿ ಆಯ್ಕೆಮಾಡಲಾಯಿತು.

ಉಚ್ಚಮಟ್ಟದ ಹಾಗೂ ಮೇಧಾವಿ ವಿಜ್ಞಾನಿಯಾಗಿದ್ದಂತೆಯೇ ಅವರು ಒಬ್ಬ ಮಹಾನ್ ಪ್ರಾಧ್ಯಾಪಕ ಮತ್ತು ಮಾನವತಾವಾದಿ ಸಹ ಆಗಿದ್ದರು. ಕಷ್ಟದಲ್ಲಿದ್ದವರಿಗೆ ಸಹಾಯ ಮಾಡಲು ಅವರು ಯಾವಾಗಲೂ ತಮ್ಮ ಶಕ್ತಿಮೀರಿ ಪ್ರಯತ್ನಿಸುತ್ತಿದ್ದರು. ಅವರ ಹಾಸ್ಯಪರ ವಿನೋದ ಬುದ್ಧಿ, ಪ್ರೀತಿಯುಳ್ಳ ನಡವಳಿಕೆ, ಸುಸ್ವಭಾವ ಮತ್ತು ಸಹಾಯ ಮಾಡುವ ಗುಣಗಳಿಂದ ಅವರು ಎಲ್ಲ ಸಭೆ, ಸಮಿತಿಗಳಲ್ಲಿ ಅತ್ಯಂತ ಜನಪ್ರಿಯ ವ್ಯಕ್ತಿಯಾಗಿರುತ್ತಿದ್ದರು. ಸಸ್ಯ ಶಾಸ್ತ್ರಕ್ಕೆ ತಮ್ಮ ಅಮೋಘ ಕೊಡುಗೆಗಳಿಂದಲೂ ಅವರು ಕೀರ್ತಿ ಯಶಸ್ಸುಗಳಿಸಿದರು. ಅವರು ತರಬೇತುಗೊಳಿಸಿದ ಹಾಗೂ ಅನೇಕ ವಿಶ್ವ ವಿದ್ಯಾಲಯಗಳಲ್ಲಿ ಮತ್ತು ಸರ್ಕಾರದಲ್ಲಿ ಉನ್ನತ ಸ್ಥಾನದಲ್ಲಿದ್ದು ಸೇವೆಸಲ್ಲಿಸುತ್ತಿರುವ

ಅವರ ಶಿಷ್ಯವರ್ಗದ ಮುಖಾಂತರವಾಗಿಯೂ, ಅವರು ಭಾರತದ ಸಸ್ಯ ವಿಜ್ಞಾನ ಜಗತ್ತಿನಲ್ಲಿ ತಮ್ಮದೇ ಆದ ಒಂದು ವಿಶಿಷ್ಟ ಸ್ಥಾನಮಾನವನ್ನು ಗಳಿಸಿಕೊಂಡಿದ್ದರು.

1959 ರಲ್ಲಿ ಅವರು ಸೇವಾ ನಿವೃತ್ತರಾದರೂ, ಆಕಸ್ಮಿಕವಾಗಿ ದಿನಾಂಕ 1, ಸೆಪ್ಟೆಂಬರ್ 1970 ರಂದು ನಿಧನ ಹೊಂದುವವರೆಗೂ ಅವರು ಸಸ್ಯಶಾಸ್ತ್ರದ ಬೋಧನೆಗೆ ಮತ್ತು ಸಂಶೋಧನೆಗಳಲ್ಲಿ ಅತ್ಯಂತ ಸಕ್ರಿಯ ಆಸಕ್ತಿಯನ್ನು ಉಳಿಸಿಕೊಂಡು ಬಂದರು. ಸತ್ವಯುತ ಚಟುವಟಿಕೆಯ ತುಂಬು ಬಾಳನ್ನು ಬಾಳಿದ ಅವರು, ತಮ್ಮ ಹಿಂದೆ ಪತ್ನಿ, ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿ ಹೋಗಿದ್ದಾರೆ. ಸಸ್ಯಶಾಸ್ತ್ರದ ಎಲ್ಲ ಪರಿಣತರೂ, ವಿದ್ಯಾರ್ಥಿಗಳೂ, ಸಸ್ಯಶಾಸ್ತ್ರದಲ್ಲಿ ಅಚ್ಚಳಿಯದಂತಹ ಸೇವೆಯನ್ನು ಮಾಡಿದ ಈ ಭಾರತೀಯ ಸತ್ಪುರುಷನಿಗೆ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾರೆ.

ಪ್ರೇಮ ಪತ್ರ

ಕೆ. ಎಸ್. ನರಸಿಂಹಸ್ವಾಮಿ

ನೀ ಮನೆಯೊಳಿಲ್ಲದಿರುವುದು ತಿಳಿದು/ತಿಳಿಯದೆಯೆ.
ರಾಜ್ಯರಾಜ್ಯಗಳಿಂದ ಬಂಧುಗಳ ಆಗಮನ;
ನೀರು ಹತ್ತದ ಮಹಡಿಯಲ್ಲಿ ರೋದನ, ಕದನ;
ನೀನು ಉಬ್ಬೆಗೆ ಕೊಟ್ಟ ಬಟ್ಟೆ ಹಿಂದಿರುಗದೆಯೆ,
ಆ ಪ್ರಾಣಿಯಿಂದ ನನಗಾಗಿರುವ ಅವಮಾನ;
ಮದುವೆಯುಡುಗೊರೆಯಾದ ನನ್ನ ಲೇಖನಿಯೊಡನೆ
ಕಾಣೆಯಾಗಿರುವ ಕಲ್ಪನೆಯ ಕಾವ್ಯೋದ್ಯಾನ;
ನೀನು ಹೊರಡುವುದಕ್ಕೆ ಕೇವಲ ನಿಮಿಷ ಮುಂಚೆ
ಯಾರಳತೆಗೋ ಹೊಲಿದು ಇವನು ತಂದರ್ಪಿಸಿದ
ನಿನ್ನ ರವಿಕೆಗೆ ನಾನು ಕೂಲಿ ಕೊಡಬೇಕೆಂಬ
ನಿನ್ನ ತೀರ್ಮಾನ: ಈ ಹೊಸ ಪರಿಸ್ಥಿತಿಯಲ್ಲಿ
(ಸ್ಟಾಂಪು ಹಚ್ಚಲು ಮರೆತ ನಿನ್ನೆಯ ಪತ್ರದಲ್ಲಿ).
"ನಿಮ್ಮ ಆರೋಗ್ಯ ಹೇಗೆ"ಂದು ಕೇಳಿದ್ದೀಯೆ:
ಕೇಳಬೇಡವೆ. ಅಯ್ಯೋ!– ಹಾಗೊಂದು ಸಲ ನೀನು
ನನ್ನ ಕೇಳಲಿ ಎಂದೆ ನಾ ನಿನ್ನ ಕಳಿಸಿದ್ದು!

ಅರ್ಧಾಂಗಿ ಅರ್ಧರಾತ್ರಿಯ ರೈಲಿನಲ್ಲಿಂದು
ಅಷ್ಟು ಅವಸರದಲ್ಲಿ ಹೊರಟುಹೋದಳು ಎಂದು.
ನಾನೇನು ಹೇಳಿ ಧಾರಣೆಯ ಏರುವುದಕ್ಕೆ?
ಅಥವಾ ವಿಮಾನವ್ರೋ ಕೆಟ್ಟು ಇಳಿಯುವುದಕ್ಕೆ?
ವರುಷದೀಚೆಗೆ ನಡೆದ ನಮ್ಮ ಮದುವೆಗೆ ಮುಂಚೆ
ಹೇಗಿದ್ದೆನೋ ಹಾಗೆ ಇದ್ದುಬಿಟ್ಟಿದ್ದೇನೆ.–
ನೀನಿಲ್ಲದಿರುವ ಬೇಸಗೆಯಲ್ಲಿ ತಣ್ಣೀರು
ಎಷ್ಟು ಹಿತವಾಗಿದೆಯೊ ಸ್ನಾನಕ್ಕೆ, ಪಾನಕ್ಕೆ!
ಭೋಜನ, ಉಪಾಹಾರ – ಯಥಾ ಪ್ರಕಾರ–
ಗೋಪಾಲಸ್ವಾಮಯ್ಯಂಗಾರರ ಕೃಷ್ಣ ಮಂದಿರದಲ್ಲಿ.

ಹಗಲ ಹನ್ನೊಂದರಿಂದೈದೂವರೆಯ ವರೆಗೆ
ಇದೆಯಲ್ಲ ಕೆಲಸ. ಹೋಗುವುದು ಬರುವುದು ಸೇರಿ.
ಗಡಿಯಾರದಲ್ಲಿ ಕುದುರೆಗಳು ಓಡಿದ ಬಳಿಕ–
ಎಲ್ಲ ಮೆಟ್ಟಿಲ ಮೇಲೆ ಮುತ್ತು ಉರುಳಿದ ಹಾಗೆ.
ಬೆಳಗಾಗ ಬಂದವರು ಇಳಿದು ಮರೆಯಾದಾಗ.
ಬಸ್ಸುನಿಲ್ಲದ ಸ್ಟಾಪಿನಲ್ಲಿ ಕ್ಯೂ ಬೆಳೆದಾಗ
ಆಗುವುದೆಲ್ಲ ಸಂಜೆ. ಕಷ್ಟ ಬರುವುದು ಆಗ:
ಮಾಡಲೇನಿದೆ ನನಗೆ ಮನೆಗೆ ಹೋದರೆ ಬೇಗ?
ಸಂಜೆಯೇ ಕಷ್ಟ ಜೀವನದಲ್ಲಿ: ಪರಿಹಾರ
ಅವರವರ ಇಷ್ಟಾನುಸಾರ. ನಿನಗೂ ಗೊತ್ತು.
ನನಗೆ ನಾಟಕ ತುಂಬ ಇಷ್ಟ. ಆಡುವುದಷ್ಟ.
ಕುಳಿತು ನೋಡುವುದಷ್ಟು. ನಿನ್ನೆಯೂ ಹೋಗಿದ್ದೆ.

ನಾಟಕದ ವಿಷಯ ಸ್ವಾರಸ್ಯವಾಗಿಯೆ ಇತ್ತು:
ಅಂಕಗಳ ಮಧ್ಯೆ ತೆರೆಬಿದ್ದು ಬಿಡುವಾದಾಗ
ನೇಪಥ್ಯದಲ್ಲಿ ಕ್ರಷ್ ಬಾಟ್ಲಿಗಳ ಚೀತ್ಕಾರ.
ತೆರೆಯೆದ್ದ ಮೇಲೆ ರಂಗಸ್ಥಳದ ಕತ್ತಲೆಯ
ಹೃದಯ ಕಮಲಕ್ಕೆ ಹೊಂಬೆಳಕಿನುಲ್ಕಾಪಾತ.
ಆ ಪಾತ ಮಧುರ ಸಂಗೀತ. ರಾಜಕುಮಾರಿ
ಪ್ರೇಕ್ಷಕರ ಮೇಲೆ ಕರವಸ್ತ್ರವನ್ನೆಸೆದಾಗ
ಕುರ್ಚಿಗಳ ಮುರಿತ. ಎಲ್ಲೆಲ್ಲೂ ಹಾಹಾಕಾರ.
ನಾಟಕದ ಹೆಸರೆ 'ಕುರ್ಚಿಯ ಮುರಿತ'. ಅದರಲ್ಲಿ
ಕಡೆಯವರೆಗಿರುವುದಾಗದೆ. ಮನೆಗೆ ಬಂದಾಗ
ಮೈ ಬೆಚ್ಚಗಿತ್ತು ಬೇಸಗೆಯ ಕಾರಣದಿಂದ.
ಮಲಗಿದ್ದೆ. ಬರಲಿಲ್ಲ ನಿದ್ದೆ. ರಾಜಕುಮಾರಿ.
ಕಾಶ್ಮೀರದಲ್ಲಿ ಹಿಮಪಾತವಾಗಿರಬಹುದು:
ಇಲ್ಲಿ ಕಾಮನ ಬೂದಿ ತಣ್ಣಗಾದರೆ ಸಾಕು!

ಇದು ಕಗ್ಗವೆಂದು ಬಗೆಗಿಡದೆ. ಮರೆಯಲ್ಲೋದು:
ನಿನಗಿದರ ವಿಷಯ ತಿಳಿಯುವುದು. ಅಂಚೆಯ ಕೆಲಸ
ತಲುಪಿಸುವುದಷ್ಟೆ. ಜೋಪಾನ ನಿನ್ನಾರೋಗ್ಯ.

ಈಗಲೇ ನೀನು ಬರುವುದು ಬೇಡ: ನಾಳೆಯೇ
ಬೇಡ ನಿನ್ನಿಂದ ಉತ್ತರ ಕೂಡ. ಪತ್ರಕ್ಕೆ
ಮುತ್ತುಕೊಡುವುದು ರೂಢಿ. ನಿನ್ನಿಷ್ಟ! ಸದ್ಯಕ್ಕೆ
ನೀನಿಷ್ಟು ಮಾಡು: ನಿನಗಾಗಿ ಕಳಿಸಿರುವಂಥ
ಕರವಸ್ತ್ರವನ್ನು – ವಿಶ್ಲೇಷಿಸದೆ – ಸ್ವೀಕರಿಸು
ಇದರೊಡನೆ, ನನ್ನೊಲವಿನೊಡನೆ, ವಂದನೆಯೊಡನೆ!

ಶಾಂತಲೆಯನ್ನು ಕುರಿತ ಶಾಸನಗಳು

ವೈ. ಕೆ. ಸಂಧ್ಯಾ

ಕ್ರಿ. ಶ. 12ನೇ ಶತಮಾನವು ಹೊಯ್ಸಳ ಸಾಮ್ರಾಜ್ಯದ ಸುವರ್ಣಯುಗ. ಚತುಸ್ಸಮಯ ಸಮುದ್ಧರಣರು ಜನಿಸಿದ ಧಾರ್ಮಿಕ ಯುಗ. ಈ ಯುಗದಲ್ಲಿ ಜನಿಸಿದ ಶಾಂತಲೆಯ ವ್ಯಕ್ತಿತ್ವ ಸರ್ವಧರ್ಮಗಳ ತವರುಮನೆಯಾಗಿತ್ತು.

ಶಾಂತಲೆ ಎಂಬ ಹೆಸರನ್ನು ಕೇಳಿದೊಡನೆ ನಮಗೆ ತತ್‌ಕ್ಷಣ ನೆನಪಿಗೆ ಬರುವುದು ಹೊಯ್ಸಳ ವಿಷ್ಣುವರ್ಧನನ ಪಿರಿಯರಸಿ ಶಾಂತಲೆ. ಆದರೆ ಶಾಂತಲೆಯನ್ನು ಕುರಿತ ಶಾಸನಗಳೆಲ್ಲ ಈಕೆಯನ್ನೇ ಕುರಿತದ್ದಲ್ಲ. ಹೊಯ್ಸಳ ವಂಶದಲ್ಲಿ ಮೂರು ಜನ ಶಾಂತಲೆಯರು ಬರುತ್ತಾರೆ. ಅವರು ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲೆ. ವಿಷ್ಣುವರ್ಧನನ ಕಿರಿಯರಸಿ ಎರಡನೇ ಶಾಂತಲೆ ಮತ್ತು ಅವಳ ಮಗಳು ಚಿಕ್ಕ ಶಾಂತಲೆ. ಎರಡನೆಯ ಶಾಂತಲೆಯೂ ಕೂಡ ಪತಿವ್ರತೆಯೇ. ಇವಳ ಮಗಳು 'ಸರ್ವಕಲಾ ಪ್ರೌಢೆ' ಚಿಕ್ಕ ಶಾಂತಲೆ. 2ನೇ ಶಾಂತಲೆ ಮತ್ತು ಅವಳ ಮಗಳು ಚಿಕ್ಕ ಶಾಂತಲೆ ಸಾಯಲು 2ನೇ ಶಾಂತಲೆಯ ತಾಯಿ ಜಕ್ಕಿಯಬ್ಬೆ ಮಗಳ ಮತ್ತು ಮೊಮ್ಮಗಳ ಜ್ಞಾಪಕಾರ್ಥವಾಗಿ 'ಶಂಕರ ಗೃಹಮಂ ವಿಷ್ಣುನೃಪನ ಅನುಗ್ರಹದಿಂದಂ ನಿರ್ಗುಂದ ನಾಡೊಳಗಣ ಎಲೆಗುಂದದೊಳ್' ಕಟ್ಟಿಸಿದ ವಿಷಯವನ್ನು ಹಾಸನದ 89ನೇ ಶಾಸನವು ತಿಳಿಸುತ್ತದೆ.

ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲೆಯ ವಿಷಯವು ಕ್ರಿ. ಶ. 1116 ರಿಂದ ಮೊದಲುಗೊಂಡು ಕ್ರಿ. ಶ. 1131ರ ವರೆಗಿನ ಹದಿನಾರು ವರ್ಷಗಳ ಅವಧಿಯಲ್ಲಿ ದೊರೆಯುವ ಅನೇಕ ಶಾಸನಗಳಲ್ಲಿ ವರ್ಣಿತವಾಗಿದೆ. 'ಕನ್ನಡ ನಾಡಿನ ಯಾವೊಬ್ಬ ಮಹಾರಾಣಿಯ ವಿಷಯದಲ್ಲೂ ಇಷ್ಟು ಶಾಸನಗಳ ಉಲ್ಲೇಖವಿಲ್ಲವೆಂಬ ಒಂದು ಅಂಶದಿಂದಲೇ ಆಕೆ ಮಹಾವ್ಯಕ್ತಿಯೆಂದು ತಿಳಿಯಬಹುದು.'

ಒಬ್ಬ ಮಹಾಕಾವ್ಯದ ನಾಯಿಕೆಗೆ ಏನೆಲ್ಲ ಗುಣಗಳಿರಬಹುದೋ ಆ ಎಲ್ಲ ಗುಣಗಳನ್ನು ಶಾಂತಲೆಗೆ ಶಾಸನ ಕವಿಗಳು ಆರೋಪಿಸಿದ್ದಾರೆ. ಅವರ ದೃಷ್ಟಿಯಲ್ಲಿ ಅವಳು ಸರ್ವಗುಣ ಸಂಪನ್ನಳೂ. ಅನ್ಯರಿಂದ ಭಿನ್ನಳೂ ಆಗಿದ್ದಳು. ವಡ್ಡಾರಾಧನೆಕಾರ ಒಬ್ಬ ಸ್ತ್ರೀಯ ಗುಣವಿಶೇಷಗಳನ್ನು ಹೇಳುವಾಗ 'ಅತ್ಯಂತ ರೂಪಲಾವಣ್ಯ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯೊಳ್' ಎಂದು ಹೇಳುತ್ತಾನೆ. ಶಾಂತಲೆಯೂ ಕೂಡ ಈ ಗುಂಪಿಗೆ ಸೇರಿದವಳು. ಕೆಲವೆಡೆ ಇದಕ್ಕಿಂತ ಅತಿಶಯಗಳು ಎಂಬಂತೆ ಶಾಸನಗಳು

ಚಿತ್ರಿಸುತ್ತವೆ. ಒಬ್ಬ ವ್ಯಕ್ತಿಯಲ್ಲಿ ಒಳ್ಳೆಯ, ಕೆಟ್ಟ ಎರಡೂ ಗುಣಗಳೂ ಸೇರಿರುತ್ತವೆ. ಆದರೆ ನಮ್ಮ ಶಾಸನಗಳು ಗುಣೈಕ ಪಕ್ಷಪಾತಿಗಳಾಗಿದ್ದುದರಿಂದ ಶಾಂತಲೆಯ ಗುಣಗಳನ್ನಷ್ಟೆ ಪಟ್ಟಿ ಮಾಡಿವೆ.

ಶಾಂತಲೆ ಒಬ್ಬ ಆದರ್ಶ ಸ್ತ್ರೀರತ್ನ. ಚಿಕ್ಕನಾಯಕನಹಳ್ಳಿಯ 43ನೇ ಶಾಸನ ಈ ಸಂಗತಿಯನ್ನು ಸ್ಪಷ್ಟಪಡಿಸುತ್ತದೆ. ಎಳೆ ಬಿದಿರಿನಂಥ ಶರೀರ ಕಾಂತಿಯಿಂದ ಚಿನ್ನದ ಬಣ್ಣವನ್ನೂ, ಮುತ್ತಿನಂಥ ದಂತಗಳ ಕಾಂತಿಯಿಂದ ವಜ್ರವನ್ನೂ, ಹಾವಿನಂಥ ನೀಳವಾದ ಕೇಶದಿಂದ ಇಂದ್ರನೀಲ ಮಣಿಯನ್ನು ಧರಿಸಿದಂತೆ ಕಾಣುವ ಶಾಂತಲೆ 'ಸತಿ ರತ್ನದೊಂದೆಸೆಗೆ ಪಾರಳೆ?' ಎಂದು ಶಾಸನ ಕವಿ ಪ್ರಶ್ನಿಸುತ್ತಾನೆ. ಇಂಥ 'ಶಾಂತಲೆಯ ಸಂಸ್ಕೃತಿ ಸಂಪನ್ನತೆಗೆ, ಕಲಾವಂತಿಕೆಗೆ, ಲಾವಣ್ಯಕ್ಕೆ, ರೂಪಿಗೆ, ಧರ್ಮಾಭಿಮಾನಕ್ಕೆ ಮಾರುಹೋಗಿ ಜಿನಧರ್ಮೀಯಳಾದ ಏಚಲಾದೇವಿಯು ಇವಳನ್ನು ತನ್ನ ಮಗನಾದ ವಿಷ್ಣುವರ್ಧನನಿಗೆ ತಂದುಕೊಂಡು ತನ್ನ ಸೊಸೆಯಾಗಿ ಮಾಡಿಕೊಂಡಳು. ಶಾಂತಲೆ ಚಕ್ರೇಶ್ವರಿಯಾದಳು'. ತನ್ನದೇ ಆದ ವ್ಯಕ್ತಿತ್ವವನ್ನು ಇವಳು ರೂಪಿಸಿಕೊಂಡು ಯುಗಧರ್ಮದ ಪ್ರತೀಕವಾಗಿ ತುಂಬು ಬಾಳ್ವೆಯನ್ನು ಬಾಳಿ ಯಶೋಲಕ್ಷ್ಮಿಯಾಗಿ ವಿರಾಜಿಸಿದಳು.

ಶಾಂತಲೆಯು 1117ರಲ್ಲಿ ರಾಜಾಜ್ಞೆಯನ್ನು ಪಡೆದು ಕಿರೀಟಧಾರಣೆ ಮಾಡಿದ ಸಂಗತಿಯನ್ನು ಬೇಲೂರಿನ 16ನೇ ಶಾಸನವು ತಿಳಿಸುತ್ತದೆ. ತಾನೇ ಪಟ್ಟಮಹಿಷಿಯಾಗಬೇಕೆಂದು ಇವಳೆಂದೂ ಬಯಸಿದವಳಲ್ಲ. ವಿಷ್ಣುವರ್ಧನನೇ ಮನಃಪೂರ್ವಕವಾಗಿ ಈಕೆಯನ್ನು ಪಟ್ಟಮಹಿಷಿಯಾಗಿ ಸ್ವೀಕರಿಸಿದನೆಂಬುದನ್ನು ಈ ಶಾಸನ ಸ್ಪಷ್ಟಪಡಿಸುತ್ತದೆ.

'ಪರಿಧಾತ್ರಿ ಭವ ದ್ವಯಕಂ
ಚಿತಮೆಂಬುದನರಿದು ವಿನಯದಿಂ ವಿಷ್ಣುಮಹೀ
ಪತಿಯುಂ ಮೆಚ್ಚಿಸುತೆ ಮಹಾ
ಸತಿ ಶಾಂತಲದೇವಿ ಪಟ್ಟಮುಂ ಧರಿಸಿದಳ್'

ವಿಷ್ಣುವರ್ಧನ ಮತ್ತು ಶಾಂತಲೆಯರದು ಅನ್ಯೋನ್ಯವಾದ ದಾಂಪತ್ಯ. ಶಾಂತಲೆ ಎಲ್ಲ ರೀತಿಯಿಂದಲೂ ಪತಿಗೊಪ್ಪುವ ಸತಿ. ವಿಷ್ಣುವರ್ಧನ ಕಲ್ಪವೃಕ್ಷವಾದರೆ ಶಾಂತಲೆ ಅದನ್ನು ಆಶ್ರಯಿಸಿ ನಿಂತ ಕಲ್ಪಲತೆ.

ಶಾಂತಲೆಯನ್ನು ಕುರಿತ ಮುಖ್ಯ ಶಾಸನಗಳಲ್ಲಿ ಒಂದಾದ ಹಾಸನದ 16ನೇ ಶಾಸನ (1122) ಇವರಿಬ್ಬರ ಅನ್ಯೋನ್ಯತೆಯನ್ನು ವರ್ಣಿಸುತ್ತದೆ. ಶಾಂತಿಗ್ರಾಮದ ಧರ್ಮೇಶ್ವರ ದೇವರಿಗೆ ಶಾಂತಲೆಯು ಭೂಮಿಯನ್ನು ಬಿಟ್ಟ ಸಂಗತಿ ಈ ಶಾಸನದಲ್ಲಿ ನಿಮಿತ್ತ ಮಾತ್ರ.

'ಗಜೆಯ ಪಾದಪದ್ಮ ವಿಗಳಜ್ಜಳದಿಂದಮೆ ಕೊರ್ಪಿನ ನೀತಿ ವಿ
ಸ್ತರಿತ ಸೊಂಪುವೆತ್ತ ಪುರುಷವ್ರತದಿಂ ದಳವೇಳ್ದ ಭಾಗ್ಯದಿಂ
ಜಗಂಗಳನಾಂತು ರಂಜಿಸುವ ಶಾಂತಲದೇವಿಯ ರೂಪ ಕಲ್ಪನ
ಕ್ಷಿತಿ ಯುವರ್ತಿತ್ತು ವಿಷ್ಣುನೃಪನೊಲ್ದು ಸಮುನ್ನತ ಕಲ್ಪ ವೃಕ್ಷಮಂ'

ಈ ಕಲ್ಪಲತೆ ಹೀಗೆ ಬೆಳೆಯುತಂತೆ.

ಇಂಥ ಶಾಂತಲದೇವಿ ನೋಡುವ ಕಣ್ಣುಗಳಿಗೆ ಲಕ್ಷ್ಮಿ. ಯುದ್ಧದಲ್ಲಿ ವಿದ್ಗದೇವತೆ ಗಾಂಭೀರ್ಯದಲ್ಲಿ ಭೂಮಿದೇವತೆ. ವಿದ್ಯೆಯಲ್ಲಿ ವಾಗ್ದೇವತೆ. ಇಷ್ಟೇ ಅಲ್ಲದೆ ರಾಜಕೀಯದಲ್ಲಿ ಗಂಡನಿಗೆ ಸೂಕ್ತ ಸಲಹೆಗಳನ್ನು ಕೊಡುವ ರಾಜಮಂತ್ರ ಪ್ರವೀಣೆಯಾದ ಮಂತ್ರದೇವತೆಯೂ ಆಗಿದ್ದಳು.

ಗಂಡನ ಯಶಸ್ಸಿನಿಂದ ಹೆಂಡತಿಯ ಹಿರಿಮೆ ವರ್ಧಿಸುವಂತೆ ಹೆಂಡತಿಯ ಯಶಸ್ಸಿನಿಂದ ಗಂಡನ ಅಗ್ಗಳಿಕೆಯೂ ಹೆಚ್ಚುತ್ತದೆ. ಅವನಲ್ಲಿರಬಹುದಾದ ಸಣ್ಣಪುಟ್ಟ ದೋಷಗಳು ಅವನ ಪತ್ನಿಯ ಗುಣಾವಳಿಗಳಲ್ಲಿ ಮರೆಯಾಗುತ್ತವೆ. ಇಂಥ ನಾರೀಮಣಿ ವ್ಯಕ್ತಿತ್ವ ಶಾಂತಲೆಯದು. ಪತಿವ್ರತೆಯಾದ ಶಾಂತಲದೇವಿಯ ಕೀರ್ತಿಯೆಂಬ ಬೆಳುವಾದ ಬೆಳುದಿಂಗಳು ರೋಹಿಣಿಯನ್ನು ಅವಹೇಳನ ಮಾಡುತ್ತಿತ್ತು 'ಪತಿಯ ಕಳಂಕಮಂ ಆತ್ಮದ್ಯುತಿಯಿಂದ ಪರಿಹರಿಸಳೆಂದು'.

ವಿಷ್ಣುವರ್ಧನನ ಬೇಲೂರು ಶಾಸನ ಎಂದು ಪ್ರಸಿದ್ಧವಾಗಿರುವ ಬೇಲೂರಿನ 58ನೇ ಶಾಸನವು ಶಾಂತಲೆಯನ್ನು ಕುರಿತ ಶಾಸನಗಳಲ್ಲಿ ಗಮನಾರ್ಹವಾದುದು. ಹೊಯ್ಸಳರ ವಂಶಾವಳಿ. ವಿಷ್ಣುವರ್ಧನನ ಪ್ರಶಸ್ತಿ. ವಿಜಯನಾರಾಯಣ ದೇವಾಲಯದ ವರ್ಣನೆ ಇವುಗಳ ನಡುವೆ ಶಾಂತಲೆಯ ವರ್ಣನೆ ಪ್ರಾಸಂಗಿಕವಾಗಿ ಬಂದಿದ್ದರೂ ಗಮನಾರ್ಹವಾಗಿದೆ. ಇವಳ ಕಲಾನೈಪುಣ್ಯವನ್ನು ಶಾಸನ ಮುಕ್ತಕಂಠದಿಂದ ಹೊಗಳುತ್ತದೆ. ಹಳೇಬೀಡಿನಂಥ ಸುಂದರ ದೇವಾಲಯದ ನಿರ್ಮಾಣಕ್ಕಾಗಿ ಈಕೆ ಬಳ್ಳಿಗಾವೆಯಿಂದ ತಜ್ಞ ಶಿಲ್ಪಿಗಳನ್ನು ಕರೆಸಿದ್ದಳೆಂದು ತಿಳಿದು ಬಂದಿದೆ.

ಇವಳು ಬಲಿಪುರ (ಬಳ್ಳಿಗಾವೆ) ಎಂಬ ಕ್ಷೀರಸಾಗರದಲ್ಲಿ ಜನಿಸಿದ ಕಮಲೆ. ವಿಷ್ಣುವರ್ಧನನ ಪ್ರೀತಿಯ ಮನಸ್ಸೆಂಬ ಸಾಗರವನ್ನು ವರ್ಧಿಸುವ ಚಂದ್ರಲೇಖೆ. ಸರಸವಾದ. ಸಮಯೋಚಿತವಾದ. ಮಧುರವಾದ ಮಾತನ್ನು ಆಡುವವಳು. ಭೂಮಿಯ ಅನೇಕ ಕಲೆಗಳಿಗೆ ಇವಳು ತವರು. ಭರತ ಶಾಸ್ತ್ರವೆಂಬ ಮಂದಿರದಲ್ಲಿ ಮನಸ್ಸುಳ್ಳವಳು. ಅನೇಕ ರೀತಿಯ ನರ್ತನಗಳನ್ನು ಮಾಡುವ ನರ್ತಕಿಯರಲ್ಲಿ ಶಿರೋರತ್ನ. ಇವಳ ಕಡೆಗಣ್ಣ ನೋಟ ಸೌಂದರ್ಯ ಸಾಗರಕ್ಕೆ ಮೇರೆ. ಸಂಗೀತದಲ್ಲಿ ಸರಸ್ವತಿಯಾದ ಈಕೆ ಪತಿವ್ರತದಲ್ಲಿ ಅರುಂಧತಿ. 'ಸಕಳ ಸಮಯ ರಕ್ಷಾಮಣಿಯಾದ' ಇವಳ ಯಶಸ್ಸಿನಿಂದ ದಿಕ್ಕುಗಳು ಬೆಳ್ಳಗಾದವಂತೆ: "ಯಶಃ ಪ್ರಸರ ಪಾಂಡುರ ದಿಕ್ ಚೂಡಾಮಣಿ" ಎಂದು ಕವಿ ವರ್ಣಿಸುತ್ತಾನೆ.

ಶ್ರವಣಬೆಳಗೊಳದ ಸವತಿಗಂಧವಾರಣ ಬಸ್ತಿಯ ಮಗ್ಗುಲಲ್ಲಿರುವ 3ನೇ ಕಂಬದಲ್ಲಿರುವ ಶಾಸನ ಶಾಂತಲೆಯ ಜೀವನ ಚರಿತ್ರೆಯ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ. 224 ಸಾಲುಗಳಲ್ಲಿರುವ ಈ ಶಾಸನವನ್ನು ಕಂಬದ ನಾಲ್ಕೂ ಮಗ್ಗುಲಲ್ಲಿ ಕೆತ್ತಲಾಗಿದೆ. ಶಾಂತಲೆ ಶಿವಗಂಗೆ ತೀರ್ಥದಲ್ಲಿ ಮುಡಿಪಿದ್ದನ್ನು ತಿಳಿಸುವುದು ಈ ಶಾಸನದ ಮುಖ್ಯ ಉದ್ದೇಶ. ಈ ಶಾಸನದ ಕವಿ ಬೋಕಿಮಯ್ಯ. ಇವನು ಚಾರುಕೀರ್ತಿದೇವರ ಶಿಷ್ಯನೆಂದು ಹೇಳಿಕೊಂಡಿದ್ದಾನೆ. ಇವನು ಬರೆದ ಈ ಶಾಸನವನ್ನು ರೂವಾರಿ ಮುಖತಿಲಕ ಗಂಗಾಚಾರಿಯ ತಮ್ಮ ಕಾಂವಾಚಾರಿ ಎನ್ನುವವನು ಕಂಡರಿಸಿದಂತೆ ತಿಳಿದುಬರುತ್ತದೆ. ಜಿನನ ಪ್ರಾರ್ಥನೆಯಿಂದ ಈ ಶಾಸನ ಆರಂಭವಾಗಿ ಹೊಯ್ಸಳ ವಂಶದ ಚರಿತ್ರೆಯನ್ನು ಪ್ರಾಸಂಗಿಕವಾಗಿ ತಿಳಿಸುತ್ತದೆ. ವಿಷ್ಣುವರ್ಧನನ ವರ್ಣನೆ. ಅವನ ಗುಣಗಳ ಅತಿಶಯತೆ ದೀರ್ಘವಾಗಿ ನಿರೂಪಿತವಾಗಿದೆ. ಶ್ರವಣಬೆಳಗೊಳದ 132ನೇ ಶಾಸನದಲ್ಲಿ ಬರುವ ಶಾಂತಲೆಯ ವರ್ಣನೆಗೂ ಇಲ್ಲಿಯ ಶಾಂತಲೆಯ ವರ್ಣನೆಗೂ ವ್ಯತ್ಯಾಸವೇ ಇಲ್ಲ. ಬಹುಶಃ ಬೋಕಿಮಯ್ಯ 143ನೇ ಶಾಸನದಲ್ಲಿ ಇದನ್ನೇ ಅಳವಡಿಸಿಕೊಂಡಿರಬೇಕು. ಕಾರಣ 132ನೇ ಶಾಸನದ ಕಾಲ 1123. ಈ ಶಾಸನದ ಕಾಲ 1131 ಎಂದರ ಪಡಿಯಚ್ಚೇ ಇನ್ನೊಂದಾಗಿದೆ.

ಕವಿಗಳು ಉತ್ಪ್ರೇಕ್ಷಾಪ್ರಿಯರಾದಾಗ. 'ಎಂತು ಬಣ್ಣಿಸಲಿ'. 'ಹೇಗೆ ಬಣ್ಣಿಪೆಂ,' 'ಬಣ್ಣಿಸಲೆನ್ನಳವಲ್ಲ' ಇತ್ಯಾದಿ ಉದ್ಗಾರಗಳನ್ನು ತೆಗೆದು ಸಾಕಷ್ಟು ಬಣ್ಣಿಸಿರುವುದು ಕನ್ನಡ ಸಾಹಿತ್ಯಕ್ಕೆ ಹೊಸದೇನಲ್ಲ. ಆಂಡಯ್ಯನಂಥ ಕವಿಯೇ 'ಪಲವುಂ ನಾಲಗೆಯುಳ್ಳವಂ ಬಗೆದೊಡಂ ಬಣ್ಣಿಸಲ್ಕಾರನ್ ಮತ್ತಿನ ಮಾನಿಸರ್ ಪೊಗಳಲೇನಂ ಬಲ್ಲರ್' ಎಂದು ಹೇಳಿಯೂ ಕೂಡ ಪುಟಗಟ್ಟಲೆ ವರ್ಣಿಸುತ್ತಾನೆ. ಶಾಂತಲೆಯನ್ನು ಕುರಿತ ಈ ಶಾಸನದಲ್ಲಿಯೂ ನಾವು ಕಾಣುವುದು ಈ ರೀತಿಯ ಪ್ರವೃತ್ತಿಯನ್ನು. ಶಾಂತಲೆಯ ಜೀವನಕ್ಕೆ ಸಂಬಂಧಿಸಿದ ಕೆಲವು ಚಾರಿತ್ರಿಕ ಅಂಶಗಳು ಇಲ್ಲಿ ದೊರೆಯುತ್ತವೆ. ಈಕೆಯ ಗುರುಗಳು ಪ್ರಭಾಚಂದ್ರ ಸಿದ್ಧಾಂತ ದೇವರು. ಹೆತ್ತತಾಯಿ ಗುಣನಿಧಿಯಾದ ಮಾಚಿಕಬ್ಬೆ. ತಂದೆ ಪಿರಿಯಹೆರ್ಗಡೆ ಮಾರಸಿಂಗಯ್ಯ. ಹೆರ್ಗಡೆ ಸಿಂಗಿಮಯ್ಯ ಸೋದರ ಮಾವ. ಈ ಶಾಸನದಲ್ಲಿ ಶಾಂತಲೆಯ ತಾಯಿ ಮಾಚಿಕಬ್ಬೆಯ ವರ್ಣನೆಯನ್ನು ಕೂಡ ಅತಿಶಯವಾಗಿ ಮಾಡಲಾಗಿದೆ. ಅಂಥ ತಾಯಿಯ ಮಗಳಾದುದರಿಂದಲೇ ತಾಯಿಯ ಗುಣಗಳು ಮಗಳಲ್ಲಿಯೂ ಎರಕಹೊಯ್ದಿದೆ ಎಂಬುದು ಕವಿಯ ಉದ್ದೇಶವಿರಬಹುದು.

ಶಾಂತಲೆ ಅತ್ಯಪೂರ್ವ ವ್ಯಕ್ತಿ. ಅಭಿನವ ರುಕ್ಮಿಣಿದೇವಿ. ಪತಿಹಿತ ಸತ್ಯಭಾಮೆ. ವಿಷ್ಣುವಿನ ಮನೋನಯನ ಪ್ರಿಯೆಯಾದವಳು. ಸೌಂದರ್ಯದಲ್ಲಿಯೂ. ಸಕಳ ಕಲಾಗಮ ಪ್ರೌಢಿಮೆಯಲ್ಲಿಯೂ ಅಸದೃಶಳಾದವಳು. ಅನೇಕ ವೇಳೆ ಇವಳು ಪತಿಗೆ ರಾಜಕೀಯದಲ್ಲಿ ಸಲಹೆಗಳನ್ನು ಕೊಡುತ್ತಿದ್ದಿರಬಹುದು. ಆದ್ದರಿಂದಲೇ ಇವಳನ್ನು ವಿವೇಕೈಕ ಬೃಹಸ್ಪತಿ ಎನ್ನಲಾಗಿದೆ. ನಾಲ್ಕೂ ಧರ್ಮಗಳಿಗೆ ಈಕೆ ಸಮಾನ ಮನ್ನಣೆ

ನೀಡುತ್ತಿದ್ದುದರಿಂದ 'ಚತುಸ್ಸಮಯ ಸಮುದ್ಧರಣೆ' ಎಂಬ ಬಿರುದು ಬಂದಿರಬೇಕು. ಸಮಯ ಸ್ಫೂರ್ತಿಯುಳ್ಳ ವಾಚಸ್ಪತಿಯೂ, ಮುನಿಗಳ ಹಾಗೂ ವಿನೇಯರ ವಿನೀತೆಯೂ. ವ್ರತಗುಣ – ಶೀಲ ಚಾರಿತ್ರ ತತ್ಪರಳೂ, ಪಾತಿವ್ರತ್ಯದಲ್ಲಿ ಪ್ರಸಿದ್ಧಳಾದ ಸೀತೆಯೂ. ಕೈಯೊಡ್ಡಿದವರ ಚಿಂತಾಮಣಿಯೂ. ಸಮ್ಯಕ್ತ್ವ ಚೂಡಾಮಣಿಯೂ. ಮದೋನ್ಮತ್ತ ಸವತಿಯರ ಪಾಲಿಗೆ ಮದಗಜವೂ. ಪುಣ್ಯ ಸಂಗ್ರಹಣ ಕಾರಣೆಯೂ. ಕಾಮದೇವನ ವಿಜಯ ಪತಾಕೆಯೂ. ನಿಜ ಕಲಾಭ್ಯುದಯ ದೀಪಿಕೆಯೂ. ಗೀತವಾದ್ಯ ಸೂತ್ರ ಧಾರಣೆಯೂ ಆಗಿ ಶಾಂತಲಾದೇವಿಯು ವಿರಾಜಿಸಿದಳು.

ಯುದ್ಧದಲ್ಲಿ ವಿಷ್ಣುನೃಪನಿಗೆ ವಿಜಯಶ್ರೀ ನಿರಂತರವಾಗಿ ಒಪ್ಪುವಂತೆ. ನಿಜಪತಿಯ ಪರಾಕ್ರಮದ ಸೊಂಪು ದಿಗ್ವಳಯಗಳಲ್ಲಿ ಹರಡುವಂತೆ ಕೀರ್ತಿಯನ್ನೂ. ಶ್ರೀಯನ್ನೂ. ಸಾಮರ್ಥ್ಯವನ್ನೂ ಅನುವು ಮಾಡಿಕೊಡುತ್ತಿದ್ದಳು. ವಿಷ್ಣುವರ್ಧನ ಕಲಿಯುಗದ ವಿಷ್ಣುವಾದರೆ ಇವಳು ಕಲಿಯುಗದ ಲಕ್ಷ್ಮಿಯಂತೆ. ಈ ಕಾಲಿಕಾಲವಿಷ್ಣುವಿನ ವಕ್ಷದಲ್ಲಿ ಕಲಿಕಾಲದಲಕ್ಷ್ಮಿಯೇ ನೆಲಸಿದಂತೆ ಶಾಂತಲೆ ನೆಲಸಿದ್ದಳು. ಅವನ ಎಲ್ಲ ಮಡದಿಯರಿಗಿಂತ ಈಕೆಯದೇ ಅತಿಶಯತೆ. ಇವಳ ಸದ್ಗುಣಗಳಿಗೆ. ಸೌಭಾಗ್ಯಕ್ಕೆ. ವಿದ್ಯೆಗೆ ಲಕ್ಷ್ಮಿ ಪಾರ್ವತಿ ಸರಸ್ವತಿಯರೇ ಸಾಟಿಯಿಲ್ಲದಿರುವಾಗ ಉಳಿದ ಸತಿಯರ ಪಾಡೇನು? ಎಂದು ಕವಿ ಅವಳ ಬಹುಮುಖವಾದ ಹಾಗೂ ಪ್ರಭಾವಪೂರ್ಣ ವ್ಯಕ್ತಿತ್ವವನ್ನು ಕೊಂಡಾಡುತ್ತಾನೆ.

'ಈಯಲ್, ಇರಿಯಲ್, ಶರಣ್ಬುಗೆ ಕಾಯಲ್ ಕ್ಷತ್ರಿಯರೆ ಬಲ್ಲರ್' ಎಂಬುದು ರನ್ನನ ತಿಳುವಳಿಕೆಯಾಗಿತ್ತು. ಜನ್ಮತಃ ಕ್ಷತ್ರಿಯಳಲ್ಲದಿದ್ದರೂ ಶಾಂತಲೆಯಲ್ಲಿ ಸ್ವಭಾವದಿಂದಲೇ ಈ ಮೂರೂ ಗುಣಗಳು ಮುಪ್ಪುರಿಗೊಂಡಿದ್ದವೆಂಬುದನ್ನು ಚಿಕ್ಕನಾಯಕನಹಳ್ಳಿಯ 35ನೇ ಶಾಸನವು ಸ್ಪಷ್ಟಪಡಿಸುತ್ತದೆ.

'ನುಡಿದೊಡೆ ಮಂದರಾಚಲದೊಳ್ಪು ಭವಂ ಬರೆವಕ್ಕರಕ್ಕ ಮಿ
ರ್ಮಡಿ ನಿನಗೀವೆನೆಂದೊಡೆ ಭವಂ ಕುಬೇರಿತ್ತ ಬರಕ್ಕದಂತು ನಾ
ಲ್ಮಡಿ ಶರಣಾರ್ಥಿಗಂಜದಿರಿ ಮೆಂದೊಡೆ ವಜ್ರದ ಕೋಟೆಗಂ ಪದಿ
ರ್ಮಡಿ ಮನೆ ಕಾಂತೆ ಶಾಂತಲೆ ಜಸಂ ಬಡೆವಿದ್ದಳಿಳಾ ತಳಾಗ್ರದೊಳ್'

ಹೀಗೆ ನಡೆನುಡಿಗಳ ಸಾಮರಸ್ಯ ಶಾಂತಲೆಯ ಸ್ವಭಾವ ಸಹಜವಾದ ಗುಣ. ಇದೆಲ್ಲದಕ್ಕಿಂತ ಅತಿಶಯವಾದದ್ದು ಅವಳ ಜೈನಧರ್ಮ ನಿಷ್ಠೆ. ಆದುದರಿಂದ ಇವಳನ್ನು 'ಜಿನಸಮಯ ಸಮುದಿತಪ್ರಕಾರೆ, ಜಿನಧರ್ಮಕಥಾ ಕಥನ ಪ್ರಮೋದೆ, ಜಿನಧರ್ಮ ನಿರ್ಮಳೆ. ಜಿನಗಂಧೋದಕ ಪವಿತ್ರೀಕೃತೋತ್ತಮಾಂಗೆ' ಎಂದು ಶಾಸನಗಳು ಹೊಗಳಿವೆ. ಈ ಶಾಸನವು ಶಾಂತಲೆಯ ಏಕದೇವತಾ ನಿಷ್ಠೆಯನ್ನೂ. ಸ್ವಧರ್ಮ ಪರಿಪಾಲನಾ ದೀಕ್ಷೆಯನ್ನೂ ಸ್ಪಷ್ಟವಾಗಿ ತಿಳಿಸುತ್ತದೆ.

ಶಾಂತಲೆಯು ರಾಜಧರ್ಮಾನುಸಾರ ಅಂದಿನ ಎಲ್ಲ ಧರ್ಮಗಳಿಗೂ ಗೌರವ ತೋರಿರುವುದು ನಿಜವಾದರೂ ಅವಳ ಅಂತರಂಗದ ಸ್ವಧರ್ಮವು ಮಾತ್ರ ಜೈನಧರ್ಮವೇ ಆಗಿತ್ತೆಂಬುವನ್ನು ಕ್ರಿ. ಶ. 1131ರ ಶ್ರವಣಬೆಳಗೊಳದ 143ನೆಯ ಶಾಸನ ಸಾರುತ್ತಿದೆ. 'ಜಿನನಾಥಂ ತನಗೆಂದುಮಿಷ್ಟ ದೈವಂ' ಎಂಬ ಮಾತಿನಿಂದ ಶಾಂತಲೆ ಜೈನಧರ್ಮದಲ್ಲೇ ಇದ್ದು ಬೆಳೆದು ಬಾಳಿ ಸತ್ತಳೆಂಬ ಸತ್ಯಸಂಗತಿಯನ್ನು ನಮ್ಮ ಮುಂದಿಡುತ್ತದೆ.

'ಶಾಂತಲದೇವಿ ಜೈನಧರ್ಮೀಯಳಾಗಿದ್ದ ಕಾಲದಲ್ಲಿ ಪ್ರಭಾಚಂದ್ರ ಗುರುವಿನ ಶಿಷ್ಯೆಯಾಗಿದ್ದಳು. ಆದರೆ ಕೊನೆಗೆ ಪತಿಯೊಡನೆ ಆಕೆಯೂ ಜೈನಧರ್ಮವನ್ನು ಬಿಟ್ಟು ವೈಷ್ಣವ ಧರ್ಮವನ್ನು ಸ್ವೀಕರಿಸಿದಳು' ಎಂಬ ಕರ್ನಾಟಕ ಇತಿಹಾಸ ದರ್ಶನಕಾರರ ಮಾತನ್ನು ಒಪ್ಪುವುದು ಸಾಧ್ಯವಿಲ್ಲ ಎನಿಸುತ್ತದೆ. ಏಕೆಂದರೆ ವಿಷ್ಣುವರ್ಧನನು, ಇವರ ಹೇಳಿಕೆಯಂತೆ. ಕ್ರಿ. ಶ. 1117ರಲ್ಲಿ ವೈಷ್ಣವನಾದನು. ಆದರೆ ಕ್ರಿ. ಶ. 1123ರಲ್ಲಿ ಶಾಂತಲೆ ಶ್ರವಣಬೆಳಗೊಳದಲ್ಲಿ ಸವತಿ ಗಂಧವಾರಣ ಬಸದಿಯನ್ನು ಕಟ್ಟಿಸಿ ಇದರಲ್ಲಿ ಶಾಂತಿನಾಥ ತೀರ್ಥಂಕರನ ಬಿಂಬವನ್ನು ಪ್ರತಿಷ್ಠೆ ಮಾಡಿಸಿರುವಳು. 'ಪ್ರಭಾಚಂದ್ರ ಮುನೀಂದ್ರರ ಪಾದಾರವಿಂದದಲ್ಲಿ ದುಂಬಿಯಾಗಿ ಝೇಂಕರಿಸುತ್ತಿರುವ ಶಾಂತಲೆ ಶಾಂತಿ ಜಿನೇಂದ್ರನನ್ನು ಪ್ರತಿಷ್ಠೆ ಮಾಡಿಸಿದಳು' ಎಂಬುದಾಗಿ ವಿಗ್ರಹದ ಪೀಠದಲ್ಲಿ ಈಕೆಯೇ ಶಾಸನ ಬರೆಸಿರುವಳು. ಈ ಸಂದರ್ಭದಲ್ಲಿ ಮೊಟ್ಟೆನವಿಲೆ ಗ್ರಾಮವನ್ನು ತನ್ನ ಗುರುಗಳಾದ ಮೂಲ ಸಂಘದ ದೇಶೀಯ ಗಣದ ಪ್ರಭಾಚಂದ್ರ ಸಿದ್ಧಾಂತ ದೇವರ್ಗೆ ಪಾದ ಪ್ರಕ್ಷಾಳನ ಮಾಡಿ ಸರ್ವಬಾಧಾಪರಿಹಾರವಾಗಿ ದತ್ತಿ ಬಿಟ್ಟಿದ್ದಾಳೆ. ಗಂಡನ ಅಪ್ಪಣೆ ಬೇಡಿ ಗಂಗಸಮುದ್ರದ ನಡುಬಯಲಿನಲ್ಲಿ 50 ಕೊಳಗ ಗದ್ದೆಯನ್ನು ತೋಟವನ್ನು ದತ್ತಿಯಾಗಿ ಕೊಡಿಸಿದ ವಿಷಯವನ್ನು ಶ್ರವಣಬೆಳಗೊಳದ ಶಾಸನವು ಸಾರುತ್ತಿದೆ.

ಶಕವರ್ಷ 1053ನೆಯ ವಿರೋಧಿಕೃತು ಸಂವತ್ಸರ ಚೈತ್ರ ಶುದ್ಧ ಪಂಚಮಿ ಸೋಮವಾರದಂದು ಶಿವಗಂಗೆಯಲ್ಲಿ ಶಾಂತಲೆಯು ಸ್ವರ್ಗಸ್ಥಳಾದಳು. ಆಗ ಶ್ರವಣ ಬೆಳಗೊಳದಲ್ಲಿ ಹಾಕಿಸಿದ 143ನೆಯ ಶಾಸನದಲ್ಲಿ 'ಜಿನನಾಥಂ ತನಗೆಂದುಮಿಷ್ಟದೈವಂ' ಎಂಬ ಅವಳ ಜೀವನ ಮಂತ್ರ ಸ್ಪಷ್ಟವಾಗಿದೆ. ಅವಳು ವೈಷ್ಣವಳಾಗಿ ಪರಿವರ್ತಿತ ಳಾಗಿದ್ದರೆ ಸಲ್ಲೇಖನವನ್ನೇಕೆ ಸ್ವೀಕರಿಸುತ್ತಿದ್ದಳು? ಸಲ್ಲೇಖನ ವ್ರತ ಜೈನರಿಗೆ ಮಾತ್ರ ವಿಶಿಷ್ಟವಾದುದು. 'ಶಾಂತಲೆಯ ಅಂತರಂಗಧರ್ಮ – ಜೈನಧರ್ಮವೇ ಆಗಿದ್ದಿತು. ಅವಳು ಶ್ರವಣಬೆಳಗೊಳದಲ್ಲಿ ಬಸದಿಯನ್ನು ಕಟ್ಟಿಸಿದ್ದಲ್ಲದೆ ಶಿವಗಂಗೆಯಲ್ಲಿ 'ಮುಡಿಪಿ' ಅಂದರೆ ಸಲ್ಲೇಖನವನ್ನು ಧರಿಸಿ ಸತ್ತದ್ದೂ ಕೂಡ ಅವಳು ಜೈನಳಾಗಿದ್ದಳು ಎಂಬುದಕ್ಕೆ ಪ್ರಬಲ ಸಾಕ್ಷಿಗಳು. ಇದು ಶಾಸನೋಕ್ತವಾಗಿದೆ'. 'ಪ್ರಭಾಚಂದ್ರರ ಸನ್ನಿಧಿಯಲ್ಲಿ ಸಲ್ಲೇಖನ ವಿಧಿಯಿಂದ ಪ್ರಾಣವನ್ನು ತ್ಯಜಿಸಿದಳು' ಎಂಬ ಡಾ॥ ಶ್ರೀಕಂಠಶಾಸ್ತ್ರಿಗಳ ಹೇಳಿಕೆಯೂ ಇದಕ್ಕೆ ಪೂರಕವಾಗಿದೆ.

ವಿಷ್ಣುವರ್ಧನನು ಎಲ್ಲಾ ಧರ್ಮಗಳಿಗೆ ಸಮಾನ ಗೌರವವನ್ನು ವ್ಯಕ್ತಪಡಿಸಿದ್ದರೂ ವಿಷ್ಣುವಿನ ಕಡೆಗೆ ಅವನ ಒಲವು ಹೆಚ್ಚು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಅವನ ಪತ್ನಿ ಶಾಂತಲೆ ಶೈವ, ವೈಷ್ಣವ, ಜೈನ ಸಂಪ್ರದಾಯಗಳ ತ್ರಿವೇಣೀ ಸಂಗಮವಾಗಿದ್ದಳು. ತಂದೆ ಹರಭಕ್ತ, ತಾಯಿ ಜಿನಭಕ್ತೆ, ಗಂಡ ವೈಷ್ಣವ. ತಾನು ಜಿನಭಕ್ತೆಯಾದರೂ ಗಿರಿಜೆಯ ಆರಾಧಕಳೂ ಆಗಿದ್ದಳು.

ಶಾಂತಲೆಯ ಸಾವಿಗೆ ಕಾರಣವೇನೆಂಬುದು ಶಾಸನಗಳಿಂದ ತಿಳಿಯುವುದಿಲ್ಲ. ಶಾಂತಲೆಯು, ತಾನು ಬದುಕಿದ್ದರೆ ತನ್ನ ಸವತಿ ಲಕ್ಷ್ಮಿಯ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಪಟ್ಟವಾಗದೆ ಹೋಗುತ್ತದೆ; ಆದುದರಿಂದ ತಾನು ಸತ್ತರೆ ಲಕ್ಷ್ಮಿ ಪಟ್ಟದರಸಿಯಾಗುವಳು; ಅನಂತರ ಅವಳ ಮಕ್ಕಳಿಗೆ ರಾಜ್ಯ ಲಭಿಸುತ್ತದೆ ಎಂಬ ದೂರದೃಷ್ಟಿಯಿಂದ ಲಕ್ಷ್ಮಿಯ ಹಿತಕ್ಕಾಗಿ ಶಿವಗಂಗೆ ಬೆಟ್ಟದ ಮೇಲಿಂದ ಬಿದ್ದು ಸತ್ತಳೆಂಬುದಕ್ಕೆ ಶಾಸನಾಧಾರಗಳಿಲ್ಲ. ಜೈನ ಧರ್ಮಾನುರಾಗಿಯಾದ ಶಾಂತಲೆ ಶೈವರ ತೀರ್ಥ ಕ್ಷೇತ್ರವನ್ನು ತನ್ನ ಸಲ್ಲೇಖನಕ್ಕೆ ಆಯ್ದುಕೊಂಡಳೇಕೆ? ಎಂಬುದೂ ಬಗೆಹರಿಯದ ಪ್ರಶ್ನೆ. ಬಹುಶಃ ಇವಳು 'ನಗರಾಜನಂದನ ಪಾದಾರವಿಂದೆ' ಯಾದುದರಿಂದ ಗೌರಿಯ ಮೇಲಿನ ಭಕ್ತಿಯಿಂದ ಗೌರೀವಲ್ಲಭನ ಕ್ಷೇತ್ರವಾದ ಶಿವಗಂಗೆಯನ್ನು ಆರಿಸಿಕೊಂಡಳೋ ಏನೋ. ಒಟ್ಟಿನಲ್ಲಿ ಈಕೆ ಏಕೆ ಸತ್ತಳು? ಮತ್ತು ಇಲ್ಲಿಯೇ ಏಕೆ ಸತ್ತಳು? ಎಂಬುದು ಸಂಶೋಧಕರಿಗೆ ಇನ್ನೂ ಒಗಟಾಗಿಯೇ ಉಳಿದಿದೆ.

ನಮ್ಮ ಸಮಕಾಲೀನ ಸಮಾಜದಲ್ಲಿ ಬದುಕಿ ಬಾಳಿದ, ಬಾಳುತ್ತಿರುವ ಒಬ್ಬ ಧೀಮಂತ ಕವಿಯೋ, ಸಮಾಜ ಸೇವಕನೋ, ರಾಜಕಾರಣಿಯೋ ಈ ನಾಡಿಗೆ ಒಳಿತನ್ನೆಸಗಿದ್ದಾರೆ ಎನಿಸಿದರೆ ಅವರನ್ನು ಸನ್ಮಾನಿಸುವುದುಂಟು. ಪತ್ರಿಕೆಗಳಲ್ಲಿ ಅವರ ಬಗ್ಗೆ ಲೇಖನಗಳನ್ನು ಬರೆಯುತ್ತೇವೆ. ಸಮಾರಂಭಗಳನ್ನು ಆಚರಿಸಿ ಅಭಿನಂದನ ಗ್ರಂಥಗಳನ್ನೋ, ಪ್ರಶಸ್ತಿ ಗ್ರಂಥಗಳನ್ನೋ ಹೊರಡಿಸುತ್ತೇವೆ. ಸತ್ತವರ ನೆನಪಿನ ಒಂದು ಸ್ಮರಣ ಸಂಚಿಕೆಯನ್ನೂ ತರುತ್ತೇವೆ. ಪತ್ರಿಕೆಗಳು ಅವರ ಗುಣಗಾನ ಮಾಡುತ್ತವೆ. 'ವಾಸುಗಿಯುಂ ಅರಿಯಲಾರದೆ ಬೇಸರಿಸುವಷ್ಟು' ದೋಷ ಅವರಲ್ಲಿ ಇದ್ದರೂ ಅದನ್ನು ಮರೆಮಾಚಿ ಗುಣವನ್ನಷ್ಟೇ ಎತ್ತಿ ಹಿಡಿಯುತ್ತೇವೆ. ನಮ್ಮ ಸಮಕಾಲೀನ ವ್ಯಕ್ತಿಗಳ ಬಗೆಗೇ ಹೀಗಿರುವಾಗ ಚಾರಿತ್ರಿಕ ವ್ಯಕ್ತಿಗಳ ಬಗ್ಗೆ ಶಾಸನಗಳು ಉತ್ಪ್ರೇಕ್ಷೆಯ ಮಾತನ್ನಾಡಿದರೆ ಅದನ್ನು ಆಕ್ಷೇಪಿಸಬೇಕಾಗಿಲ್ಲ. ಶಾಂತಲೆಯಂಥ ಒಬ್ಬ ವ್ಯಕ್ತಿ ನಾಡಿನ ಜನತೆಯ ಮೇಲೆ ಅಂಥ ಪರಿಣಾಮ ಮಾಡಿದ್ದಳು ಎಂದಷ್ಟೇ ಹೇಳಬೇಕು. ಆಕೆಯ ಬಗೆಗೆ ಆಗಿನ ಜನತೆಗಿದ್ದ ಅಭಿಮಾನದ ಪರಾಕಾಷ್ಠೆಯನ್ನು ಕಾಣಬಹುದು. ಈ ದೃಷ್ಟಿಯಿಂದ ಈ ಸಂಗತಿಗಳು ಚಾರಿತ್ರಿಕ ಅಸತ್ಯವಲ್ಲವೇ? ಉತ್ಪ್ರೇಕ್ಷೆಯ ಮೊಟ್ಟೆಗಳಲ್ಲವೇ ? ಎನ್ನುವ ತೊಡಕಿಗೆ ಅವಕಾಶವೀಯಲಾರದು. ಇಪ್ಪತ್ತನೆಯ ಶತಮಾನದಲ್ಲಿ ಕೂಡ ವ್ಯಕ್ತಿ ಪೂಜೆ ಕಂಡುಬರುತ್ತದೆ. ವೈಜ್ಞಾನಿಕ ಸತ್ಯಶೋಧನೆಯ ಯುಗದಲ್ಲೇ ನಮ್ಮ

ನೇತಾರರೊಬ್ಬರ ಬಗ್ಗೆ ಇಷ್ಟೊಂದು ಅಭಿಮಾನವಿರುವಾಗ 12, 13ನೇ ಶತಮಾನದ ಜನತೆಗೆ ಶಾಂತಲೆಯಂಥವಳ ಬಗ್ಗೆ ಅದೆಷ್ಟು ಅಭಿಮಾನವಿರಬೇಡ. ಈ ಅಭಿಮಾನದ ಅಭಿವ್ಯಕ್ತಿಯೇ ಈ ಶಾಸನಗಳು. ಇವು ಬರೀ ಪ್ರಶಸ್ತಿಗಳಷ್ಟೇ ಆಗಿರದೆ ಚಾರಿತ್ರಿಕ ಪ್ರಶಸ್ತಿಗಳೂ ಆಗಿವೆ ಎಂಬುದನ್ನು ಮರೆಯಬಾರದು.

ಒಟ್ಟಿನಲ್ಲಿ ಶ್ರೀ. ಸಿ. ಬಿ. ಸೀತಾರಾಂ ಅವರು ಹೇಳುವಂತೆ

'Shantala Devi is a flower of Karnataka culture· a noble example for every true daughter of Karnataka to copy and to be proud'.

ಶಾಸನಾಧಾರಗಳು :

ಬೇಲೂರು	16, 58
ಚಿಕ್ಕನಾಯಕನಹಳ್ಳಿ	43, 35
ಹಾಸನ	116, 89
ಶ್ರವಣಬೆಳಗೊಳ	132,143

ಆಧಾರ ಗ್ರಂಥಗಳು :

ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ —ಡಾ॥ ಎಂ. ಚಿದಾನಂದ ಮೂರ್ತಿ
ಕರ್ನಾಟಕ ಇತಿಹಾಸ ದರ್ಶನ —ಡಾ॥ ಎಂ. ವಿ. ಕೃಷ್ಣರಾವ್
ಶಾಂತಲಾದೇವಿ (ಲೇಖನ) —ಜಿ. ಬ್ರಹ್ಮಪ್ಪ
ನಾಟ್ಯರಾಣಿ ಶಾಂತಲಾ (ಮುನ್ನುಡಿ) —ಮ. ನ. ಮೂರ್ತಿ
Queen Shantala Devi —C. B. Seetaram.
Mythic Society Journal, Volume 38, Page 143.

ಬಿಟ್ಟೆನೆಂದರೂ ಬಿಡದೀ ಮಾಯೆ

ಕೆ. ಎಂ. ಕೋದಂಡರಾಮ್

ನವೆಂಬರಿನ ಚಂದ್ರನ ರಾತ್ರಿ
ಬೀಸಿದ ತಂಗಾಳಿಗೆ
ಭೂತ ತಿದಿಯೊತ್ತಿ
ನಿನ್ನ ನೆನಪಿನ ಕಿಡಿ ಹಾರುತ್ತಿದೆ.

ಕರುಳಿನಲ್ಲಿ ಕೂದಲು ಸಿಕ್ಕಿ
ಎಷ್ಟು ದಿನವಾಯಿತು?

ಲೆಕ್ಕ ನಕ್ಷತ್ರಗಳಾಗುತ್ತವೆ.

ರಾತ್ರಿಗಳಲ್ಲಿ ಕರುಳಿನ ಕೊಯ್ತು
ಸರ ಸರ ಸದ್ದುಮಾಡಿ

ನಿನ್ನ ಸಂಬಂಧದತ್ತ ಮನ ಹರಿಯುತ್ತದೆ.

ಹಲವು ಪ್ರೋಸುಗಳಲ್ಲಿ ನಕ್ಕ ಮುಖ
ಕಣ್ಣಿಗೆ ಕಟ್ಟಿ
ನಿನ್ನ ನೆನಪಿನ ಕತ್ತಲೆ ಮುತ್ತಿ
ಮುಕ್ತಿಗೆ ಜಡಪಡಿಸಿ
ಸಿಕ್ಕು,
ಸಿಕ್ಕಾಗಿ

ಕನಸನ್ನು ಹೆರುತ್ತವೆ.

ಬೆಳೆವ ಬೆಳುದಿಂಗಳಿಗೆ
ಅಲೆಗಳು ಉಕ್ಕುತ್ತವೆ.

ಮಣ್ಣಿಂದ ಟಿಸ್ಸೊಂದೆಗರಿ
ಆಕಾಶವೇರಿ

ತೇಪೆ ಹೋದದೆದೆಯ
ಚಂದ್ರ

ಬೇಡವೆಂದರೂ ಬೇರು ಕಚ್ಚಿ, ಬೆಳೆವ
ಬೇಡಿದರೂ ಸಿಗದ
ದ್ವಂದ್ವ.

"ನಾನು ಬೇಕೇ ನಿನಗೆ ನಾನು ಬೇಕೇ?"
ಪಿಸುಗುಡುವ ಗಾಳಿಗೆ ಎದೆ ತೆರೆದರೆ
ಮೈ ಜುಮ್ಮೆನ್ನುವ ತಂಪಿನ ಅಲೆಯ ಬರೆ.

"ನಿನ್ನ ಚರಣ ಕಮಲದೊಳಾನು ತುಂಬಿ"
ಗಂಡಸಿನ ಗತಿ ಹೀಗಾದರೆ
ಸುತ್ತಲಿನ ಜನ ನಗೆಯಾಡರೆ?

ಗಾಳಿ ಸುಳಿಸುತ್ತಿ
ತಳ ಬಗೆದು ತರಗೆಲೆ ಎತ್ತಿ
ಅಲೆದು
ಬೆಂದೆದೆಯ
ಬಾಂಡಲಿಗಿಟ್ಟು
ಬೆಂಕಿ ಆಗುತ್ತಿ.

ನಾನು
ಕರಗಿ
ಬದುಕೆಲ್ಲ ಕೊರಗಿ
ನಿನ್ನ ಮೈ ಕಂಪಿಗಾಗಿ
ಗಾಳಿಗೆ ತೆರೆಯುತ್ತೇನೆ.

ಹೀಗಾದರೆ ಹೇಗೆ
ಹಿಡಿಯಲಿ ಜೀವ
ಉಸಿರಾಡಲಿ ಸರಾಗ?

ಗೊಮ್ಮಟೇಶ–
ನನ್ನ
ಗೊಂಬೆ ಆಗಿಸಿ ಆಡುವ

ನಿನ್ನ
ಕೇಳಿ
ಬಿಡುತ್ತೇನೆ.

ಹೇಳಿ ಬಿಡು:

ಉಳಿ ಹಿಡಿದು ಕೆತ್ತಿ
ರೂಪಿಸುವುದು
ಶಿಲ್ಪವನ್ನೆ?
ಕಲ್ಪನೆಯನ್ನೆ?

ತೊಗಲು

ಬಿ. ಗೋ. ರಮೇಶ್

ಸುಮಾರು ಐವತ್ತು ಕೋಟಿ ವರುಷಗಳ ಹಿಂದೆಯೇ ಭೂಮಿಯ ಮೇಲೆ ಜೀವೋತ್ಪತ್ತಿಯಾಯಿತು. ಸಸ್ಯಗಳಿಂದ ಭೂಚರಗಳವರೆಗೂ ಜೀವಿಗಳು ಕಾಣಿಸಿಕೊಂಡವು. ಹೀಗೆ ಕಾಣಿಸಿಕೊಂಡವುಗಳಲ್ಲಿ ಸಸ್ತನಿವರ್ಗವು ಕೊನೆಯದು. ಮಾನವನೂ ಈ ವರ್ಗಕ್ಕೆ ಸೇರಿದವನು. ಇವನು ಪ್ರಾಣಿಗಳಂತೆಯೇ ವರ್ತಿಸುತ್ತಿದ್ದು ಕ್ರಮೇಣ ತನ್ನ ಬುದ್ಧಿಬಲದಿಂದ ತನ್ನ ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳುತ್ತಾ ಬಂದನು. ಆ ಕಾಲಕ್ಕೆ ಅವನಿಗೆ ಕಲ್ಲೇ ಆಯುಧ. ಗೆಡ್ಡೆಗೆಣಸುಗಳೇ ಆಹಾರ. ಪ್ರಾಣಿಗಳ ಚರ್ಮವೇ ಹೊದಿಕೆ. ಪ್ರಾಚೀನ ಮಾನವ ತಾನು ಬೇಟೆಯಾಡಿದ ಪ್ರಾಣಿಯ ಮಾಂಸವನ್ನೆಲ್ಲ ತಿಂದ ಮೇಲೆ ಅದರ ಚರ್ಮವನ್ನು ಶುಷ್ಕಗೊಳಿಸಿ ತನ್ನ ಮೈಮೇಲೆ ಹೊದ್ದುಕೊಳ್ಳುತ್ತಿದ್ದ. ನೀರನ್ನು ಸಂಗ್ರಹಿಸಿಡಲು ತೊಗಲು ಧಾರಕಗಳನ್ನು ಮಾಡಿಕೊಳ್ಳುತ್ತಿದ್ದ. ಹದಗೊಳಿಸಿದ ಚರ್ಮ ತೊಗಲು. ಯಾವ ಕಾರ್ಯಕ್ಕೆ ಇದನ್ನು ಉಪಯೋಗಿಸಲಿ ಅದು ಹೆಚ್ಚು ದಿನ ಇರುತ್ತಿರಲಿಲ್ಲ. ಸರಿಯಾಗಿ ಹದಗೊಳ್ಳದ ಚರ್ಮ ಕೊಳೆತು ಹೋಗುತ್ತಿತ್ತು. ಪ್ರಾಚೀನ ಈಜಿಪ್ಷಿಯನರು ಚೀಲ, ಚಪ್ಪಲಿ, ಸಜ್ಜು ಸಾಮಾನುಗಳನ್ನು ತೊಗಲಿನಿಂದ ಮಾಡಲು ತಿಳಿದಿದ್ದರು. ಗ್ರೀಕರು, ರೋಮನರು ತೊಗಲಿನ ಮೇಲೆ ಬರಹಗಳನ್ನು ಬರೆದು (Parchments) ಸಂರಕ್ಷಿಸುತ್ತಿದ್ದರು. ತಾವು ಗಳಿಸಿದ ಚರ್ಮವನ್ನು ತಮ್ಮ ಕೂದಲುಳ್ಳ ಚರ್ಮದ ಮೇಲೆ ಪ್ರಾಣಿಗಳ ಕೊಬ್ಬನ್ನು ಇಲ್ಲವೇ ತೇವವಾದ ಮಣ್ಣನ್ನು ಸವರಿ ಹದಗೊಳಿಸುತ್ತಿದ್ದರು. ಮುಂದೆ ಈಜಿಪ್ಟ್, ಬೇಬಿಲೋನಿಯ ಮತ್ತು ಚೀನಾ ದೇಶಗಳಲ್ಲಿ ಪಟಿಕದಿಂದ ಹದಗೊಳಿಸುವ ಕಾರ್ಯ ನಡೆಯಿತು. ಅನೇಕ ಸಂಶೋಧನೆಗಳಿಂದ ತೊಗಲಿನ ಉಪಯೋಗ ನೂತನ ಶಿಲಾಯುಗ(Neolithic)ದಲ್ಲೇ ಇತ್ತೆಂದು ತಿಳಿದುಬಂದಿದೆ. ಆದರೆ ವೈಜ್ಞಾನಿಕವಾಗಿ ಚರ್ಮ ಹದಗೊಳಿಕೆಯು ಆರಂಭವಾಗಿದ್ದು 1880ರ ಈಚೆಗೆ. ಇಂದು ತೊಗಲಿನ ಪ್ರಾಮುಖ್ಯತೆ ಬಹುವಾಗಿದೆ. ಅದು ವಿಜ್ಞಾನದ ಒಂದು ಪ್ರತ್ಯೇಕ ವಿಭಾಗವಾಗಿದೆ. ಇವತ್ತು ಅದೊಂದು ಕೈಗಾರಿಕೆ ಅಷ್ಟೇ ಅಲ್ಲ, ದೇಶದ ಪ್ರಗತಿಯ ಸಂಕೇತ. ಚರ್ಮ ಹದಗೊಳಿಕೆಯ ವಿಧಾನ, ಸಂಸ್ಕರಣ ಇತ್ಯಾದಿಗಳನ್ನು ಪರಿಚಯ ಮಾಡಿಕೊಡುವುದು ಇಲ್ಲಿಯ ಉದ್ದೇಶವಾಗಿದೆ.

ಚರ್ಮ-ಅದರ ಅಂಶಗಳು

ತೊಗಲಿಗಾಗಿ ಬಳಸುವ ಚರ್ಮಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ದಪ್ಪ ಚರ್ಮ ಹಾಗೂ ತೆಳು ಚರ್ಮ. ಇವು ಎಮ್ಮೆ, ಎತ್ತು, ಕುದುರೆ, ಆನೆ, ಹಾವು, ಮೊಸಳೆ ಮುಂತಾದ ಪ್ರಾಣಿಗಳಿಂದ ದೊರೆಯುವುವು. ಈ ಪ್ರಾಣಿ ಚರ್ಮಗಳಲ್ಲಿ ಶೇ. 80 ಭಾಗ ಕೋಲಗನ್ ಎಂಬ ಎಳೆಗಳಿಂದ ಕೂಡಿದ ಘಟಕವಿರುವುದು. ಹದ ಗೊಳಿಸುವ ಮೂಲಕ ಇದು ತೊಗಲಾಗಿ ಪರಿವರ್ತಿಸಲ್ಪಡುವುದು. ಇತರ ಅಂಶಗಳಾದ ಇಲಾಸ್ಟಿನ್, ರೆಟಿಕ್ಯೂಲಿನ್ ಮತ್ತು ಕೂದಲಿನಲ್ಲಿರುವ ಕೆರಾಟಿನ್‌ಗಳು ಚರ್ಮದಲ್ಲಿದ್ದು ಎಳೆಗಳಿಲ್ಲದ (Non-fibrous) ರಕ್ತನಾಳಗಳು, ಜಿಡ್ಡಿನ ಗ್ರಂಥಿಗಳು, ಕರಗುವ ಪ್ರೋಟೀನ್, ಕೊಬ್ಬುಗಳೊಡನೆ ಬೆರೆತುಹೋಗಿರುತ್ತವೆ. ಇವು ತೊಗಲಿನ ತಯಾರಿಕೆ ಯಲ್ಲಿ ಅಷ್ಟು ಉಪಯುಕ್ತವಲ್ಲ. ತೊಗಲಿನ ಮೆರುಗು, ಬಣ್ಣಗಳಲ್ಲಿ ಶುದ್ಧತೆ ಇರುವುದಿಲ್ಲವೆಂಬ ಕಾರಣದಿಂದ ಈ ಅಂಶಗಳನ್ನು ತಕ್ಕ ಸಂಸ್ಕರಣ ವಿಧಾನಗಳಿಂದ ತೆಗೆದುಹಾಕಿ ಚರ್ಮವು ಜೀವಾಣುಗಳು, ಉಷ್ಣ, ರಾಸಾಯನ ವಸ್ತುಗಳು ಮತ್ತು ನೀರಿನ ಪ್ರಭಾವಗಳಿಗೆ ಸಿಲುಕಲು ಶಕ್ಯವಾಗದಂತೆ ಮಾಡುತ್ತಾರೆ. ಇದರಿಂದ ಆ ಚರ್ಮವನ್ನು (ಎಂದರೆ ಕೋಲಗೆನ್ ಎಂಬ ಅಂಶದಿಂದ ಮಾತ್ರ ಕೂಡಿರುವ) ತೊಗಲಿನ ತಯಾರಿಕೆಗೆ ಉಪಯೋಗಿಸಬಹುದು. ಚರ್ಮ ಹದಗೊಳಿಸುವಾಗ ಹೊರ ಚರ್ಮದ ಪದರಗಳು, ಮೇದಸ್ಸಿನಿಂದ ಕೂಡಿದ ಚರ್ಮದ ಭಾಗ, ಕೂದಲ ಮೂಲ, ಮಾಂಸ ಮತ್ತು ಕೂದಲುಗಳುಳ್ಳ ಕೆರಾಟಿನ್ ಅಂಶ ಇವೆಲ್ಲವೂ ತೆಗೆದುಹಾಕಲ್ಪಡುತ್ತವೆ. ರಕ್ತನಾಳ ಅಲ್ಬ್ಯುಮಿನ್ ಮತ್ತು ಗ್ಲಾಬುಲಿನ್ ಎಂಬ ಕರಗುವ ಪ್ರೋಟೀನ್‌ಗಳನ್ನು ತಕ್ಕ ವಿಧಾನದಿಂದ ತೆಗೆದುಹಾಕಿ ಕೋಲಗೆನ್ ಘಟಕವನ್ನು ರಾಸಾಯನಿಕ ವಸ್ತುಗಳ ಸಹಾಯ ದಿಂದ ಕನಿಷ್ಠ ಭೌತಿಕ ಬದಲಾವಣೆಗಳಿಗೊಳಗಾಗುವಂತೆ ಸಂಸ್ಕರಣಕ್ಕಾಗಿ ಹಾಗೆಯೇ ಉಳಿಸಿಕೊಳ್ಳಲಾಗುತ್ತದೆ.

ಹದಕಾರಿಗಳು (Tannins)

ಟ್ಯಾನಿನ್ ಅಥವಾ ಹದಕಾರಿಗಳು ಒಂದು ಬಗೆಯ ಬಂಧಕ ವಸ್ತು, ರಾಸಾಯನಿಕ ಸಂಯುಕ್ತ ವಸ್ತು. ಇವು ಎರಡು ಬಗೆ. ಒಂದು ಸಸ್ಯಮೂಲ, ಮತ್ತೊಂದು ಖನಿಜ ಮೂಲ. ಭಾರತೀಯ ಅರಣ್ಯಗಳು ತೊಗಲು ಹದಮಾಡುವುದಕ್ಕೆ ಅವಶ್ಯಕವಿರುವ ವಸ್ತುಗಳನ್ನು ಉತ್ಪಾದಿಸುತ್ತವೆ. ಕೆಲವೊಂದು ಗಿಡಗಳ ತೊಗಟೆ (Bark), ಎಲೆ, ಕಾಯಿ, ಹಣ್ಣುಗಳಿಂದ ಟ್ಯಾನಿನ್ ದೊರೆಯುತ್ತದೆ. ಅಳಲೆ ಮರ ಟ್ಯಾನಿನ್‌ಗೆ ಒಳ್ಳೆಯ ಮೂಲ. ಮೈಸೂರು ಜಿಲ್ಲೆ, ಸಾವನದುರ್ಗ, ಉತ್ತರ ಇಂಡಿಯಾದಲ್ಲಿ ಬೆಳೆಯುವ ಅಳಲೆ ಮರದ ಅಳಲೆಕಾಯಿಗಳಿಂದ ಒಳ್ಳೆಯ ಟ್ಯಾನಿನ್ ದೊರೆಯುತ್ತದೆ. ಇತರ ವೃಕ್ಷಗಳು ಹೀಗಿವೆ. ಓಕ್, ಮ್ಯಾಂಗ್ರೋವ್, ಕಾವಲ್, ತುರುಬವೃಕ್ಷ, ಕೊಡಸಿಜಿನ ಎಂಬ ಸಣ್ಣ ವೃಕ್ಷ (ಬೆಳೆ: ಬಿಹಾರ್, ಒರಿಸ್ಸಾ:– ಈ ವೃಕ್ಷದ ತೊಗಟೆ, ಎಲೆ, ಹಸಿರಾದ

ಹಣ್ಣುಗಳಿಂದ ಟಾನಿನ್ ದೊರೆಯುತ್ತದೆ). ದಿಂಡಿಗ (ಶೇ. 32 ಟಾನಿನ್). ಮತ್ತಿ, ಮಾಸಿ (ಶೇ. 17 ಟಾನಿನ್). ಮುರ್ಕಲಿ. ಹಸರಗಣ್ಣೆ (ಶೇ. 14 ಟಾನಿನ್) ಪಿಪ್ಪೆ. ಕಕ್ಕೆ ಮರದ ಚಕ್ಕೆ. ಸುರಹೊನ್ನೆ (ಶೇ 11.09) ಇತ್ಯಾದಿ ವೃಕ್ಷಗಳಿಂದ ಉತ್ತಮ ಹದಕಾರಿಗಳು ದೊರೆಯುತ್ತವೆ. ಸಸ್ಯಮೂಲ ಟಾನಿನ್ ಉಪಯೋಗಿಸಿ ಹದಮಾಡಿದ ತೊಗಲಿಗೆ ನಸು ಹಳದಿಯಿಂದ ಕೆಂಪುಮಿಶ್ರಿತ ಕಂದು ಬಣ್ಣದವರೆಗಿನ ವ್ಯಾಪ್ತಿಯ ಛಾಯೆಗಳಿರುತ್ತವೆ. ಖನಿಜಮೂಲ ಟಾನಿನ್‌ಗಳು ಕ್ರೋಮಿಯಂ. ಜರ್ಕೋನಿಯಂ ಹಾಗೂ ಅಲ್ಯೂಮಿನಿಯಂ ಲವಣಗಳಿಂದ ದೊರೆಯುತ್ತವೆ. ಕ್ರೋಮಿಯಂ ಸಲ್ಫೇಟ್ ಉಪಯೋಗಿಸಿ ಚರ್ಮವನ್ನು ಹದಗೊಳಿಸುವುದು 1884 ರಿಂದ ಆರಂಭವಾಯಿತು. ಮೊದಲೆ ಹೇಳಿದಂತೆ ಈಜಿಪ್ಟ್. ಚೈನಾಗಳಲ್ಲಿ ಪಟಿಕ (Alum-Double Sulphate) ವನ್ನು ಚರ್ಮ ಹದಗೊಳಿಸುವ ಕಾರ್ಯದಲ್ಲಿ ಬಳಸುತ್ತಿದ್ದರು. ಇತರ ಹದಕಾರಿಗಳು : ಮೊದಮೊದಲಿಗೆ ಎಣ್ಣೆಯಿಂದ ಹದಗೊಳಿಸುತ್ತಿದ್ದರು. ಇಂದಿಗೂ ಎಸ್ಕಿಮೋ ಜನಗಳು ಕಚ್ಚಾ ಎಣ್ಣೆಯನ್ನು ಕೂದಲುಳ್ಳ ಚರ್ಮವನ್ನು ಹದಗೊಳಿಸಲು ಉಪಯೋಗಿಸುತ್ತಾರೆ. ಕಾಡ್ ಎಂಬ ಮೀನಿನ ಎಣ್ಣೆಯನ್ನು ಇವತ್ತಿಗೂ ಬಳಸುತ್ತಾರೆ. ಇದರಿಂದ ಷಾಮಾಯ್ ತೊಗಲು ಸಿಕ್ಕುತ್ತದೆ. ಎಣ್ಣೆಯಿಂದ ಹದಗೊಂಡ ಚರ್ಮ ನಯ ಹಾಗೂ ಮೆದು. ಬಿಳಿ ತೊಗಲಿನ ತಯಾರಿಕೆಯಲ್ಲಿ ಫಾರ್ಮಾಲ್ ಡಿ ಹೈಡ್ ಎಂಬ ಹದಕಾರಿಯ ಬಳಕೆ ಇದೆ. ಆಲ್ ಡಿ ಹೈಡ್ ಅನ್ನು ಉಪಯೋಗಿಸುವುದು ಇತ್ತೀಚೆಗೆ ಬೆಳೆದುಬಂದಿದೆ. ಗ್ಲೂಟಾರಾಲ್ ಡಿ ಹೈಡ್ ಇನ್ನೊಂದು ಹದಕಾರಿ. ಇಮ್ಮರ್‌ಗಾನ್. ಪಾಲಿಮೆಟಾ ಫಾಸ್ಫೇಟ್. ಮರದ ಅಂಟುಗಳು. ಸಿಲಿಕಾ ಇತ್ಯಾದಿ ಹದಕಾರಿಗಳು ಬಳಕೆಯಲ್ಲಿವೆ.

ತೊಗಲು ಹದಗೊಳಿಕೆ-ಸಂಸ್ಕರಣ :

ಚರ್ಮದ ಸಂಸ್ಕರಣೆಯಲ್ಲಿ ಮೂರು ಹಂತಗಳಿವೆ

1) ಹದಗೊಳಿಸುವ ಮುಂಚಿನ ಕಾರ್ಯಗಳು
   (Pre-Tanning Operations)
2) ಹದಗೊಳಿಕೆ (Tanning)
3) ಹದಗೊಳಿಸಿದ ನಂತರದ ಕಾರ್ಯಗಳು
   (Post-Tanning Operations)

1) ತೊಗಲು ತಯಾರಿಕೆಯಲ್ಲಿ ಮೊಟ್ಟಮೊದಲ ಕಾರ್ಯವೆಂದರೆ ಪ್ರಾಣಿ ದೇಹದಿಂದ ಸುಲಿದ ಚರ್ಮವನ್ನು ಒಂದೇ ಭೌತಿಕ ಸ್ಥಿತಿಗೆ ತರಿಸುವುದು. ಪ್ರಾಣಿಗಳಿಂದ ಚರ್ಮ ಪಡೆಯುವ ಸಲುವಾಗಿ ಯಾರೂ ಅವನ್ನು ಇರಿದಾಗಲಿ ಗುಂಡಿಟ್ಟಾಗಲೀ ಕೊಲ್ಲುವುದಿಲ್ಲ. ಹೀಗೆ ಮಾಡಿದರೆ ಚರ್ಮಕ್ಕೆ ಧಕ್ಕೆಯಾಗುತ್ತದೆ. ಸ್ವಾಭಾವಿಕವಾಗಿಯೇ ಸತ್ತ ಪ್ರಾಣಿಗಳ ಹಾಗೂ ಸೆರೆ ಹಿಡಿದ ಪ್ರಾಣಿಗಳಿಂದ ಚರ್ಮ ದೊರಕಿಸಿಕೊಳ್ಳುತ್ತಾರೆ. ಹೀಗೆ ಪಡೆದ ಚರ್ಮವನ್ನು ಒಂದೇ ಭೌತಿಕ ಸ್ಥಿತಿಗೆ ತರಿಸಲು ಅದನ್ನು ನೀರಿನಲ್ಲಿ

ತೊಳೆಯುತ್ತಾರೆ. ಹಸಿಚರ್ಮದಲ್ಲಿರಬಹುದಾದ ಹಿಪ್ಪೆ ಕೊಳೆ, ಉಪ್ಪು ಮತ್ತಿತರ ಅಶುದ್ಧತೆಗಳು ಇಲ್ಲೇ ಮಾಯವಾಗುತ್ತವೆ. ಇನ್ನೂ ಇರುವ ಅಶುದ್ಧತೆಗಳಾದ ಕರಗುವ ಸಸಾರ ಜನಕಗಳು (Protein), ಕೊಬ್ಬು, ಮಾಂಸಪಿಂಡಗಳು, ಕೂದಲುಗಳನ್ನು ತೆಗೆಯಲು ರಾಸಾಯನಿಕ ವಸ್ತುಗಳ ದ್ರಾವಣಗಳಲ್ಲಿ ಚರ್ಮವನ್ನು ನೆನೆಹಾಕುತ್ತಾರೆ. ನೀರು ಮಿಶ್ರಿತ ಸುಣ್ಣ ಹಾಗೂ ಸೋಡಿಯಂ ಸಲ್ಫೈಡ್ ಬೆರೆತಿರುವ ದ್ರಾವಣವನ್ನು ಸಾಮಾನ್ಯವಾಗಿ ಬಳಸುತ್ತಾರೆ. ಕ್ಷಾರದ ಪ್ರತಿಕ್ರಿಯೆಯಿಂದ ಚರ್ಮದ ಮೇಲಿನ ಕೂದಲುಗಳು, ಮಾಂಸ ಭಾಗಗಳು ಸಡಿಲಗೊಳ್ಳುತ್ತವೆ. ದ್ರಾವಣದ ಉಷ್ಣತೆಯನ್ನು ನಿಯಂತ್ರಿಸದೆ ಹೋದಲ್ಲಿ ಚರ್ಮವು ಕರಗಿಹೋಗಬಹುದು. ಆದ್ದರಿಂದ ದ್ರಾವಣವನ್ನು ಸರಿಯಾದ ರೀತಿಯಲ್ಲಿರಿಸಿಕೊಂಡಿರಬೇಕು. ಇನ್ನೂ ಅಂಟಿಕೊಂಡಿರುವ ಕೂದಲುಗಳನ್ನು ಬೇರ್ಪಡಿಸಲು ಯಂತ್ರಗಳ ಸಹಾಯವಿರುತ್ತದೆ. ಇಲ್ಲದಿದ್ದರೆ ಕೈಗಳಿಂದಲೇ ಈ ಕೆಲಸ ಮಾಡುತ್ತಾರೆ. ಕೆಲವೆಡೆ ಸಾವಿರಾರು ದಪ್ಪ ಹಾಗೂ ತೆಳು ಚರ್ಮ (ಉದಾ: ಎತ್ತು, ಒಂಟೆ, ಆನೆ ಇತ್ಯಾದಿ ಪ್ರಾಣಿಗಳ ದಪ್ಪ ಚರ್ಮಗಳ ಮತ್ತು ಮೇಕೆ, ಹಾವು ಮುಂತಾದ ಪ್ರಾಣಿಗಳ ತೆಳುಚರ್ಮ) ಗಳ ಸಂಸ್ಕರಣ ನಿತ್ಯ ನಡೆಯಬೇಕಾಗಿರುತ್ತದೆ. ಆಗ ಕೂದಲು ಮತ್ತು ಮಾಂಸ ಭಾಗಗಳನ್ನು ತೆಗೆಯಲು ಯಂತ್ರಗಳೇ ಬೇಕಾಗುತ್ತವೆ. ಮಾಂಸದ ಭಾಗಗಳನ್ನು ತೆಗೆಯಲು ಫ್ಲೆಷಿಂಗ್ ಮೆಷಿನ್ ಅನ್ನು ಉಪಯೋಗಿಸುತ್ತಾರೆ. ಮುಂದೆ ಇನ್ನೂ ಚಿಕ್ಕಕೂದಲು ಮತ್ತು ಮಾಂಸಗಳನ್ನು ತೆಗೆಯಲು ಚರ್ಮವನ್ನು ಲವಣ ದ್ರಾವಣ (ಉಪ್ಪು ದ್ರಾವಣ) ಗಳಲ್ಲಿ ಮುಳುಗಿಸುತ್ತಾರೆ. ಇದರಿಂದ ಚರ್ಮದ ಮೇಲಣ ಸುಣ್ಣ ತೆಗೆಯಲ್ಪಡುತ್ತದೆ. ಇದನ್ನು ಡಿಲೈಮಿಂಗ್ ಎನ್ನುತ್ತಾರೆ. ಈಗ ಚರ್ಮ ನಸು ಬಿಳಿಬಣ್ಣ ಪಡೆಯುತ್ತದೆ. ಹಾಗೂ ಹದಗೊಳಿಕೆಗೆ ಸಿದ್ಧವಾಗುತ್ತದೆ.

2) ಹದಗೊಳಿಕೆಯ ಕಾರ್ಯದಲ್ಲಿ ಬಳಸುವ ಹದಕಾರಿಗಳನ್ನು ಮೇಲೆ ತಿಳಿಸಲಾಗಿದೆ. ಈ ಹದಕಾರಿಗಳು ಒಂದಕ್ಕೊಂದು ಭಿನ್ನವಾಗಿದ್ದು ಇವುಗಳಿಂದ ಹದಗೊಂಡ ಚರ್ಮದ ಗುಣಗಳು ಬೇರೆ ಇರುತ್ತವೆ. ಗಟ್ಟಿ ಘನ ತೊಗಲನ್ನು ಪಡೆಯಲು ಸಸ್ಯಮೂಲ ಟಾನಿನ್‌ಗಳನ್ನು ಬಳಸುತ್ತಾರೆ. ಷೂ, ಪಾದರಕ್ಷೆ ತಯಾರಿಸಲು ಬೇಕಾದ ತೊಗಲು ವಿವಿಧ ಆಕಾರ ಹಾಗೂ ಜಲಾಭೇದ್ಯ ಶಕ್ತಿ ಪಡೆಯಬೇಕಾಗುವುದರಿಂದ ಕ್ರೋಮ್ ಲವಣಗಳಿಂದ ಹದಗೊಂಡ ಚರ್ಮ ಉಪಯುಕ್ತ. ಕೆಲವೊಮ್ಮೆ ಮಿಶ್ರ ಟಾನಿನ್‌ಗಳನ್ನು ಬಳಸುತ್ತಾರೆ. ಇದರಿಂದ ತೊಗಲಿಗೆ ವಿಶೇಷ ಗುಣಗಳು ಪ್ರಾಪ್ತವಾಗುತ್ತವೆ. ತೊಟ್ಟಿ ಇಲ್ಲವೆ ಕಡಾಯಿಗಳಲ್ಲಿ ಚರ್ಮವನ್ನು ಹದಮಾಡಿ ತೆಗೆಯುತ್ತಾರೆ. ಮೊದಲು ದುರ್ಬಲ ದ್ರಾವಣದಲ್ಲಿ ಚರ್ಮವನ್ನು ಅದ್ದಿ ಆಮೇಲೆ ಪ್ರಬಲ ದ್ರಾವಣದಲ್ಲಿ ಅದ್ದಲಾಗುತ್ತದೆ. ಕೆಲವು ಕಡೆ ಸುತ್ತುವ ಡ್ರಮ್‌ಗಳ ಸಹಾಯದಿಂದ ಹದಮಾಡುತ್ತಾರೆ. ಡ್ರಮ್‌ಗಳ ಮೇಲೆ ಸುತ್ತಿರುವ ಚರ್ಮವನ್ನು ಹದಮಾಡುವ ಕಷಾಯಗಳೊಂದಿಗೆ ಕಡಮೆ ವೇಗದಲ್ಲಿ ತಿರುಗಿಸುತ್ತಾರೆ. ಆಗಾಗ ಡ್ರಮ್ಮನ್ನು ನಿಲ್ಲಿಸುತ್ತಾರೆ. ಇದು 19ನೇ ಶತ

ಮಾನದಿಂದ ಬಳಕೆಯಲ್ಲಿದೆ. ಕ್ರೋಮ್ ಲವಣಗಳಿಂದ ಹದಮಾಡಲು ಈ ಪದ್ಧತಿ ಉಪಯೋಗದಲ್ಲಿದೆ.

3) ಹದಗೊಂಡ ಚರ್ಮ ಮುಂದೆ ಹಲವಾರು ಕ್ರಿಯೆಗಳಿಗೊಳಗಾಗುತ್ತದೆ. ರಿಂಗಿಂಗ್ (Wringing) ಯಂತ್ರಗಳ ಎರಡು ಸುತ್ತುಗಗಳ ನಡುವೆ ಹಾಕಿ ಚರ್ಮದಲ್ಲಿನ ನೀರಿನ ಅಂಶ ಹಾಗೂ ಸುಕ್ಕು (Wrinkles) ಗಳನ್ನು ತೆಗೆಯುತ್ತಾರೆ. ಒಂದೇ ದಪ್ಪವಿರುವ ಚರ್ಮ ಪಡೆಯಲು ಶೇವಿಂಗ್ ಯಂತ್ರ ಉಪಯೋಗಿಸುತ್ತಾರೆ. ಚರ್ಮ ಬಹು ದಪ್ಪವಿದ್ದರೆ ಮೊದಲು ಅದನ್ನು ಹಲವಾರು ಪದರಗಳನ್ನಾಗಿ ಮಾಡಿಕೊಳ್ಳುತ್ತಾರೆ. ಮುಂದೆ ಬಣ್ಣ ಹಾಕುವುದು ನಡೆಯುತ್ತದೆ. ತೊಗಲಿಗೆ ಮೃದುತ್ವ ನೀಡಲು ಎಣ್ಣೆ ಸವರಲಾಗುವುದು. ಈ ಎರಡು ಕಾರ್ಯವನ್ನು ಡ್ರಮ್‌ಗಳ ಸಹಾಯದಿಂದ ಮಾಡುತ್ತಾರೆ. ಮುಂದೆ ಚರ್ಮವನ್ನು ಮರದ ಹಲಗೆಗಳ ಮೇಲೆ ಒಣ ಹಾಕಿ ನೀರಿನ ಅಂಶವನ್ನು ತೆಗೆಯುತ್ತಾರೆ. ಲೋಹದ ಹಲಗೆಗಳ ಬಳಕೆಯೂ ಇದೆ. ಒಣ ಹಾಕಿದ ಮೇಲೆ ಚರ್ಮ ಗಟ್ಟಿಯಾಗುತ್ತದೆ. ಈಗ ಹದನುಮಾಡಬೇಕು. ತೇವಾಂಶ ಎಲ್ಲೆಡೆ ಒಂದೇ ಸಮ ಇರಬೇಕು. ಇದಕ್ಕಾಗಿ ತೊಗಲಿನ ಮೇಲ್ಮೈ ಮೇಲೆ ಸೂಕ್ಷ್ಮ ನೀರಹನಿಗಳನ್ನು ಚಿಮಿಕಿಸುತ್ತಾರೆ ಇಲ್ಲವೇ ತೊಗಲನ್ನು ಮರದ ಧೂಳಿನಲ್ಲಿ ಮುಚ್ಚಿಡುತ್ತಾರೆ. ಇದಾದ ಬಳಿಕ ಉರುಳೆಗಳ ಮಧ್ಯೆ ತೊಗಲನ್ನು ಹಾಯಿಸಿ ಒತ್ತುವುದು, ಕಣವಿನ್ಯಾಸವನ್ನು ಹೆಚ್ಚಿಸುವುದು (Grain Pattern), ಮೆರಗು ನೀಡುವುದು. ಜಲಾಭೇದ್ಯ (Water proof) ಗೊಳಿಸುವುದು ಮೊದಲಾದ ಕಾರ್ಯಗಳು ನಡೆಯುತ್ತವೆ. ಪೂರ್ಣ ತಯಾರಾದ ತೊಗಲನ್ನು ಅದರ ಸ್ಪರ್ಶಗುಣ, ಗುಣದೋಷಗಳು, ತೋರಿಕೆಗಳಿಗನುಗುಣವಾಗಿ ವರ್ಗೀಕರಿಸುತ್ತಾರೆ.

ಚರ್ಮ ಕೈಗಾರಿಕೆ:

ಪಾದರಕ್ಷೆ, ಪ್ರಯಾಣ ಚೀಲ, ಅಲಂಕಾರಿಕ ಪದಾರ್ಥಗಳು, ಕೈಗವಸು, ಚೆಂಡು, ಉತ್ತಮ ಷೂ, ಪರ್ಸ್, ಇತ್ಯಾದಿ ಈ ಎಲ್ಲವನ್ನೂ ತೊಗಲಿನಿಂದ ಮಾಡುತ್ತಾರೆ. ವಿಶ್ವದ ಎಲ್ಲ ದೇಶಗಳಲ್ಲೂ ಚರ್ಮ ಕೈಗಾರಿಕೆ ಹಬ್ಬಿದೆ. ಭಾರತ ದೇಶದಲ್ಲಂತೂ ಅದು ತಾನು ಪಡೆದಿರುವ ಸಂಪತ್ತಿಗನುಗುಣವಾಗಿಯೇ ಇದೆ. ಸಾಕುಪ್ರಾಣಿಗಳನ್ನು ಹೆಚ್ಚಾಗಿ ನಾವು ಕಾಣುವುದು ಭಾರತದಲ್ಲೇ. ಇದರಿಂದಾಗಿ ದಪ್ಪ ಹಾಗೂ ತೆಳು ಚರ್ಮಗಳನ್ನು ವಿಶೇಷವಾಗಿ ಉತ್ಪಾದಿಸಿ ಬೇರೆ ದೇಶಗಳಿಗೆ ರಫ್ತು ಮಾಡಲು ಸಾಧ್ಯವಾಗಿದೆ. ತೊಗಲು ಕೈಗಾರಿಕೆಗೆ ಇನ್ನೂ ಹೆಚ್ಚು ಪ್ರಾಧಾನ್ಯತೆ ನೀಡುವುದು ಅಗತ್ಯವಾಗಿದೆ.

ನಿರಾಳ

ಜಯಸುದರ್ಶನ

ಶೂನ್ಯಕ್ಕೆ ಸೊನ್ನೆಯ ಚಿಹ್ನೆ, ಆದರೂ ಅಂಕೆ
ಅದರ ಹಿಂದೆ ನಿಂತಾಗ ಮಾತ್ರವೆ ಅದಕ್ಕೆ
ಉಂಟು ನಾವು ಕೊಡುವ ಮೌಲ್ಯ. ಮುಂದೆ ಬೆಲೆ
ಕಡಿಮೆ. ವಸ್ತುಸ್ಥಿತಿಯೆ ತಲೆಕೆಳಗಾದ ಲೀಲೆ.

ಗಗನಕ್ಕೆ ಬೆಳಕಿರುವಾಗ ನೀಲಿಯ ಮೇಲೆ ಮಮತೆ
ಇರುಳಲ್ಲಿ ಕಪ್ಪಿನ ಸಾಗರದಲ್ಲಿ ಬೆಳಕಿನ ಹಣತೆ
ಸಾವಿರ ಕೋಟಿ ಹೊತ್ತುರಿದರೂ ಇಲ್ಲಿ ಕೊರತೆ
ಬೆಳಕು-ಕತ್ತಲ ಕೂಸು ನೆರಳು. ಶಬ್ದಕ್ಕೆ ನೆರೆ ಕವಿತೆ.

ಹೊತ್ತಿನದೆ ನಮ್ಮರಿವಿನಲಿ ಅನವರತ ನೆನಪಿನ ಸದ್ದು
ನಿದ್ರೆ ಹೊರಟರೂ ತಪ್ಪದು ಬೆನ್ನ ಹಿಂದೆ ಕನಸಿನ
ಹದ್ದು. ನೆಲಕ್ಕೆ ಕೀಲಿಸಿದ ದೃಷ್ಟಿ. ಪಥವೆಲ್ಲ ಬಯಲಿನ
ನಿರಾಳದಲಿ ಅದೃಶ್ಯ ಚಿತ್ತಾರ. ನಿದ್ರೆಯಾಚೆಗೆ ಇದ್ದದ್ದು
ಪ್ರಜ್ಞೆ ಇಲ್ಲದ್ದು. ನಮ್ಮಳವಿನಲ್ಲಿರದು ಅದರ ಪರಿವೆ.
ಸೊನ್ನೆಯನ್ನಳಿಸು. ಬಯಲು ಬಯಲಾಗಿ ಎಲ್ಲ ಅರಿವೆ.

ವೇದಗಳಲ್ಲಿ ರಾಷ್ಟ್ರಪ್ರಜ್ಞೆ

ಪಿ. ಕೆ. ಗಾಯತ್ರಿ

ಹಿಂದೂ ಮಹಾಸಂಸ್ಕೃತಿಯ ತಳಹದಿಯಾದ ವೇದಗಳ ಮಂತ್ರಕೃತರೂ, ಮಂತ್ರದ್ರಷ್ಟರೂ ಆದ ವೈದಿಕ ಋಷಿಗಳು ಜನಗಳ ಮತ್ತು ಜಗತ್ತಿನ ಕಲ್ಯಾಣವನ್ನೇ ತಮ್ಮ ತಪಸ್ಸಿನ ಮುಖ್ಯ ಧ್ಯೇಯವಾಗಿಟ್ಟುಕೊಂಡು ಅದಕ್ಕಾಗಿ ದೀಕ್ಷೆಯನ್ನು ಕೈಗೊಂಡಿದ್ದರು. ಇದರಿಂದ ಜನಗಳಲ್ಲಿ ರಾಷ್ಟ್ರಪ್ರಜ್ಞೆಯನ್ನು ಜಾಗೃತಗೊಳಿಸಿ, ಬಲಸಂವರ್ಧಿತವಾದ ರಾಷ್ಟ್ರ ನಿರ್ಮಾಣವಾಡಿದರು.

ಭದ್ರಮಿಚ್ಛಂತ ಋಷಯಃ ಸ್ವರ್ವಿದ –
ಸ್ತಪೋ ದೀಕ್ಷಾಮುಪಸೇದುರಗ್ರೇ ।
ತತೋ ರಾಷ್ಟ್ರಂ ಬಲಮೋಜಶ್ಚ ಜಾತಂ
ತದಸ್ಮೈ ದೇವಾ ಉಪಸಂ ನಮಂತು ॥

[ಅಥರ್ವವೇದ. 19. 41. 1]

"ತತೋ ರಾಷ್ಟ್ರಂ ಬಲಂ ಓಜಃ ಚ ಜಾತಂ" (ಅದರಿಂದ ರಾಷ್ಟ್ರದ ಬಲವು ಮತ್ತು ಓಜಸ್ಸು ಉಂಟಾಯಿತು). ಇದು ವೈದಿಕ ಋಷಿಗಳ ಮಹತ್ತರವಾದ ರಾಷ್ಟ್ರ ಪ್ರಜ್ಞೆಯನ್ನು ಸೂಚಿಸುತ್ತದೆ.

ವೈದಿಕ ಸ್ವರಾಜ್ಯ ಶಾಸನದ ಮತ್ತೊಂದು ಉಲ್ಲೇಖವು ಈ ಕೆಳಗೆ ಸೂಚಿಸಿರುವ ಮಂತ್ರದಿಂದ ಸ್ಪಷ್ಟವಾಗಿದೆ.

ಬ್ರಹ್ಮಚರ್ಯೇಣ ತಪಸಾ ರಾಜಾ ರಾಷ್ಟ್ರಂ ವಿರಕ್ಷತಿ।

[ಅಥರ್ವ. 11.3.5]

ಬ್ರಹ್ಮಚರ್ಯರೂಪವಾದ ತಪಸ್ಸುಮಾಡುವುದರಿಂದಲೇ ರಾಜ ಅಥವಾ ರಾಷ್ಟ್ರ ಪುರುಷನು ರಾಜ್ಯಪಾಲನೆ ಮಾಡುವ ಅಧಿಕಾರವನ್ನು ಹೊಂದುತ್ತಾನೆ. ಅಂದರೆ ಸುಸಂಸ್ಕೃತನಾದ, ಸ್ಥಿತಪ್ರಜ್ಞನನ್ನೇ ರಾಜನಾಗಿ ಆರಿಸಬೇಕೆಂಬುದು ಒಂದು ಉಜ್ವಲ ರಾಷ್ಟ್ರಶಾಸನವಾಗಿತ್ತೆಂದ್ದು ತಿಳಿದುಬರುತ್ತದೆ.

ಹೀಗೆ, ಅನೇಕ ಮಂತ್ರಗಳು, ವ್ಯಕ್ತಿಯಿಂದ ಸಮಾಜ, ಸಮಾಜದಿಂದ ರಾಷ್ಟ್ರ, ರಾಷ್ಟ್ರದಿಂದ ವಿಶ್ವ, ಇವುಗಳ ಮಹೋನ್ನತಿಗಾಗಿ ಆಚರಿಸಿದ ಮಹಾಋಷಿಗಳ ತಪಸ್ಸಿನ ಪರಿಣಾಮ ವಾಕ್ಯಗಳು. ಸದಾ ಸರ್ವಕಾಲದಲ್ಲೂ ಎಲ್ಲಕ್ಕೂ ಅನ್ವಯ

ವಾಗುವ ಕ್ಷೇಮ ಮತ್ತು ಏಳಿಗೆಯೇ ಈ ಮಂತ್ರಗಳ ಏಕಮೇವಾಧ್ಯೇಯವಾಗಿದೆಯೆಂದರೆ ಅತಿಶಯೋಕ್ತಿಯಾಗಲಾರದು. "ನಾನು" ಎನ್ನುವುದಕ್ಕೆ ಬದಲು "ನಾವು" ಎನ್ನುವುದರ ಪುನರುಚ್ಚಾರಣೆಯೇ ಅಧಿಕವಾಗಿದೆ. ವಿಶ್ವಸಂಘಟನೆ. ವಿಶ್ವಪ್ರಜ್ಞೆ. ವಿಶ್ವೋನ್ನತಿ ಇತ್ಯಾದಿ ಮಹಾ ಧ್ಯೇಯವನ್ನೇ ಕುರಿತು ಹಾಡಿದ್ದಾರೆ ನಮ್ಮ ಋಷಿಗಳು. ಉದಾಹರಣೆಗೆ ನಾವು ನಿತ್ಯವೂ ಬಳಸುವ ಕೇವಲ ಕೆಲವು ಶಾಂತಿ ಮಂತ್ರಗಳನ್ನು ಅವಲೋಕಿಸೋಣ–

ಓಂ । ಮಧುವಾತಾ ಋತಾಯತೇ, ಮಧುಕ್ಷರಂತಿ ಸಿಂಧವಃ ।
ಮಾಧ್ವೀರ್ನಃ ಸ್ಸಂತ್ವೋಷಧೀಃ । ಮಧುನಕ್ತಮುತೋಷಸಿ ।
ಮಧುಮತ್ ಪಾರ್ಥಿವಂ ರಜಃ । ಮಧು ದ್ಯೌರಸ್ತು ನಃ ಪಿತಾಃ ।
ಮಧುಮಾನ್ನೋ ವನಸ್ಪತಿರ್ಮಧುಮಾಗಮಸ್ತು ಸೂರ್ಯಃ ।
ಮಾಧ್ವೀರ್ಗಾವೋ ಭವಂತು ನಃ ।
ಓಂ ಮಧು ಮಧು ಮಧು ॥

[ತೈತ್ತಿರೀಯ ಆರಣ್ಯಕ 10-30]

"ವಾಯುಗಳು ನಮಗೆ ಸುಖಕರವಾಗಿ ಬೀಸಲಿ, ನದಿಗಳು ಮಧುರವಾದ (ಯೋಗ್ಯವಾದ) ನೀರನ್ನು ಕೊಡಲಿ, ಸಸ್ಯಗಳು ಮಧುರವಾಗಿ ಪಥ್ಯರೂಪವಾಗಿರಲಿ, ರಾತ್ರಿಹಗಲುಗಳು ಮಧುರವಾಗಿರಲಿ, ಭೂಮಿಯು ಮಧುರವಾಗಿರಲಿ. ಪಿತನಾದ ಅಂತರಿಕ್ಷವು ಸುಖಕರ ವಾಗಿರಲಿ, ವೃಕ್ಷಗಳು ಮಧುರವಾದ ಫಲಗಳನ್ನು ಕೊಡಲಿ. ಸೂರ್ಯನು ಸುಖಕರವಾಗಿ ಬೆಳಗಲಿ; ಗೋವುಗಳು ಅಮೃತಪ್ರಾಯವಾದ ಹಾಲನ್ನು ಕೊಡಲಿ॥ ಓಂ.
ಎಲ್ಲವೂ ಮಧುರವಾಗಿರಲಿ, ಮಧುರವಾಗಿರಲಿ, ಮಧುರವಾಗಿರಲಿ!"

ವಿಶ್ವಪ್ರೇಮದ ಮಧು ಸೌರಭವನ್ನು ಸೂಸುತ್ತಿರುವ ಈ ಮಂತ್ರವು ಕೇವಲ ವ್ಯಕ್ತಿಯ ಶುಭಕ್ಕಲ್ಲದೆ, ಸ್ಥಾವರಜಂಗಮಾದಿ ಪ್ರತಿವಸ್ತುವಿಗೂ ಕಲ್ಯಾಣವನ್ನು ಕೋರುತ್ತದೆ. ಪ್ರಪಂಚಕ್ಕೆ ಮಧುರತ್ವವನ್ನು ಬಯಸುವ ಈ ಮಹಾಮಂತ್ರದ ಧ್ಯೇಯವು ವಿಶ್ವದೃಷ್ಟಿಯನ್ನು ನಿಖರವಾಗಿ ಸೂಚಿಸುತ್ತದೆ.

ಓಂ । ಭದ್ರಂ ಕರ್ಣೇಭಿಶ್ಶೃಣುಯಾಮ ದೇವಾಃ ।
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಸ್ತುಷ್ಟುವಾಂಗ್ ಸಸ್ತನೂಭಿಃ ।
ವ್ಯಶೇಮ ದೇವಹಿತಂ ಯದಾಯುಃ ॥

[ಯಜುರ್ವೇದ ಸಂಹಿತೆ 25-29]

ಮತ್ತು

ಓಂ । ಸಹನಾವವತು । ಸಹನೌಭುನಕ್ತು । ಸಹವೀರ್ಯಂ
ಕರವಾವಹೈ । ತೇಜಸ್ವಿನಾವಧೀತಮಸ್ತು । ಮಾ ವಿದ್ವಿಷಾವಹೈ ।
ಓಂ ಶಾಂತಿಃ ಶಾಂತಿಃ ಶಾಂತಿಃ ॥

"ಎಲೈ ದೇವತೆಗಳೇ—

ನಮ್ಮ ಕಿವಿಗಳಿಂದ ಶುಭವಾದುದನ್ನು ಕೇಳುವಂತಾಗಲಿ. ಕಣ್ಣುಗಳಿಂದ ಒಳ್ಳೆಯುದನ್ನು ನೋಡುವಂತಾಗಲಿ. ನಾವು ನಿಮ್ಮನ್ನು ಸ್ತುತಿಸಿ. ನಿಮ್ಮಿಂದ ಅನುಗ್ರಹೀತವಾದ ಆಯುಸ್ಸನ್ನು ಶಕ್ತಿವಂತರಾಗಿ ಅನುಭವಿಸುವಂತಾಗಲಿ.

ಭಗವಂತನು ನಮ್ಮನ್ನು ರಕ್ಷಿಸಲಿ; ನಮ್ಮನ್ನು ಪೋಷಿಸಲಿ; ಆತನ ಕೃಪೆಯಿಂದ ನಮ್ಮ ಕೆಲಸಗಳು ಶಕ್ತಿಯುತವಾಗಿರಲಿ; ನಮ್ಮ ಅಧ್ಯಯನವು ತೇಜಸ್ಸಿನಿಂದ ಕೂಡಿರಲಿ; ನಮ್ಮಲ್ಲಿ ಶಾಂತಿಯೂ. ಸೌಹಾರ್ದವೂ ನೆಲಸಲಿ॥"

ಮೇಲೆ ಹೇಳಿದ ಶಾಂತಿ ಮಂತ್ರಗಳು ಸಾಮಾನ್ಯವಾಗಿ ಸಮಾಜದ ಶುಭೋತ್ಸವಗಳ ಆರಂಭದಲ್ಲಿ ಶಾಂತಿಗಾಗಿಯೂ ಸೌಹಾರ್ದತೆಗಾಗಿಯೂ ಘೋಷಿಸುವ ಮಂತ್ರಗಳು. ಇವುಗಳಲ್ಲಿ "ನಾವು" ಎನ್ನುವುದು ಎಷ್ಟು ವ್ಯಾಪಕವಾಗಿ ಉಚ್ಚರಿಸಲ್ಪಟ್ಟಿದೆ. ಇದು ರಾಷ್ಟ್ರಪ್ರಜ್ಞೆಯ ಒಂದು ಕುರುಹು. ಮೊದಲು 'ನಾವು' ಇಲ್ಲದೆ 'ನಾನು' ಇಲ್ಲ. ಆಮೇಲೆ 'ನಾನು' ಇಲ್ಲದೆ 'ನಾವು' ಇಲ್ಲ. ಇದೇ ವೇದತತ್ವಗಳ ಸಾರ. ಈ ತತ್ವಗಳನ್ನೇ ವಿಕೃತರೂಪಗೊಳಿಸಿದರೆ, ಆಧುನಿಕ 'ಕಮ್ಯುನಿಸಂ' ಆಗುತ್ತದೆ. ಆದರೆ, ಮಾನವನ ಮೂಲ ಸ್ವಭಾವಕ್ಕೆ ವಿರುದ್ಧವಾದ ಅಂಶಗಳನ್ನೊಳಗೊಂಡಿರುವುದರಿಂದ ಈ 'ಕಮ್ಯೂನಿಸಂ' ಸಫಲತೆಯನ್ನು ಪಡೆಯಲು ಸಾಧ್ಯವಿಲ್ಲ.

ನಿಮ್ಮ ಜೀವನವನ್ನು ಪವಿತ್ರಗೊಳಿಸಲು ಇಚ್ಛಿಸುವಿರಾ?
ನಿಮ್ಮ ಸಮೂಹಕ್ಕೆ ಒಳ್ಳೆಯದನ್ನು ಕೋರುವಿರಾ?
ಸಮಾಜದಲ್ಲಿ ಪ್ರೇಮಗಂಗೆಯನ್ನು ಹರಿಸಲು ಆಶಿಸುವಿರಾ?
ರಾಷ್ಟ್ರ ಮತ್ತು ಪ್ರಪಂಚದಲ್ಲಿ ಐಕಮತ್ಯ ಮತ್ತು ಶಾಂತಿಯನ್ನು ಸ್ಥಾಪಿಸಲು ಕೋರುವಿರಾ?

ಇವುಗಳಿಗೆಲ್ಲಾ **ವೇದಸಂದೇಶವು** ಸೂಕ್ತ ಮಾರ್ಗಗಳನ್ನು ಸೂಚಿಸುತ್ತದೆ.

ವೇದದ ಅನೇಕ ಮಂತ್ರಗಳು ಯಜ್ಞ, ಯಾಗಾದಿಗಳಿಗೆ ಸೀಮಿತವಾಗಿದ್ದರೂ, ಪ್ರಯೋಗವು ಯಾಜ್ಞಿಕವಾಗಿದ್ದರೂ. ಅರ್ಥವು ಆಧ್ಯಾತ್ಮಿಕವಾಗಿದ್ದರೂ, ಇವುಗಳು ಜೀವನದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ. ಕರ್ಮಕಾಂಡ ಪ್ರಧಾನವಾದ ಯಜುರ್ವೇದದಲ್ಲಿ ಸಮಾಜನೀತಿ, ರಾಜನೀತಿ. ಧರ್ಮನೀತಿ. ಶಿಲ್ಪಶಾಸ್ತ್ರ ಮುಂತಾದ ಅನೇಕ ವಿಷಯಗಳು ವರ್ಣಿಸಲ್ಪಟ್ಟಿವೆ. "ಯಾಗ" ಎಂಬ ಪದದ ಅರ್ಥವು ಬಹುವ್ಯಾಪಕವಾದುದು. ಇದಲ್ಲದೆ, ಕೇವಲ ರಾಜ್ಯಶಾಸನವನ್ನೇ ನಿಖರವಾಗಿ ಸೂಚಿಸುವ ಅನೇಕ ಮಂತ್ರಗಳು ವೇದಗಳ ಬ್ರಾಹ್ಮಣ ಗ್ರಂಥದಲ್ಲಿ ವಿಶೇಷವಾಗಿವೆ. ಇವುಗಳಲ್ಲಿ 'ಜನರಾಜ್ಯ' ಮತ್ತು ಗಣರಾಜ್ಯವಲ್ಲದೆ ಮುಖ್ಯವಾಗಿ ಎಂಟು ವಿಧವಾದ ರಾಜ್ಯವ್ಯವಸ್ಥೆಗಳು ಉಲ್ಲೇಖಿತವಾಗಿವೆ.—

ಸ್ವಸ್ತಿ । ಸಾಮ್ರಾಜ್ಯಂ, ಭೌಜ್ಯಂ, ಸ್ವರಾಜ್ಯಂ, ವೈರಾಜ್ಯಂ ಪಾರಮೇಷ್ಠ್ಯಂರಾಜ್ಯಂ ಮಹಾರಾಜ್ಯಂ, ಆಧಿಪತ್ಯಮಯಂ, ಸಮಂತ ಪರ್ಯಾಯೀ ಸ್ಯಾತ್ ಸಾರ್ವಭೌಮಃ ಸರ್ವಾಯುಷಃ ಆಂತಾದ್ ಆ ಪರಾರ್ಧಾತ್, ಪೃಥಿವ್ಯೈ ಸಮುದ್ರಪರ್ಯಂ-ತಾಯಾ ಏಕರಾಡ್ ಇತಿ.

[ಐತರೇಯಬ್ರಾಹ್ಮಣ]

'ರಾಜ್ಯಶಾಸನ'ದ ನಿರ್ಣಯವನ್ನು ಇಷ್ಟು ಮುಖ್ಯವಾಗಿ ವಿವರಿಸಬೇಕಾದರೆ, ವೈದಿಕ ಋಷಿಗಳ ತಪಸ್ಸು ಇದಕ್ಕೋಸ್ಕರವಾಗಿ ವಿಶೇಷವಾಗಿ ಆಚರಿಸಲ್ಪಟ್ಟಿರಬೇಕು. ಇದು ಅವರ ಲೋಕಕಲ್ಯಾಣ ಧ್ಯೇಯವನ್ನು ಸ್ಪಷ್ಟಪಡಿಸುತ್ತದೆ.

"ಪೃಥಿವ್ಯೈ ಸಮುದ್ರಪರ್ಯಂತಾಯಾಃ ಏಕರಾಡ್"

ಪೃಥ್ವಿಯಲ್ಲಿ ಏಕಮೇವ ರಾಷ್ಟ್ರ ಶಾಸನ, ಏಕರಾಷ್ಟ್ರ ಪರಿವಾರವಿರಲಿ ಎಂಬ ತತ್ತ್ವವನ್ನು ಘೋಷಿಸುವ ಮಂತ್ರದ ಧ್ಯೇಯವು ಎಷ್ಟು ಉನ್ನತೋನ್ನತ ರಾಷ್ಟ್ರ ಪ್ರಜ್ಞೆಯ ಆಧುನಿಕತೆಯನ್ನು ಸೂಚಿಸುತ್ತದೆ.

ಮೇಲಿನ ಮಂತ್ರದಲ್ಲಿ ಸೂಚಿತವಾಗಿರುವ ಎಂಟುಬಗೆಯ ರಾಜ್ಯವ್ಯವಸ್ಥೆಯನ್ನು ಸೂಕ್ಷ್ಮವಾಗಿ ವಿವರಿಸೋಣ

1. **ಸಾಮ್ರಾಜ್ಯ :** ಒಬ್ಬ ಸದ್ಗುಣಿ ಮತ್ತು ಸಮರ್ಥ ರಾಜನ ಶಾಸನಕ್ಕನುಗುಣವಾಗಿ ಅನೇಕ ರಾಜರುಗಳು ಸುವ್ಯವಸ್ಥಿತರಾಗಿ ತಮ್ಮ ತಮ್ಮ ಪ್ರಾಂತಗಳನ್ನು ಪಾಲಿಸುವುದು.

2. **ಭೌಜ್ಯ :** "ಭುಜ್ – ಪಾಲನ ವ್ಯವಹಾರಯೋಃ"
(ಪಾಣಿನಿ) ಭೌಗೋಲಿಕ ಮರ್ಯಾದೆಯನ್ನನುಸರಿಸಿ ಪರಸ್ಪರ ಆಕ್ರಮಣಮಾಡದೆ ಸ್ನೇಹ ಸೌಹಾರ್ದತೆಯುಳ್ಳ ರಾಜ್ಯ ಶಾಸನ. ಪ್ರಜೆಗಳ ಆಂತರಿಕ ಮತ್ತು ಬಾಹ್ಯ ರಕ್ಷಣೆ ಮತ್ತು ಸುಖವೇ ರಾಜನ ಕರ್ತವ್ಯ.

3. **ವೈರಾಜ್ಯ :** ರಾಜನಿಲ್ಲದ ದೇಶ. ಅಥವಾ ಪ್ರಜಾಪ್ರಭುತ್ವ. ಜನಗಳು ತಮ್ಮ ಜಾತಿಗನುಸಾರವಾಗಿ ತಾವೇ ನಿರ್ಮಿಸಿಕೊಂಡ ಕಾನೂನಿನ ಪ್ರಕಾರ ವ್ಯವಹರಿಸುವವರು.

4. **ಮಹಾರಾಜ್ಯ:** ಅನೇಕ ಚಿಕ್ಕ ಚಿಕ್ಕ ಸಂಸ್ಥಾನಗಳು ಸ್ವ ಇಚ್ಛೆಯಿಂದ ಒಂದು ಶಾಸನಕ್ಕೊಳಗಾಗಿರುವ ಕೇಂದ್ರೀಕೃತ ಆಡಳಿತ. ಈ "ರಾಷ್ಟ್ರಕೂಟ" ವ್ಯವಸ್ಥೆಯಲ್ಲಿ ಸಮಷ್ಟಿ ಹಿತವೇ ಧ್ಯೇಯವಾಗಿರುವುದು.

5. **ಆಧಿಪತ್ಯಮಯ:** ಅಧಿಕಾರಿಗಳ ಆಧೀನವಾಗಿರುವ ಸಂವಿಧಾನಃ (Beaurocracy)

6. **ಸಮಂತಪರ್ಯಾಯೀ:** ಪ್ರಾಂತೀಯ ಸ್ವಾತಂತ್ರ್ಯವುಳ್ಳ ಮತ್ತು ಒಂದೇ ಶಾಸನಕ್ಕೆ ಒಳಪಟ್ಟ ರಾಷ್ಟ್ರಕೂಟಗಳು.

7. **ಪಾರಮೇಷ್ಠ್ಯರಾಜ್ಯ:** ಭಗವಂತನ ಹೆಸರಿನಲ್ಲಿ ರಾಜ್ಯವಾಳುವಿಕೆ ಮತ್ತು ರಾಜ್ಯಸಂವಿಧಾನ. ಉದಾ: ಕೇರಳದಲ್ಲಿ ಹಿಂದೆ ಇದ್ದ ರಾಜರುಗಳು ಶ್ರೀ ಅನಂತ ಪದ್ಮನಾಭನ ಹೆಸರಿನಲ್ಲಿ ರಾಜ್ಯವಾಳುತ್ತಿದ್ದರು.

ಸ್ವರಾಜ್ಯ

ಆ ಯದ್ ವಾಮೀಯ ಚಕ್ಷಸಾ
ಮಿತ್ರವಯಂ ಚ ಸೂರಯಃ ।
ವ್ಯಚಿಷ್ಠೇ ಬಹುಪಾಯ್ಯೇ
ಯತೇಮಹಿ ಸ್ವರಾಜ್ಯೇ ॥

[ಋಗ್ವೇದ. ಸಂಹಿತೆ 5–66–6]

"ವಿಶಾಲ ದೃಷ್ಟಿಯುಳ್ಳವನೇ, ಮಿತ್ರಭಾವದಿಂದ ವ್ಯವಹರಿಸುವವನೇ ಮತ್ತು ವಿದ್ವಾಂಸರಾದ ನಾವೆಲ್ಲರೂ ಸಂಘಟಿತರಾಗಿ, ವ್ಯಾಪಕವಾದ ಬಹುಮತದಿಂದ ನಡೆಸಲ್ಪಡುವ ಸ್ವರಾಜ್ಯದ ಹಿತಕ್ಕಾಗಿ ಪ್ರಯತ್ನಿಸೋಣ"

ಬಹುಜನರ ಸಮ್ಮತಿಯಿಂದ ವ್ಯವಹರಿಸಲ್ಪಡುವ ಸರ್ವತೋಮುಖವಾದ ಕಲ್ಯಾಣಕ್ಕಾಗಿ ಆಚರಿಸುವ ರಾಜ್ಯವಿಧಾನ. ಇಲ್ಲಿ 'ಸ್ವರಾಜ್ಯ' ಎಂಬ ಪದಕ್ಕೆ ಸ್ವ – ರಾಜ್ಯ ಆತ್ಮ ಸಿದ್ಧಿ, ಆತ್ಮ ಪ್ರಭುತ್ವ, ಜಿತೇಂದ್ರಿಯತ್ವ ಎಂದು ಆಧ್ಯಾತ್ಮಿಕ ಅರ್ಥವೂ ಆಗುತ್ತದೆ. ಜ್ಞಾನಿಗಳ, ಸುಸಂಸ್ಕೃತರ ಮತದಿಂದ ನಡೆಸಲ್ಪಡುವ ರಾಜ್ಯವು ನಿಜವಾಗಿಯೂ "ಸ್ವರಾಜ್ಯ" ಎನಿಸಿಕೊಳ್ಳುತ್ತದೆ. ಆದ್ದರಿಂದಲೇ, ಋಷಿಗಳು ವೈಯಕ್ತಿಕ ಪವಿತ್ರತೆ, ಬುದ್ಧಿಶಕ್ತಿಗಳನ್ನು ಕೋರುತ್ತಾರೆ. ಪೂರ್ಣಪ್ರಜ್ಞಾವಂತರಿಂದಲೇ ಅತ್ಯುತ್ತಮ ಸಮಾಜ ಮತ್ತು ರಾಷ್ಟ್ರಗಳು ನಿರ್ಮಾಣಗೊಳ್ಳುತ್ತವೆ – ಆದ್ದರಿಂದಲೇ

ಓಂ ತತ್ ಸವಿತುರ್ವರೇಣ್ಯಂ ಭರ್ಗೋದೇವಸ್ಯ
ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ॥

[ಋಗ್ವೇದ ಸಂ. 3·62–10]

ಎಂಬ ಗಾಯತ್ರಿ ಮಂತ್ರವು ಮಹಾವ್ಯಕ್ತಿಗಳನ್ನು ಸೃಷ್ಟಿಮಾಡುವ ಒಂದು ಮಹಾನ್ ಸ್ಫೂರ್ತಿ.

ವೇದಗಳಲ್ಲಿ 'ರಾಷ್ಟ್ರ' ಎಂಬುದನ್ನು ವಿಶಾಲ ದೃಷ್ಟಿಯಿಂದ ನೋಡುತ್ತಿದ್ದರು. ಕೇವಲ ಭೂಗೋಳಿಕ ಕನಿಷ್ಠ ಎಲ್ಲೆಯನ್ನು ಮೀರಿ ವಿಶ್ವವ್ಯಾಪಕವಾಗಿ ವ್ಯವಹರಿಸಿರುವುದಕ್ಕೆ ಒಂದು ಉತ್ತಮ ನಿದರ್ಶನ – ಅಥರ್ವವೇದದ ಪೃಥ್ವೀಸೂಕ್ತದಲ್ಲಿ ಋಷಿಗಳು ಸಮಸ್ತ ಭೂಮಿಯನ್ನು ಮಾತೃಭಾವದಿಂದ ಸುಂದರ ಶೈಲಿಯಲ್ಲಿ ವರ್ಣಿಸುವಿಕೆ.

ಮಾತಾ ಭೂಮಿಃ ಪುತ್ರೋ ಅಹಂ ಪೃಥಿವ್ಯಾಃ ।
ಪರ್ಜನ್ಯಃ ಪಿತಾಸಉನಃ ಪಿಪರ್ತು ॥

[ಅಥರ್ವವೇದ ಸಂ. 12.1.12]

ಭೂಮಿಯೇ ತಾಯಿಯು, ನಾನು ಅವಳ ಮಗನು.
ಅಥರ್ವವೇದವು ಜ್ಞಾನ, ಕರ್ಮ ಮತ್ತು ಉಪಾಸನೆ ಇವುಗಳ ಸುಂದರ ಸಮ್ಮಿಶ್ರಣ ದಿಂದ ಕೂಡಿದೆ. ಜೀವನವೆಂಬ ಸಂಗ್ರಾಮದಲ್ಲಿ ಸಫಲತೆಯನ್ನು ಪಡೆಯಲು ಈ ವೇದವು ಅತ್ಯಂತ ಉಪಯುಕ್ತವಾದದ್ದು. ರಾಷ್ಟ್ರ ಮತ್ತು ವಿಶ್ವದಲ್ಲಿ ಶಾಂತಿಯನ್ನು ಸ್ಥಾಪಿಸಲು ಅನೇಕ ಮಾರ್ಗಗಳು ನಿರೂಪಿಸಲ್ಪಟ್ಟಿವೆ.

ಮೇಲಿನ ಶ್ಲೋಕಗಳ ಸಂಕ್ಷಿಪ್ತ ಸಮೀಕ್ಷೆಯಿಂದ ತತ್ಕಾಲಿಕ 'ರಾಜತಂತ್ರ' ಮತ್ತು ಸಮಾಜ ವ್ಯವಸ್ಥೆ ರಾಷ್ಟ್ರೀಯ ಜೀವನ ತಿಳಿದುಬರುತ್ತದೆ. ರಾಷ್ಟ್ರಸಂಘಟನೆ, ರಾಷ್ಟ್ರೋತ್ಥಾನ ಇತ್ಯಾದಿ ಅವಶ್ಯ ಗುಣಗಳು ಸಮಾಜ ಸಿದ್ಧಾಂತದ ಅಡಿಗಲ್ಲುಗಳಾಗಿದ್ದುವು. ಪ್ರಾಂತೀಯ ಭಾವನೆಯನ್ನೇ ರಾಷ್ಟ್ರಪ್ರಜ್ಞೆಯೆಂದು ನಾವು ತಿಳಿದಿರುವಂತೆ ಅಲ್ಲದೆ, ಅತ್ಯುತ್ತಮವಾದ ವಿಶ್ವರಾಷ್ಟ್ರ ಕಲ್ಪನೆಯನ್ನು ಪ್ರಪಂಚಕ್ಕೆ ಅರಿವುಮಾಡಿಕೊಟ್ಟಿದ್ದಾರೆ ಋಷಿಗಳು. ಪರಸ್ಪರ ದ್ವೇಷಾಸೂಯೆಗಳಿಂದುಂಟಾಗುವ ಸಂಘರ್ಷಣೆಯ ಪರಂಪರೆಯ ನಿವಾರಣೆಗೆ ಮತ್ತು "ವ್ಯಷ್ಟಿ" ಸ್ವಾರ್ಥದಿಂದ 'ಸಮಷ್ಟಿ' ಸ್ವಾರ್ಥ ಜಾಗೃತಗೊಳಿಸುವ ಒಂದು ಮಂತ್ರ

ಸಮಾನೀವ ಆಕೂತಿಃ
ಸಮಾನಾ ಹೃದಯಾನಿ ವಃ ।
ಸಮಾನಮಸ್ತು ನೋ ಮನೋ
ಯಥಾವಃ ಸುಸಹಾಸತಿ ॥ [ಋ. ಸಂ. 10-191-4]

"ನಿಮ್ಮಗಳ ಇಚ್ಛೆಯು ಒಂದಾಗಿರಲಿ,
ನಿಮ್ಮೆಲ್ಲರ ಹೃದಯಗಳೂ ಒಂದಾಗಿರಲಿ,
ನಿಮ್ಮ ಮನಸ್ಸೆಲ್ಲಾ ಒಂದಾಗಿರಲಿ,
ನಿಮ್ಮೆಲ್ಲರಲ್ಲೂ ಸೌಹಾರ್ದತೆಯಿರಲಿ ॥

ಹೀಗೆ ರಾಷ್ಟ್ರದ ಅಭ್ಯುದಯವನ್ನು ಕೋರುವ ಸಂಘಟನಾ ಶಕ್ತಿಯಲ್ಲಿ 'ವ್ಯಷ್ಟಿ' ಆತ್ಮವು 'ವಿಶ್ವಾತ್ಮಾ' ಅಥವಾ ಸಮಷ್ಟಿ ಆತ್ಮದಲ್ಲಿ ಲೀನವಾಗುತ್ತದೆ. "**ಅಖಂಡ ಆರ್ಯರಾಜ್ಯ**" ವನ್ನು ಮತ್ತು ಐಕ್ಯತೆಯನ್ನು ಸಾರುವ ಬ್ರಾಹ್ಮಣವೂ ಮತ್ತು ಋಗ್ವೇದದ "ಸಾಮನಸ್ಯ" ಸೂಕ್ತಗಳು ಅತ್ಯುತ್ತಮ ರಾಷ್ಟ್ರಪ್ರಜ್ಞೆಯನ್ನು ತಿಳಿಸುವುದಲ್ಲವೆ?

ಶಾರೀರಿಕವಾಗಿ. ಮಾನಸಿಕವಾಗಿ. ಬೌದ್ಧಿಕವಾಗಿ. ಸಾಮಾಜಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಮುನ್ನಡೆಯಲು. ಅಮೂಲ್ಯವಾದ ಕೊಡುಗೆ ಈ ವೇದಗಳು.

ಈ ಲೇಖನವನ್ನು ಯಜುರ್ವೇದ ಸಂಹಿತೆಯಲ್ಲಿರುವ ವೈದಿಕ ರಾಷ್ಟ್ರಗೀತೆಯೊಂದಿಗೆ ಮುಕ್ತಾಯಗೊಳಿಸೋಣ–

ಆ ಬ್ರಹ್ಮನ್ ಬ್ರಾಹ್ಮಣೋ ವರ್ಚಸೀ ಜಾಯತಾಮ್ ।
ಆ ರಾಷ್ಟ್ರೇ ರಾಜನ್ಯಃ ಶೂರ ಇಷವ್ಯೋ ಅತಿವ್ಯಾಧೀ ಮಹಾರಥೋ ಜಾಯತಾಮ್ ।
ದೋಗ್ಧ್ರೀ ಧೇನುರ್ವೋಢಾನಡ್ವಾನಾಶುಃ ಸಪ್ತಿಃ ಪುರಂಧ್ರಿರ್ಯೋಷಾ
ಜಿಷ್ಣು ರಥೇಷ್ಠಾಃ ಸಭೇಯೋ ಯುವಾಸ್ಯ ಯಜಮಾನಸ್ಯ ವೀರೋಜಾಯತಾಮ್
ನಿಕಾಮೇ ನಿಕಾಮೇ ನಃ ಪರ್ಜನ್ಯೋ ವರ್ಷತು ಫಲವತ್ಯೋ ನ ಓಷಧಯಃ ಪಚ್ಯಂತಾಮ್
ಯೋಗಕ್ಷೇಮೋ ನಃ ಕಲ್ಪತಾಮ್ ॥

[ಯಜು. ಸಂ. 33–33].

"ಹೇ ಬ್ರಹ್ಮನ್! ನಮ್ಮ ರಾಷ್ಟ್ರದಲ್ಲಿ. ವಿದ್ವಾಂಸರುಗಳು ತೇಜೋಯುಕ್ತರಾಗಲಿ,
ವೀರರು ಆಯುಧಕುಶಲಿಗಳಾಗಿಯೂ, ಸಾಹಸಿಗಳಾಗಿಯೂ ಆಗಲಿ.
ಸಮೃದ್ಧಿಯಾದ ಕ್ಷೀರ ಸಂಪತ್ತುಳ್ಳ ಗೋ ಸಮೂಹವು ವೃದ್ಧಿಸಲಿ.
ಅಶ್ವಗಳು, ವೃಷಭಗಳು ಕಾರ್ಯಶಕ್ತವಾಗಲಿ,
ರಾಷ್ಟ್ರದ ನಾರಿಯರು ಸರ್ವಲಕ್ಷಣ ಸಂಪನ್ನರಾಗಿಯೂ, ಪವಿತ್ರರಾಗಿಯೂ ವರ್ಧಿಸಲಿ,
ಶೂರರೂ, ಸತ್ಕರ್ಮಿಗಳೂ, ಜಿತೇಂದ್ರಿಯರೂ, ಸುಶಿಕ್ಷಿತರೂ, ವಿವೇಕಯುತರಾಗಿ
ನಮ್ಮ ರಾಷ್ಟ್ರದ ಯುವಕರು ವರ್ಧಿಸಲಿ,
ಕಾಲಕ್ಕೆ ಸರಿಯಾಗಿ ಮಳೆಯಾಗಲಿ,
ಫಲವತ್ತಾದ ಸಸ್ಯ ಸಮೃದ್ಧಿಯುಂಟಾಗಲಿ.
ಸರ್ವರಿಗೂ ಕ್ಷೇಮವಾಗಲಿ.
ಓಂ ಶಾಂತಿಃ ಶಾಂತಿಃ ಶಾಂತಿಃ !

[ಯಜು.ವೇದ ಸಂ. 33–33]

'ಕಾರಕವಿಚಾರ'ದ ಬಗ್ಗೆ ಒಂದು ಸ್ಪಷ್ಟೀಕರಣ

ಕೆ. ಟಿ. ಪಾಂಡುರಂಗಿ

'ಸಾಧನೆ'ಯ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಕವಿರಾಜಮಾರ್ಗದಲ್ಲಿ ಕಾರಕ ವಿಚಾರ' ಎಂಬ ಲೇಖನದಲ್ಲಿ ಡಾ. ವಿ. ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ನನ್ನ ಕೆಲವು ಅಭಿಪ್ರಾಯಗಳನ್ನು ಉಲ್ಲೇಖಿಸಿ ವಿಮರ್ಶಿಸಿದ್ದಾರೆ. ಅವರು ಉಲ್ಲೇಖಿಸಿದ ನನ್ನ ಲೇಖನದ ಅವತರಣಿಕೆಗಳು ಅಪೂರ್ಣವೂ ತಪ್ಪಾದವೂ ಆದುದರಿಂದ ಅವರ ವಿಮರ್ಶೆಯು ನಿರಾಧಾರವಾಗಿದೆ. ಆದುದರಿಂದ ಈ ಅವತರಣಿಕೆಗಳ ಪೂರ್ತಿ ಹಾಗೂ ಸರಿಯಾದ ಪಾಠವನ್ನು ಈಕೆಳಗೆ ಕೊಟ್ಟಿದ್ದೇನೆ. ಇದರಿಂದ ಅವರ ವಿಮರ್ಶೆ ನಿರಾಧಾರವಾದುದೆಂದು ತಾನೇ ಸ್ಪಷ್ಟವಾಗುವುದು.

'Influence of Sanskrit and Prakrit Grammars on Kannada Grammarians', ಎಂಬ ನನ್ನ ಲೇಖನದಲ್ಲಿ ಕಾರಕ ವಿಚಾರದಲ್ಲಿ ನಾನು ಬರೆದಿರುವ ಪ್ರಕೃತಕ್ಕೆ ಸಂಬಂಧಿಸಿದ ಅಂಶಗಳು ಹೀಗಿವೆ:

The influence of Sanskrit Grammar is much more visible in respect of the scheme of Karakas and Vibhaktis (Case terminations) than any other aspect of Grammar. In determining the functions of words forming a sentence particularly their relation with the verb, the scheme of Karakas is readily adopted without independently examining the habit sentence-formation in Kannada, so also the number, names and the pattern of case terminations. This seems to have happened even before **Kavirajamarga.**

In **Kavirajamarga**, Nripatunga enumerates six Karakas and seven Vibhaktis. He begins his enumeration with Karmakaraka instead of Kartrikaraka. This is because the order followed is that of Vibhaktis. According to Sanskrit Grammarians, the first case-termination does not convey any

Karaka, the second conveys Karma, the third conveys Karana and Karta, and so on. The verbal termination conveys Karta in an active construction and Karma in a passive construction. Therefore, the first case-termination is added to the words in these constructions purely for technical reasons. By accepting the whole of the scheme of Karaka as in Sanskrit, the Kannada Grammarians have sacrificed a good deal of the genius of Kannada language in sentence-formation.

ಈ ಅವತರಣಿಕೆಯ ಬಹುಭಾಗವನ್ನು ಶ್ರೀ ಎಂ. ವಿ. ಸೀತಾರಾಮಯ್ಯನವರು ತಾವು ಸಂಪಾದಿಸಿದ ಕವಿರಾಜಮಾರ್ಗದ ಅಡಿಟಿಪ್ಪಣಿಯಲ್ಲಿ (ಪು. 167–168) ಕೊಟ್ಟಿದ್ದಾರೆ.

ಈ ಅವತರಣಿಕೆಯಲ್ಲಿ ನಾನು ಸಂಸ್ಕೃತದಲ್ಲಿ 'ಕರ್ತೃವು' ಕಾರಕವಲ್ಲವೆಂದು ಹೇಳಿದ್ದೇನೆಂಬ ಅಭಿಪ್ರಾಯವನ್ನು ಡಾ. ಕೃಷ್ಣಸ್ವಾಮಿ ಅಯ್ಯಂಗಾರರು ಯಾವ ವಾಕ್ಯದಿಂದ ಪಡೆದರೋ ಅರ್ಥವಾಗುವುದಿಲ್ಲ. ಸಂಸ್ಕೃತದಲ್ಲಿ ಪ್ರಥಮಾ ವಿಭಕ್ತಿಯು ಕರ್ತೃತ್ವವನ್ನು ಬೋಧಿಸುವುದಿಲ್ಲ. ಕರ್ತರಿ ಪ್ರಯೋಗದಲ್ಲಿ ಆಖ್ಯಾತವೂ ಕರ್ಮಣಿ ಪ್ರಯೋಗದಲ್ಲಿ ತೃತೀಯಾ ವಿಭಕ್ತಿಯೂ ಕರ್ತೃತ್ವವನ್ನು ಬೋಧಿಸುವುವು ಎಂದು ಹೇಳಿರುವುದರಿಂದ ಕರ್ತೃಕಾರಕವೇ ಇಲ್ಲವೆಂದು ಹೇಳಿದಂತಾಗಲಿಲ್ಲ. ಪ್ರಥಮಾ ವಿಭಕ್ತಿಯು ಕರ್ತೃತ್ವ ವಾಚಕವಲ್ಲ ಎಂದಿಷ್ಟು ಮಾತ್ರ ಸ್ಪಷ್ಟಪಡಿಸಿದಂತಾಗುವುದು. ಆದುದರಿಂದ ನಾನು ಸಂಸ್ಕೃತದಲ್ಲಿ ಕರ್ತೃಕಾರಕವಿಲ್ಲವೆಂದು ಹೇಳಿದ್ದೇನೆಂದು ತಪ್ಪಾಗಿ ಗ್ರಹಿಸಿ ಕರ್ತೃಕಾರಕ ವಿದೆಯೆಂದು ಸಮರ್ಥಿಸಲು ವಿಸ್ತಾರವಾದ ವಿವೇಚನೆಯನ್ನು ಮಾಡಿರುವುದು ಅಪ್ರಕೃತ ವಿಮರ್ಶೆಯೇ ಆಗಿದೆ. ಮೇಲಿನ ನನ್ನ ವಾಕ್ಯಗಳ ಅನುವಾದವನ್ನು ಶ್ರೀ ಎಂ. ವಿ. ಸೀತಾರಾಮಯ್ಯನವರು ಕೊಟ್ಟಿರುವರು. ಈ ಅನುವಾದದಲ್ಲಿ ಅವರು 'ಮಾರ್ಗಕಾರನು ಕರ್ತೃವನ್ನು ಕಾರಕಾನುಕ್ರಮದಲ್ಲಿ ಸೇರಿಸಿಲ್ಲವೆಂದು ಶ್ರೀ ಕೆ. ಟಿ. ಪಾಂಡುರಂಗಿಯವರು ಅಭಿಪ್ರಾಯಪಟ್ಟಿದ್ದಾರೆ' ಎಂದು ಹೇಳಿದ್ದಾರೆ. ಇದು 'He begins his enumeration with Karmakaraka instead of a Kartrikaraka' ಎಂಬ ವಾಕ್ಯದ ಅನುವಾದವಾಗಿದೆ. ಇದರಿಂದ ಮಾರ್ಗಕಾರನು ಕರ್ಮಕಾರಕವನ್ನು ಮೊದಲು ಹೇಳಿದನೆಂದು ಅರ್ಥವಾಗುತ್ತದೆಯೇ ಹೊರತು ಕರ್ತೃಕಾರಕವನ್ನು ಬಿಟ್ಟುಬಿಟ್ಟನೆಂದು ಅರ್ಥವಾಗುವುದಿಲ್ಲ. 'ಹೀಗೆ ಕರ್ತೃಕಾರಕವಿದ್ದರೂ ಅದನ್ನು ಮೊದಲು ಹೇಳದೆ ಕರ್ಮಕಾರಕವನ್ನು ಮೊದಲು ಹೇಳಲು ಕಾರಣವನ್ನು ಮುಂದಿನ ವಾಕ್ಯದಲ್ಲಿ ಕೊಡಲಾಗಿದೆ: 'This is because the order followed is that of Vibhaktis' ಮಾರ್ಗಕಾರನು ವಿಭಕ್ತಿಕ್ರಮವನ್ನನುಸರಿಸಿ ಇಲ್ಲಿ ಕಾರಕಗಳ ನಿರೂಪಣೆಮಾಡಿರುವುದ

ರಿಂದಲೂ ಸಂಸ್ಕೃತದಲ್ಲಿ ಪ್ರಥಮಾ ವಿಭಕ್ತಿಯು ಕರ್ತೃತ್ವವಾಚಕವಲ್ಲವಾದ್ದರಿಂದಲೂ ದ್ವಿತೀಯಾ ವಿಭಕ್ತಿವಾಚ್ಯವಾದ 'ಕರ್ಮ'ದಿಂದ ಕಾರಕಗಳ ನಿರೂಪಣೆಯನ್ನು ಆರಂಭಿಸಿರುವನು ಎಂಬುದು ನನ್ನ ಅಭಿಪ್ರಾಯ. ಕರ್ತೃಕಾರಕವೇ ಇಲ್ಲ ಎಂಬ ಅಭಿಪ್ರಾಯ ಉಂಟಾಗಲು ಈ ವಾಕ್ಯಗಳಲ್ಲಿ ಅವಕಾಶವೇ ಇಲ್ಲ. ಶ್ರೀ ಸೀತಾರಾಮಯ್ಯನವರ ಅಭಿಪ್ರಾಯ ಏನೇ ಇದ್ದರೂ ಅವರು ನನ್ನ ವಾಕ್ಯಗಳ ಮೂಲಪಾಠವನ್ನು ಇಂಗ್ಲೀಷಿನಲ್ಲಿ ಅಡಿಟಿಪ್ಪಣಿಯಲ್ಲಿ ಪೂರ್ತಿಯಾಗಿ ಕೊಟ್ಟಿರುವುದರಿಂದ ಡಾ. ಕೃಷ್ಣಸ್ವಾಮಿ ಅಯ್ಯಂಗಾರ್ ಅವರಿಗೆ ನಾನು ಸಂಸ್ಕೃತದಲ್ಲಿ ಕರ್ತೃಕಾರಕ ಇಲ್ಲವೆಂದು ಹೇಳುವುದಿಲ್ಲ. ಆದರೆ ಪ್ರಥಮಾ ವಿಭಕ್ತಿಯು ಸಂಸ್ಕೃತದಲ್ಲಿ ಕರ್ತೃತ್ವವಾಚಕವಲ್ಲ ಎಂದು ಹೇಳುತ್ತಿದ್ದೇನೆ ಎಂಬುದು ಸ್ಪಷ್ಟವಾಗಬೇಕಾಗಿತ್ತು.

ಕಾರಕಗಳನ್ನು ಹೇಳಲು ಹೊರಟ ಮಾರ್ಗಕಾರನು ವಿಭಕ್ತಿ ಕ್ರಮವನ್ನು ಏಕೆ ಅನುಸರಿಸಿದನು? ಎಂದು ಡಾ. ಕೃಷ್ಣಸ್ವಾಮಿ ಅಯ್ಯಂಗಾರರು ಕೇಳುತ್ತಾರೆ. ಇದಕ್ಕೆ 'ಕಾರಕಯುಕ್ತ ವಿಭಕ್ತ್ಯನುಕ್ರಮಮ್' ಎಂಬ ಮಾರ್ಗಕಾರನ ಮಾತೇ ಉತ್ತರ ಕೊಡುತ್ತದೆ. ಈ ಮಾತಿಗೆ 'ಕಾರಕ ಮತ್ತು ವಿಭಕ್ತಿ ಎಂಬ ಅರ್ಥ ಅವನಿಗೆ ವಿವಕ್ಷಿತವಾಗಿರಬೇಕು' ಎಂದು ಡಾ. ಕೃಷ್ಣಸ್ವಾಮಿ ಅಯ್ಯಂಗಾರರು ಒಂದು ಕಡೆ ಹೇಳುತ್ತಾರೆ. 'ಈ ಪದ್ಯದಲ್ಲಿ ಕಾರಕಗಳನ್ನೂ ವಿಭಕ್ತಿಗಳನ್ನೂ ಕ್ರಮವಾಗಿ ತೋರಿಸಿದ್ದೇನೆ.ಎಂಬುದಿಷ್ಟೇ ಈ ಮಾತಿನ ಅರ್ಥವೆಂದು ಗ್ರಹಿಸಬೇಕು' ಎಂದು ಇನ್ನೊಂದು ಕಡೆ ಹೇಳುತ್ತಾರೆ. ಇವೆರಡು ಮಾತಿನಲ್ಲಿಯೂ ಕಾರಕ ಮತ್ತು ವಿಭಕ್ತಿ ಇವೆರಡನ್ನೂ ಮಾರ್ಗಕಾರನು ಇಲ್ಲಿ ವಿವರಿಸಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ವಿಭಕ್ತಿಗಳು ಕಾರಕಕ್ಕೆ ವಾಚಕವಾದವುಗಳು. ಕಾರಕಗಳು ವಾಚ್ಯವಾದುವುಗಳು. ಆದುದರಿಂದ ಇವೆರಡನ್ನೂ ಹೇಳಬೇಕೆಂದಿರುವ ಈ ಪದ್ಯದಲ್ಲಿ ವಾಚಕಗಳಾದ ವಿಭಕ್ತಿಗಳ ಕ್ರಮದಲ್ಲಿ ವಾಚ್ಯಗಳಾದ ಕಾರಕಗಳನ್ನು ಹೇಳುತ್ತ ಹೋದರೆ ತಪ್ಪೇನು? ಈ ವಿವರಣೆಯಲ್ಲಿ 'ಕರ್ಮಕರಣಾದಿಕದಿಂ' ಎಂದು ಹೇಳಿದ್ದೂ ಸರಿಹೋಗುತ್ತದೆ. ಪ್ರಥಮ ಕಾರಕವಿಭಕ್ತಿಯಲ್ಲ (ಸಂಸ್ಕೃತದಲ್ಲಿ), ದ್ವಿತೀಯೆ ಕರ್ಮವಾಚಕ. ತೃತೀಯೆ ಕರಣ ಮತ್ತು ಕರ್ತೃವಾಚಕ ಇತ್ಯಾದಿಯಾಗಿರುವುದರಿಂದ 'ಕರ್ಮಕರಣಾದಿಕದಿಂ' ಎಂಬುದು ಅಷ್ಟೇನೂ ಅನುಚಿತವಾಗುವುದಿಲ್ಲ.

ನನ್ನ ಆ ಲೇಖನದ ಮುಖ್ಯ ಉದ್ದೇಶವು ಮಾರ್ಗಕಾರನು ಎಷ್ಟು ಕಾರಕಗಳನ್ನು ಒಪ್ಪುವನು? ಕರ್ತೃವನ್ನು ಬಿಡುವನೇ? ಷಷ್ಠಿಯನ್ನು ಕಾರಕ ವಿಭಕ್ತಿಯೆನ್ನುವನೇ? ಇತ್ಯಾದಿ ಅಂಶಗಳನ್ನು ವಿವೇಚಿಸುವುದಾಗಿರಲಿಲ್ಲ. ಕನ್ನಡ ವ್ಯಾಕರಣದ ಮೇಲೆ ಸಂಸ್ಕೃತ ಮತ್ತು ಪ್ರಾಕೃತ ವ್ಯಾಕರಣಗಳ ಪ್ರಭಾವವನ್ನು ಸಾಮಾನ್ಯವಾಗಿ ವಿವೇಚಿಸುವುದೇ ಆಗಿತ್ತು. ಆ ಸಂದರ್ಭದಲ್ಲಿ ಕಾರಕಗಳ ವಿಚಾರ ಬಂದಾಗ ಮೇಲೆ ಕೊಟ್ಟ ಅವತರಣಿಕೆಗಳನ್ನು ಸಂಸ್ಕೃತ ಪ್ರಭಾವದ ವಿವರಣೆಯಾಗಿ ಬರೆದಿರುವೆನು. ಅವುಗಳನ್ನು ಶ್ರೀ ಸೀತಾರಾಮಯ್ಯನವರು ತಮ್ಮ ವಿವೇಚನೆಯಲ್ಲಿ ತಮಗೆ ಸರಿತೋರಿದಂತೆ

ಉಪಯೋಗಿಸಿಕೊಂಡಿರುವರು. ಅವರು ನನ್ನ ವಾಕ್ಯಗಳ ಪ್ರತಿಪಾತವನ್ನು ಅಲ್ಲಿಯೇ ಕೊಟ್ಟಿರುವುದರಿಂದ ಆ ನನ್ನ ಮಾತುಗಳು ಅವರ ನಿಲುಮೆಗೆ ಸಹಾಯಕವೇ ಅಲ್ಲವೇ ಎಂಬುದು ಅಲ್ಲಿಯೇ ಸ್ಪಷ್ಟವಾಗುವುದು. ಅವರ ನಿಲುಮೆಯನ್ನು ಒಪ್ಪಿಕೊಳ್ಳುವುದು ಅಥವಾ ಬಿಡುವುದು ಆ ಪ್ರಶ್ನೆಯನ್ನೇ ಎತ್ತಿಕೊಂಡು ವಿವೇಚಿಸುವ ಕನ್ನಡ ವಿದ್ವಾಂಸರಿಗೆ ಸೇರಿದ್ದು. ಆದರೆ ಸಂಸ್ಕೃತದಲ್ಲಿ ಕರ್ತೃಕಾರಕವೇ ಇಲ್ಲವೆಂದು ನಾನು ಹೇಳಿದ್ದೇನೆಂದು ಆರೋಪಿಸುವುದಕ್ಕೆ ಆ ವಾಕ್ಯಗಳಲ್ಲಿ ಎಷ್ಟೂ ಅವಕಾಶವಿಲ್ಲ. ಶ್ರೀ ಸೀತಾರಾಮಯ್ಯನವರು ಉಲ್ಲೇಖಿಸಿದ ಅವತರಣಿಕೆಗಳನ್ನು ಮಾತ್ರ ಅವಲಂಬಿಸದೆ ನನ್ನ ಮೂಲಲೇಖನವನ್ನೂ ನೋಡಿದ್ದರಂತೂ ಈ ವಿಷಯವು ಇನ್ನೂ ಸ್ಪಷ್ಟವಾಗುತ್ತಿತ್ತು.

ಡಾ. ಕೃಷ್ಣಸ್ವಾಮಿ ಅಯ್ಯಂಗಾರರ ಲೇಖನದಲ್ಲಿಯ ನನ್ನ ಲೇಖನಕ್ಕೆ ಸಂಬಂಧಪಡದ ಇನ್ನಿತರ ಅಂಶಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಇಲ್ಲಿ ವ್ಯಕ್ತಪಡಿಸುವುದು ಸೂಕ್ತವಲ್ಲ.

ಸತಿಪತಿ ಭಾವದ ವಚನಗಳು : ಅಕ್ಕಮಹಾದೇವಿ

ಡಿ. ರಘುನಾಥರಾವ್

ಯಾವ ಸಂಕೋಚಗಳೂ ಇಲ್ಲದೆ, ಲೈಂಗಿಕ ಪ್ರತಿಮೆಗಳನ್ನು ಬಳಸಿಕೊಳ್ಳುವ ಅಕ್ಕ ತುಂಬ ಕುತೂಹಲವನ್ನು ಉಂಟುಮಾಡುತ್ತಾಳೆ. ಅವಳಹಾಗೆ, ಬರೆಯುವುದಕ್ಕೆ ಈ ಹೊತ್ತು ಕೆಲವರಿಗೆ ಸಂಕೋಚವಾಗಬಹುದು. ಹೀಗಿರುವಾಗ, ಆ ಕಾಲದ ಹೆಣ್ಣೊಬ್ಬಳು ತುಂಬಾ ಹಿಂದೆ, ತನ್ನ ಸಮಕಾಲೀನ ಪುರುಷ ವಚನಕಾರರಿಗಿಂತ ಅಳುಕಿಲ್ಲದೆ ಬರೆದಿರುವುದು ಅತ್ಯಂತ ಆಶ್ಚರ್ಯವಾಗಿದೆ. ಆ ವಿಶಿಷ್ಟ ವ್ಯಕ್ತಿತ್ವವನ್ನು ಅನ್ವೇಷಿಸುವು-ದರಿಂದ ಪ್ರಯೋಜನವಿದೆ ಎಂದು ಅಂದುಕೊಂಡಿದ್ದೆ. ಈ ದೃಷ್ಟಿಯಿಂದ, 'ಸಂಕ್ರಮಣ'-43ನೇ ಸಂಚಿಕೆಯಲ್ಲಿ ಪ್ರಕಟವಾಗಿರುವ, ಶ್ರೀ. ಹೆಚ್. ಎಂ. ಚೆನ್ನಯ್ಯನವರ- 'ಅಕ್ಕ ಮಹಾದೇವಿಯ ವಚನಗಳ ಪ್ರತಿಮಾ ವಿಧಾನ'- ಲೇಖನ ಗಮನಾರ್ಹವಾಗಿದೆ. ಅಕ್ಕನ ಸತಿ-ಪತಿ ಭಾವದ ವಚನಗಳ ಬಗ್ಗೆ ನನಗೆ ಅನ್ನಿಸಿದುದನ್ನು (ಶ್ರೀ ಚೆನ್ನಯ್ಯನವರ ಲೇಖನಕ್ಕೆ ಪೂರಕ ಆಗಬಹುದು)- ಈ ಲೇಖನದಲ್ಲಿ ವ್ಯಕ್ತ ಮಾಡಲು ಪ್ರಯತ್ನಿಸುತ್ತೇನೆ.

ಸತಿ-ಪತಿ ಭಾವದ ವಚನಗಳು ಅಕ್ಕನ ವಚನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಅಕ್ಕ ತನ್ನ ಇಷ್ಟ ದೈವವನ್ನು ಅನ್ವೇಷಿಸುವ ರೀತಿ ತೀವ್ರವಾಗಿದೆ. ಸ್ವಾಭಾವಿಕವಾದ ವಿರಹದ, ನಿರೀಕ್ಷೆಯ ಆತಂಕದ ಕಾವು ಅಲ್ಲಿದೆ. ಉಳಿದ ವಚನಕಾರರಲ್ಲಿಯೂ ಈ ಭಾವ ಅಭಿವ್ಯಕ್ತವಾಗಿದೆ. ಆದರೆ, ಅಕ್ಕನಲ್ಲಿ ಅದು ತುಂಬ ಸಮರ್ಥ ವಾಗಿದೆ. ಅಕ್ಕನ ವೈಶಿಷ್ಟ್ಯ ಅದು. (ವಚನಕಾರರಲ್ಲಿ ಕೆಲವು ಅಭಿಪ್ರಾಯಗಳು; ಅನುಭವಗಳು; ಉಪಮೆ ರೂಪಕಗಳು; ಹೇಳುವ ರೀತಿ; ಬಳಸುವ ಶಬ್ದಗಳು ಅನೇಕ ವೇಳೆ ಒಂದೇ ಆಗಿರುತ್ತವೆ. ಆದ್ದರಿಂದ ಯಾರಿಂದ ಯಾರು ಎಷ್ಟು ಪ್ರಭಾವಿತರಾಗಿದ್ದಾರೆ - ಎಂಬುದನ್ನು; ಆಯಾ ವಚನಗಳ ಸಂದರ್ಭದಲ್ಲಿ ಸಾರ್ಥಕವಾಗಿದೆಯೋ ಅಥವಾ ಕೇವಲ ಅನುಕರಣೆಯಾಗಿದೆಯೋ ಎಂಬುದನ್ನು ನಿರ್ಧರಿಸಿ, ವಚನಕಾರರ ವೈಶಿಷ್ಟ್ಯಗಳನ್ನು ಗುರುತಿಸಬೇಕಾಗಿದೆ.)

ಸತಿ-ಪತಿ ಭಾವ ಅಕ್ಕನಿಗೆ ಸಹಜ. ಮಲ್ಲಿಕಾರ್ಜುನನ ಮೇಲಿರುವ ಅವಳ ಪ್ರೇಮ ಕಾಲ್ಪನಿಕವಲ್ಲ; ಬೇರೆ ಗಂಡುಗಳೊಡನೆ ಮದುವೆಯಾಗುವಷ್ಟು ಸಹಜ. ಅವಳ ವಚನಗಳಲ್ಲಿ ಲೌಕಿಕ ಲೈಂಗಿಕ ಅನುಭವದ ಬಿಸಿತಟ್ಟುತ್ತದೆ.

ಅಮೂರ್ತವನ್ನು ಮೂರ್ತ ಅನುಭವವೇ ಧ್ವನಿಸಬೇಕಾಗುತ್ತದೆ. ಅನುಭಾವಕ್ಕೆ ಸಶಕ್ತ ವಸ್ತುಪ್ರತಿರೂಪ ಲೈಂಗಿಕಾನುಭವ ಎಂಬುದನ್ನು ಅನುಭಾವಕಾವ್ಯವೇ

ಸಿದ್ಧಪಡಿಸಿದೆ. ಲೈಂಗಿಕಾನುಭವದಲ್ಲಿ ಶರೀರ ಮತ್ತು ಮನಸ್ಸು ಒಟ್ಟಿಗೆ ಏಕಕಾಲದಲ್ಲಿ 'ಬೆರೆ'ಯುತ್ತವೆ. ಆದ್ದರಿಂದ, ಲೈಂಗಿಕಾನುಭವ ವಿಶಿಷ್ಟವಾದ ಅನುಭವ. ಅನುಭಾವ ವಾಸ್ತವದಷ್ಟೇ ಸತ್ಯ—ಅಂದರೆ, ಇಂದ್ರಿಯಾನುಭವಗಳಿಂದ ಅನುಭವಕ್ಕೆ ಬರುವಂಥಾದ್ದು. ಆದ್ದರಿಂದಲೇ, ವಿಶಿಷ್ಟವಾಗಿರುವ, ತೀವ್ರವಾಗಿರುವ; ಸಮಗ್ರ ವ್ಯಕ್ತಿತ್ವ ತೊಡಗುವ ಲೈಂಗಿಕಾನುಭವ. ಹಠಾತ್ತನೆ ಬಂದು ತಟ್ಟುವ; ತಟ್ಟಿ ಸಮಗ್ರ ವ್ಯಕ್ತಿತ್ವವನ್ನೇ ಆವರಿಸಿ ಬಿಡುವ ಅನುಭಾವಕ್ಕೆ ಬಾಯಿಯಾಗಿಬಿಡುತ್ತದೆ. ಚೆನ್ನಮಲ್ಲಿಕಾರ್ಜುನನೊಡನೆ—'ಬೆರೆತ' ಅನುಭವ ಅವಳ ಖಾಸಾ ಅನುಭವ'—ಕಾಲ್ಪನಿಕವಲ್ಲ ಎನಿಸುತ್ತದೆ. ಆದ್ದರಿಂದ ಅಕ್ಕನ ವಚನಗಳಲ್ಲಿ ಕಾವಿದೆ; ತೀವ್ರತೆ ಇದೆ. (ವಚನಕಾರರೆಲ್ಲಾ (ಹೆಚ್ಚು ಮಂದಿ) ಸಂಸಾರಿಗಳು ಗೃಹಸ್ಥ ಜೀವನ ನಡೆಸುತ್ತಲೇ ಸಾಧನೆ ಮಾಡಿದವರು. ಅಕ್ಕನಿಗೂ ಮದುವೆಯಾಗಿತ್ತೆಂಬುದು ಐತಿಹಾಸಿಕ ಸತ್ಯ). ಅದಕ್ಕೆ ಇನ್ನೊಂದು ಕಾರಣ, ಯಾವ ಎಗ್ಗೂ ಇಲ್ಲದೆ ಹೇಳುವ ಅವಳ ರೀತಿ.

ಉದಾಹರಣೆಗೆ ಈ ವಚನ ಭಾಗಗಳನ್ನು ನೋಡಿ: [1]

(1) "ಹರನೇ;
ಎನ್ನ ಕುಂಭ ಕುಚದಮೇಲೆ ನಿಮ್ಮನೆಂದಪ್ಪಿಕೊಂಬೆನಯ್ಯಾ?" (317)

(2) 'ಅಪ್ಪಿದರೆ ಅಸ್ಥಿಗಳು ನುಗ್ಗುನುರಿಯಾಗಬೇಕು' (336)

(3) "ಅತಿಕಾಮಿ ಚೆನ್ನಮಲ್ಲಿಕಾರ್ಜುನಯ್ಯಂಗೆ ತೊಡರನಿಕ್ಕಿ
ಎರಡರಿಯದೆ ಕೂಡಿದೆನು, ಬಸವ, ನಿಮ್ಮ ಕೃಪೆಯಿಂದ" (174)

(4) "ಕರ್ಮವೆಂಬ ಗಂಡನ ಬಾಯಟೊಣೆದು
ಹಾದರನಾಡುವೆನು ಹರನ ಕೂಡೆ" (328)

(5) 'ಒಳಗಣ ಗಂಡನವ್ವಾ—ಹೊರಗಣ ಮಿಂಡನವ್ವಾ—(114)

(ಇಲ್ಲಿನ ದಿಟ್ಟತನ—ನಿಸ್ಸಂಕೋಚ ಮೆಚ್ಚುವಂಥಾದ್ದು)

ಸಾಮಾನ್ಯ ಪ್ರೇಮಿಗಳ ಹಾಗೆಯೇ ಚೆನ್ನಮಲ್ಲಿಕಾರ್ಜುನನೊಡನೆ—ಅಕ್ಕ ನಡೆದು ಕೊಳ್ಳುತ್ತಾಳೆ. ಲೌಕಿಕ ಪ್ರಣಯದಲ್ಲಿರುವ ನಿರೀಕ್ಷೆ, ಆತಂಕ, ವಿರಹ, ತಳಮಳಗಳು ಅವಳ ವಚನಗಳಲ್ಲಿವೆ. ಚೆನ್ನಮಲ್ಲಿಕಾರ್ಜುನನ 'ಬರುವಿಕೆ'ಯನ್ನು ನಿರೀಕ್ಷಿಸುತ್ತಿರುವ 'ಬಾರದಿದ್ದರೆ' ಕೊರಗುತ್ತಿರುವ; ಸ್ವಲ್ಪ ತಡವಾದರೆ—ಬಡವಾಗುವ ಚಿತ್ರ ಒಂದು ವಚನದಲ್ಲಿ ಬರುತ್ತದೆ.

---

1. ಈ ಲೇಖನದಲ್ಲಿ ಉಪಯೋಗಿಸಿಕೊಂಡಿರುವ ವಚನಗಳನ್ನು ಶ್ರೀ ಎಲ್. ಬಸವರಾಜು ಅವರು ಸಂಪಾದಿಸಿರುವ - 'ಅಕ್ಕನ ವಚನಗಳು' - (ಮೊದಲ ಮುದ್ರಣ 1966) ಪುಸ್ತಕ ದಿಂದ ಆರಿಸಿಕೊಂಡಿದೆ.

"ಬಂದಹನೆಂದು ಬಟ್ಟೆಯನೋಡಿ
ಬಾರದಿದ್ದರೆ ಕರಗಿ ಕೊರಗಿದೆನವ್ವ ।
ತಡವಾದರೆ ಬಡವಾದೆ ತಾಯೆ......" (323)

ಚೆನ್ನಮಲ್ಲಿಕಾರ್ಜುನನನ್ನು ಕಾತರದಿಂದ ಕಾಯುತ್ತಿರುವುದನ್ನು ಈ ವಚನ ಹೇಳಿದೆ:

"ಅರಿಸಿನವನೆಮಿಂದು, ಹೊಂದೊಡಿಗೆಯನೆ ತೊಟ್ಟು ।
ದೇವಾಂಗವನುಟ್ಟು ಪುರುಷಬಾರಾ, ಪುಣ್ಯರತ್ನವೇ ನೀ ಬಾ
ನಿನ್ನ ಬರವೆನ್ನಸುವಿನ ಬರವು ಬಾರಯ್ಯ ।
ಚೆನ್ನಮಲ್ಲಿಕಾರ್ಜುನಯ್ಯ ಬಂದಾನೆಂದು
ಬಟ್ಟೆಗಳ ನೋಡಿ ಬಾ ಯಾರುತ್ತಿಹೆನು" (320)

ಪ್ರಿಯತಮನ ಆಗಮನಕ್ಕೆ ಕಾಯುತ್ತಿರುವ ಪ್ರೇಯಸಿಯ ವಿಷಯ ಇಲ್ಲಿದೆ. ಅವಳು ನಿರೀಕ್ಷಿಸುತ್ತಿರುವ 'ಆತ' ಅವಳಿಗೆ ಹಿತವಾಗುವ ರೂಪದಲ್ಲಿಯೇ ಕಾಣಿಸಿಕೊಳ್ಳಬೇಕೆಂಬ ಆಶಯ ಮೊದಲಿನ ಎರಡು ಪಾದಗಳಲ್ಲಿದೆ. ಪತ್ನಿಯನ್ನು ಕಾಣಲು ಬರುವ ಮದುಮಗನನ್ನು ಅದು ನೆನಪಿಗೆ ತರುತ್ತದೆ. (ಬಾರಾ, ಬಾ, ಬಾರಯ್ಯಾ—ಬಂದಾನೆಂದು ಎನ್ನುವ ಶಬ್ದಗಳು ಆತಂಕದ ಸ್ಥಿತಿಯನ್ನು ತಿಳಿಸಲು ಸಮರ್ಥವಾಗಿವೆ.) ದಾರಿಕಾಯುತ್ತ–'ಬಾಯಾರುತ್ತಿಹೆನು' ಎನ್ನುವ ಕೊನೆಯ ಪಾದವು–ಸಾಮಾನ್ಯ ಸ್ತ್ರೀಯೊಬ್ಬಳ ಮನಃಸ್ಥಿತಿಯನ್ನೇ ಹೊಂದಿದೆ.

ಚೆನ್ನಮಲ್ಲಿಕಾರ್ಜುನನಿಗಾಗಿ ಕಾದುಕಾದು ಸಂಕಟಗೊಂಡಿದ್ದಾಳೆ. ತುಂಬಿದ ಯೌವನ ಸುಮ್ಮನೇ ವ್ಯರ್ಥವಾಗಿ ಹೋಗುವುದಲ್ಲ ಎನ್ನುವ ತಳಮಳವನ್ನು ಹೀಗೆ ಹೇಳಿದ್ದಾಳೆ:

ಪಂಚೇಂದ್ರಿಯದ ಉರುವಣೆಯಹುದು
ಮದಭರದ ಜವ್ವನದೊಡಲು ವ್ರಥಾ ಹೋಯಿತ್ತಲ್ಲ ।
ತುಂಬಿ ಪರಿಮಳವನೆ ಕೊಂಡು ಲಂಬಿಸುವ ತೆರನಂತೆ
ಇನ್ನೆಂದಿಗೆ ಒಳಗೊಂಬೆಯೋ ಅಯ್ಯ ಚೆನ್ನಮಲ್ಲಿಕಾರ್ಜುನಯ್ಯ" (316)

ಚೆನ್ನಮಲ್ಲಿಕಾರ್ಜುನನಿಗಾಗಿ ಕಾದದ್ದು. ವ್ಯರ್ಥವಾಗಿದೆ. ಪಂಚೇಂದ್ರಿಯಗಳು ಅವಳನ್ನು ಪೀಡಿಸುತ್ತಿವೆ. ತುಂಬುಯೌವ್ವನ ವ್ಯರ್ಥವಾಗಿಹೋಗುತ್ತಿದೆಯಲ್ಲಾ ಎಂಬ ಕೊರಗು. (ಉರುವಣೆ–ಮದಭರ–ವ್ರಥಾ–ಮೊದಲಿನ ಎರಡುಪಾದಗಳಲ್ಲಿ ಬಳಕೆಯಾಗಿರುವ ಈ ಶಬ್ದಗಳ ಶಕ್ತಿಯನ್ನು ಗಮನಿಸಿ.)

ಮೊದಲಿನ ಎರಡು ಪಾದಗಳು ಸ್ಪಷ್ಟವಾಗಿ ಲೈಂಗಿಕ ಸತ್ವವನ್ನು ಪಡೆದಿವೆ. ಮೂರನೆಯ ಪಾದದಲ್ಲಿ ಹೂವು ಶಬ್ದವಿಲ್ಲದಿದ್ದರೂ 'ಪರಿಮಳ' ಶಬ್ದ ಅದನ್ನು ಸೂಚಿಸುತ್ತದೆ. ಪುಷ್ಪದ 'ಪರಿಮಳವನ್ನು' ಹೀರುವ ದುಂಬಿಯ ಚಿತ್ರ–ಲೈಂಗಿಕ ಕ್ರಿಯೆಯನ್ನು ಧ್ವನಿಸು

ತ್ತದೆ. (ಪರಿಮಳ–ಆತ್ಮಕ್ಕೆ ಸಂಕೇತ. ಶರೀರದ ಬಂಧನದಲ್ಲಿರುವ ಆತ್ಮದ ಬಿಡುಗಡೆಯೂ ಸೂಚಿತವಾಗಿದೆ.)

ಕೊನೆಯ ಪಾದದ 'ಒಳಗೊಂಬೆಯೋ' ಎನ್ನುವ ಶಬ್ದವನ್ನು ನೋಡಬಹುದು. ಇನ್ನೆಂದಿಂಗೆ—ಪ್ರಶ್ನಾರ್ಥಕಶಬ್ದ ತೀವ್ರತೆಯನ್ನು ತಂದಿದೆ. ಹಾಗೆಯೇ 'ಒಳಗೊಂಬೆಯೋ' ಎಂಬ ಶಬ್ದದ ದೀರ್ಘವೂ ಕೂಡ 'ಅಯ್ಯ' - ಆರ್ತತೆಯನ್ನು ಉಂಟುಮಾಡಿದೆ.

'ಕಳವಳದ ಮನವ್ರುತಲೆ ಕೆಳಗಾದುದವ್ವ ।
ಸುಳಿದು ಬೀಸುವಗಾಳಿ ಉರಿಯಾಯಿತವ್ವ ।
ಬೆಳುದಿಂಗಳು ಬಿಸಿಲಾಯಿತ್ತು ಕೆಳದಿ ।' (321)

ಚೆನ್ನಮಲ್ಲಿಕಾರ್ಜುನನ ವಿರಹ ಸುಡುವ ಪರಿಯನ್ನು ಮತ್ತು ಅದರ ತೀವ್ರತೆಯನ್ನು ಮೇಲಿನ ವಚನದಲ್ಲಿ ಕಾಣಬಹುದು.

ಈ ವಚನವನ್ನು ನೋಡಿ:

"ಒಮ್ಮೆ ಕಾಮನ ಕಾಲ ಹಿಡಿವೆ.
ಒಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ ।
ಸುಡುವಿರಹವನು ಆರಿಗೆ ಧೃತಿಗೆಡುವೆ ? ।
ಚೆನ್ನಮಲ್ಲಿಕಾರ್ಜುನದೇವನೆನ್ನನೊಲ್ಲದ ಕಾರಣ
ಎಲ್ಲರಿಗೆ ಹಂಗಿತಿ ಯಾದೆನವ್ವ ।" (72)

'ಕಾಲಹಿಡಿವೆ' - 'ಸೆರಗೊಡ್ಡಿ ಬೇಡುವೆ' - ಈ ಶಬ್ದಗಳು ಪರಿತಾಪ ಪಡುತ್ತಿರುವ ಪ್ರಣಯಿಯನ್ನು ಚಿತ್ರಿಸಿವೆ. ಚೆನ್ನಮಲ್ಲಿಕಾರ್ಜುನನಿಗೆ ಬೇಡವಾದವಳಿಗೆ ಒದಗುವ ಪರಿಸ್ಥಿತಿಯ ಚಿತ್ರ ಇಲ್ಲಿದೆ. (ವಿರಹವನ್ನೇಸುಡು—ಎನ್ನುವಲ್ಲಿನ ತೀವ್ರತೆಯನ್ನು ಗಮನಿಸಬಹುದು.)

"ಕಿಚ್ಚಿಲ್ಲದ ಬೇಗೆಯಲಿ ಬೆಂದೆನವ್ವ
ಏರಿಲ್ಲದ ಗಾಯದಲಿ ನೊಂದೆನವ್ವ
...." (69)

ಇಂಥ ಅನೇಕ ಪ್ರತಿಮೆಗಳು ಸಾಮಾನ್ಯರ ಅನುಭವದಿಂದಲೇ ಆಯ್ದುವಾಗಿವೆ.

ಹಗಲು - ರಾತ್ರಿ ಚೆನ್ನಮಲ್ಲಿಕಾರ್ಜುನನಿಗಾಗಿ ಹಂಬಲಿಸಿ: ಹಸಿವು, ತೃಷೆ, ನಿದ್ರೆಯನ್ನು ಮರೆತು ತಳವಳಿಸುವ ಬಗೆ ಈ ವಚನದಲ್ಲಿದೆ:

'ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆನು।
ಇರುಳು ನಾಲ್ಕು ಜಾವ ಲಿಂಗದ ವಿಕಳಾವಸ್ಥೆಯಲ್ಲಿಪ್ಪೆನು ॥
ಹಗಲಿರುಳೂ ನಿಮ್ಮ ಹಂಬಲದಲ್ಲಿ ಮೈಮರೆದೊರಗಿದನು ॥
ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಒಲುಮೆನಟ್ಟು
ಹಸಿವು - ತೃಷೆ - ನಿದ್ರೆಯಮರೆದೆನು ।' (79)

ಮೊದಲ ಪಾದದ 'ಹಗಲುನಾಲ್ಕುಜಾವ' ಶಬ್ದಗಳು ಇಡೀ ಹಗಲನ್ನು ಸೂಚಿಸಿದೆ. ಎರಡನೆಯ ಪಾದದ 'ಇರುಳು ನಾಲ್ಕು ಜಾವ' ಮೊದಲಪಾದದ ಭಾವವನ್ನು ಮುಂದುವರೆಸಿದೆ. ರಾತ್ರಿಯೆಲ್ಲಾ ಉದ್ವೇಗಕ್ಕೆ ಗುರಿಯಾಗಿರುವ ಸಂಗತಿಯನ್ನು ಅದು ಹೇಳಿದೆ. ಮೊದಲ ಪಾದದ ಕಳವಳದ ಸ್ಥಿತಿ; ಎರಡನೆಯ ಪಾದದಲ್ಲಿ ವಿಕಳಾವಸ್ಥೆಯ ಸ್ಥಿತಿಯನ್ನು ಮುಟ್ಟಿರುವುದನ್ನು ಗಮನಿಸಬೇಕು. ನಂತರ. ಹಗಲೂ–ರಾತ್ರಿ ಚೆನ್ನಮಲ್ಲಿಕಾರ್ಜುನನ ಹಂಬಲದಲ್ಲಿ ತನ್ನನ್ನು ತಾನು ಮರೆತಿರುವುದನ್ನು ತಿಳಿಸುತ್ತಾಳೆ. 'ಒಲುಮೆ, ನಟ್ಟು'-ಶಬ್ದಗಳನ್ನು ನೋಡಿ. ಹಗಲೂ - ಇರುಳೂ ಅವನ ಹಂಬಲದಲ್ಲಿಯೇ ಹಸಿವು - ತೃಷೆ - ನಿದ್ರೆ ಎಲ್ಲವನ್ನು ವರ್ಣಿಸಿರುವುದನ್ನು ಮೇಲಿನ ವಚನ ಚಿತ್ರಿಸಿದೆ.

ಸಾಮಾನ್ಯರ ಪ್ರೇಮದ ರೀತಿಯಲ್ಲಿಯೇ ಅಕ್ಕ - ಚೆನ್ನಮಲ್ಲಿಕಾರ್ಜುನರ ಪ್ರೇಮವಿರುವುದನ್ನು ಇನ್ನೂ ಇಂಥ ಹಲವಾರು ವಚನಗಳಿಂದ ತಿಳಿಯಬಹುದು. ಹಾಗಾಗಿ ಲೈಂಗಿಕಾನುಭವದಷ್ಟೇ ತೀವ್ರವಾಗಿವೆ ಅವಳ ವಚನಗಳು. ಸಂಕೋಚವಿಲ್ಲದೆ. ಧೈರ್ಯವಾಗಿ ಅಕ್ಕ ಬರೆಯುತ್ತಾಳೆ. ಇಂದಿನ ನಮಗೂ ಅಕ್ಕನ ಈ ಮನೋಧರ್ಮ ಮುಖ್ಯವಾದುದು ಎನಿಸುತ್ತದೆ.

ಪ್ರಮುಖ ಹರಿದಾಸರುಗಳ ಮೇಲೆ ಕುಮಾರವ್ಯಾಸನ ಪ್ರಭಾವ

ಎಂ. ಆರ್. ಲಕ್ಷ್ಮೀದೇವಿ

ಸುಮಾರು ಕ್ರಿ. ಶ. ಹದಿಮೂರನೆಯ ಶತಮಾನದಲ್ಲಿಯೇ ಮಧ್ವಾಚಾರ್ಯರಿಂದ ಉಗಮ ಹೊಂದಿ. ನರಹರಿತೀರ್ಥರಿಂದ ಕನ್ನಡದಲ್ಲಿ ಕೀರ್ತನೆಗಳು ರಚಿತವಾಗಿ. ಶ್ರೀಪಾದರಿಂದ ನಿರ್ದಿಷ್ಟ – ರೂಪ ಪಡೆದು. ವಾದಿರಾಜ – ವ್ಯಾಸರಿಂದ ಪ್ರಸೀತಗೊಂಡು, ಪುರಂದರ – ಕನಕರಿಂದ ಶ್ರೀಮಂತವಾಗಿ. ಜಗನ್ನಾಥದಾಸರವರೆಗೂ ಸಮೃದ್ಧವಾಗಿ ಬೆಳೆದು ಬಂದ ಹರಿದಾಸ ಪರಂಪರೆ ಕರ್ನಾಟಕದಲ್ಲಿ ಹಿರಿದಾಗಿದೆ. ಹೀಗೆ ಅಪಾರವಾಗಿ ಬೆಳೆದು ಬಂದ ಹರಿದಾಸ ಪ್ರಮುಖರ ಮೇಲೆ ಸುಮಾರು ಕ್ರಿ. ಶ. 14ನೇ ಶತಮಾನದಲ್ಲಿ[1] ಜನಪ್ರಿಯ ಕವಿಯಾಗಿ ಮೆರೆದು, ಯುಗಪ್ರವರ್ತಕರೆನಿಸಿದ ಕುಮಾರವ್ಯಾಸನ ಕಾವ್ಯ ಬೀರಿರಬಹುದಾದ ಪ್ರಭಾವವನ್ನು ವಿವಿಧ ರೂಪಗಳಲ್ಲಿ. ಭಿನ್ನ ಭಿನ್ನ ಪ್ರಮಾಣದಲ್ಲಿ ಗುರುತಿಸಬಹುದಾಗಿದೆ. ಎಲ್ಲ ದಾಸರೂ ಕುಮಾರವ್ಯಾಸನಿಗೆ ಋಣಿಗಳಾಗಿದ್ದಾರೆ ಎಂದು ಹೇಳಲಾಗದಿದ್ದರೂ. ಪ್ರಮುಖರಾದ ಕೆಲವು ಹರಿದಾಸರಲ್ಲಿ ಆತನ ಪ್ರಭಾವ ಅಧಿಕ ಪ್ರಮಾಣದಲ್ಲಿ ಇರುವುದನ್ನು ಕಾಣಬಹುದು. ಬಹುಶಃ ಭಕ್ತಿ ನಿರೂಪಣೆ ಕುಮಾರ ವ್ಯಾಸ ಭಾರತದ ಅಂತೆಯೇ ದಾಸ ಸಾಹಿತ್ಯದ ಮುಖ್ಯ ಲಕ್ಷಣವಾದುದರಿಂದ ಕುಮಾರ ವ್ಯಾಸನ 'ಕೃಷ್ಣಚರಿತೆ'ಯ ಪ್ರಭಾವವನ್ನು, ಈತನ ನಂತರದಲ್ಲಿ ಬಂದ ಶ್ರೀಪಾದರಿಂದ ಜಗನ್ನಾಥದಾಸರವರೆಗೂ ಹರಿದುಬಂದ ದಾಸ ಪ್ರಮುಖರ ಸಾಹಿತ್ಯದಲ್ಲಿ ಕಾಣಬಹುದು.

ಹರಿದಾಸ ಪ್ರಮುಖರನ್ನು ಮುಖ್ಯವಾಗಿ ಆಕರ್ಷಿಸಿರುವ ಭಾರತ ಕಥಾಪ್ರಸಂಗಗಳು ಕೆಲವು ಮಾತ್ರ. ಅವು – ಅಕ್ಷಯವಸ್ತ್ರ ಪ್ರಸಂಗ. ದೂರ್ವಾಸಾತಿಥ್ಯ. ವಿದುರಾತಿಥ್ಯ ಹಾಗೂ ದುರ್ಯೋಧನನ ಸಭೆಯಲ್ಲಿ ನಡೆದ ಶ್ರೀ ಕೃಷ್ಣ ಪವಾಡ ಪ್ರಸಂಗ. ಮೂಲ ಭಾರತದಲ್ಲಿಲ್ಲದ* ಈ ಪ್ರಸಂಗಗಳು ಕುಮಾರವ್ಯಾಸ ಭಾರತದಲ್ಲಿ ವಿಸ್ತೃತವಾಗಿ ವರ್ಣಿತ

---

[1] ಕನ್ನಡ ಸಾಹಿತ್ಯ ಚರಿತ್ರೆ—ರಂ. ಶ್ರೀ. ಮುಗಳಿ, ಪು. 250–251.
ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ—ತ.ಸು. ಶಾಮರಾವ್ ಮತ್ತು ದೇ. ರಾಜೇಶ್ವರಯ್ಯ. ಪು. 315
ಕುಮಾರವ್ಯಾಸ—ಸುಜನ, ಪು. 8

* ಮಹಾಭಾರತ—ಭಂಡಾರ್ ಸಂಸ್ಥೆ ಪ್ರಕಟನೆ, ವಚನ ಭಾರತ—ಎ. ಆರ್. ಕೃಷ್ಣಶಾಸ್ತ್ರಿ

ವಾಗಿರುವುದನ್ನು ಕಾಣಬಹುದು. ಈ ಪ್ರಸಂಗಗಳ ಮೂಲ ಇಂಥಹುದೇ ಎಂದು ನಿಖರವಾಗಿ ಹೇಳಲು ಸಾಮಗ್ರಿ ಸಾಲದು. ಆದರೆ. ಕುಮಾರವ್ಯಾಸನಿಗೆ ದೊರೆತ ಭಾರತದ ಪ್ರತಿಗಳಲ್ಲಿ ಇವು ನಿರೂಪಿತವಾಗಿದ್ದಿರಬಹುದು. ಇಲ್ಲವೇ ಆತನ ಸ್ವಪ್ರತಿಭೆಯ ಫಲವಾಗಿ ಮೂಡಿರಬಹುದು. ಉದಾಹರಣೆಗೆ. 'ಅಕ್ಷಯವಸ್ತ್ರವನ್ನು ಶ್ರೀ ಕೃಷ್ಣನೇ ದ್ರೌಪದಿಗೆ ಕರುಣಿಸಿದನು' ಎಂಬ ವಿಷಯದ ಬಗ್ಗೆ ತಮ್ಮ ಒಂದು ಲೇಖನದಲ್ಲಿ ವಿಸ್ತಾರ ವಾಗಿ ಚರ್ಚಿಸುತ್ತಾ ಡಾ॥ ಜಿ. ಎಸ್. ಶಿವರುದ್ರಪ್ಪನವರು "..............ವಸ್ತ್ರಾಪ ಹರಣದ ಪ್ರಸಂಗ ಸಂದಿಗ್ಧವೂ. ಕ್ಲೇಶಕಾರಕವೂ ಆದಂತೆ ತೋರುವುದರಿಂದಲೋ ಏನೋ. ಆ ಪ್ರಸಂಗವನ್ನೇ ಕೇಂದ್ರವಾಗಿರಿಸಿಕೊಂಡಾಗಲಿ. ಆ ಪ್ರಸಂಗಕ್ಕೆ ಅತಿಶಯವಾದ ಮಹತ್ವವನ್ನು ಕೊಟ್ಟಾಗಲೀ ನಾರಣಪ್ಪನಿಗಿಂತ ಹಿಂದಿನ ದೊಡ್ಡ ಕವಿಗಳಾರೂ ನಿರೂಪಿಸಿದಂತೆ ತೋರುವುದಿಲ್ಲ"[1] ಎಂದು ಹೇಳಿರುವುದು ಮೇಲಿನ ಅಭಿಪ್ರಾಯವನ್ನು ಪುಷ್ಟೀಕರಿಸುವುದಲ್ಲದೆ, ಕುಮಾರವ್ಯಾಸನ ವೈಶಿಷ್ಟ್ಯವನ್ನು ಸಾರುತ್ತದೆ. ಹೀಗೆ ಪಂಡಿತರು ಅವುಗಳ ಅಸ್ತಿತ್ವವನ್ನು ಒಪ್ಪಿಕೊಳ್ಳದೆ ಜಿಜ್ಞಾಸೆಗೆ ಒಳಗಾಗಿದ್ದರೂ. ಪಾಮರರ ಮನ ಸೂರೆಗೊಂಡ, ಹಲವಾರು ಪ್ರಸಂಗಗಳನ್ನು ಆರಿಸಿಕೊಳ್ಳುವುದರಲ್ಲಿ ಕುಮಾರವ್ಯಾಸನು ಭಿನ್ನಮಾರ್ಗವನ್ನು ಅವಲಂಬಿಸಿರುವನೆನ್ನುವುದು ಖಚಿತವಾದ ಅಂಶ. ಇಂತಹ ಪ್ರಸಂಗಗಳೇ ದಾಸರ ಕೀರ್ತನೆಗಳಿಗೂ ವಸ್ತುವಾಗಿರುವುದರಿಂದಾಗಿ. ಪ್ರಸಂಗಗಳ ಆಯ್ಕೆಯಲ್ಲಿ ಪ್ರಭಾವಿತರಾಗಿರುವರೆನ್ನುವುದು ನಿರ್ವಿವಾದ.

'ಅಕ್ಷಯವಸ್ತ್ರ'ದ ಸುಳುಹು ಮೂಲ ಭಾರತದಲ್ಲೇ ದೊರೆಯುವುದಾದರೂ. ಆ ಪ್ರಸಂಗದ ನಾಯಕನಾಗಿ – ಪವಾಡ ಪುರುಷನಾಗಿ ಶ್ರೀ ಕೃಷ್ಣನು ಅವತರಿಸುವ ಕಲ್ಪನೆ ಕುಮಾರವ್ಯಾಸನದು. ಈ ಪ್ರಸಂಗ ನಿರೂಪಣೆಯನ್ನು ದಾಸರು ಕೀರ್ತನೆಗಳಲ್ಲಿ ಹತ್ತಾರು ಕಡೆಗಳಲ್ಲಿ, ಬೇರೆ ಬೇರೆ ಮಾತುಗಳಲ್ಲಿ ಬಣ್ಣಿಸಿದ್ದಾರೆ. ಹೀಗೆ ಬಣ್ಣಿಸುವಲ್ಲಿ ಕಥನ ನಿರೂಪಣೆ. ಸನ್ನಿವೇಶ ನಿರ್ಮಾಣ ಹಾಗೂ ಭಾವಾಭಿವ್ಯಕ್ತಿಗಳಲ್ಲಿ ಸಮಾನ ಧಾಟಿಯನ್ನು ಇಬ್ಬರಲ್ಲೂ ಗುರುತಿಸಬಹುದು.

ಕುಮಾರವ್ಯಾಸನಲ್ಲಿ 'ಅಕ್ಷಯವಸ್ತ್ರ' ಪ್ರಸಂಗವನ್ನು ಈ ರೀತಿ ಕಾಣುತ್ತೇವೆ.

ಕ್ರೂರದುರ್ಯೋಧನನು ದ್ರುಪದ ಕು
ಮಾರಿ ಪಾಂಚಾಲೆಯನು ಸಭೆಯಲಿ
ಸೀರೆಯನು ಸುಲಿಯಲ್ಕೆ, ಕಾಯ್ಕೆ ಕೃಷ್ಣಯೆಂದೆನುತ
ನಾರಿಯೊರಲುತ್ತಿಹಳು ವ್ಯಾಟ್ಟಾ
ಸೀರೆ ಸೆಳೆಯಲು ಬಳಿಕಲಕ್ಷಯ
ಸೀರೆಯಾಗಲಿಯೆಂದ ಗದುಗಿನ ವೀರನಾರಾಯಣ

[ಸ. ಪ. 14–132]

---

[1] ಪರಿಶೀಲನ—ಶ್ರೀ ಜಿ. ಎಸ್. ಶಿವರುದ್ರಪ್ಪ, ಪು. 174.

ಇದೇ ಪ್ರಸಂಗವು ವ್ಯಾಸರಾಯರಲ್ಲಿ—

"ತರುಣಿ ದ್ರೌಪದಿ ಸೀರೆಯ ದುಶ್ಶಾಸನ
ಸರಸರ ಸೆಳೆಯುತಿರೆ
ಕರುಣಿ ತನ್ನೊಡತಿಯೊಡನೆ ಆಡುವುದು ಬಿಟ್ಟು
ತ್ವರದಿ ಅಕ್ಷಯವಿಟ್ಟು ಸಿರಿಕೃಷ್ಣರಾಯನ" [1]

ಪುರಂದರರಲ್ಲಿ "ರಂಗನೊಲಿದ ನಮ್ಮ ಕೃಷ್ಣನೊಲಿದ[1] ಅಂಗನೆ ದ್ರೌಪದಿಗೆ ವಸ್ತ್ರ ಅಕ್ಷಯ ವೆಂದನು।... ದುರುಳ ದುಶ್ಶಾಸನನು ಬಂದು ದ್ರೌಪದಿಯ ಮುಂದೆ ನಿಂದು। ಕರವ ಪಿಡಿದು ಸೆರಗ ಹಿಡಿದು ನಿರಿಯ ಸೆಳೆಯಲು।......ರನ್ನೆ ವೀರ ಜೊಪ್ಪೆ ನಿಕ್ಕಿ ರಭಸದಿಂದ ಸಾರುತಲಿ। ಪನ್ನಗಶಯನ ಕೃಷ್ಣ ಕಾಯೋ ಎಂದಳು। ನಾರಿದವರ ಪೊರೆವ ಕರುಣಿ ಸಾಗರಶಯನ ಕೃಷ್ಣ। ನಾರಿ ದ್ರೌಪದಿಗೆ ವಸ್ತ್ರ ಅಕ್ಷಯವೆಂದನು। ......ಹೊನದಿದವರ ಪೊರೆವ ಕರುಣಿ ಸಿಂಧುಶಯನ ಶ್ರೀ ಕೃಷ್ಣನಲ। ವಿಂದ ದ್ರೌಪದಿಗೆ ವಸ್ತ್ರ ಅಕ್ಷಯ ವೆಂದನು"...[2]

ಹೀಗೆ ಇನ್ನೂ ಅನೇಕ ಕೀರ್ತನೆಗಳಲ್ಲಿ ಈ ಅಕ್ಷಯವಸ್ತ್ರ[3] ನಿಮಿತ್ತವಾಗಿ ಶ್ರೀ ಕೃಷ್ಣ ಮಹಿಮೆಯನ್ನು ಸಾರುವುದನ್ನು ಕಾಣಬಹುದು. ಪುರಂದರರ ಹಲವಾರು ಕೀರ್ತನೆಗಳಲ್ಲಿ, ಶ್ರೀ ಕೃಷ್ಣಮಹಿಮಾವಳಿಗಳನ್ನು ಎತ್ತಿ ಹೇಳುವ ಹಲವಾರು ಘಟನೆಗಳೊಂದಿಗೆ ಅಕ್ಷಯವಸ್ತ್ರ ಪ್ರಸಂಗವು ಪ್ರಾಸಂಗಿಕವಾಗಿ ಬಂದರೂ, ಒಟ್ಟಿನಲ್ಲಿ ಭಾವಾಭಿವ್ಯಕ್ತಿಗೆ ಪೋಷಕವಾಗಿ ಮಾತ್ರವಲ್ಲ, ಆ ಸನ್ನಿವೇಶದ ಘನತೆಯನ್ನು ಹೆಚ್ಚಿಸುವಂತೆ ಮಾಡಿದೆ.[4]

ಕನಕದಾಸರ ಕೀರ್ತನೆಗಳಲ್ಲಿ ಅಕ್ಷಯವಸ್ತ್ರವನ್ನು ಕರುಣಿಸಿದ ಶ್ರೀ ಕೃಷ್ಣಕಾರುಣ್ಯ ದೊಂದಿಗೆ, ದ್ರೌಪದಿಯ ಆರ್ತನಾದದ ವಿಸ್ತಾರವಾದ ವರ್ಣನೆಯನ್ನು ಕಾಣಬಹುದು. "............ಪಾವಕನ ಜ್ವಾಲೆಯೊಳು ಹೊಕ್ಕು ಹೊರಳಲು ಬಹುದು। ಹಾವುಗಳ ಹೆಡೆ ಹಿಡಿದು ಎಳೆದೆಳೆದು ತರಬಹುದು। ತೀವಿರ್ದ ಮಡುವ ಧುಮುಕಲು ಬಹುದು, ಗರಳವನು। ಸೇವಿಸಬಹುದು. ಜಠರದಿ। ಸಾವಿಗಂಜದೆ ಕೊರಳನುತ್ತರಿಸಿ ಕೊಳಬಹುದು। ಜೀವವಿದ್ದಂತೆ ಲಜ್ಜೆಯ ಕಳೆದುಕೊಳಲಾರೆ। ಆವ ಪರಿಯಲಿ ನಿನ್ನ

---

1 ಕೀರ್ತನ ತರಂಗಿಣಿ—ಸುಬೋಧ ರಾಮರಾವ್, ಭಾಗ 5, ಕೀ 72, ಪು. 29, 30, 31

2 ಪುರಂದರ ದಾಸರ ಕೀರ್ತನೆಗಳು—ಪಾವಂಜೆ ಗುರುರಾವ್ ಭಾಗ 3, ಕೀ 59, ಪು. 24

3,4 — ಅಲ್ಲೇ.
ಭಾಗ 3, ಕೀ 60, ಪು. 24
ಭಾಗ 1, ಕೀ 97, ಪು. 38, 39
ಭಾಗ 2, ಕೀ 24, ಪು. 60
ಭಾಗ 2, ಕೀ 118, ಪು. 49
ಭಾಗ 2, ಕೀ 122, ಪು. 50

ನಂಜಿನ ಅನಾಥಳನು ದೇವ ಅಭಿಮಾನ ಕಾಯೊ.........." ಎಂಬ ಆರ್ತನಾದ "ಐವೆತನವೊಂದುಳಿಯಲುಳಿವುದು ಮಿಕ್ಕಮಹಿಮೆಗಳು" (ಸ.ಪ. 14–109) ಎಂಬ ಭಾರತದ ದ್ರೌಪದಿಯ ಆಕ್ರಂದನದ ವಿಸ್ತೃತ ವರ್ಣನೆಯಂತಿದೆ. ತನ್ನ ಮಾನವನ್ನು ಕಾಪಾಡುವಂತೆ ಶ್ರೀ ಕೃಷ್ಣನಿಗೆ ಮೊರೆ ಹೋಗುತ್ತಾ "ಪತಿಗಳೈವರು ಮಾರಿ ಸತ್ಯವ್ರತವಿ ಸುಮ್ಮನೆ ಇಹರು..." (ಕನಕದಾಸರ ಭಕ್ತಿಗೀತೆಗಳು – ಶ್ರೀ ಕೃಷ್ಣಶರ್ಮ ಬೆಟಗೇರಿ, ಶ್ರೀ ಹುಚ್ಚೂರಾವ್ ಬೆಂಗೇರಿ (ಕೀ. 90. ಪು.–104) ಎನ್ನುವಲ್ಲಿ ಕುಮಾರವ್ಯಾಸನ ದ್ರೌಪದಿ ಹೇಳುವ "ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು......" ಎಂಬ ಮಾತುಗಳನ್ನು ನೆನಪಿಸಿದಂತಾಗುತ್ತದೆ.

ಅದೇ ಕೀರ್ತನೆಯಲ್ಲಿ ಮುಂದುವರಿಯುತ್ತಾ. ಸಭೆಯಲ್ಲಿರುವ ಹಿರಿಯರಿಗೆಲ್ಲಾ ಮೊರೆಯಿಡುತ್ತಾ ಕೊನೆಗೆ "ಗತಿಯಿಲ್ಲದವರಿಗೆ ಸರ್ವಗತಿಯು ನೀನೇ ದೇವ. ರತಿಪತಿಯ ಪಿತನೆ ಕಾಯೊ..." ಎನ್ನುವಲ್ಲಿ "ಗತಿವಿಹೀನರಿಗಕಟ ನೀನೇ ಗತಿಯಲೈ ಗೋವಿಂದ..." ಸ.ಪ. 14–111) ಎಂಬ ದ್ರೌಪದಿಯ ಆಕ್ರಂದನವನ್ನೇ ಕೇಳಿದಂತಾಗುತ್ತದೆ.

ಗಾಂಧಾರಿ, ಭಾನುಮತಿ, ಸಭೆಯಲ್ಲಿ ನೆರೆದಿದ್ದ ಪರಿವಾರ ಎಲ್ಲರಿಗೂ ಮೊರೆಹೊಕ್ಕು. ಕೊನೆಗೆ "........... ಹತ್ತರೊಳು ಬಿದಿರ್ದ ಸರ್ಪ ಸಾಯಲಿಬಹುದೆ? ..." ಎಂದು ತನ್ನ ದಾರುಣಸ್ಥಿತಿಗಾಗಿ ಹಲವರಿದು ಹಂಬಲಿಸುವುದು "ಹಾವು ಹಲಬರ ನಡುವೆ ಸಾಯದು" (ಸ. ಪ. 15–28) ಎಂಬ ಕುಮಾರವ್ಯಾಸ ಭಾರತದ ದ್ರೌಪದಿಯ ಆರ್ತಾಲಾಪವನ್ನೇ ಪಡಿನುಡಿದಂತಾಗುತ್ತದೆ. ಮುಂದುವರಿಯುತ್ತಾ. "ಪಾಂಡವರು ಧರ್ಮ ದೇವತೆಗೆನ್ನ ವಲ್ಲಭರು" ಎಂಬಲ್ಲಿ. "ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು" ಎಂಬ ಭಾರತದ ದ್ರೌಪದಿಯ ಮಾರ್ಮಿಕ ಮಾತುಗಳೇ ಪಡಿನುಡಿದಂತಿವೆ. ಹೀಗೆ ಕನಕರ ಈ ಕೀರ್ತನೆ ಕುಮಾರವ್ಯಾಸನ ಸೆಳೆಸೀರೆ ಪ್ರಸಂಗದ ದ್ರೌಪದಿಯ ಚಿತ್ರಣವನ್ನೇ ಕಣ್ಣೆದುರು ತಂದಂತಾಗುವುದಾದರೂ. ದ್ರೌಪದಿಗೊದಗಿದ ಪರಿಭವ – ಅಂಥ – ದಾರುಣಸ್ಥಿತಿಯಲ್ಲಿ ಅನಾಥರಕ್ಷಕನಾಗಿ ಬಂದ ಶ್ರೀ ಕೃಷ್ಣ ಕಾರುಣ್ಯವನ್ನು ಪ್ರತಿಪಾದಿಸುವಲ್ಲಿ. ಕರುಣರಸ ಪರಿಪೋಷಕವಾಗಿ, ಸಾರ್ಥಕ್ಯವನ್ನು ಪಡೆದಿದೆ.

ಹೀಗೆ ದಾಸರ ಮನಸೆಳೆದ ಮತ್ತೊಂದು ಪ್ರಸಂಗವೆಂದರೆ – ವಿದುರಾತಿಥ್ಯ. ಕುಮಾರವ್ಯಾಸ ಭಾರತದಲ್ಲಿ ಸಂಧಿಗಾಗಿ ರಾಯಭಾರವನ್ನು ಹೊತ್ತು ತೆರಳಿದ ಶ್ರೀ ಕೃಷ್ಣ. ರಾಜಾತಿಥ್ಯವನ್ನು ಒಲ್ಲದೆ. 'ವಿದುರನ ನಿಳಯದೊಳಗೆ ಒಕ್ಕುಡಿತೆ ಹಾಲಲಿ ಹಸಿವ ನೂಕಿ'ದ ಪ್ರಸಂಗವನ್ನು ಮತ್ತಷ್ಟು ಹಿಗ್ಗಿಸಿ—

ಹರಿಯ ಪದ ಕಮಲಾಭಿಷೇಕದ
ವರ ಪಯೋಬಿಂದುಗಳು ಕೌರವ
ನರಮನೆಯನ್ನೊಳಕೊಂಬವೋಲ್ ಕಡಲಾಗಿ ಕೈಗೊಳಲು

ಅರರೆ ಮುರಹರನೊಡನೆ ಹಾಲಿನ
ಶರಧಿ ಮೇರೆಯನೊಡೆದುದಿಳೆಗ
ಚ್ಚರಿಯೆನುತ ಭೀಷ್ಮಾದಿಗಳು ಹೊಗಳಿದರು ಮುರಹರನ"

(ಉ. ಪ. 8–15)

ಎಂದು ವಿದುರಾತಿಥ್ಯವನ್ನು ಶ್ರೀ ಕೃಷ್ಣನು ಕೈಗೊಂಡ ಸಾಮಾನ್ಯ ವಿಚಾರಕ್ಕೆ ಪವಾಡದ ತೊಡಿಗೆ ತೊಡಿಸಿದ್ದಾನೆ. ಆ ಪ್ರಸಂಗವು 'ಅಖಿಳನಿಗಮಂಗಳನು ಹೊಲಬು ಗೆಡಿಸಿ. ತನ್ನರಿಕೆಯಲಿ ಭಜಕರ್ಗೊಲಿದು ತಾನ್ಯೈತರಲು' ಅದು ಕಾರುಣ್ಯದ ಘನತೆಯನ್ನು ಹೆಚ್ಚಿಸಿತು ಎನ್ನುವುದರಿಂದಲೋ ಏನೋ ದಾಸರಿಗೆ ಈ ಪ್ರಸಂಗ ಅತ್ಯಂತ ಪ್ರಿಯವಾಗಿದೆ. ಹಾಗಾಗಿ ಈ ಘನತೆಯನ್ನು ಪ್ರಾಸಂಗಿಕವಾಗಿ ನಿರೂಪಿಸುವ ಹಲವಾರು ಕೀರ್ತನೆಗಳನ್ನು[1] ದಾಸರು ರಚಿಸಿದ್ದಾರೆ. ಪುರಂದರದಾಸರಿಗೆ ಈ ಪ್ರಸಂಗ ಬಹಳಷ್ಟು ಹಿಡಿಸಿದೆ. ಹಾಗಾಗಿ ಒಂದು ಪೂರ್ಣ ಕೀರ್ತನೆಯನ್ನೇ ಈ ಪ್ರಸಂಗದ ಸವಿಸ್ತಾರವಾದ ನಿರೂಪಣೆಗೆ ಮೀಸಲಾಗಿಟ್ಟಿದ್ದಾರೆ. "ವಿದುರನ ಭಾಗ್ಯವಿದು. ಈ ಪದುಮಜಾಂಡ ತಲೆದೂಗುತಲಿದ ಕೊ..." ಎಂದು ಮೊದಲಾಗಿ ವಿದುರನ ಮನೆಗೆ ಶ್ರೀ ಕೃಷ್ಣಾಗಮನ, ವಿದುರನ ಸಂತಸ ಇತ್ಯಾದಿಗಳನ್ನು ವಿವರಿಸುತ್ತಾ"......ವಾರಿಧಿ ಮನೆಯಾದಖಿಲೇಶಗೆ ಗೋ। ಕ್ಷೀರ ಸ್ವಲ್ಪ ಕೊಡಲಾದರದಿ। ವಾರಿಜಾಕ್ಷ ಕರಸಂಪುಟದಿ ಕುಡಿದು। ನೀರಂದದಿ ಹರಿಸಿದ ಬೀದಿಯೊಳಗೆ। ಒಂದು ಕುಡುತೆ ಪಾಲಿಗೆ ಹಳ್ಳಾಯಿತು। ಮಂದರಧರನ ಮಹಾತ್ಮೆಯನು ಇಂದಿರೆಗಸದಳ ಚಿಂತಿಸಲೆಂದಿಗು........"[2] ಹೀಗೆಂದು ಮಂದರಧರನ ಮಹಾತ್ಮೆಯನ್ನು ಬಣ್ಣಿಸಿ ತೃಪ್ತರಾಗುತ್ತಾರೆ.

ಹರಿದಾಸರ ಕೃತಿಗಳಲ್ಲಿ ಭಾರತ ಕಥೆಯನ್ನು ಮತ್ತೆ ಮತ್ತೆ ಕಾಣಬಹುದಾದರೂ, ಕುಮಾರವ್ಯಾಸನಂತೆ ಒಂದು ಕಥಾಸೂತ್ರವನ್ನು ಹಿಡಿದು ಹೊರಟಿಲ್ಲವಾಗಿ. ಶ್ರೀ ಕೃಷ್ಣ ಮಹಿಮಾ ಪ್ರಸಂಗಗಳ ನಿರೂಪಣೆ ಕೆಲವೊಮ್ಮೆ ಕೇವಲ ಪ್ರಾಸಂಗಿಕವಾಗಿ ಬರುವುದನ್ನು ಗುರುತಿಸಬಹುದು. ಹಾಗಾಗಿ ಕೆಲವೊಂದು ಪ್ರಸಂಗಗಳ ನಿರೂಪಣೆ ಕುಮಾರವ್ಯಾಸ ಭಾರತದಷ್ಟು ರಸವತ್ತಾಗಿ ಮೂಡಿಬಂದಿಲ್ಲ. ಇದಕ್ಕೆ ನಿದರ್ಶನವಾಗಿ ಇವುಗಳನ್ನು ಪರಿಶೀಲಿಸಬಹುದು.

ದುರ್ಯೋಧನನ ಸಭೆಯನ್ನು ಶ್ರೀ ಕೃಷ್ಣನು ರಾಯಭಾರಿಯಾಗಿ ಪ್ರವೇಶಿಸಿದ ಪ್ರಥಮ ಹಂತದಲ್ಲೇ ನಡೆದ ಘಟನೆಯ ನಿರೂಪಣೆ ಕುಮಾರವ್ಯಾಸನಲ್ಲಿ ಹೀಗಿದೆ—

---

1 ಪುರಂದರದಾಸರ ಕೀರ್ತನೆಗಳು—ಪಾವಂಜೆ ಗುರುರಾವ್ ಭಾಗ 1, ಕೀ 42. ಪು. 15
ಭಾಗ 1, ಕೀ 97, ಪು. 38
ಭಾಗ 3, ಕೀ 126, ಪು. 53
ಭಾಗ 4, ಕೀ 156, ಪು. 73

2 " " ಭಾಗ 3, ಕೀ 217, ಪು. 93

ಸೆಣಸು ಸೇರದ ದೇವಸದಿರಲಿ
ಮಣಿಯದಾತನ ಕಾಣುತವೆ ಧಾ
ರುಣಿಯನೊತ್ತಿದನುಂಗುಟದ ತುದಿಯಿಂದ ನಸುನಗುತ
ಮಣಿಖಚಿತ ಕಾಂಚನದ ಪೀಠದ
ಗೊಣಸು ಮುರಿದುದು ಮೇಲೆ ಸುರಸಂ
ದಣಿಗಳಾ ಏನೆ ಕವಿದು ಬಿದ್ದನು ಹರಿಯ ಚರಣದಲಿ

(ಉ. ಪ. 8–59)

(ರಾಜಸಭೆಗೆ ಬಂದ ಶ್ರೀ ಕೃಷ್ಣನನ್ನು ಕಂಡ ಪಂಪನಲ್ಲಿ ಹೀಗಿದೆ "...... ಮುಯ್ಯಲಸಿದಂತೆಂತಾನುಮೆಚ್ಚಿ ದುರ್ಗ ಕೇಸರಿ ಪೀಠಾಗ್ರದಿನಪ್ಪಿಕೊಂಡು ಪೊಡೆವಟ್ಟು ಚಕ್ಕ ಸನಾಸೀನನಾಗಿರವೇಟ್ಟಿ ಘರ್ಘ್ಯಮಿತ್ತನಂತರಮು ತಾಂ ಕುಳ್ಳಿರ್ದುದ್ ದುರ್ಯೋಧನಂ...... (ಪಂ. ಭಾ. ನವಮಾಶ್ವಾಸಂ. ಪ–31.) ಕುಮಾರವ್ಯಾಸಭಾರತದಲ್ಲಿನ ಈ ಪ್ರಸಂಗದ ನಿರೂಪಣೆ ಭಾಗವತ ಪಂಥದ ಭಕ್ತಿನಿರೂಪಣೆಯ ಉದ್ದೇಶದಿಂದ, ಪವಾಡ ಪ್ರಸಂಗವಾಗಿ ಮಾರ್ಪಟ್ಟಿರಬಹುದು. ಹೀಗಾಗಿ. ಅದೇ ಪಂಥದ ಭಕ್ತಕವಿಗಳಾದ ಹರಿದಾಸರ ಮೇಲೆ ಈ ಪ್ರಸಂಗವೂ ಪ್ರಭಾವ ಬೀರಿರುವುದರಲ್ಲಿ ಸಂಶಯವಿಲ್ಲ. "........ಕುರುಪತಿ ಸಭೆಯಲಿ ಗರುವದಿ ಕುಳಿತಿರೆ. ಸಿರಿಕೃಷ್ಣ ನೀ ಬರೆ ವಂದಿಸದೆ. ಧರೆಯನು ಮೆಟ್ಟುತ ಚರಣಕೆ ಉರುಳಿಸಿ ಪರಿಹಾಸ್ಯ ಮಾಡಿದುದೆಲ್ಲಿ ಕಲಿತೆಯ್ಯ........"[1] "ದುರ್ಯೋಧನ ತನ್ನೊಡ್ಡೋಲಗದೊಳು ಹರಿಯನು ಕರೆಸೆಂದರುಹಲು ಬಂದು. ಧರಣಿಯನುಂಗುಷ್ಟ-ದಲೊತ್ತುತ ಅವನನು ಉರುಳಿಸಿದಾಟವನೆಲ್ಲ ಕಲಿತ್ಯೋ ರಂಗ"[2] "ಕುರುರಾಯನೇಳದೆ ಕುಳಿತ ಸಿಂಹಾಸನದಿ ಉರುಳಿಸಿಬಿಟ್ಟಂಥ ಉನ್ನತ ಪಾದ"[3] ಇಲ್ಲಿ ಕಥಾಸೂತ್ರದ ಜಾಡನ್ನು ಅನುಸರಿಸಿ ಈ ಪ್ರಸಂಗಗಳು ನಿರೂಪಿತವಾಗಿಲ್ಲ. ಹಾಗಾಗಿ.ಇಲ್ಲಿ ಅವು ಪೋಷಕವಾಗಿ ಬಂದಿವೆಯೇ ಹೊರತು ಸ್ವಪರಿಪೂರ್ಣ ಘಟನೆಗಳಾಗಿ ಮಾರ್ಪಟ್ಟು. ರಸವತ್ತಾಗಿ ಹೊರಹೊಮ್ಮಲು ಸಾಧ್ಯವಾಗಿಲ್ಲ.

ಇನ್ನು ಕುಮಾರವ್ಯಾಸ ಪ್ರತಿಭೆಯ ಮೂಸೆಯಿಂದ ಹೊರಬಂದಿರಬಹುದಾದ ದೂರ್ವಾಸ ಪ್ರಸಂಗವೂ. ದಾಸರ ಕೀರ್ತನೆಗಳಲ್ಲಿ ಪ್ರಾಸಂಗಿಕವಾಗಿ ಬಂದಿದೆಯಾಗಿ. ಇಲ್ಲಿ ಕಾವ್ಯದೃಷ್ಟಿಯಿಂದ ಹೆಚ್ಚಿನದೇನನ್ನೂ ನಿರೀಕ್ಷಿಸಲಾಗುವುದಿಲ್ಲ. ಉದಾ..."......... ಯುವತಿ ದ್ರೌಪದಿಯಂತೆ ಶಾಕಪಾತ್ರೆಯೊಳೊಮ್ಮೆ ಮೆಲಿಸಲಿಲ್ಲ"......[4]

---

1 ಪುರಂದರದಾಸರ ಕೀರ್ತನೆಗಳು–ಹಾವಂಜೆ ಗುರುರಾವ್. ಭಾ 1. ಕೀ 97. ಪು. 39

2 " " ಭಾ 4, ಕೀ 73, ಪು. 156

3 ಕನಕದಾಸರ ಭಕ್ತಿಗೀತೆಗಳು—ಶ್ರೀ ಕೃಷ್ಣಶರ್ಮಾ ಬೆಟಗೇರಿ ಮತ್ತು ಶ್ರೀ ಹುಚ್ಚಾರಾವ್ ಬೆಂಗೇರಿ. ಕೀ 83. ಪು. 93.

4 ಪು. ಕೀ—ಹಾವಂಜೆ. ಭಾ 1. ಕೀ 42. ಪು. 15.

ಕಾವ್ಯದೃಷ್ಟಿಯಿಂದ ಪ್ರಮುಖ ಹರಿದಾಸರುಗಳ ಮೇಲೆ ಕುಮಾರವ್ಯಾಸನ ಪ್ರಭಾವವನ್ನು ಪರಿಶೀಲಿಸಿದರೆ, ಬಹುಮಟ್ಟಿಗೆ ಪ್ರಭಾವಕ್ಕೆ ಒಳಗಾಗಿರುವ ದಾಸರೆಂದರೆ ಕನಕರು. ಇದಕ್ಕೆ ಕಾರಣ ಉಳಿದೆಲ್ಲ ದಾಸರಂತೆ ಕೀರ್ತನೆಗಳನ್ನಷ್ಟೇ ರಚಿಸದೆ, ಕಾವ್ಯ ಸೃಷ್ಟಿಗೂ ಕೈಹಾಕಿದ ಕನಕರ ಕವಿಹೃದಯ. ಕನಕರಿಂದ ರಚಿತವಾದ ಕಾವ್ಯಗಳೆಂದರೆ ಷಟ್ಪದಿಯಲ್ಲಿ ರಚಿತವಾದ ನಳಚರಿತ್ರೆ, ರಾಮಧಾನ್ಯಚರಿತೆ, ಹಾಗೂ ಸಾಂಗತ್ಯದಲ್ಲಿ ರಚಿತವಾದ ಮೋಹನ ತರಂಗಿಣಿ. ಷಟ್ಪದಿಯಲ್ಲಿ ರಚಿತವಾದ ಮತ್ತೊಂದು ಖಂಡ ಕಾವ್ಯ—ಹರಿಭಕ್ತಿಸಾರ.

ಆರ್ತ ಭಕ್ತನೊಬ್ಬನ ಹೃದಯದಿಂದ ಮೂಡಿಬಂದ ಭಕ್ತಿಯ ಭಾವಗೀತೆಗಳಂತಿರುವ ಹರಿಭಕ್ತಿಸಾರದಲ್ಲಿ ಕಾವ್ಯವಸ್ತು, ಕರ್ತೃ, ಸಹೃದಯ, ಕಾವ್ಯ ಪ್ರಯೋಜನಗಳು—ಇವೇ ಮೊದಲಾದ ವಿಷಯಗಳ ಬಗ್ಗೆ ಕನಕರ ಹೇಳಿಕೆ[1] ಕುಮಾರವ್ಯಾಸಭಾರತದ ಪೀಠಿಕಾ ಸಂಧಿಯ ಪದ್ಯಗಳನ್ನು ಪ್ರತಿಧ್ವನಿಸುವಂತಿವೆ:

ಉದಾ:

ವೇದ ಪಾರಾಯಣದ ಫಲಗಂ	ನೂರು ಕನ್ಯಾದಾನವನು ಭಾ
ಗಾದಿ ತೀರ್ಥಸ್ನಾನಫಲ ಕೃ	ಗೀರಥೀ ಸ್ನಾನವನು ಮಿಗ ಕೈ
ಚ್ಛ್ರಾದಿ ತಪಸಿನ ಫಲವು ಜ್ಯೋತಿ	ಯಾರ ಗೋವ್ಗಳ ಪ್ರೇಮದಿಂದಲಿ ಭೂ
ಷ್ಟೋಮಯಾಗಫಲ	ಸುರರಿಗೊಲಿದು.
ಮೇದಿನಿಯನೊಲಿದಿತ್ತ ಫಲ ವ	ಊರುಗಳ ನೂರಗ್ರಹಾರದ
ಸ್ತ್ರಾದಿ ಕನ್ಯಾದಾನ ಫಲವಹು	ಧಾರೆಯೆರೆದಿತ್ತಂತೆ ಫಲ ಕೈ
ದಾದರಿಸಿ ಭಾರತದೊಳೊಂದಕ್ಷ	ಸೇರುವುದು ಹರಿಭಕ್ತಿಸಾರದ ಕಥೆಯ
ರವ ಕೇಳ್ವರಿಗೆ	ಕೇಳ್ವರಿಗೆ
(ಕು. ಭಾ. ಪೀಠಿಕಾಸಂಧಿ ಪು–30)	(ಹ.ಸಾ–106)

ಇಲ್ಲಿ ಪ್ರಭಾವವೆನ್ನುವುದಕ್ಕಿಂತಲೂ ಕಾವ್ಯದ ಬಗ್ಗೆ ಅಂದಿನ ಜನಮನೋ ಭೂಮಿಕೆಯಲ್ಲಿ ಇದ್ದಿರಬಹುದಾದ ಅಭಿಪ್ರಾಯಗಳೇ ಆ ರೂಪದಲ್ಲಿ ಮೂಡಿಬಂದಿವೆ ಯೆನ್ನಬಹುದು.

ಮತ್ತೆ ಕೆಲವು ಪದ್ಯಗಳು ಸಮಾನ ಮನೋಧರ್ಮದ ಕುಮಾರವ್ಯಾಸನ ಛಾಯೆ ಯನ್ನು ಪ್ರತಿಬಿಂಬಿಸುವುದಾದರೂ ಭಕ್ತಕವಿಯಾದ ಕನಕರ ಹೃದಯದ ಆರ್ತತೆ, ಅನನ್ಯ ಶರಣತೆ ಮರ್ಮಸ್ಪರ್ಶಿಯಾಗಿ ಮೂಡಿಬಂದಿವೆ. ಉದಾಹರಣೆಗೆ ಈ ಪದ್ಯವನ್ನು ನೋಡಬಹುದು.

---

1 ಕುಮಾರವ್ಯಾಸಭಾರತ, ಪೀಠಿಕಾಸಂಧಿ–21; ಹ. ಸಾ. 107.

ಮರೆದೆನಭ್ಯುದಯದಲಿ ನೀನೆಂ	ಮರೆದೆನಭ್ಯುದಯದಲಿ ನಿಮ್ಮನು
ದರಿವೆನಾಪತ್ತಿನಲಿ ಮದದಲಿ	ಮರೆಯೆನಾಪತ್ತಿನಲಿ ಪೊರೆಯೆಂ
ಮುರುಕಿಸುವೆನುಬ್ಬಿನಲಿ ಕಳವಳಿ	ದೊರಲುವೆನು ಮನವೇಕಭಾವದೊಳಿಲ್ಲ
ಸುವೆನು ಖೋಡಿಯಲಿ	ನಿಮ್ಮಡಿಯ
(ಸ.ಪ. 15–126)	(ಹ.ಸಾ. 51)

ಮತ್ತೆ ಕೆಲವೆಡೆ[1] ಪ್ರಭಾವವನ್ನು ಗುರುತಿಸಬಹುದಾದರೂ. ಕಾವ್ಯ ಸೊಬಗಿನ ದೃಷ್ಟಿಯಿಂದ ಸೊಗಸದೆ. ಯಾಂತ್ರಿಕ ಅನುಕರಣೆಯೆನಿಸುತ್ತದೆ.

'ರಾಮಧ್ಯಾನ ಚರಿತೆ' ಯಲ್ಲೂ ನೇರ ಪ್ರಭಾವಕ್ಕೆ ಕೆಲವು ನಿದರ್ಶನಗಳನ್ನು ಉಲ್ಲೇಖಿಸಬಹುದು.

ಎಡದ ಮೈಯಲಿ ಕೌರವೇಂದ್ರರ	ಎಡದ ಮೈಯಲಿ ಕಪಿ ಕುಲೇಂದ್ರನ
ಗಡಣ ಬಲದಲಿ ಪಾಂಡುತನಯರ	ಗಡಣ ಬಲದಲಿ ರಾವಣಾನುಜ
ಗಡಣವಿದಿರಲಿ ಮಾದ್ರ ಮಾಗಧ	ಸಡಗರದಿ ಮುನಿನಿಕರವಿದಿರಲಿ ಹಿಂದೆ
ಯಾದವಾದಿಗಳು	ವಾನರರು
(ಉ.ಪ. 10–9)	(ರಾ.ಚ. 27)

ಇಲ್ಲಿ ವರ್ಣನಾಸಾದೃಶ್ಯವನ್ನು ಕಾಣಬಹುದಾದರೂ. ಭಾರತದಲ್ಲಿ ಸಂಧಿಗಾಗಿ ತೋರಿಕೆಯ ರಾಯಭಾರವನ್ನು ಹೊತ್ತು ಬಂದ ಶ್ರೀಕೃಷ್ಣ ಕರ್ಣನೆದುರು ಭೇದೋಪಾಯಕ್ಕಾಗಿ ನಿರ್ಮಿಸಿದ ಜಾಲವಾಗಿ ಬಂದಾಗಿನ ವರ್ಣನೆಯಲ್ಲಿ ಕಾಣುವ ಭಾವನಾತೀವ್ರತೆಯನ್ನು ಕನಕರ ಈ ವರ್ಣನೆಯಲ್ಲಿ ಕಾಣಲು ಸಾಧ್ಯವಿಲ್ಲ. ಹಾಗಾಗಿ ಇಲ್ಲಿಯೂ ಪ್ರಭಾವ ಕೇವಲ ಯಾಂತ್ರಿಕ ಅನುಕರಣೆಯಾಗಿ. ಸನ್ನಿವೇಶದ ರಸಾಭಿವ್ಯಕ್ತಿಗೆ ಪೋಷಕವಾಗಿ ಬರುವುದಿಲ್ಲ. ಇಂತಹ ಇನ್ನೂ ಹಲವಾರು ನಿದರ್ಶನಗಳನ್ನು[2] "ರಾಮಧ್ಯಾನ ಚರಿತೆ" ಯಲ್ಲಿ ಕಾಣಬಹುದು.

ಕೆಲವು ರೂಪಕಗಳ ಬಳಕೆ ಸಂದರ್ಭೋಚಿತವಾಗಿ ಬಂದಿವೆ.

"ಅಪಕೀರ್ತಿನಾರಿಯ ಸೆರಗ	"ಧರೆಯೊಳಿನ್ನಪಕೀರ್ತಿನಾರಿಯ
ಹಿಡಿದರು" (ದ್ರೋ. ಪ. 6–27).	ಸೆರಗ ಹಿಡಿವುದೆ ಲೇಸು" (ರಾ.ಚ.–56)
"ತೊಲಗಿದಸು ಬಂದಂತೆ ತರಣಿಯ	"ತೊಲಗಿದಸು ಬಂದಂತೆ ತನಯರ

---

1 ಉ. ಪ. 4–7, ಹ.–ಸಾ. 9

2 ಉ. ಪ. 10–23 ರಾ. ಚ. 53
ಉ. ಪ. 7–11 ರಾ. ಚ. 96
ಅ. ಪ. 8–18 ರಾ. ಚ. 22

ಹೋಹು……"(ಉ.ಪ. 8–16)	ಚೆಲುವನೀಕ್ಷಿಸಿ……" (ರಾ.ಜ.–93)
"ತಮದಗಂಟಲನೊಡೆದ ಹರುಷ	"ತಮದಗಂಟಲನೊಡೆದುಮೂಡುವ
ದ್ಯುಮಣಿ ಮಂಡಲದಂತೆ"	ದ್ಯುಮಣಿಯಂದದಿ…"(ರಾ.ಜ.–73)
(ವಿ.ಪ.10–5)	

'ನಳಚರಿತ್ರೆ'ಯಲ್ಲಿ ವಸ್ತುವಿಷಯ. ಕಥನಕಲೆ. ಪಾತ್ರಚಿತ್ರಣ. ವರ್ಣನೆ – ಈ ನಾಲ್ಕು ಅಂಶಗಳೂ ಇರುವುದರಿಂದ ಹೆಚ್ಚಿನ ಸಾದೃಶ್ಯದ ನಿದರ್ಶನಗಳನ್ನು ಇತರ ಕಾವ್ಯಗಳಿಗಿಂತಲೂ ಇಲ್ಲಿ ಕಾಣಲು ಸಾಧ್ಯ. "ಕನಕದಾಸರ ಕವಿ ಋಣ ಅಪಾರವಾಗಿಯೇ ಇದ್ದರೂ… ಈ ಋಣ ನಾರಣಪ್ಪನಿಗೆ ಸಲ್ಲುವಷ್ಟು ಬೇರೆ ಯಾವ ಪೂರ್ವಕವಿಗೂ ಸಲ್ಲಬೇಕಾಗಿಲ್ಲ".[2] ಎಂಬ ಮಾತುಗಳು ಈ ಕಾವ್ಯಕ್ಕೆ ಪೂರ್ಣವಾಗಿ ಅನ್ವಯಿಸುತ್ತವೆ. ಗದುಗಿನ ಭಾರತದಲ್ಲಿ ಬರುವ ಪದ. ವಾಕ್ಯವೃಂದ. ಭಾವ. ರೂಪಕ ಕಲಾವೈಭವ – ಇತ್ಯಾದಿಗಳು "ಮೇಲುನೋಟಕ್ಕೇನೆ ತಕ್ಕೆ ತಕ್ಕೆಯಾಗಿ ಕಾಣಿಸಿಕೊಳ್ಳುತ್ತವೆ"[3]

ಪ್ರಸಂಗಗಳ ನಿರೂಪಣೆ. ರೂಪಕಗಳ ಅಳವಡಿಕೆ. ಭಾವಸಾಮ್ಯ. ವರ್ಣನೆ, ಪಾತ್ರಚಿತ್ರಣ – ಇತ್ಯಾದಿಗಳ ಆಯ್ಕೆಯಲ್ಲಿ ನಳಚರಿತ್ರೆ ಭಾರತಕಥೆಯನ್ನೇ ಹೋಲುವುದರಿಂದಾಗಿ. ಇಲ್ಲಿ ಕಂಡುಬರುವ ಪ್ರಭಾವ ಅನುಕರಣವೆನ್ನಿಸದಷ್ಟು ಸಹಜ ಸುಂದರವಾಗಿ ಮೂಡಿಬಂದಿದೆ. ಭಾರತದ ಧರ್ಮರಾಯ ಇಲ್ಲಿನ ನಳನಿಗೂ. ಅಲ್ಲಿನ ದ್ರೌಪದಿಯ ಪರಿಭವ ಇಲ್ಲಿನ ದಮಯಂತಿಯ ದಾರುಣ ಪರಿಸ್ಥಿತಿಗೂ ಹೊಂದಿಕೆಯಾಗಿರುವುದರಿಂದ ಪ್ರಭಾವವು ಪರಿಣಾಮಕಾರಿಯಾಗಿ ಬಂದಿದೆ.

ದ್ಯೂತದಲ್ಲಿ ನಳನು ಸೋತ ಸುದ್ದಿಯನ್ನು ದಮಯಂತಿಗೆ ತಿಳಿಸುವಲ್ಲಿ, ಭಾರತದಲ್ಲಿ ಧರ್ಮರಾಯನು ಸೋತಸುದ್ದಿಯನ್ನು ದ್ರೌಪದಿಗೆ ಅರಿಕೆ ಮಾಡುವಲ್ಲಿನ ಸನ್ನಿವೇಶದಷ್ಟೇ ಸಹಜವಾಗಿ ಬಂದಿದೆ.

ತಾಯೆ ಬಿನ್ನಹವಿಂದು ನಿಮ್ಮಯ	ತಾಯೆ ಬಿನ್ನಹವಿಂದು ನಿಮ್ಮಯ
ರಾಯ ಸೋತನು ಜೂಜಿನಲಿ	ರಾಯ ಸೋತನು ಜೂಜಿನಲಿ ನಿ
ಕುರುರಾಯ ಗೆಲಿದನು ಕೋಶವನು	ರ್ದಾಯದಲಿ ಪುಷ್ಕರನು ಗೆಲಿದನು ಸಕಲ
ಗಜತುರಗ ರಥ ಸಹಿತ	ರಾಜ್ಯವನು
ನೋಯಲಾಗದು …………	ನೋಯಲಾಗದು…………………
(ಸ.ಪ. 14–50)	(ನ.ಚ.4–33)

ಹೆಂಡತಿಯ ಸೀರೆಯಲ್ಲರ್ಧವನ್ನು ಹರಿದುಡುವ ದಾರುಣ ಪರಿಸ್ಥಿತಿ ಬಂದುದಕ್ಕಾಗಿ ನಳನು ಮರುಗುವಲ್ಲಿ. ಸಂಧಿಗಾಗಿ ತೆರಳಿದ ಕೃಷ್ಣ ದುರ್ಯೋಧನನೊಂದಿಗೆ ಪಾಂಡವರ

---

2 ನಳಚರಿತ್ರೆ—(ಸಂ. ದೇಜಗೌ), ಟೀಕೆ–29

3 " "

ಮನಃಸ್ಥಿತಿಯನ್ನು ವಿವರಿಸುವಲ್ಲಿನ ಛಾಯೆ ಕಂಡು ಬರುತ್ತದಾದರೂ. ಈ ಮಾತುಗಳು ಭಾರತಕ್ಕಿಂತಲೂ ನಳಚರಿತ್ರೆಯಲ್ಲಿ ಸನ್ನಿವೇಶದ ತೀವ್ರತೆಯನ್ನು ಹೆಚ್ಚು ಮಾಡುತ್ತವೆನ್ನ ಬಹುದು.

ಧರೆಯ ನೃಪರಿಗೆ ಹಸ್ತಿನಾಪುರ	ಧರೆಯ ನೃಪರಿಗೆ ನಿಷಧಪುರಪತಿ
ದರಮನೆಯ ಬಾಗಿಲಲಿ ಸಮಯವು	ಯರಮನೆಯ ಬಾಗಿಲಿನ ಸಮುಖವು
ದೊರಕಲಂತಮ ಪುಣ್ಯವೆಂಬೀ	ದೊರಕಲದು ತಾ ಪುಣ್ಯವೆಂಬೀಯರಸುತನ
ಸಾರ್ವಭೌಮತೆಯ	ನಮಗೆ
ಸಿರಿಗೆ ಪಾಂಡವರಸ್ವರಾದೊಡೆ	ಹರೆದುದೆಲ್ಲ ಸಮಸ್ತರಾಜ್ಯದ
ಮೆರೆಯಲರಿವುದೆ ನಿಮ್ಮ ಕಾ	ಸಿರಿಗೆ ಬಾಹಿರನಾಗಿ ಸತಿಯಳ
ತರಿಗತನವನು ಮಾಣು ಕೇಳೆಂದ	ಸೆರಗನುಡುವಂತಾಯ್ತೆ ಪರಹರಾಯೆನುತ
ಸುರರಿಪು ನುಡಿದ	ಬಿಸುಸುಯ್ದ
(ಉ.ಪ. 9–20)	(ನ. ಚ. 5–7)

ದಮಯಂತಿಯು ಅರಣ್ಯದಲ್ಲಿ ಮದಗಜಗಳ ಧಾಳಿಗೆ ತುತ್ತಾದ ಸಂದರ್ಭದಲ್ಲಿ, ತನಗೆ ಆಶ್ರಯವನ್ನಿತ್ತಿದ್ದ ವಣಿಕರಧಿಪತಿಗೆ ಕಳವಳದಿಂದ ಹೇಳುವ ಮಾತುಗಳು, ಅಜ್ಞಾತವಾಸದಲ್ಲಿರುವಾಗ ಕೀಚಕನ ಬಾಧೆಗೆ ಒಳಗಾದ ದ್ರೌಪದಿಯು ಭೀಮನೊಂದಿಗೆ ತನ್ನ ಅಳಲನ್ನು ತೋಡಿಕೊಂಡ ರೀತಿಯನ್ನೇ ಹೋಲುತ್ತದಾದರೂ. ದ್ರೌಪದಿಗೊದಗಿದ ದುರಂತ ಸನ್ನಿವೇಶದ ವಿಷಮತೆಯೆದುರು ಇದು ಅಷ್ಟು ಪರಿಣಾಮಕಾರಿಯಾಗಿಲ್ಲ ವೆನ್ನಬಹುದು.

ಜನನವೇ ವರ ಪಾಂಚಾಲರಾಯನ	ಜನನವೇ ವರ ಭೀಮರಾಯನ
ಮನೆ ಮನೋವಲ್ಲಭರದಾರೆನೆ	ಮನೆಯೊಳಗೆ ನಳಚಕ್ರವರ್ತಿಯೆ
ಮನುಜಗಿನುಜರುಗಣ್ಯವೆ ಗೀರ್ವಾ	ಇನಿಯನಗ್ಗದವೀರಸೇನನೆ ಮಾವನಾಗಿರಲು
ಣರಿಂ ಮಿಗಿಲು	ವನದೊಳಿಭಕರಿಗಳಿಗೆ ತಾ ನಿಜ
ಎನಗೆ ಬಂದೆಡರೀ ವಿರಾಟನ	ತನುವ ತೆರಬೇಕೆಂಬ ಕಾರಣ
ವನಿತೆಯರುಗಳ ಮುಡಿಯ ಕಟ್ಟುವ	ತನಗಿರಲು ನೀವೇನ ಮಾಡುವಿರೆಂದ
ತನುವ ತಿಗುರುವ ಕಾಲನೊತ್ತುವ	ಳಿಂದುಮುಖಿ
ಕೆಲಸದುತ್ಸಾಹ	
(ವಿ.ಪ. 3–60)	(ನ.ಚ. 5–49).

ಚೈದ್ಯನಗರಕ್ಕೆ ಬಂದ ದಮಯಂತಿಯನ್ನು ಅರಮನೆಯ ಬಳಿ ಕಂಡ ಚೈದ್ಯರಾಣಿ ಕರೆಸಿ ನುಡಿಸಿದ್ದು.[1] ನಳನನ್ನು ಹುಡುಕುತ್ತಾ ಋತುಪರ್ಣನ ಆಸ್ಥಾನವನ್ನು ಪ್ರವೇಶಿಸಿದ

1 ವಿ. ಪ. 3–29, ನ. ಚ. 5–55

ಸುದೇವನ ವರ್ಣನೆ[2] – ಇತ್ಯಾದಿ ಕೆಲವು ವರ್ಣನೆಗಳು, ವಿರಾಟನಗರಕ್ಕೆ ಬಂದ ದ್ರೌಪದಿಯನ್ನು ರಾಣಿ ಕರೆಸಿ ನುಡಿಸಿದ ರೀತಿಯನ್ನು, ಸ್ವಯಂವರಕ್ಕಾಗಿ ಬ್ರಾಹ್ಮಣ ವೇಷದಲ್ಲಿ ಬಂದ ಅರ್ಜುನನ ವರ್ಣನೆಯನ್ನು ಹೋಲುತ್ತವಾದರೂ ಇವು ಕೇವಲ ಯಾಂತ್ರಿಕಾನುಕರಣೆಯೆನಿಸುತ್ತವೆ. ಉದಾಹರಣೆಗೆ, ರಾಜಾಧಿರಾಜರುಗಳಿಂದಲೂ ಸಾಧ್ಯವಾಗದ ಬಿಲ್ಲನ್ನು ಹೆದೆಯೇರಿಸಿ, ಅರಸುಕುವರಿಯನ್ನು ವರಿಸುವ ಇಚ್ಛೆಯಿಂದ ಬ್ರಾಹ್ಮಣವೇಷದ ಅರ್ಜುನನು ಮೇಲೆದ್ದಾಗಿನ ಸನ್ನಿವೇಶ ಹಾಸ್ಯದ ಹೊನಲನ್ನು ಹರಿಸಿ, ವಿನೋದಕ್ಕೆಡೆಮಾಡುವಂತೆ ಅರ್ಜುನನ ಬ್ರಾಹ್ಮಣ ವೇಷದ ವರ್ಣನೆ ಪರಿಣಾಮಕಾರಿಯಾಗುವಷ್ಟು, ಬ್ರಾಹ್ಮಣನೇ ಸಹಜ ಬ್ರಾಹ್ಮಣ ವೇಷದಲ್ಲಿ ಬಂದಾಗ ಔಚಿತ್ಯದೃಷ್ಟಿಯಿಂದ ಪರಿಣಾಮಕಾರಿಯಾಗುವುದಿಲ್ಲ.

ಇನ್ನೂ ಹಲವಾರು ಇಂತಹ ಸಮಾನ ವರ್ಣನೆಗಳು ನಳಚರಿತ್ರೆಯಲ್ಲಿ ಕಂಡು ಬರುತ್ತವಾದರೂ, ಕೆಲವೆಡೆ ಅವು ಸನ್ನಿವೇಶದ ಭಾವಾಭಿವ್ಯಕ್ತಿಗೆ ಪರಿಪೋಷಕವಾಗಿ ಬಂದರೆ, ಮತ್ತೆ ಕೆಲವೆಡೆ ಯಾಂತ್ರಿಕವಾಗಿ ಬಂದಿವೆ.

ಕೆಲವೆಡೆ ಕುಮಾರವ್ಯಾಸನ ರೂಪಕಗಳನ್ನು ನೇರವಾಗಿ ಬಳಸಿಕೊಂಡರೂ, ಅವುಗಳನ್ನು ಬಳಸುವಲ್ಲಿನ ಕವಿಯ ಔಚಿತ್ಯ ಪ್ರಜ್ಞೆ ಮೆಚ್ಚುವಂಥದು.

"ಹೊಲಬುದಪ್ಪಿದ ಹುಲ್ಲೆ ಜೋಡಿನ ಬಳಿಗೆ ಬಿದ್ದಂತಾದೆನ್ನ"(ಸ.ಪ.14–22)	"ಹೊಲಬುದಪ್ಪಿದ ಹುಲ್ಲೆ ಜೋಡಿನ ಬಳಿಗೆ ಬಿದ್ದಂತಾಗೆ" (ನ.ಚ. 4–37).
"ಅಪಜಯದ ನಾರಿಯ ಸೆರಗ ಹಿಡಿದರು" (ದ್ರೋ.ಪ.6–27)	"ಅಪಜಯದ ನಾರಿಯ ಸೆರಗ ಹಿಡಿದನು" (ನ.ಚ.4–38)
"ಉರುವ ಮಾಣಿಕವೆಂದು ಕೊಂಡಡೆ ಕೆಂಡವಾದುದಲೆ" (ಆ.ಪ.4–17)	"ತೋರಮಾಣಿಕವೆಂದು ಹಿಡಿದರೆ ಭಾರಿ ಕೆಂಡವಿದಾಯ್ತು" (ನ.ಚ. 6–15).
"ದಿನಪನಿದಿರಲಿ ದಿಟ್ಟತನವೇ ತಮದ ಗಾವಳಿಗೆ" (ವಿ.ಪ.5–14)	"ದಿನಪನಿದಿರಲಿ ತಮದ ಹಾವಳಿಯೆ" (ನ.ಚ. 4–8)

ಒಟ್ಟಿನಲ್ಲಿ ಹೇಳುವುದಾದರೆ, ನಳಚರಿತ್ರೆಯಲ್ಲಿ ಕಂಡುಬರುವ ಕುಮಾರವ್ಯಾಸನ ಪ್ರಭಾವ, ಕಾವ್ಯದ ಬೆಳವಣಿಗೆ, ಭಾವಾಭಿವ್ಯಕ್ತಿಗಳಿಗೆ ಪರಿಪೋಷಕವಾಗಿ ಬಂದಿವೆ. ಈ ಪ್ರಭಾವದೊಂದಿಗೆ ಕನಕರ ಪ್ರತಿಭೆಯೂ ಒಂದಾಗಿ ಬೆರೆತು, ನಳಚರಿತ್ರೆ ಒಂದು ಉತ್ತಮ ಕಾವ್ಯವಾಗುವಂತೆ ಮಾಡಿದೆ.

ಹೀಗೆ, ನಾನಾರೀತಿಗಳಲ್ಲಿ ಕುಮಾರವ್ಯಾಸನಿಗೆ ಋಣಿಗಳಾಗಿರುವ ಕನಕದಾಸರು ಹಿರಿಯ ಕವಿಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು 'ಮೋಹನ ತರಂಗಿಣಿ'ಯ ಪ್ರಾರಂಭದಲ್ಲಿ ಈ ರೀತಿ ವ್ಯಕ್ತಪಡಿಸಿದ್ದಾರೆ.

---

2 ಆ. ಪ. 15–15. ನ. ಚ. 8–24

ಉರಗಾಲಯುವ ಪೆಸರ್ವಡೆದನ, ಮತ್ತೋ
ದರಜಾತೆಯಾತ್ಮಸಂಭವನ
ವರ ಪುರಾಣಂಗಳ ಕನ್ನಡಿಸಿದ ಕವಿ
ವರರ ಕೊಂಡಾಡುವೆ ಮುದದಿ (ಮೋ.ತ. 1–17)

ಕನಕದಾಸರ ನಂತರ ಬಂದ ಪ್ರಮುಖ ಹರಿದಾಸರೆಂದರೆ ಪ್ರಸನ್ನ ವೆಂಕಟದಾಸರು, ವಿಜಯದಾಸರು, ಗೋಪಾಲದಾಸರು, ಹಾಗೂ ಜಗನ್ನಾಥದಾಸರು. ಈ ಹಂತದ ದಾಸ ಸಾಹಿತ್ಯವನ್ನು ದ್ವಿತೀಯಘಟ್ಟವೆಂದು ಕರೆಯುವುದುಂಟು. ಪ್ರಭಾವದ ದೃಷ್ಟಿಯಿಂದ ಈ ಹಂತದ ಸಾಹಿತ್ಯ ನಿರ್ಮಿತಿಯನ್ನು ಕಂಡಾಗ, ಸ್ಪಷ್ಟ ಪ್ರಭಾವ ಕಂಡು ಬರುವುದಿಲ್ಲ. ಇದಕ್ಕೆ ಕಾರಣ – ಕಾಲದ ದೃಷ್ಟಿಯಿಂದ ಕುಮಾರವ್ಯಾಸನಿಗೂ ಈ ಹಂತದ ದಾಸರುಗಳಿಗೂ ಇರುವ ಅಂತರವೆನ್ನಬಹುದು. ಅಲ್ಲದೆ ದ್ವಿತೀಯ ಹಂತದವರೆಗಿನ ದಾಸರುಗಳು ಮೂಲಭಾಗವತ ಪಂಥದ ಪ್ರಭಾವದಲ್ಲಿ ಬೆಳೆದವರಾಗಿದ್ದು, ಹರಿನಾಮ ಮಹಾತ್ಮ್ಯ, ಅಂತರಂಗಿಕ ಭಕ್ತಿ, ಭಕ್ತನ ಜೀವನಗೆ, ಆಚಾರಶೀಲ – ಇತ್ಯಾದಿಗಳಿಗೆ ಹೆಚ್ಚಿನ ಮಹತ್ವ ನೀಡಿ, ಅವುಗಳ ಬೆಳವಣಿಗೆಗಾಗಿ ಶ್ರಮಪಟ್ಟವರು. ಆಧ್ಯಾತ್ಮಿಕ ಚಿಂತನೆ, ಜಿಜ್ಞಾಸೆಗಳಿಗಿಂತಲೂ, ನೀತಿ ಮಾರ್ಗಕ್ಕೆ, ನಿಷ್ಕಲ್ಮಷ ಭಕ್ತಿಗೆ, ಶ್ರೀ ಕೃಷ್ಣಲೀಲೆಗಳಿಗೆ ಹೆಚ್ಚಿನ ಗಮನ ನೀಡಿ, ಭಕ್ತಿಯ ಮಹಿಮೆಯನ್ನು ಎತ್ತಿ ಸಾರಲು ಪೌರಾಣಿಕ ಕಥಾ ಪ್ರಸಂಗಗಳನ್ನು ಸಾಹಿತ್ಯದ ರಸಲೇಪನದೊಂದಿಗೆ, ಜನಪ್ರಿಯವಾದ ರೀತಿಯಲ್ಲಿ ನೀಡಿದವರು. ದ್ವೈತ ತತ್ತ್ವಗಳ ಪಾರಿಭಾಷಿಕ ಶಬ್ದಗಳ ಬಳಕೆ ಹೆಚ್ಚಾಗಿ, ಈ ಕೃತಿ ನಿರ್ಮಾಣದಲ್ಲಿ ಭಕ್ತಿಗಿಂತ ಜ್ಞಾನಕ್ಕೆ ಪ್ರಮುಖ ಸ್ಥಾನ ನೀಡಿದ ಈ ಹಂತದ ಸಾಹಿತ್ಯ "ಶಾಸ್ತ್ರಸಾಹಿತ್ಯ" ವಾಗಿ ಪರಿಣಮಿಸಿತು. ಹಾಗಾಗಿ ಕುಮಾರವ್ಯಾಸನ ನೇರ ಪ್ರಭಾವವನ್ನು ಈ ಹಂತದಲ್ಲಿ ಗುರುತಿಸಲು ಸಾಧ್ಯವಿಲ್ಲವಾದರೂ, ಕುಮಾರವ್ಯಾಸನಿಂದ ಪ್ರಭಾವಿತರಾಗಿರುವ ಪುರಂದರ – ಕನಕರ ಕೃತಿಗಳಲ್ಲಿ ಪ್ರತಿಬಿಂಬಿತವಾಗಿರುವ ಪ್ರಭಾವಾಂಶಗಳೇ ಸಾಮಾನ್ಯವಾಗಿ ಇವರಲ್ಲಿಯೂ ಕಂಡುಬರುವುವು. ಹಾಗಾಗಿ ಪುರಂದರ – ಕನಕರ ಮೂಲಕ ಪ್ರಭಾವಿತರಾದ ಇವರ ಕೃತಿಗಳಲ್ಲಿ ಕುಮಾರವ್ಯಾಸನ ಅಪರೋಕ್ಷ ಪ್ರಭಾವವಿದೆಯೆನ್ನಬಹುದು.

ಕೆಲವು ಪ್ರಮುಖ ಹರಿದಾಸರುಗಳ ಕೃತಿಗಳ ವಸ್ತು ಹಾಗೂ ಕಾವ್ಯಾಂಶಗಳಲ್ಲಿ ಪ್ರಭಾವ ಕಂಡುಬರುವಂತೆ, ಭಾಷೆಯ ಬಳಕೆಯಲ್ಲೂ ಪ್ರಭಾವವನ್ನು ಗುರುತಿಸಬಹುದು. ಕುಮಾರವ್ಯಾಸನಲ್ಲಿ ಕಾಣುವ ನಡುಗನ್ನಡದ ವಿಶಿಷ್ಟ ರೂಪಗಳು, ಆಡುಮಾತಿನ ಬಳಕೆ, ಕೆಲವು ವ್ಯಾಕರಣ ನಿಷಿದ್ಧ ಪ್ರಯೋಗಗಳು ದಾಸರ ಕೃತಿಗಳಲ್ಲಿಯೂ ಕಂಡುಬರುತ್ತವೆ. ಬಹುಶಃ ಇದಕ್ಕೆ ಕಾರಣ – ಪ್ರಭಾವಕ್ಕಿಂತಲೂ ಪರಿಸರದ ಪರಿಣಾಮವೆನ್ನಬಹುದೇನೋ! ಏಕೆಂದರೆ, ಭಾಷೆ ಯಾರ ಸೊತ್ತು ಅಲ್ಲ. ಆಯಾ ಕಾಲದ ಪರಿಸರ, ಪ್ರಭಾವಗಳಿಗೆ ಅನುಸಾರವಾಗಿ, ಕೆಲವು ರೀತಿಯ ಭಾಷಾ ಪ್ರಯೋಗವು ಕೆಲವೊಂದು ಶತಮಾನಗಳವರೆಗೆ, ಇಲ್ಲವೇ ಮತ್ತೊಂದು ಭಾಷಾಪ್ರಭಾವಕ್ಕೆ ಒಳಗಾಗುವವರೆಗೆ ಒಂದೇ ರೀತಿಯಲ್ಲಿ

ಕಂಡುಬರುವುದು ಸಹಜ. ಕುಮಾರವ್ಯಾಸ ಹಾಗೂ ದಾಸರುಗಳು ಭಾಷೆ ಒಂದೇ ಸ್ಥಿತ್ಯಂತರದಲ್ಲಿರುವ ಕಾಲದಲ್ಲೇ ಇದ್ದವರಾದ್ದರಿಂದ ಪ್ರಯೋಗಗಳಲ್ಲಿ ಸಾಮ್ಯ ಕಂಡು ಬರಬಹುದಾದರೂ. ಆಡುಮಾತಿನ ಸಾವಿರಾರು ಪ್ರಯೋಗಗಳು ಇದ್ದಿರಬಹುದಾದರೂ. ಅವುಗಳನ್ನು ಸಾಹಿತ್ಯದ ಮಟ್ಟಕ್ಕೆ ಏರಿಸಿ. ಅವಕ್ಕೆ ಕಾವ್ಯದ ಹಿರಿಮೆಯನ್ನು ತಂದು ಕೊಡುವುದು ದಿಟ್ಟತನದ ಕೆಲಸವೇ ಸರಿ! ವಚನ ಸಾಹಿತ್ಯದಲ್ಲಾಗಲೇ ನಡೆದಿದ್ದ ಕ್ರಾಂತಿಯ ಹಾದಿ ಹಿಡಿದು ವ್ಯಾಕರಣ ನಿಷಿದ್ಧ ಪ್ರಯೋಗಗಳು. ದೇಸಿಯ ಬಳಕೆ ಮೊದಲಾದುವನ್ನು ಸಾಹಿತ್ಯದ ಮಟ್ಟಕ್ಕೆ ಏರಿಸಿ. ಜನಪ್ರಿಯ ಪ್ರಾತಿನಿಧ್ಯವನ್ನು ಹೆಚ್ಚಿಸಿದ ಕೀರ್ತಿ ಕುಮಾರವ್ಯಾಸನಿಗೆ ಸಲ್ಲುತ್ತದೆ. ಹಾಗಾಗಿ. ಜನಸಾಮಾನ್ಯರಿಗಾಗಿ ಸಾಹಿತ್ಯ ನಿರ್ಮಿಸಹೊರಟ ದಾಸರಿಗೆ ಈ ಮೇಲ್ಕಂಡ ದೃಷ್ಟಿಯಿಂದಲೂ. ಹಾಡಿನ ಧಾಟಿಗೆ ದೇಸಿ ಮಾಡಿಸಿಟ್ಟಂತಹ ಕಾವ್ಯವು ಕೀರ್ತನಾಕಾರರಾದ ದಾಸರಿಗೆ ಮೆಚ್ಚುಗೆಯಾದುದರಿಂದಲೂ ಆತನ ಪ್ರಭಾವಕ್ಕೆ ಹರಿದಾಸ ಪ್ರಮುಖರಲ್ಲನೇಕರು ಒಳಗಾಗಿರಬೇಕು.

ಕುಮಾರವ್ಯಾಸನ ನಂತರದ ದಾಸ ಸಾಹಿತ್ಯವನ್ನು ಸಮಗ್ರ ದೃಷ್ಟಿಯಿಂದ ಪರಿಶೀಲಿಸಿದಾಗ ಕಂಡು ಬರುವ ಮುಖ್ಯವಾದ ಅಂಶವೆಂದರೆ – ಆತನ ಪ್ರಭಾವ. ಅದು ಉದ್ದೇಶಪೂರ್ವಕವಾಗಿ ಬಂದ ಯಾಂತ್ರಿಕವಾದ ಅಂಧಾನುಕರಣೆಯಲ್ಲ. ಇದರಿಂದ ದಾಸರ ಗೌರವ ಕುಂದಿಲ್ಲ – ಬದಲಾಗಿ ಕುಮಾರವ್ಯಾಸನಿಗೆ ಗೌರವ ಸಂದಿದೆ. ದಾಸರ ಹಿರಿಮೆ ಹೆಚ್ಚಿದೆ!

ಗ್ರಂಥಋಣ

ಗ್ರಂಥದ ಹೆಸರು	ಗ್ರಂಥಕರ್ತೃ/ಸಂಪಾದಕರು	ಸಂಕೇತ
1. ಕರ್ಣಾಟಕ ಭಾರತ ಕಥಾಮಂಜರಿ 1958	ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್	
2. ಪುರಂದರ ದಾಸರ ಕೀರ್ತನೆಗಳು ಐದು ಭಾಗಗಳು, 1970	ಪಾವಂಜೆ ಗುರುರಾವ್	ಪು.ಕೀ.ಪಾವ.
3. ಶ್ರೀ ಕನಕದಾಸರ ಭಕ್ತಿಗೀತೆಗಳು 1965	ಶ್ರೀ ಕೃಷ್ಣಶರ್ಮ ಬೆಟಗೇರಿ ಮತ್ತು ಶ್ರೀ ಹುಚ್ಚರಾವ್ ಬೆಂಗೇರಿ.	ಕ.ಭ.
4. ಶ್ರೀ ಕನಕದಾಸರ ಹಾಡುಗಳು 1965	” ”	
5. ಶ್ರೀ ಕರ್ನಾಟಕ ಹರಿದಾಸ ಕೀರ್ತನ ತರಂಗಿಣಿ: ಶ್ರೀಪಾದರಾಜಸ್ವಾಮಿ ಕೃತಿಗಳು ಶ್ರೀವ್ಯಾಸರಾಯಸ್ವಾಮಿಗಳವರ ಕೃತಿಗಳು	ಸುಬೋಧ ರಾಮರಾವ್	ಕೀ. ತ. ಶ್ರೀಪಾದ ಮತ್ತು ವ್ಯಾಸ. ಕೃ.
6. ಕ. ಹ. ಕೀ. ತರಂಗಿಣಿ ಶ್ರೀವಾದಿರಾಜಸ್ವಾಮಿಗಳ ಕೃತಿಗಳು	”	ಕೀ.ತ. ಶ್ರೀವಾದಿ. ಕೃ.
7. ಕ. ಹ. ಕೀ. ತರಂಗಿಣಿ	”	ಕೃ.
ಶ್ರೀ ಗೋಪಾಲದಾಸರ ಕೃತಿಗಳು		
ಶ್ರೀ ಮೋಹನದಾಸರ ಕೃತಿಗಳು	”	ಕೀ.ತ.ಗೋ. ಕೃ
8. ಶ್ರೀ ಕರ್ನಾಟಕ ಹರಿದಾಸ ಕೀರ್ತನ ತರಂಗಿಣಿ, ಭಾಗ–4	”	ಕೀ.ತ. ಭಾ 4.
9. ಕವಿ ಕನಕದಾಸರು, 1938	ಬೆಳಗಾವಿ ಕಟ್ಟಿ ಶೇಷಾಚಾರ್ಯರು	
10. ಕನಕದಾಸ ಪ್ರಶಸ್ತಿ ಗ್ರಂಥ. 1965	ಶ್ರೀ ಕನಕದಾಸರ ನಾಲ್ಕನೆಯ ಶತಮಾನೋತ್ಸವ ಸಮಿತಿ	
11. ನಳಚರಿತೆ. 1965	ದೇ. ಜವರೇಗೌಡ	ನ.ಚ.
12. ರಾಮಧಾನ್ಯ ಚರಿತೆ, 1965	” ”	ರಾ. ಚ.
13. ಹರಿಭಕ್ತಿಸಾರ. 1965	ಬಿ. ಶಿವಮೂರ್ತಿಶಾಸ್ತ್ರಿ, ಕೆ. ಎಂ. ಕೃಷ್ಣರಾವ್	ಹ.ಸಾ.

ಗ್ರಂಥದ ಹೆಸರು	ಗ್ರಂಥಕರ್ತೃ/ಸಂಪಾದಕ	ಸಂಕೇತ
14. ಕನಕದಾಸರ ಮೋಹನ ತರಂಗಿಣಿ ಸಂಗ್ರಹ, 1970	ಬಿ.ಎಸ್. ಸಣ್ಣಯ್ಯ	
15. ಮೋಹನ ತರಂಗಿಣಿ ಎಂಬ ಶ್ರೀ ಕೃಷ್ಣಚರಿತ್ರೆ. 1913	ಮಂ. ಆ. ರಾಮಾನುಜಯ್ಯಂಗಾರ್	ಮೋ. ತ.
16. ಕಾವ್ಯಾನುಶೀಲನ. 1968	ರಾಗೌ.	
17. ದಾಸಸಾಹಿತ್ಯ; ದ್ವಿತೀಯ ಘಟ್ಟದ ಸಾಧನೆ, 1970.	ಕರ್ನಾಟಕ ವಿಶ್ವವಿದ್ಯಾಲಯ	
18. ಕರ್ನಾಟಕ ಹರಿದಾಸರು, 1965	ಡಾ॥ ಎಚ್. ಕೆ. ವೇದವ್ಯಾಸಾಚಾರ್ಯ	
19. ಕನ್ನಡ ಸಾಹಿತ್ಯ ಚರಿತ್ರೆ	ರಂ. ಶ್ರೀ .ಮುಗಳಿ	ಕ.ಸಾ.ಚ.
20. ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ 1964	ತ.ಸು. ಶಾಮರಾವ್ ಮೇ. ರಾಜೇಶ್ವರಯ್ಯ	ಜ.ಕ.ಸಾ.ಚ.
21. ಶ್ರೀ ಪ್ರಸನ್ನ ವೆಂಕಟದಾಸರು ಮತ್ತು ಅವರ ಕೃತಿಗಳು, 1956	ಡಾ॥ ಎ. ಟಿ. ಪಾಟೀಲ	
22. ಶ್ರೀ ಜಗನ್ನಾಥದಾಸರು, 1956	ಡಾ॥ ಕೆ. ಎಂ. ಕೃಷ್ಣರಾವ್	
23. ಹರಿಕಥಾಮೃತಸಾರ	ಸಿಟಿ ಬುಕ್ ಸ್ಟಾಲ್, ಹುಬ್ಬಳ್ಳಿ	
24. ಹರಿಭಕ್ತಿಸುಧೆ	ರಂ. ರಾ. ದಿವಾಕರ	
25. ಪ್ರಬುದ್ಧ ಕರ್ಣಾಟಕ ಸಂ 52 ಸಂಚಿಕೆ–3		
26. ಹರಿದಾಸ ಹೃದಯ. 1967	ಡಾ॥ ಜಿ. ವರದರಾಜರಾವ್	
27. ಶ್ರೀ ಪುರಂದರದಾಸ ದರ್ಶನ	ಆರ್. ಜಿ. ಕುಲಕರ್ಣಿ	
28 Purandaradasa	V. Sitaramaiah	
29. ಶ್ರೀಪುರಂದರದಾಸರ ಜೀವನ ಚರಿತ್ರೆ	ಆರ್. ಎಸ್ ಪಂಚಮುಖಿ	
30 Mystic Teachings of the Haridasas of Karnataka	A. P. Karmarkar N. B. Kalamdani	
32. ಪರಿಶೀಲನ	ಜಿ. ಎಸ್. ಶಿವರುದ್ರಪ್ಪ	
33. ಪ್ರಬುದ್ಧ ಕರ್ಣಾಟಕ–ಸಂಪುಟ 52, ಸಂಚಿಕೆ 2		
34. ಮನ್ವಂತರ–ತೃತೀಯ ಸಂಪುಟ, 1964	ಮನ್ವಂತರ ಪ್ರಕಾಶನ. ಧಾರವಾಡ	
35. ಹರಿದಾಸ ಸಾಹಿತ್ಯ	ಆರ್. ಎಸ್. ಪಂಚಮುಖಿ	
36. ಶ್ರೀ ಗುರುವಾದಿರಾಜರ ಕೀರ್ತನೆಗಳು.	ಅಮ್ಮೆಂಬಳ ಶಂಕರನಾರಾಯಣ	

ಗ್ರಂಥದ ಹೆಸರು	ಗ್ರಂಥಕರ್ತೃ/ ಸಂಪಾದಕ	ಸಂಕೇತ
37. ಶೈಲಿ, ಭಾಗ 3	ಡಾ|| ಎಸ್. ವಿ. ರಂಗಣ್ಣ	
38. ಕುಮಾರವ್ಯಾಸ ಪ್ರಶಸ್ತಿ		
39. ಕುಮಾರವ್ಯಾಸ	ಸುಜನಾ	
40. ಅಭಿನಂದನೆ (ಎ. ಆರ್. ಕೃ. ಪ್ರಶಸ್ತಿ ಗ್ರಂಥ)		
41 Purandaradasa & the Haridasa Movement	Prof: M. V. Krishna Rao	
42. ವಚನ ಭಾರತ	ಎ. ಆರ್. ಕೃಷ್ಣಶಾಸ್ತ್ರೀ	
43. ಅರಣ್ಯಪರ್ವ	Bhandarkar Oriental Research Institute, Poona	
44. ಸಭಾಪರ್ವ	,,	
45. ಉದ್ಯೋಗಪರ್ವ	,,	

ಸಾರ್ವಜನಿಕ ಉದ್ಯಮಗಳಲ್ಲಿ ದಕ್ಷತೆ ಮಾಪನ

ಟಿ. ಬಿ. ಚಂದ್ರಶೇಖರಯ್ಯ

ಸಾರ್ವಜನಿಕ ಉದ್ಯಮಗಳಲ್ಲಿ ದಕ್ಷತೆಯನ್ನು ನಿರ್ಧರಿಸುವ ಅಂಶಗಳು ಖಾಸಗೀ ಉದ್ಯಮಗಳಲ್ಲಿ ಇರುವುದಕ್ಕಿಂತ ಭಿನ್ನವಾಗಿರುತ್ತವೆ. ಒಂದು ಖಾಸಗೀ ಕೈಗಾರಿಕೆಯಲ್ಲಿ ಅದು ಗಳಿಸಿದ ಲಾಭದ ಪ್ರಮಾಣವು ಅದರ ದಕ್ಷತೆಯನ್ನು ಸೂಚಿಸುತ್ತದೆ. ಹಾಕಿದ ಬಂಡವಾಳಕ್ಕೆ ಅನತಿಕಾಲದಲ್ಲಿಯೇ ಸೂಕ್ತವಾದ ಪ್ರತಿಫಲ ದೊರೆಯುವ ಸೂಚನೆಗಳನ್ನು ಸಾಕಷ್ಟುಮಟ್ಟಿಗೆ ಪಡೆದಿದ್ದರೆ ಮಾತ್ರ ಖಾಸಗೀ ಬಂಡವಾಳ ಹೂಡಿಕೆಯು ಸಮರ್ಥನೀಯವಾಗುತ್ತದೆ. ಇಲ್ಲಿ ನಮ್ಮ ಗಮನವನ್ನು ಸೆಳೆಯಬೇಕಾದ ಮುಖ್ಯ ವಿಚಾರವೆಂದರೆ. ಲಾಭವು ಏಕಸ್ವಾಮ್ಯತೆಯನ್ನು ಹೊಂದಿರುವ ಕೈಗಾರಿಕೆಯಲ್ಲಿ ಉಂಟಾಗಿದೆಯೇ, ಇಲ್ಲಾ ಪೈಪೋಟಿಯನ್ನು ಎದುರಿಸುವ ಕೈಗಾರಿಕೆಗಳಲ್ಲಿ ಉಂಟಾಗಿದೆಯೇ. ಎಂಬುದು. ಏಕಸ್ವಾಮ್ಯವಿರುವ ಕೈಗಾರಿಕೆಯು ಉತ್ಪಾದನೆಯನ್ನು ಕುಂಠಿತಗೊಳಿಸಿ. ತನ್ಮೂಲಕ ಉಂಟಾದ ಸರಬರಾಜಿನ ಕೊರತೆಯ ಮೂಲಕ ಬೇಡಿಕೆ ಮತ್ತು ಬೆಲೆಗಳ ಮೇಲೆ ಪ್ರಭಾವವನ್ನು ತಂದು ಲಾಭವನ್ನು ಗಳಿಸಬಹುದು. ಇಂತಹ ಲಾಭಗಳಿಕೆ ನಿಜವಾದ ದಕ್ಷತೆಯ ಕುರುಹಾಗುವುದಿಲ್ಲ. ಏಕೆಂದರೆ ಇಲ್ಲಿನ ಆದಾಯವು. ಉದ್ಯಮವು ತನ್ನ ಕ್ಷೇತ್ರದಲ್ಲಿ ಆಕ್ರಮಿಸಿಕೊಂಡಿರುವ ಸ್ಥಾನಬಲದಿಂದ ಬಂದದ್ದು. ಈ ಅನುಕೂಲ ಪೈಪೋಟಿಯನ್ನು ಎದುರಿಸುವ ಕೈಗಾರಿಕೆಯಲ್ಲಿ ಸಾಧ್ಯವಿಲ್ಲ. ಅದು ನಿಜವಾಗಿಯೂ ದಕ್ಷತೆಯಿಂದಲೇ ನಡೆಯಬೇಕು. ಉತ್ಪನ್ನ ಮತ್ತು ಸೇವೆಗಳ ಗುಣಮಟ್ಟವನ್ನು ಉಳಿಸಿಕೊಂಡು. ಉತ್ಪಾದನೆ ಹಾಗೂ ನಿರ್ವಹಣೆ ವೆಚ್ಚಗಳನ್ನು ಆದಷ್ಟು ಕಡಿಮೆ ಮಾಡಿಕೊಂಡು ಲಾಭವನ್ನು ಗಳಿಸುವಿಕೆ ದಕ್ಷತೆಯ ಸಂಕೇತವಾಗುವುದು.

ಸರ್ಕಾರಿ ಉದ್ಯಮ ಸಂಸ್ಥೆಯೂ ಸಹ ಇಂತಹ ವಾಣಿಜ್ಯ ತತ್ವಗಳ ಆಧಾರದ ಮೇಲೆಯೇ ಕೆಲಸಮಾಡಬೇಕು. ಉತ್ತಮವಾದ ಖಾಸಗೀ ಉದ್ಯಮದ ವಿಧಾನಗಳನ್ನೇ ಅನುಸರಿಸಿ ಲಾಭವನ್ನು ಗಳಿಸಬೇಕು. ಅಜಾಗರೂಕತೆ ಮತ್ತು ಉಪೇಕ್ಷೆಗಳು ತಲೆದೋರದಂತೆ ಎಚ್ಚರಿಕೆವಹಿಸಬೇಕು. ಖಾಸಗೀ ರಂಗದಲ್ಲಿ ಸಾಮಾನ್ಯವಾಗಿ ಹೂಡಿದ ಬಂಡವಾಳಕ್ಕೆ ಹೆಚ್ಚು ಶೇಕಡಾವಾರು ಲಾಭ ದೊರೆತರೆ ದಕ್ಷತೆಯ ಸೂಚನೆಯಾಗುವಂತೆ. ಸರ್ಕಾರೀ ಉದ್ಯಮದಲ್ಲಿ ಅನುಭೋಗಿಗಳ ಹಿತಸಾಧನೆ ಮತ್ತು ರಾಷ್ಟ್ರೀಯ ಕ್ಷೇಮದ ದೃಷ್ಟಿಯಿಂದ ಉತ್ಪಾದನೆಯನ್ನು ಗರಿಷ್ಠಗೊಳಿಸಿ ಮಾರಾಟದ ಬೆಲೆಗಳನ್ನು ಇಳಿಸಲು ಸಾಧ್ಯವಾಗುವುದಾದರೆ ನಿಸ್ಸಂದೇಹವಾಗಿ ದಕ್ಷತೆಯ ಸೂಚನೆಯಾಗುವುದು.

ಒಂದು ಖಾಸಗೀ ಉದ್ಯಮವನ್ನು ರಾಷ್ಟ್ರೀಕರಣಗೊಳಿಸಿದಾಗ, ಇದಕ್ಕೆ ಮುಂಚಿ ಮತ್ತು ನಂತರದ ಸ್ಥಿತಿಗಳಲ್ಲಿ ಹೋಲಿಕೆ ಸಾಧ್ಯ. ಆದರೆ ಈ ರೀತಿ ಹೋಲಿಸುವಾಗ ರಾಷ್ಟ್ರೀಕರಣದ ನಂತರ ಉದ್ಯಮದ ಉದ್ದೇಶ, ನೀತಿ ಮತ್ತು ಆಡಳಿತ ವಿಧಾನದಲ್ಲಿ ಕೆಲವು ಬದಲಾವಣೆಗಳಾಗುತ್ತವೆ ಎಂಬುದನ್ನು ಕಾಣುತ್ತೇವೆ. ರಾಷ್ಟ್ರೀಕರಣಕ್ಕೆ ಮುಂಚಿ ಇದ್ದ ಲಾಭಗಳು ಅನಂತರ ಕಡಿಮೆಯಾದರೆ ಆ ಉದ್ಯಮವು ಟೀಕೆಗೆ ಒಳಗಾಗುವುದು ಸಹಜ. ಲಾಭಗಳು ಇಳಿದುವೆಂಬ ಆತುರದ ನಿರ್ಧಾರದಿಂದ, ದಕ್ಷತೆಯನ್ನು ತೋರಿಸುವ ಇತರ ಪ್ರಶಂಸಾರ್ಹವಾದ ಮತ್ತು ಸ್ಪಷ್ಟವಾದ ಸಾಧನೆಗಳನ್ನು ಮರೆಯುವುದು ತಪ್ಪಾಗುವುದು. ಉದಾಹರಣೆಗೆ, ಒಂದು ಸಾರಿಗೆ ಸಂಸ್ಥೆ ಖಾಸಗೀ ಒಡೆತನದಲ್ಲಿದ್ದಾಗ ಲಾಭದಾಯಕವಾದ ಮಾರ್ಗಗಳಲ್ಲಿ ತನ್ನ ಸೇವೆಗಳನ್ನು ಒದಗಿಸುತ್ತಿದ್ದು, ರಾಷ್ಟ್ರೀಕರಣದ ನಂತರ ದೇಶದ ವಿಶಾಲಹಿತದ ದೃಷ್ಟಿಯಿಂದ, ಇದುವರೆಗೂ ಅಭಿವೃದ್ಧಿಹೊಂದದ ಜನಸಂಖ್ಯೆ ನಿಬಿಡವಲ್ಲದ, ಲಾಭದಾಯಕವಲ್ಲದ ಮಾರ್ಗಗಳಲ್ಲಿ ಕಾರ್ಯಮಗ್ನವಾಗ ಬಹುದು. ಇಲ್ಲಿ ಉದ್ಯಮದ ದಕ್ಷತೆಯನ್ನು ಮುಂದೆ ದೊರೆಯಬಹುದಾದ ಲಾಭಕ್ಕಾಗಿ ರೂಢಿಸಿಕೊಳ್ಳುವ ನಿರ್ವಹಣೆಚಾತುರ್ಯದ ಮಟ್ಟದಿಂದ ಅಳೆಯಬೇಕೇ ವಿನಾ ತಾತ್ಕಾಲಿಕವಾದ ಲಾಭಗಳಿಕೆಯ ದೃಷ್ಟಿಯಿಂದಲ್ಲ. ಅಲ್ಲದೆ ಉದ್ಯಮ ಸಂಸ್ಥೆಯು ಕೆಲಸಮಾಡುವ ಎರಡೂ ಕಾಲಗಳ ಪರಿಸ್ಥಿತಿ ಬೇರೆಯಾಗಿರಬಹುದು. ರಾಷ್ಟ್ರೀಕೃತವಾದ ಉದ್ಯಮ ಯಾವ ಸನ್ನಿವೇಶ ಮತ್ತು ಪರಿಸ್ಥಿತಿಯಲ್ಲಿ ಕೆಲಸಮಾಡುತ್ತಿದೆ ಎಂಬುದೂ ಮುಖ್ಯ. ಯಾವುದೇ ಸಾರ್ವಜನಿಕ ಉದ್ಯಮವು ಅಂತಹುದೇ ಒಂದು ಖಾಸಗೀ ಸಂಸ್ಥೆಯೊಡನೆ ಪೈಪೋಟಿ ನಡೆಸುವಂತಿದ್ದು, ಸರ್ಕಾರದಿಂದ ಯಾವ ರೀತಿಯ ವಿಶೇಷ ರೀತಿಯ ಸವಲತ್ತು ಮತ್ತು ಸೌಕರ್ಯಗಳನ್ನು ಪಡೆಯದೇ ಇದ್ದು, ಉತ್ತಮವಾದ ಆಡಳಿತ ನಿರ್ವಹಣೆಯಿಂದ ಕೂಡಿದ್ದು, ಆ ಮೂಲಕ ದೊರೆಯುವ ಉತ್ಪಾದನೆ ಮತ್ತು ಲಾಭಗಳು ಅದರ ದಕ್ಷತೆಯನ್ನು ಸೂಚಿಸುವುದಾದರೆ, ಇಂತಹ ಸಂದರ್ಭಗಳಲ್ಲಿ ಸರ್ಕಾರೀ ಉದ್ಯಮವನ್ನು ಖಾಸಗೀ ಉದ್ಯಮದೊಂದಿಗೆ ಹೋಲಿಸಲು ಸಾಧ್ಯವಾಗುವುದು.

ಏಕಸ್ವಾಮ್ಯವನ್ನು ಹೊಂದಿರುವ ಸರ್ಕಾರೀ ಉದ್ಯಮವು ತನ್ನ ಉತ್ಪನ್ನ ಮತ್ತು ಸೇವೆಗಳಿಗೆ, ಬದಲೀ ಉತ್ಪನ್ನಗಳ ಸಾಧ್ಯತೆ ಕಡಿಮೆಯಿರುವಾಗ, ಲಾಭವನ್ನು ಕೂಡಿ ಹಾಕಲು ಸಾಧ್ಯವಾಗುವಂತಹ ದರಗಳನ್ನು ಗೊತ್ತುಮಾಡುವುದು ಸುಲಭವಾದರೂ, ತನ್ನ ಹೆಚ್ಚುವರಿ ಸಂಪಾದನೆಗಳಿಗೆ ಆ ಮಾರ್ಗವನ್ನು ಬಿಟ್ಟು ತಯಾರಿಕೆಯ ವೆಚ್ಚವನ್ನು ಆದಷ್ಟು ಕಡಿಮೆ ಮಾಡಬೇಕೆಂಬ ಉದ್ದೇಶವನ್ನು ಹೊಂದಿರಬೇಕು. ಉದ್ಯಮ ಸ್ಥಾಪನೆಯ ಸಂಬಂಧದ ವೆಚ್ಚದ ಅಂದಾಜುಗಳು ಸಮರ್ಪಕವಾಗಿಲ್ಲದಿದ್ದರೆ, ಅಂದಾಜುಗಳನ್ನು ಆಗಿಂದಾಗ್ಗೆ ಪುನರ್ವಿಮರ್ಶಿಸುತ್ತಿದ್ದರೆ, ಕಾರ್ಯ ಪ್ರಗತಿಯ ದಕ್ಷತೆಯನ್ನು ಅಳೆಯುವುದು ಕಷ್ಟವಾಗುತ್ತದೆ. ಒಂದು ಯೋಜನೆಯು ಕಾರ್ಯರೂಪಕ್ಕೆ ಬರುವಾಗ ಶ್ರಮದ ಭಾಗವೆಷ್ಟು, ಬಂಡವಾಳದ ಭಾಗವೆಷ್ಟು, ವಿದೇಶೀ ವಿನಿಮಯದ ಭಾಗವೆಷ್ಟು ಎಂಬುದರ

ಬಗ್ಗೆ ಖಚಿತವಾದ ಅಭಿಪ್ರಾಯಗಳಿಲ್ಲದಿದ್ದರೆ, ಯಾವ ಯೋಜನೆಯೂ ನಿರೀಕ್ಷಿಸಿದ ಕಾಲಕ್ಕೆ ಮುಗಿಯುವುದಿಲ್ಲ. ಬಂಡವಾಳವನ್ನು ಒದಗಿಸಿದರೂ ಸಾಕಷ್ಟು ಅನುಭವಿ ತಾಂತ್ರಿಕ ಸಿಬ್ಬಂದಿಯ ಕೊರತೆಯಿಂದ ದಕ್ಷತೆ ಕುಂದಬಹುದು. ಉದ್ಯಮಕ್ಕೆ ದೊರಕುವ ಮಾನವಶಕ್ತಿಯನ್ನೂ, ಸಾಮಗ್ರಿಗಳನ್ನೂ ಸ್ವಲ್ಪವೂ ಅಪವ್ಯಯವಾಗದಂತೆ ಎಚ್ಚರಿಕೆ ವಹಿಸದಿದ್ದರೆ ವೆಚ್ಚಗಳು ವೃಥಾ ಹೆಚ್ಚುವುವು.

ಸರ್ಕಾರೀ ಉದ್ಯಮಗಳ ಯಶಸ್ವೀ ನಿರ್ವಹಣೆಗೆ ಲಾಭಗಳಿಕೆ ಅನಿವಾರ್ಯವೆಂಬ ತತ್ವವನ್ನು ಒಪ್ಪಿಕೊಂಡರೆ ಲಾಭವು ಯಾವ ಪ್ರಮಾಣದಲ್ಲಿರಬೇಕೆಂಬುದು ಮುಂದಿನ ಪ್ರಶ್ನೆ. ಒಂದು ಖಾಸಗೀ ಉದ್ಯಮವು ತನ್ನ ಉತ್ಪನ್ನಗಳಿಗೆ ಮಾರಾಟದ ದರಗಳನ್ನು ಗೊತ್ತುಪಡಿಸುವಾಗ, ತಯಾರಿಕೆಯ ವೆಚ್ಚಗಳನ್ನು (ತೆರಿಗೆಗಳೂ ಸೇರಿ) ಸರಿದೂಗಿಸುವಂತೆಯೂ, ಹಾಗೂ ಭವಿಷ್ಯದಲ್ಲಿ ಬಂಡವಾಳವನ್ನು ಆಕರ್ಷಿಸುವ ಲಾಭವನ್ನು ತರುವಂತೆಯೂ ಇರಬೇಕು. ಸರ್ಕಾರೀ ಉದ್ಯಮವು ತನ್ನ ವೆಚ್ಚಗಳನ್ನು ಪೂರ್ಣವಾಗಿ ತುಂಬಿಸುವುದೇ ಅಲ್ಲದೆ ಸರ್ಕಾರದ ಸಾಮಾನ್ಯ ನಿಧಿಗೆ ವರ್ಗಾಯಿಸಲು ಅವಶ್ಯವಾದ ಲಾಭಗಳನ್ನು ಗಳಿಸಬೇಕೆಂಬುದು ಒಂದು ವಾದ. ಆದರೆ ಇದು ಒಮ್ಮೊಮ್ಮೆ ನಷ್ಟವನ್ನು ಅನುಭವಿಸಿದರೂ ಸಮಾಜದ ಹಿತದೃಷ್ಟಿಯಿಂದ ಸ್ವೀಕಾರಾರ್ಹವಾದ ನೀತಿಯೆನಿಸಬಹುದು. ಸರ್ಕಾರದ ಆಶಯಗಳು ಸ್ವಾಭಾವಿಕವಾಗಿ ಖಾಸಗೀ ಉದ್ದೇಶಗಳಿಗಿಂತ ವಿಶಾಲವಾದುವು. ತಯಾರಿಕೆಯ ವೆಚ್ಚಕ್ಕೆ ಸಮನಾದ ಅಥವಾ ಅದಕ್ಕಿಂತ ಕಡಿಮೆಯಾದ ದರಗಳಿಗೆ ಮಾರುವುದು (ಆಗುವ ನಷ್ಟವನ್ನು ಖಜಾನೆಯಿಂದ ತುಂಬಿಕೊಟ್ಟು) ಅಥವಾ ಯೋಜಿತ ನಷ್ಟದಲ್ಲಿ ಕೆಲಸಮಾಡುವುದು ಅವ್ಯಾವಹಾರಿಕವಾಗುವುದಿಲ್ಲ.

ಅಭಿವೃದ್ಧಿಶೀಲ ದೇಶಗಳಲ್ಲಿ ಸರ್ಕಾರೀ ಉದ್ಯಮದ ಬೆಲೆ ಮತ್ತು ಲಾಭ ನೀತಿಯನ್ನು ಕುರಿತು ಸುದೀರ್ಘ ಚರ್ಚೆ ನಡೆದಿದೆ. ಲಾಭದ ಮಟ್ಟದ ಮೂಲಕ ದಕ್ಷತೆಯನ್ನು ನಿರ್ಧರಿಸಲು ಸಾಧ್ಯ ಎಂಬ ಒಂದು ಅಭಿಪ್ರಾಯವಿದೆ. ಸರ್ಕಾರೀ ಉದ್ಯಮಗಳು ಸಾಮಾನ್ಯವಾಗಿ ಹೆಚ್ಚು ಲಾಭಕ್ಕಾಗಿ ಆಶಿಸಬಾರದು ಎಂಬುದು ಒಂದು ವಾದವಾದರೆ, ಅವು 'ಲಾಭವೂ ಇಲ್ಲ ನಷ್ಟವೂ ಇಲ್ಲ' ಎಂಬ ನೀತಿಯನ್ನು ಅನುಸರಿಸಬೇಕೆಂಬುದು ಇನ್ನೊಂದು ವಾದ. ಎಂದರೆ ಉದ್ಯಮದ ಸಮಗ್ರ ವರಮಾನಗಳು, ಅದರ ಸಮಗ್ರ ಖರ್ಚುಗಳಿಗೆ ವರ್ಷವರ್ಷದ ಹೊಂದಾಣಿಕೆಯಿಂದ ಸಮನಾಗಬೇಕು. ಒಂದುವೇಳೆ ಮಾರುಕಟ್ಟೆಯ ಪರಿಸ್ಥಿತಿಯಿಂದ ಕೆಲವು ಕಾಲ ಹೆಚ್ಚು ಲಾಭಗಳು ದೊರೆತರೆ, ಮುಂದೆ ಮಾರಾಟದ ಬೆಲೆಗಳಲ್ಲಿ ಇಳಿತಾಯವನ್ನು ತಂದು ಅನುಭೋಗಿಗಳ ಒಳಿತನ್ನು ಸಾಧಿಸಬೇಕೇ ವಿನಾ ಉತ್ಪಾದನೆಯ ಪ್ರಮಾಣವನ್ನು ಎಂದಿಗೂ ಕಡಿಮೆಮಾಡಲಾಗದು. ಮತ್ತೊಂದು ಅಭಿಪ್ರಾಯದಂತೆ, ಈ ಉದ್ಯಮಗಳು ಒದಗಿಸುವ ವಸ್ತು ಮತ್ತು ಸೇವೆಗಳನ್ನು 'ಆರ್ಥಿಕ ಬೆಲೆಗೆ' ಮಾರಾಟಮಾಡಬೇಕು. ಎಂದರೆ ತಯಾರಿಕೆಯ ವೆಚ್ಚಗಳ ಜೊತೆಗೆ, ಉದ್ಯಮವನ್ನು ಕಾಪಾಡಿಕೊಂಡು ಬರಲು ಮತ್ತು ಅಭಿವೃದ್ಧಿ

ಗೊಳಿಸಲು ಬೇಕಾದ ಆದಾಯವನ್ನು ಪಡೆಯುವಂತಹ ದರಗಳನ್ನು ಗೊತ್ತುಪಡಿಸುವುದು. ಮುಂದೆ ಅವು ಕೆಲವು ಕಾಲಾನಂತರ ಯೋಜಿತ ಲಾಭಗಳನ್ನು ಗಳಿಸುವಂತೆ ನಿರ್ವಹಿಸಲ್ಪಡಬೇಕು. ತಮ್ಮ ಸಂಪನ್ಮೂಲಗಳನ್ನು ಬೆಳೆಸಿಕೊಂಡು ಸ್ವಾವಲಂಬಿಯಾಗುವಂತಹ ದರ ಮತ್ತು ಲಾಭ ನೀತಿಯನ್ನು ಅನುಸರಿಸಬೇಕು. ಇಂತಹ ವಿಚಾರಕ್ಕೆ ಮುಖ್ಯ ಕಾರಣ. ಅಭಿವೃದ್ಧಿಶೀಲ ದೇಶಗಳು ತಾವು ರೂಪಿಸಿದ ಅಭಿವೃದ್ಧಿ ಯೋಜನೆಗಳಿಗೆ ಸಾಕಾಗುವಷ್ಟು ಹಣವನ್ನು. ತೆರಿಗೆ. ಉಳಿತಾಯಗಳು ಮತ್ತು ಸಾಲ ಪತ್ರಿಕೆ ಮಾರ್ಗಗಳಿಂದ ಪಡೆಯಲು ಸಾಧ್ಯವಾಗದೇ ಇರುವುದು. ಸರ್ಕಾರಿ ಉದ್ಯಮಗಳು ಹೆಚ್ಚುವರಿ ಲಾಭಗಳನ್ನು ಗಳಿಸಿಕೊಟ್ಟರೆ ಅದನ್ನು ದೇಶದ ಇತರ ಕ್ಷೇತ್ರಗಳಲ್ಲಿ ಖರ್ಚುಮಾಡಲು ಸರ್ಕಾರಕ್ಕೆ ನೀಡಲಾಗುವುದು. ಖಾಸಗೀ ಕಂಪನಿಗಳು ಲಾಭವನ್ನು ಗಳಿಸಿ ಷೇರುದಾರರಿಗೆ ಹಂಚಲು ಸಾಧ್ಯವಿದ್ದರೆ. ಸರ್ಕಾರಿ ಸಂಸ್ಥೆಗಳೂ ಲಾಭ ಗಳಿಸಿ ಸರ್ಕಾರಕ್ಕೆ ನೀಡಬಹುದು.

ಕೆಲವು ಸಂದರ್ಭಗಳಲ್ಲಿ ಲಾಭವನ್ನು ಗರಿಷ್ಠಗೊಳಿಸುವ ನೀತಿಗೆ ಪ್ರತಿಯಾಗಿ ಲಾಭವಿಲ್ಲದ ದರಗಳನ್ನು ಗೊತ್ತುಮಾಡಿದರೆ. ಸಾಮಾನ್ಯವಾಗಿ ದೇಶದ ಆರ್ಥಿಕ ಕ್ಷೇತ್ರವು ಕಾಲಕ್ರಮದಲ್ಲಿ ಹೆಚ್ಚು ಪ್ರತಿಫಲವನ್ನು ತರಬಲ್ಲದು. ಉದಾಹರಣೆಗೆ ಸರ್ಕಾರೀ ಉದ್ಯಮವು ತಯಾರಿಸುವ ರಾಸಾಯನಿಕ ಗೊಬ್ಬರಗಳಿಗೆ ಸರ್ಕಾರವು ಲಾಭ ತಪ್ಪಿ ಹೋಗುವ ಬೆಲೆಗಳನ್ನು ನಿಗದಿಮಾಡಬಹುದು. ಈ ಗೊಬ್ಬರಗಳ ಉಪಯೋಗದಿಂದ ಹೆಚ್ಚಿದ ವ್ಯವಸಾಯದ ಉತ್ಪಾದನೆಯು ಮುಂದೆ ಸರ್ಕಾರಕ್ಕೆ ಹೆಚ್ಚಿನ ವ್ಯವಸಾಯ ವರಮಾನ ತೆರಿಗೆಯನ್ನೋ ಇತರ ತೆರಿಗೆಗಳನ್ನೋ ಸಂಪಾದಿಸಿ ಹಿಂದೆ ಕಳೆದುಕೊಂಡ ಲಾಭಗಳಿಗಿಂತ ಹೆಚ್ಚುಪಾಲು ಆದಾಯವನ್ನು ದೊರಕಿಸಬಹುದು. ಕಲ್ಲಿದ್ದಲು. ಉಕ್ಕು. ವಿದ್ಯುತ್ ಮುಂತಾದುವುಗಳನ್ನು ಹೆಚ್ಚು ಲಾಭವಿಲ್ಲದೆ ಮಾರಾಟಮಾಡಿದರೆ. ದೇಶದ ಉತ್ಪಾದನಾ ಚಟುವಟಿಕೆಗಳಿಗೂ ರಫ್ತುಗಳಿಗೂ ಉತ್ತೇಜನ ಕೊಟ್ಟಂತಾಗುವುದು. ಆದ್ದರಿಂದ ಸರ್ಕಾರೀ ಉದ್ಯಮಗಳ ಗುರಿ ಕೇವಲ ಹೆಚ್ಚುವರಿ ಸಂಪಾದನೆಯಲ್ಲದೆ. ದೇಶದ ಮೂಲ ಆರ್ಥಿಕ ಗುರಿಗಳನ್ನು ಸಾಧಿಸುವ ದಿಸೆಯಲ್ಲಿರಬೇಕು.

ಸಾರ್ವಜನಿಕ ಉದ್ಯಮಗಳು ಸಮರ್ಪಕವಾಗಿ ತಮ್ಮ ಕಾರ್ಯವನ್ನು ನಿರ್ವಹಿಸಿವೆಯೇ ಎಂಬುದನ್ನು ತೀರ್ಮಾನಿಸಲು. ಅವುಗಳಲ್ಲಿ ಪ್ರತಿಯೊಂದೂ ಯಾವ ಉದ್ದೇಶಕ್ಕಾಗಿ ಸ್ಥಾಪಿಸಲ್ಪಟ್ಟಿದೆ ಎಂಬುದನ್ನು ಗಮನದಲ್ಲಿಡಬೇಕು. ಕೈಗಾರಿಕಾಭಿವೃದ್ಧಿಗೆ ಹಣ ಸಹಾಯ ನೀಡುವ ಒಂದು ಪ್ರವರ್ತನ ಸಂಸ್ಥೆ. ಕೆಲವು ಗೊತ್ತಾದ ಪ್ರದೇಶಗಳಿಗೆ ಅಥವಾ ಗೊತ್ತಾದ ಕೈಗಾರಿಕೆಗಳಿಗೆ ನೆರವು ನೀಡಲು ಸ್ಥಾಪಿತವಾಗಿರಬಹುದು. ಇದರ ನಿರ್ವಹಣೆ ವಾಣಿಜ್ಯ ಸ್ವರೂಪವಾಗಿರುವುದಿಲ್ಲ. ಹೀಗೆಯೇ ಒಂದು ನೀರಾವರೀ ಯೋಜನೆಯ ಸಾರ್ಥಕತೆಯನ್ನು ತೀರ್ಮಾನಿಸುವಾಗ ಅದು ಒಟ್ಟು ಎಷ್ಟು ಎಕರೆಗೆ ನೀರನ್ನು ಒದಗಿಸಿದೆ ಎಂಬುದು ಮುಖ್ಯ. ಅಂಚೆ ಇಲಾಖೆ ಎಷ್ಟು ಊರುಗಳಿಗೆ ಅಥವಾ ಗ್ರಾಮಗಳಿಗೆ ಅಂಚೆ ಸೌಕರ್ಯವನ್ನು ಕಲ್ಪಿಸಿದೆ ಎಂಬುದೂ. ವಿದ್ಯುತ್ ಉತ್ಪಾದನಾ

ಸಂಸ್ಥೆ ಬೆಳೆಯುತ್ತಿರುವ ಕೈಗಾರಿಕೆಗಳಿಗೆ ಮತ್ತು ವ್ಯವಸಾಯಕ್ಕೆ ಎಷ್ಟು ವಿದ್ಯುತ್ತನ್ನು ಒದಗಿಸಬಲ್ಲದು ಎಂಬುದೂ ಮುಖ್ಯ. ಗೃಹ ನಿರ್ಮಾಣಮಂಡಲಿ ಕಡಿಮೆ ಕರ್ಚಿನಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಿದೆ ಎಂಬುದನ್ನು ನೋಡಬೇಕು. ಸರ್ಕಾರೀ ಉದ್ಯಮಗಳ ದಕ್ಷತೆಯನ್ನು ಅಳೆಯುವಾಗ ಅವು ಸಮಾಜದ ನಿರ್ದಿಷ್ಟ ವರ್ಗಗಳ ಅವಶ್ಯಕತೆಗಳನ್ನು ಎಷ್ಟರ ಮಟ್ಟಿಗೆ ಪೂರೈಸಿವೆ ಎಂಬುದು ಗಮನಾರ್ಹ. ಸರ್ಕಾರವು ಸ್ಥಾಪಿಸುವ ಕೆಲವು ಮೂಲ ಕೈಗಾರಿಕೆಗಳು – ಉಕ್ಕು, ಯಂತ್ರೋಪಕರಣಗಳು, ರಾಸಾಯನಿಕ ವಸ್ತುಗಳು ಮುಂತಾದುವು – ಇತರ ಕೈಗಾರಿಕೆಗಳಿಗೆ ಬೇಕಾದ ಬಂಡವಾಳ ವಸ್ತುಗಳನ್ನು ಒದಗಿಸುತ್ತವೆ. ದೇಶದ ಇತರ ಕ್ಷೇತ್ರಗಳ ಅಭಿವೃದ್ಧಿ ಈ ಕೈಗಾರಿಕೆಗಳ ಅಭಿವೃದ್ಧಿಯನ್ನು ಅವಲಂಬಿಸಿವೆ. ಇವುಗಳು ಒದಗಿಸುವ ವಸ್ತುಗಳ ಬೆಲೆಗಳು. ಇತರ ವಸ್ತುಗಳ ಬೆಲೆಗಳ ಮೇಲೆ ಪರಿಣಾಮವನ್ನು ಬೀರುತ್ತವೆ. ಈ ಉದ್ಯಮಗಳು ಹೆಚ್ಚುವರಿಗಳನ್ನು ಸಂಪಾದಿಸುವ ಗುರಿ ಹೊಂದಿರಬೇಕೆ ಅಥವಾ ಉತ್ಪಾದನೆಯನ್ನು ಹೆಚ್ಚಿಸುತ್ತಾ ಇದ್ದು ಉತ್ತಮ ಗುಣಾಂಶದ ವಸ್ತುಗಳನ್ನು ಒದಗಿಸುವ ಗುರಿ ಹೊಂದಿರಬೇಕೆ ಅಥವಾ ಸಂಸ್ಥೆಯ ಸ್ಥಿಮಿತತೆಯನ್ನು, ದೇಶದ ಬೆಲೆಗಳ ಸ್ಥಿಮಿತತೆಯನ್ನು ಸಾಧಿಸಲು ನೆರವಾಗ ಬೇಕೆಂಬ ಗುರಿ ಹೊಂದಿರಬೇಕೆ ಎಂಬ ಪ್ರಶ್ನೆಗಳು ಬಹುಮುಖ್ಯವಾಗುತ್ತವೆ. ಈ ಎಲ್ಲ ಉದ್ದೇಶಗಳನ್ನು ಸಾಧಿಸುವಂತಹ 'ಸಾಮಾಜಿಕವಾಗಿ ದಕ್ಷ'ವಾಗಿರುವ ಉದ್ಯಮಗಳಾದರೆ ಅವು ಎಲ್ಲರ ಮೆಚ್ಚುಗೆಗೆ ಪಾತ್ರವಾಗುವುವು.

ಒಂದು ಅಪೂರ್ವ ವೀರಗಲ್ಲು

ಎಸ್. ಟಿ. ಶಿವಪ್ಪ

ಭರತಖಂಡವು ವೀರರ. ವೀರಮಹಿಳೆಯರ ತವರೂರು. ಈ ಪುಣ್ಯಭೂಮಿಯ ಒಂದು ಭಾಗವಾದ ಕರ್ನಾಟಕವೂ ಅಂತಹವರ ಬೀಡು. ಈ ನಾಡಿನ ಇತಿಹಾಸವನ್ನು ಅವಲೋಕನ ಮಾಡಿದಾಗ ಈ ಮಾತಿನ ಯಥಾರ್ಥವಾಗುವುದು. ವೀರ ಪುರುಷರ, ವೀರವನಿತೆಯರ ಕಥೆಯನ್ನು ಇತಿಹಾಸ ಗ್ರಂಥಗಳು ಸಾರಿಹೇಳುತ್ತಿವೆ. ಇದರ ಜೊತೆಗೆ ನಾಡಿನ ಮೂಲೆ ಮೂಲೆಗಳಲ್ಲಿ ಜಡವಾಗಿ ಕಂಡರೂ ಚೇತನವಿರುವಂತೆ, ಮನಸ್ಸಿಟ್ಟು, ಕಿವಿಯೊಡ್ಡಿ ಆಲಿಸುವವರಿಗೆ ಪ್ರಾಚೀನ ಕರ್ನಾಟಕದ ಸಂಸ್ಕೃತಿಯ ಚರಿತ್ರೆಯನ್ನೇ ಕೂಗಿಹೇಳುತ್ತಿವೆ, ಲಿಪಿ ಕಲ್ಲು (ಶಿಲಾಶಾಸನ)ಗಳು.

ಪ್ರಾಚೀನ ಕರ್ನಾಟಕದ ಜನಜೀವನದಲ್ಲಿ ದಾನ. ಧರ್ಮಗಳು ಪ್ರಧಾನ ಪಾತ್ರ ವಹಿಸಿದ್ದವು. ದೇವಾಲಯ ನಿರ್ಮಾಣ. ದೇವಮೂರ್ತಿ ಪ್ರತಿಷ್ಠಾಪನೆ. ದೇವಾಲಯ ಜೀರ್ಣೋದ್ಧಾರ. ಕೆರೆ, ತಟಾಕ ನಿರ್ಮಾಣ ಮೊದಲಾದ ಪುಣ್ಯಕಾರ್ಯ ಮಾಡುವುದು, ಅವುಗಳು ಸಾಂಗೋಪಾಂಗವಾಗಿ ನಡೆದುಕೊಂಡು ಹೋಗಲು ಗ್ರಾಮದಾನ. ಭೂದಾನ ನೀಡುವುದು. ದತ್ತಿಬಿಡುವುದು ಅಂದಿನ ಜನರಲ್ಲಿ ಸರ್ವೇಸಾಮಾನ್ಯವಾಗಿತ್ತು. ಇಂಥ ಕಾರ್ಯಗಳ ಸಂದರ್ಭದಲ್ಲಿ ದಾನ. ಧರ್ಮ. ದತ್ತಿಯ ವಿಷಯಗಳನ್ನು ಕಲ್ಲಿನ ಮೇಲೆ ಕೆತ್ತಿ (ಕೊರೆಯಿ)ಸುತ್ತಿದ್ದರು. ಇದರಲ್ಲಿ ದತ್ತಿ ಬಿಟ್ಟವರ ವಂಶದವರು ವಂಶಪಾರಂಪರ್ಯ ವಾಗಿ ಮುಂದುವರಿಸಿಕೊಂಡು ಹೋಗಲು ಸೂಚನೆಯನ್ನು ಪಡೆದವರು ಅದನ್ನು ಅನುಭವಿಸಿಕೊಂಡು ಬರಲು ಅಧಿಕಾರವೂ. ಅದನ್ನು ಅಪಹರಿಸುವವರಿಗೆ ಪಾಪದ ಭೀತಿಯ ಅಂಶವೂ ಉಲ್ಲೇಖವಾಗಿರುತ್ತಿತ್ತು. ಇವುಗಳನ್ನು ಸ್ಥೂಲವಾಗಿ 'ದಾನಶಾಸನ' ಗಳೆಂದು ಕರೆಯಬಹುದು. ವಿದ್ಯಾಭ್ಯಾಸ ಪ್ರೋತ್ಸಾಹಕ್ಕೆ ನೀಡಿದ ದಾನ. ದತ್ತಿಗಳು ಇವರಲ್ಲೇ ಸೇರಬಹುದು.

ಹೀಗೆಯೇ ಪ್ರಾಚೀನ ಕರ್ನಾಟಕದಲ್ಲಿ. ನಾಡ ರಕ್ಷಣೆ. ವನಿತೆಯರ ಮಾನ ರಕ್ಷಣೆ ಗಾಗಿ ಮತ್ತು ಅಂದಿನ ಸಂಪತ್ತಾದ. ಪೂಜನೀಯವೂ ಆದ ಗೋವುಗಳ ರಕ್ಷಣೆಗಾಗಿ ಶತ್ರು ಗಳೊಡನೆ ಕಾದುವುದು ಜನರ ಬದುಕಿನ ಒಂದು ಮೌಲ್ಯವಾಗಿತ್ತು. ಈ ಕಾಳಗಗಳನ್ನು 'ತುರುಗಾಳಗ'. 'ಪೆಣ್ಬುಯ್ಯಲ್'. 'ಊರಳಿವು' ಮತ್ತು 'ಗಡಿಕಾಳಗ'ವೆಂದು ಸ್ಥೂಲವಾಗಿ ವಿಭಾಗಿಸಬಹುದು. ಈ ಬಗೆಯ ಕಾಳಗಗಳಲ್ಲಿ ಹೋರಾಡಿ ಮಡಿದವರ ಸ್ಮಾರಕವಾಗಿ,

ಗೌರವವಾಗಿ ಆತ ಮಡಿದ ಸಂದರ್ಭದ ವಿವರವನ್ನು ಕೊರೆಯಿಸಿ 'ವೀರಗಲ್ಲು'ಗಳನ್ನು ನೆಡಿಸುತ್ತಿದ್ದರು. ಸಂತೆಗೆ ಹೋಗಿ ಬರುತ್ತಿದ್ದಾಗ ಕಳ್ಳರು ತಾಗಿ ಸತ್ತ[1]ವನಿಗಾಗಿ, ದನ ಮೇಯಿಸಲು ಹೋದಾಗ (ವ ಕಾಯ ಹೋದಲ್ಲಿ) ಹೆಬ್ಬುಲಿಯು ಹಿರಿದು ತಾ ಸ್ವರ್ಗಸ್ಥನಾದ[2] ವನಿಗಾಗಿ 'ಪುಲಿಕಟ್ಟಿಸತ್ತ'[3] ವನಿಗಾಗಿಯೂ ವೀರಗಲ್ಲುಗಳನ್ನು ನೆಟ್ಟಿರುವುದನ್ನು ಕಾಣಬಹುದು. "ಅನೇಕ ವೀರಶಾಸನಗಳ ಅಂತ್ಯದಲ್ಲಿ ಈ ಸಂಸ್ಕೃತ ಶ್ಲೋಕವೊಂದು ಕಾಣಿಸಿಕೊಳ್ಳುತ್ತದೆ.

ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ ॥

ಪ್ರಾಚೀನ ಕನ್ನಡಿಗ ಯೋಧರ ಮನಸ್ಸಿನಲ್ಲಿ ಮನೆಮಾಡಿದ್ದ ಭಾವನೆಯಿದು. ಯುದ್ಧದಲ್ಲಿ ಗೆದ್ದರೆ ಲಕ್ಷ್ಮಿ ದೊರಕುವಳು. ಸತ್ತರೆ (ಸ್ವರ್ಗದಲ್ಲಿ) ಸುರಾಂಗನೆಯರು ದೊರಕುವರು; ದೇಹವು ಕ್ಷಣದಲ್ಲಿ ವಿಧ್ವಂಸವಾಗುವ ವಸ್ತುವಾದ್ದರಿಂದ ರಣರಂಗದಲ್ಲಿ ಮಡಿಯುವ ವಿಷಯದಲ್ಲಿ ಚಿಂತೆ ಏಕೆ?[4]" ಈ ಬಗೆಯ ಭಾವನೆಗಳು ಅವರನ್ನು ಉತ್ತೇಜನಗೊಳಿಸಿ ರಣರಂಗದಲ್ಲಿ ಮುನ್ನುಗ್ಗಿ ಕಾಯವನ್ನು ಕಡ್ಡಿಗಿಂತ ಕಡೆಗಣಿಸಿ ಹೋರಾಡಿ ಗೆದ್ದು ಮರಳಲು ಇಲ್ಲವೇ ಸೋತು ರಣರಂಗದಲ್ಲಿ ಮಡಿಯಲು ಪ್ರೇರೇಪಿಸುತ್ತಿದ್ದವು.

ಪ್ರಾಚೀನ ಕರ್ಣಾಟಕದಲ್ಲಿ 'ತುರುಗಾಳೆಗ'ವು ಬಹು ವಿಶೇಷವಾಗಿತ್ತು. ತುರುಗಾಳೆಗ ಎಂದರೆ ಶತ್ರುಯೋಧರು ತಮ್ಮ ವಿರೋಧಿಗಳ ತುರುಗಳನ್ನು ಅಪಹರಿಸಿಕೊಂಡು ಹೋಗುವುದು. ಆಗ ತಮ್ಮ ಸಿರಿಯಾದ, ಪೂಜ್ಯವಾದ ಗೋವುಗಳನ್ನು ಹೋರಾಡಿ ಬಿಡಿಸಿಕೊಳ್ಳಲು ಕಾದುವುದು ಅವರ ಪರಮ ಕರ್ತವ್ಯವಾಗಿತ್ತು. ಅದು ಆತ್ಮಾಭಿಮಾನದ ವಿಷಯವೂ ಆಗಿತ್ತು. ಅದಕ್ಕಾಗಿ ಪ್ರತಿಯೊಬ್ಬನು ತಮ್ಮ ತುರುಗಳ ರಕ್ಷಣೆಗಾಗಿ ಜೀವದ ಹಂಗು ತೊರೆದು ಕಾದುತ್ತಿದ್ದನು. ಅದನ್ನೇ 'ತುರುಗಾಳೆಗ' ವೆಂದು ಶಾಸನಗಳಲ್ಲಿ ಕರೆದಿದೆ. ಈ ತುರುಗಾಳೆಗದಲ್ಲಿ ಮಡಿದ ವ್ಯಕ್ತಿಗೆ ವೀರಗಲ್ಲು ನೆಡಿಸುವುದನ್ನು ಈ ಲೇಖನ ಮೊದಲೇ ಪ್ರಸ್ತಾಪಿಸಿದೆ. ಇಂಥ ವೀರಗಲ್ಲುಗಳು ಕರ್ಣಾಟಕದಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿವೆಯೆಂಬುದು ಸರ್ವವಿದಿತ. ಕಾಳಗಗಳಲ್ಲಿ ಹೋರಾಡಿ ಮಡಿದವರಲ್ಲಿ ಜಯಿಸಿದವರಲ್ಲಿ. ವೀರಗಲ್ಲುಗಳನ್ನು ಸ್ಥಾಪಿಸಿಕೊಂಡವರಲ್ಲಿ ಪುರುಷರೆ ಅಧಿಕ. ವೀರಶಾಸನ. ವೀರಗಲ್ಲುಗಳಲ್ಲಿ ಉಕ್ತವಾಗಿರುವ ವ್ಯಕ್ತಿಗಳಲ್ಲಿ ಪುರುಷರ ಸಂಖ್ಯೆಯೇ ಹೆಚ್ಚು. ಆದರೆ ಸ್ತ್ರೀಯರು ಇಂಥ ಪ್ರಸಂಗಗಳಲ್ಲಿ ಕಾದಿರಲಾರರೆಂದು ಹೇಳುವುದು

---

1 EC. IX. P. 276

2 EC. IX. P. 269

3 EC. IX P. 292

4 ಎಂ. ಚಿದಾನಂದ ಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ XI. 299

ಅಷ್ಟು ಉಚಿತವಾಗಿ ತೋರುವುದಿಲ್ಲ. ಕಾಳಗಗಳಲ್ಲಿ ಹೋರಾಡಿ ಮಡಿದ ಸ್ತ್ರೀಯರ ಬಗೆಗೆ ಶಾಸನಗಳು ಹೆಚ್ಚು ಮಾಹಿತಿ ಒದಗಿಸುವುದಿಲ್ಲ ನಿಜ. ಆದಾಗ್ಯೂ ಸ್ತ್ರೀಯರು ಸಮಯ ಬಂದಾಗ ಪುರುಷರಂತೆಯೇ ಅಸ್ತ್ರವನ್ನು ಹಿಡಿದು ಹೋರಾಡಬಲ್ಲವರಾಗಿದ್ದರೆಂಬುದಕ್ಕೆ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಯಲ್ಲಿ ಉಲ್ಲೇಖವಾದ ಶಾಸನದ ಪೂರ್ಣ ಪಾಠವನ್ನು ಕೆಳಗೆ ಕೊಟ್ಟಿದೆ. "ಶಿಕಾರಿಪುರ ತಾಲ್ಲೂಕಿನ ಒಂದು ವೀರಗಲ್ಲು ಅಂತಹ ಒಂದು ಘಟನೆಯನ್ನು ನಿರೂಪಿಸುತ್ತದೆ.

> ಶ್ರೀ ಕ್ರೋಧನ ಸವ್ವತ್ಸರದ ಮಾಘ ಸು 15 ಸೋಮವಾರ ತಾಜಿಗವುಡನ ನಾಗವ್ವವನಮಗ, ಮಾದಿಗವುಡಪಲವನವನವರ ಕೂಡೆ ಕಾದಿ ಸ್ವರ್ಗಸ್ತನಹ ಕಾಲದಲು ತಂದೆಯ ಕೂಡೆ ಕಾದುವರ ಕೂಡೆ ಹೊ...ದಾಡಿ ಹರಿಯಕ್ಕ,ದೇವ ಲೋಕಕ್ಕೆ ಹೋದಡೆ, ತಮ್ಮ ಚಿಕ್ಕತಂದೆ ಚೆನ್ನನು ನಿಲ್ಸಿದ ಬೀರಗಲ್ಲು 1ಕಂ ಮಂಗಳ ಮಹಾ ಶ್ರೀ—"[6]

ಶತ್ರುಗಳೊಡನೆ ತಂದೆ ಮಾದಿಗವುಡ ಕಾದಿ ಮಡಿದಾಗ ಮಗಳು ಹರಿಯಕ್ಕನು ಸಹ ಶತ್ರುಗಳೊಡನೆ ಕಾದಿ ಸ್ವರ್ಗಸ್ಥಳಾಗಿ ವೀರವನಿತೆಯಾಗಿ ಶೋಭಿಸುತ್ತಿದ್ದಾಳೆ. ಈ ಕಾಳಗಕ್ಕೆ ಕಾರಣ ಯಾವುದೆಂಬುದು ವೀರ ಶಾಸನದಲ್ಲಿ ಉಕ್ತವಾಗಿಲ್ಲ. 'ಪೆಣ್ಬುಯ್ಯಲ್' ಕಾಳಗವಿರಬಹುದೆ? ಹೇಳುವುದು ಕಷ್ಟ.

ಅಧಿಕ ಸಂಖ್ಯೆಯ ವೀರಪುರುಷರ ಪಂಕ್ತಿಯಲ್ಲಿ ಸೇರುವ ಇಂಥ ಮಹಿಳೆಯ ಜೊತೆಗೆ ಮತ್ತೊಬ್ಬ ವೀರ ರಮಣಿಯ ಕಡೆಗೆ ಶೋಭಕರ ಗಮನವನ್ನು ಸೆಳೆಯುವುದು ಪ್ರಸ್ತುತ ಲೇಖನದ ಉದ್ದೇಶ. ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಸಿದ್ದನಹಳ್ಳಿ ಕೆರೆಯ ಏರಿಯ ಕೆಳಗೆ ಹಳೇಕೋಡಿಯ ಬಳಿ ಬಿದ್ದಿರುವ ವೀರಗಲ್ಲು ಅಂತಹ ಒಂದು ಘಟನೆಯನ್ನು ವರ್ಣಿಸಿದೆ[7].

> "ಸಕ ನ್ರಿಪ ಕಾಳಾತೀತ ಸಂವತ್ಸರ ಸತಙ್ಗ 963 ವಿಷು ಸಂವತ್ಸರದಲ್ ಶ್ರೀ ರಾಜೇನ್ದ್ರ ಚೋಳದೇವ ಪ್ರಿಥುವೀರಾಜ್ಯಂಗೆಯ್ಯುತ್ತಿರೆ ಕಯ್ಯಾರ ನಾಡ ಸಱಕ್ಕನೂಱ ಕಿಟ್ಟುಂಬಿ ಮಾಸರ ಗಾವು[ಣ್ಡ] ನಮಗ ಮಳ್ಳಿಗಾವುಣ್ಡನವನ ಮಗ ಚಾಮಯ್ಯಗಾವುಣ್ಡನವನಳಿಯ ಮಾಚಗಾವುಣ್ಡನವನ ಮಗಳ್ ಲಕ್ಷ್ಮಮ್ಮಗಾವುಣ್ಡಿ ಸಱಕ್ಕನೂಱ ಏಮ್ಮೆತುರುಪರಿದಟ್ಟಿ ಪುಯ್ಯಲ್ಪಿರಿದು ಪಗೆವೆ ಯಱ್ದಟ್ಟಿ ಕಾದಿ ತುಱುವಂ ಮೆಟ್ಟಿ ಸತ್ತುಸಗ್ಗ...ಯಾದ ಬರೆದೊಂ ಮುದಿಗೊಣ್ಡ ಜೋಳ ಪಟ್ಟಿ" (ಕೊನೆ ಪಂಕ್ತಿ ಕಲ್ಲಿನ ಮೇಲ್ಭಾಗದಲ್ಲಿದೆಯಂತೆ.)

ಈ ವೀರಶಾಸನದ ವಿಷಯವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು:

ಶಕ ನೃಪ ಕಾಳಾತೀತ ಸಂವತ್ಸರ 963 (ಕ್ರಿ. ಶ. 1041) ವಿಷು ಸಂವತ್ಸರದಲ್ಲಿ ಶ್ರೀರಾಜೇಂದ್ರ ಚೋಳದೇವನ ಆಳ್ವಿಕೆಯಲ್ಲಿ ಕಯ್ಯಾರ ನಾಡಿನ ಸರಕ್ಕನೂರ ಕಿಟ್ಟುಂಬಿ ಮಾಸರಗೌಡನ ಮಗ ಮಳ್ಳಿಗೌಡ. ಅವನ ಮಗ ಚಾಮಯ್ಯ

---

[6] ಎಚ್. ತಿಪ್ಪೇರುದ್ರಸ್ವಾಮಿ; ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ. ಪು. 246

[7] EC. IX P. 197

ಗೌಡ. ಅವನ ಅಳಿಯ ಮಾಚಗೌಡ. ಅವನ ಮಗಳು ಲಕ್ಷ್ಮಮ್ಮಗೌಡಿತಿ ಸರಕ್ಕನೂರ ಎಮ್ಮೆ. ತುರುಗಳು (ಶತ್ರು ಧಾಳಿಯಿಂದ) ಹರಡಿ ಚೆಲ್ಲಾಪಿಲ್ಲಿಯಾಗಲು (ಲಕ್ಷ್ಮಮ್ಮ) ಬೆನ್ನಟ್ಟಿ (ಬೆನ್ನಟ್ಟಿದ ಗೋಪಾಲಕರು ಮತ್ತು ಇತರರು) ಹುಯ್ಯಲನ್ನೆಬ್ಬಿಸಲು, ಮುನ್ನುಗ್ಗಿ ಶತ್ರುಗಳೊಡನೆ ಕಾದಿ ಗೋವುಗಳನ್ನು ಮರಳಿಸಿ ಸತ್ತು ಸ್ವರ್ಗಸ್ಥೆಯಾದಳು."

'ತುರುಗಾಳಗ'ದಲ್ಲಿ ಹೋರಾಡಿ ಮಡಿದ ಸಹಸ್ರ ಸಂಖ್ಯೆಯ ವೀರಪುರುಷರ ಸಾಲಿನಲ್ಲಿ ವಿರಳವಾಗಿಯಾದರೂ ತೋರಿಬರುವ ವೀರಮಹಿಳೆ ಲಕ್ಷ್ಮಮ್ಮನ ಹೆಸರು ವಿಶಿಷ್ಟ, ಮಹತ್ವಪೂರಿತವಾದುದು. ಅವಳ ಸಾಹಸ -- ಕೀರ್ತಿ ಅಜರಾಮರ. ತುರುಗಾಳಗದಲ್ಲಿ ವೀರ ರಮಣಿಯಾಗಿ ಕಾದಿ ತುರುಗಳನ್ನು ಊರಿಗೆ ಮರಳಿಸಿ ಜಯಶೀಲಳಾಗಿಯೂ ವೈರಿಗಳ ಕೈಯಿಂದ ಮಡಿದ ವೀರವನಿತೆ ಲಕ್ಷ್ಮಮ್ಮನ ಧನ್ಯಬಾಳನ್ನು ಸಾರುವ ಈ ಶಾಸನ ವಿಶಿಷ್ಟ ಮಹತ್ವವಾದುದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಜ್ಞಾನಸ್ವರೂಪ - ಭಾವನೆಗಳು

ಜೆ. ರುದ್ರಪ್ಪ

ಯಾವ ವಿಷಯವನ್ನು ಪ್ರತಿಪಾದಿಸಿದರೂ ಅದು ಅನುಭವಕ್ಕೆ ಹೊಂದಬೇಕು. ಉಪದೇಶ, ಗ್ರಂಥವಿಮರ್ಶೆ. ಯುಕ್ತಿಸಂಚಾರ ಇವುಗಳು ತತ್ತ್ವಜ್ಞಾನವನ್ನು ತಿಳಿಯಲು ಸಾಧನೆಗಳು. ಸಾಧನೆಗಳು ಸಾಧ್ಯವನ್ನು ಹೊಂದಲು ಸಹಕರಿಸುತ್ತವೆ. ಆದರೆ ಇವೇ ಫಲಗಳಲ್ಲ. ಸಾಧ್ಯಸಿದ್ಧಿಯಾದಾಗ ಸಾಧನೆಗಳು ಕಣ್ಮರೆಯಾಗುತ್ತವೆ. ಒಂದು ವೇಳೆ ಇದ್ದರೂ ಪ್ರಯೋಜನವಿಲ್ಲ. ನಾವು ನೋಡಿದ ಪದಾರ್ಥಗಳು. ಕೇಳಿದ ವಿಷಯಗಳ ತಿಳಿವಳಿಕೆಗಳು ತತ್ಕಾಲದಲ್ಲಿ ಚಿತ್ರರೂಪವಾಗಿ ತೋರುತ್ತವೆ. ಕಾಲಾಂತರದಲ್ಲಿ ಅವು ನೆನಪಿಗೆ ಬರುತ್ತವೆ. ಆದರೆ ಅವುಗಳಿಗೆ ತಕ್ಕ ಪ್ರಸಂಗ ಒದಗಬೇಕು. ಅನುಕೂಲ ಪರಿಸ್ಥಿತಿಯಿರಬೇಕು. ನೋಡಿದ. ಕೇಳಿದ ವಿಷಯಗಳು ಕಾಲಾಂತರದಲ್ಲಿ ನೆನಪಿಗೆ ಬರುವುದಕ್ಕೆ ಕಾರಣವನ್ನು ಯುಕ್ತಿಯಿಂದ ತಿಳಿಯಬೇಕು. ಪ್ರಮಾಣದಿಂದ ಒಪ್ಪಬೇಕು. ಅನುಭವದಿಂದ ಗುರ್ತಿಸಬೇಕು. ಕೆಲವು ವಿಷಯಗಳು ಜ್ಞಾಪಕಕ್ಕೆ ಬರುವುದಿಲ್ಲ. ಬಂದರೂ ಯಾವಾಗಲೋ ಒಂದು ಸಾರಿ ಬರುತ್ತವೆ. ಹೀಗೆ ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಬಂದ ಅನುಭವಗಳಲ್ಲಿ ತಪ್ಪು ತಿಳುವಳಿಕೆಗಳುಂಟಾಗುವುದು ಅಸಂಭವವಲ್ಲ. ಸರಿಯಾದ ತಿಳಿವಳಿಕೆಗಳಿಂದ ತಪ್ಪು ತಿಳಿವಳಿಕೆಗಳನ್ನು ತಿದ್ದುವುದು ಒಳ್ಳೆಯದು. ಅಧ್ಯಾತ್ಮ ಶಾಸ್ತ್ರಗಳು ತಮ್ಮ ಕ್ಷೇತ್ರದಲ್ಲಿ ತಪ್ಪು ತಿಳಿವಳಿಕೆಗಳನ್ನು ತಿದ್ದುವ ಸಾಧನಗಳಾಗಿವೆ. ಇಷ್ಟೊಂದು ಸಾಧನಗಳಿದ್ದರೂ ಸರಿಯಾದ ತಿಳಿವಳಿಕೆ ಸಿಗುವುದು ಕಷ್ಟಸಾಧ್ಯವಾಗಿದೆ – ಇದು ತಪ್ಪು ತಿಳಿವಳಿಕೆ. ಇದು ಸರಿಯಾದ ತಿಳಿವಳಿಕೆ ಎಂಬ ಎರಡು ತಿಳಿವಳಿಕೆಗಳು ಫಲತಃ ಬೇರೆಯಾಗಿದ್ದರೂ ಮೂಲದಲ್ಲಿ ಸ್ವರೂಪತಃ ಬೇರೆಯಾಗಿರುವುದಿಲ್ಲ. ಬಗೆಬಗೆಯಾಗಿರುವ ತಿಳಿವಳಿಕೆಗಳು ಒಂದಕ್ಕೊಂದು ಸಂಬಂಧಿಸದೆ ಇದ್ದರೂ ಒಂದೇ ತತ್ತ್ವವನ್ನು ಆಧಾರವಾಗಿ ಪಡೆದಿರಬಹುದು. ಈ ಎಲ್ಲಾ ತಿಳಿವಳಿಕೆಗಳಿಗೂ ಆಶ್ರಯವಾಗಿ ಒಂದು ತತ್ತ್ವವಿಲ್ಲದಿದ್ದಲ್ಲಿ ಈ ಬೇರೆ ಬೇರೆ ತಿಳಿವಳಿಕೆಗಳು ಪರಸ್ಪರ ಸಹಕಾರದಿಂದ ವರ್ತಿಸಲಿಕ್ಕಾಗುತ್ತಿರಲಿಲ್ಲ.

ಏವಮನ್ಯೋನ್ಯಭಿನ್ನಾನಾಮಪರಸ್ಪರವೇದಿನಾಂ
ಜ್ಞಾನಾನಾಮನುಸಂಧಾನಜನ್ಮಾ ನಶ್ಯೇಜ್ಜನಸ್ಥಿತಿಃ ॥

ಈಶ್ವರ ಪ್ರತ್ಯಭಿಜ್ಞಾ ಅ. 1. ಆಹ್ನಿಕ 2. ಕಾರಿಕಾ 3

ಲೋಕವ್ಯವಹಾರಗಳೆಲ್ಲಾ ಅನೇಕ ಮುಖಗಳಿರುವ ತಿಳಿವಳಿಕೆಗಳ ಸಹಕಾರವನ್ನಾಶ್ರಯಿಸಿರುತ್ತವೆ. ಈ ಸಹಕಾರವಿಲ್ಲದಿದ್ದಲ್ಲಿ ಪ್ರಾಣಿಗಳ ಜೀವನವೇ ಕುಂಠಿತವಾಗುತ್ತದೆ. ಈ ಸಹಕಾರ ಕಾರಣವಾಗಿರುವ ತತ್ತ್ವವು ಜ್ಞಾನಶಕ್ತಿ. ಸ್ಮೃತಿ ಶಕ್ತಿ. ಅಪೋಹನಶಕ್ತಿಗಳಿಂದ ಕೂಡಿದ್ದಾಗಿದೆ. ಆ ತತ್ತ್ವದ ಮಹಿಮೆಯಿಂದ ಪರಸ್ಪರ ಭಿನ್ನವಾಗಿರುವ ತಿಳಿವಳಿಕೆಗಳ ಉತ್ಪತ್ತಿ ಸ್ಥಿತಿ ಪ್ರವೃತ್ತಿಗಳು ನಡೆಯುತ್ತಿರುತ್ತವೆ. ಅವುಗಳ ಸಹಕಾರದಿಂದ ತಪ್ಪು ತಿಳಿವಳಿಕೆಗಳು ಅಳಿದು ಸರಿಯಾದ ತಿಳಿವಳಿಕೆಗಳ ಉಗಮಕ್ಕೆ ಅವಕಾಶವಾಗುತ್ತದೆ.

ಪದಾರ್ಥಗಳನ್ನು ನೋಡುವುದರಿಂದುಂಟಾಗುವ ತಿಳಿವಳಿಕೆಗಳು ಎಲ್ಲಿಂದ ಹೊರಹೊಮ್ಮುತ್ತವೆಂಬ ಪ್ರಶ್ನೆ ಏಳುವುದು ಸಹಜ. ಬಾಹ್ಯಪದಾರ್ಥಗಳಿಂದಲೇ ತಿಳುವಳಿಕೆಗಳುಂಟಾಗಲಾರವು. ಕೆಲವು ಪದಾರ್ಥಗಳ ಸಂಪರ್ಕವಿದ್ದರೂ ಕೆಲವರಿಗೆ ಆ ಪದಾರ್ಥಗಳ ತಿಳಿವಳಿಕೆಯುಂಟಾಗಲಾರದು. ಅವರು ಆ ವಿಷಯದಲ್ಲಿ ಉದಾಸೀನರಾಗಿರಬಹುದು. ಮತ್ತೆ ಕೆಲವರು ಪ್ರಯತ್ನಪಟ್ಟರೂ ವಿಷಯಗಳು ಅವರಿಗೆ ಪ್ರತಿಫಲಿಸದಿರಬಹುದು. ನಮಗೆ ತಿಳಿವಳಿಕೆಯುಂಟಾಗುವುದಕ್ಕೆ ಪದಾರ್ಥಗಳಿರಲೇಬೇಕೆಂಬ ನಿಯಮವಿಲ್ಲ. ಶಾರೀರಿಕವಾದ ಸ್ಪರ್ಶದ ಮೂಲಕ ಸಂತೋಷವನ್ನೋ ಸಂತಾಪವನ್ನೋ ಉಂಟುಮಾಡಬೇಕಾದರೆ ಹೊರಗಿನ ಪದಾರ್ಥಗಳ ಸ್ಥೂಲರೂಪದ ಅವಶ್ಯಕತೆ ಇರುತ್ತದೆ. ಸ್ವರ್ಗ. ನರಕ. ಕೈಲಾಸ. ವೈಕುಂಠ ಇಂತಹ ಪದಗಳಿಂದ ಬರುವ ತಿಳಿವಳಿಕೆಗಳಿಗೆ ಸ್ಥೂಲರೂಪವಾದ ಪದಾರ್ಥಗಳ ಅವಶ್ಯಕತೆ ಇಲ್ಲ. ಈ ರೀತಿಯಾದ ತಿಳಿವಳಿಕೆಗಳಿಗೆ ನಮ್ಮ ಭಾವನಾ ಪ್ರಪಂಚದಲ್ಲಿ ಒಂದು ನಿಶ್ಚಿತವಾದ ಸ್ಥಾನವಿದೆ. ಆದರೆ ಬಾಹ್ಯ ಪದಾರ್ಥಗಳ ಸಂಬಂಧದಿಂದ ಉಂಟಾಗುವ ಜ್ಞಾನಕ್ಕೆ ಬೇಕಾಗುವ ಆಲಂಬನ ಅಥವಾ ಆಶ್ರಯ ಬೇಕಾಗಿಲ್ಲ–ನಮ್ಮ ಜೀವನದ ಮುಖ್ಯ ದೃಷ್ಟಿ ಪುಣ್ಯ. ಪಾಪಗಳಲ್ಲಿರುವ ನಂಬಿಕೆ. ಪಾಪ ಕರ್ಮಾಚರಣೆ ತಪ್ಪು. ಪುಣ್ಯ ಕರ್ಮಾಚರಣೆ ಸರಿ ಎಂಬ ಪ್ರವೃತ್ತಿಯನ್ನು ನಡೆಯಿಸುವ ತಿಳಿವಳಿಕೆಗೆ ಬೇರೆ ಆಶ್ರಯ ಬೇಕಾಗಿಲ್ಲ.

ನಮಗುಂಟಾಗುವ ತಿಳಿವಳಿಕೆಗಳು ಹೊರಗಿನ ಪದಾರ್ಥಗಳಿಂದಲ್ಲ. ಆಂತರ್ಯವಾದ ತತ್ತ್ವವು ತನ್ನ ಸ್ಫುರಣದಿಂದ ಈ ಪದಾರ್ಥಗಳಿಗೆ ಒಂದು ಪರಿಮಿತವಾದ ಆಕಾರವನ್ನು ಕೊಡುತ್ತದೆ. ಇದು ಮಾವಿನ ಹಣ್ಣು. ಕೆಂಪು ಬಣ್ಣದ್ದಾಗಿದೆ. ಒಂದು ಸೇರು ತೂಕವುಳ್ಳದ್ದು, ಗುಂಡಗಿದೆ ಮೊದಲಾದ ಕಲ್ಪನೆಗಳು ಈ ಚಿತ್ತತ್ತ್ವದ ಜ್ಞಾನ ಶಕ್ತಿಯ ಸ್ಫುರಣದ ಪರಿಣಾಮಗಳು – ಜ್ಞಾನ ಶಕ್ತಿಯ ವಿಲಾಸರೂಪವಾದ ಈ ಪರಿಣಾಮವು ಆ ಚಿತ್ತತ್ತ್ವದಿಂದ ಬೇರೆಯಲ್ಲ. ಈ ಕಾರಣದಿಂದ ಅದರ ಸ್ಫುರಣವು ಪರಿಮಿತವಾದಾಗ ಆ ಪದಾರ್ಥಗಳನ್ನು ಸಂಕುಚಿತವಾದ ದೃಷ್ಟಿಯಿಂದಲೇ ಗ್ರಹಿಸುತ್ತದೆ -- ಈ ತಿಳಿವಳಿಕೆಯನ್ನು 'ಗ್ರಾಹ್ಯಭಾವಗ್ರಹ'ವೆನ್ನುತ್ತಾರೆ. ನಾನು ಈ ಪದಾರ್ಥವನ್ನು ನೋಡುತ್ತೇನೆ ಎನ್ನುವಾಗ 'ನಾನು' ಎನ್ನುವುದು ಗ್ರಾಹಕಭಾವ. ಈ ಪದಾರ್ಥವನ್ನು ಎನ್ನುವುದು

ಗ್ರಾಹ್ಯಭಾವ. ಗ್ರಾಹಕ, ಗ್ರಾಹ್ಯ ಈ ಎರಡು ಭಾವಗಳು ಅಪ್ರಮಾತೃವಿನಲ್ಲಿ ಸ್ಫುರಿಸುತ್ತವೆ – ಈ ಭೇದಗಳು ಸತ್ಯವಾದ ಸ್ಫುರಣಮಾತ್ರಗಳಾಗಿವೆ.

ವರ್ತಮಾನಾವಭಾಸಾನಾಂ ಭಾವನಾಮವಭಾಸನಂ
ಅಂತಃಸ್ಥಿತವತಾಮೇವ ಘಟತೇ ಬಹಿರಾತ್ಮನಾಂ ।

ಈ. ಪ್ರ. ಅಧ್ಯಾಯ 1. ಆಹ್ನಿಕ 5. ಕಾರಿಕಾ 1

ವರ್ತಮಾನ ಕಾಲದ ವಿಷಯ ಜ್ಞಾನಗಳು ಮೊದಲು ಪ್ರಮಾತೃವಿನಲ್ಲಿ ಇದ್ದೇ ಇರುತ್ತವೆ. ಹಿಂದೆ ಯಾವಾಗಲೂ ತೋರುತ್ತಿರುವ ತಿಳಿವಳಿಕೆಗಳು ಭಾವಗಳು ಒಳಗಿರುವಂತೆ ಹೊರಗೆ ಪ್ರಕಾಶಿಸುತ್ತವೆ–ಕಾರಣ ಯಾವ ಜಾತಿಯದೋ ಕಾರ್ಯವು ಅದೇ ಜಾತೀಯ ವಾಗಿ ಪರಿಣಮಿಸುತ್ತದೆ–

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥

ಅದು ಪೂರ್ಣ, ಇದು ಪೂರ್ಣ. ಪೂರ್ಣದಿಂದ ಪೂರ್ಣ ಹುಟ್ಟುತ್ತದೆ. ಪೂರ್ಣದಿಂದ ಪೂರ್ಣವನ್ನು ತೆಗೆದುಕೊಂಡರೆ ಪೂರ್ಣವೇ ಉಳಿಯುವುದು – ಒಂದು ದೀಪದಿಂದ ಅನೇಕ ದೀಪಗಳನ್ನು ಹೊತ್ತಿಸಬಹುದು. ಯಾವ ಒಂದು ದೀಪದಿಂದ ಹೊರಟ ಪ್ರಕಾಶವು ಅನೇಕ ದೀಪಗಳಲ್ಲಿ ಪ್ರಕಾಶವನ್ನುಂಟುಮಾಡಿದರೂ ಮೊದಲಿನ ಪ್ರಕಾಶಕ್ಕೆ ಯಾವ ಚ್ಯುತಿಯೂ ಇಲ್ಲ. ಹಾಗೆಯೇ ಆನಂದ ಅಥವಾ ಸಂತೋಷವು ಇತರರಲ್ಲಿ ಸಂತೋಷವನ್ನುಂಟುಮಾಡಿದರೂ ಮೊದಲು ಉದ್ಭವವಾದ ಆನಂದಕ್ಕೆ ಯಾವ ಚ್ಯುತಿಯೂ ಇಲ್ಲ, ಕುಂದೂ ಇಲ್ಲ. ಪ್ರಕಾಶವು ತಾನಾಗಿಯೇ ಬೆಳಗುವುದು. ಜ್ಞಾನಿಯು ತನ್ನ ಜ್ಞಾನವನ್ನು ಇತರರಿಗೆ ಎಷ್ಟುಕೊಟ್ಟರೂ ತನ್ನ ಜ್ಞಾನಾಂಶವು ಕುಂದುವುದಿಲ್ಲ ಕಡಿಮೆಯಾಗುವುದಿಲ್ಲ. ತನ್ನ ನಿಜಸ್ವರೂಪವನ್ನು ಉಳಿಸಿಕೊಂಡೇ ಇರುತ್ತದೆ – ತನ್ನ ಜ್ಞಾನಾಂಶದ ಪೂರ್ಣತೆ ಇದ್ದೇ ಇರುತ್ತದೆ – ಹೀಗೆ ಚಿದಂಶಗಳ ವಿಲಾಸದಲ್ಲಿ ಕೊರತೆಗೆ ಅವಕಾಶವಿಲ್ಲ.

ಪ್ರಮಾತೃವು ತನ್ನಲ್ಲಿರುವ ಭಾವನೆಗಳನ್ನು ಅಂತಃಪರಿಶೀಲನೆ ಮಾಡುವುದೇ ವಿಮರ್ಶವೆನಿಸುತ್ತದೆ.

ವಿಮರ್ಶೋಹಿ ಸರ್ವಂ ಸಹಃ
ಪರಮಪಿ ಆತ್ಮೀಕರೋತಿ
ಆತ್ಮಾನಾಂ ಚ ಪರೀಕರೋತಿ
ಉಭಯಂ ಏಕೀಕರೋತಿ
ಏಕೀಕೃತಂ ದ್ವಯಮಪಿ ನ್ಯಗ್ಭಾವಯತಿ
ಇತ್ಯೇವಂ ಸ್ವಭಾವಃ

ಪ್ರಮಾತೃವು ತನ್ನಲ್ಲಿರುವ ಭಾವನೆಗಳನ್ನು ಅಂತಃಪರಿಶೀಲನ ಮಾಡುವುದೇ ವಿಮರ್ಶವೆನಿಸುತ್ತದೆ – ಈ ವಿಮರ್ಶೆಯು ಚಿತ್ತಿನ ಕ್ರಿಯೆ. ಜಡಪದಾರ್ಥಗಳಿಗೂ ಚೇತನ

ತತ್ತ್ವಕ್ಕೂ ಇರುವ ವ್ಯತ್ಯಾಸವೇ ಇದು. ಜಡವಾಗಿರುವ ಕಲ್ಲು 'ನಾನು' ಎಂದು ವಿಮರ್ಶಿಸಿಕೊಳ್ಳುವುದಿಲ್ಲ. ಚಿದ್ವಿಮರ್ಶನೆ ಅಲ್ಲಿಲ್ಲ ಎಂದು ತಾತ್ಪರ್ಯ. ಪ್ರಮಾತೃವು ತನ್ನನ್ನು 'ಅಹಂ' ಎಂದು ವಿಮರ್ಶಿಸುವನು. ಚಿತ್ತು ಅಂತರ್ಮುಖಿವಾಗಿ ಎಲ್ಲವನ್ನೂ ನಡೆಸುವಂಥಾದ್ದು. ಹೇಗೆಂದರೆ ತನ್ನನ್ನು ದೇಹ ಇಂದ್ರಿಯ ಮನಸ್ಸು ಇವುಗಳ ಮಟ್ಟಕ್ಕೆ ಇಳಿಸಿ 'ಅಹಂ' 'ಇದಂ' ರೂಪತಾಳಿದರೂ ಶುದ್ಧ ವಿದ್ಯಾಸ್ಥಿತಿಯಲ್ಲಿ ಒಂದಾಗಿಟ್ಟುಕೊಂಡಿರುತ್ತದೆ. ಬೇರೆಯಾಗಿದ್ದರೂ ಕೂಡಿಕೊಂಡಿರುತ್ತದೆ. ಭೇದವಿಲ್ಲದೆಯೂ ಇರುತ್ತದೆ. ಇದು ಅದರ ಸ್ವಭಾವ. ಅದೇ ಚಿತ್ತು ಪರಾವಾಕ್ ರೂಪದಲ್ಲಿ ನಿತ್ಯೋದಿತವಾಗಿರುತ್ತದೆ. ಅಳಿದುಹೋಗುವುದಿಲ್ಲ. ಅಂದರೆ ಅದು ತನ್ನ ಸ್ವಭಾವವನ್ನು ಉಳಿಸಿಕೊಂಡಿರುತ್ತದೆ.

ಸಾ ಸ್ಫುರತ್ತಾ ಮಹಾಸತ್ತಾ ದೇಶಕಾಲಾವಿಶೇಷಿಣೀ
ಸೈಷಾ ಸಾರತಯಾ ಪ್ರೋಕ್ತಾ ಹೃದಯಂ ಪರಮೇಷ್ಠಿನಃ।

ಈ. ಪ್ರ. ಅಧ್ಯಾಯ 1, ಆಹ್ನಿಕ 5. ಕಾರಿಕಾ 14

ಪರವಾಕ್ಕು ದೇಶಕಾಲಗಳಿಂದ ಅಳೆಯುವುದಕ್ಕಾಗುವುದಿಲ್ಲ – ಅದು ಸಾರಭೂತವಾಗಿದ್ದು ಶಕ್ತಿಮಯವಾದದ್ದು. ಆ ಶಕ್ತಿಯಿಲ್ಲದಿದ್ದರೆ ಮುಂದಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಅದು ಸ್ವಾತಂತ್ರ್ಯ. ಐಶ್ವರ್ಯಗಳಿಂದ ಕೂಡಿದ್ದು. ಸರ್ವವ್ಯಾಪಿ. ಎಲ್ಲದರಲ್ಲಿಯೂ ಇದೆ. ಇನ್ನೊಂದರ ಸಹಾಯವಿಲ್ಲದೆ ಯಾವ ಕೆಲಸವನ್ನಾದರೂ ತಾನೇ ನಿರ್ವಹಿಸಬಲ್ಲದು.

ಸ್ಮೃತಿ – ಜ್ಞಾಪಕಶಕ್ತಿ – ಕಾಲಕ್ಕೆ ತುತ್ತಾಗದೆ ಇರುವಂಥದ್ದು. ಕಾಲದಿಂದ ಸ್ಮೃತಿ ಬದಲಾಗುವುದಿಲ್ಲ. ನಾವು ಹಿಂದೆ ನೋಡಿದ್ದ ಚಿತ್ತಿನಲ್ಲಿ ಇರುತ್ತದೆ. ಚಿತ್ತಿನಲ್ಲಿ ಆವರಿಸಿರುವ ಮುಸುಕನ್ನು ತೆಗೆದರೆ ಅದು ಸ್ಪಷ್ಟ ರೂಪದಲ್ಲೇ ಕಾಣಿಸಿಕೊಳ್ಳುತ್ತದೆ– ವಿಮರ್ಶನ ಶಕ್ತಿಯಿಲ್ಲದಿದ್ದರೆ ಚಿತ್ತಿಗೆ ಮುಂದಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಸ್ಮೃತಿಯು ವಿದ್ಯಾ ಅವಿದ್ಯಾ ಇವೆರಡರ ಸಂಕರ. ಮಂತ್ರ ಜಪ. ಧ್ಯಾನ. ಮೊದಲಾದ ಶುದ್ಧ ವಿದ್ಯಾನುಸಂಧಾನದಿಂದ ಅವಿದ್ಯೆಯು ಮಾಯವಾಗುತ್ತದೆ. ಸ್ಮರಣದಲ್ಲಿ – ಜ್ಞಾಪಕಶಕ್ತಿಯಲ್ಲಿ ಭೇದ ಕಂಡುಬಂದರೂ ಅದರ ಹಿಂದೆ ಅಭೇದ ಇದ್ದೇ ಇರುತ್ತದೆ. 'ಅಹಂ' ಇಲ್ಲದೆ 'ಇದಂ' ಇಲ್ಲ. ಅಹಂ ಎಂಬುದು 'ವಿಚ್ಛೇದ ಶೂನ್ಯತಾ' – ದೇಶಕಾಲಗಳಿಂದ ಬರುವ ಭೇದ ಜ್ಞಾನವನ್ನು ವಿಚ್ಛೇದನಮಾಡುವುದು – ಹೋಗಲಾಡಿಸುವುದು.

ಅಖಂಡವಾದ ಚಿತ್ತು ನಿಮಗ್ನಾವಸ್ಥೆಯಿಂದ (ನಿರಾಕಾರಾವಸ್ಥೆ) ಉನ್ಮಗ್ನಾವಸ್ಥೆ (ಬಹಿರ್ಮುಖಾವಸ್ಥೆ) ಗೆ ಅಂದರೆ ಮಾಯಾ ಪ್ರಮಾತೃವಿನ ಆಕಾರವನ್ನು ತಳೆಯುವ ವೇಳೆಗೆ ಸ್ಮೃತಿಶಕ್ತಿಯಾಗಿ ಪರಿಣಮಿಸಿ ವಿದ್ಯಾ – ಅವಿದ್ಯಾ ಸಂಕರದಿಂದ ತನ್ಮಯವಾಗುತ್ತದೆ – ದೇಶಕಾಲ ಆಕಾರಗಳಿಂದಲೂ ಕೂಡಿರುತ್ತದೆ. ಹೀಗೆ ಪರಿವರ್ತನವಾಗಿ ಬಹಿರ್ಮುಖವಾಗಿ ಶಬ್ದರೂಪವಾಗಿ ಈಚೆಗೆ ಬಂದದ್ದೇ ಸ್ಮೃತಿ ಶಕ್ತಿ. ಶುದ್ಧ ಚಿತ್ತಾದ

ಅಂತರ್ಮುಖವಾದ ಚಿತ್ತು ವಿಮರ್ಶಶಕ್ತಿಯೂ ಒಳಗಿನವು. ಇವೆರಡರ ಅಭಿವ್ಯಕ್ತ ರೂಪವಾದದ್ದೇ ಸ್ಮೃತಿ. ಜ್ಞಾನ ಶಕ್ತಿಯಿಂದ ನೀರಿನಲ್ಲಿ ತೇಲುವಂತೆ ಸ್ಮೃತಿ ಶಕ್ತಿಯು ಬಹಿರ್ಮುಖವಾಯಿತು.

ಅಪೋಹನಶಕ್ತಿ : ಸ್ಮೃತಿಶಕ್ತಿಯಿಂದ ಪರಿಚ್ಛಿನ್ನವಾಗಿ ಬಹಿರ್ಮುಖವಾಗಿ ಅಪೋಹನಶಕ್ತಿಯಾಗಿ ಉಚ್ಚರಿಸಲ್ಪಟ್ಟಿತು. ಚಿತ್ತಿನಲ್ಲಿರುವುದು ಅನಂತ. ವ್ಯವಹಾರದಲ್ಲಿ ಗ್ರಾಹ್ಯಗ್ರಾಹಕಭಾವರೂಪವಾಗಿರುವುದರಿಂದ ಸ್ಫುರಿಸುವುದು ಸಾಧ್ಯ.

ಚಿತ್ತು ನಿಮಗ್ನಾವಸ್ಥೆಯಲ್ಲಿ ಅಲೆಗಳಿಲ್ಲದ ಹಾಗೆ ನಿಸ್ತರಂಗವಾಗಿರುತ್ತದೆ. ಉನ್ಮಗ್ನಾವಸ್ಥೆಯಲ್ಲಿ ಜ್ಞಾನ ಶಕ್ತಿಯಾಗಿ ಪರಿಣಮಿಸಿದರೂ ಆಕಾರವಿಲ್ಲ. ಅದು ಬಹಿರ್ಮುಖವಾಗಿ ಸ್ಮೃತಿಶಕ್ತಿಯಾಗಿ ಆಕಾರವನ್ನು ತಾಳುತ್ತದೆ. ಅನಂತರ ಅಭಿಲಾಪ ಮಾಡುವಾಗ್ಗ ಶಬ್ದರೂಪವಾಗಿ ಈಚೆಗೆ ಬಂತು. ಅದು ಬುದ್ಧಿಮಟ್ಟದಲ್ಲಿ ನಮಗೆ ಸುಖದುಃಖಗಳನ್ನು ಗೋಚರಿಸುತ್ತದೆ. ಚಿತ್ತಿನ ಮೂಲ ಸ್ವರೂಪವು ಎಲ್ಲವನ್ನೂ ಒಳಗೊಂಡಿದ್ದರೂ ಅಲ್ಲಿ ಸುಖದುಃಖಗಳೆಂಬುದೇ ಕಂಡುಬರುವುದಿಲ್ಲ. ಎಲ್ಲಾ ಸುಖ ದುಃಖಗಳೂ ಕಂಡುಬರುವುದು ಜ್ಞಾನದಲ್ಲಿಯೇ ಹೊರತು ಅರ್ಥದಲ್ಲಿಲ್ಲ. ಸ್ಮೃತಿ ಅಭಿಲಾಪಗಳಿಂದಲೇ ಸುಖದುಃಖಗಳು ಗೋಚರವಾಗುವುವು. ಜ್ಞಾನ ಸ್ಮೃತಿ ಅಪೋಹನಶಕ್ತಿಗಳ ಮೂಲಕ ಈಶ್ವರನೇ ಜ್ಞಾನ ಸ್ಮೃತಿ ಅಪೋಹನ ಶಕ್ತಿಗಳನ್ನು ತನ್ನ ಸ್ವಾತಂತ್ರ್ಯದಿಂದಲೇ ನಡೆಸುತ್ತಾನೆ.

> ನಚೇದಂತಃ ಕೃತಾನಂತ ವಿಶ್ವರೂಪೋ ಮಹೇಶ್ವರಃ
> ಸ್ಯಾದೇಕಃ ಚಿದ್ವಪುಃ ಜ್ಞಾನಸ್ಮೃತ್ಯಪೋಹನ ಶಕ್ತಿಮಾನ್।

ಅನಂತ ವಿಶ್ವರೂಪನಾದ ಚಿ–ಚ್ಛರೀರಿಯಾದ ಶಕ್ತಿಯುಳ್ಳ ಮಹೇಶ್ವರನು ಇಲ್ಲದೆ ಇದ್ದರೆ ಜ್ಞಾನ ಸ್ಮೃತಿ ಅಪೋಹನಶಕ್ತಿ ಇವು ಮೂರಕ್ಕೂ ಐಕ್ಯ ಹೇಗೆ ಸಂಭವಿಸೀತು! ಜ್ಞಾನವು ಒಳಗೂ ಹೊರಗೂ ಆಯಾ ಅನುಕೂಲಗಳಿಂದ ಪ್ರಕಾಶಿಸುತ್ತದೆ. ಜ್ಞಾನವಿಲ್ಲದೆ ಯಾವ ವಿಷಯವೂ ಯಾರಿಗೂ ತಿಳಿಯುವುದಿಲ್ಲ. ಆದುದರಿಂದ ಪದಾರ್ಥವು ಜ್ಞಾನಾತ್ಮಕವೆಂದೇ ಸಿದ್ಧವಾಗುತ್ತದೆ. ಇದು ಇದೆ ಇದು ಇಲ್ಲ. ಇದನ್ನು ಮಾಡಬಾರದು ಮೊದಲಾದುವುಗಳೆಲ್ಲಾ ಜ್ಞಾನಕ್ಕೆ ಸೇರಿದವುಗಳೇ ಹೊರತು ಜ್ಞೇಯಗಳಾದ ಪದಾರ್ಥಗಳಿಗೆ ಸೇರಿದವುಗಳಲ್ಲ. ಜ್ಞಾತೃ. ಜ್ಞೇಯ ಎರಡೂ ಒಂದೇ ಕಾಲದಲ್ಲಿ ಗೋಚರಿಸುವುದರಿಂದ ಒಂದೇ ರೂಪದಿಂದಿರುವುವು.

ವ್ಯವಹಾರವೆಲ್ಲಾ ಜ್ಞಾನದಿಂದ ನಡೆಯುತ್ತದೆ. ಪದಾರ್ಥಗಳಿಲ್ಲದಿದ್ದರೂ ಪದಾರ್ಥ ಜ್ಞಾನವಿರುತ್ತದೆ. ಜ್ಞಾನ ಮಾತ್ರವೇ ನಮಗೆ ಗೋಚರಿಸುವುದು. ಜ್ಞಾನ ವಿಲ್ಲದಿದ್ದರೆ ಪದಾರ್ಥ ಇದ್ದರೂ ಇಲ್ಲದ ಹಾಗೆ. ಜ್ಞಾನದಿಂದ ಅನಂತ ವ್ಯವಹಾರ ಮಾಡುತ್ತೇವೆ. ನಮಗೆ ಪ್ರಾಪ್ತವಾಗುವ ಸುಖದುಃಖಗಳೆಲ್ಲವೂ ಜ್ಞಾನದಿಂದಲೇ

ಹೊರತು ಪದಾರ್ಥಗಳಿಂದಲ್ಲ. ಉದಾಹರಣೆಗೆ ಮಕ್ಕಳಾಗಲಿಲ್ಲ ಅಂತ ದುಃಖವಿರಬಹುದು. ಮಕ್ಕಳು ಹುಟ್ಟಿ ಸತ್ತವು ಅಂತ ತಿಳಿದರೆ ದುಃಖ ಪ್ರಾಪ್ತವಾಗುತ್ತದೆ. ಈ ಸಂದರ್ಭಗಳಲ್ಲಿ ಪದಾರ್ಥಗಳಿಲ್ಲದಿದ್ದರೂ ದುಃಖಸುಖಗಳೇರ್ಪಡಬಹುದು. ನಮ್ಮ ಆಪ್ತರೊಬ್ಬರು ಸತ್ತುಹೋದರೆಂಬ ಸುದ್ದಿಯು ತಿಳಿಯದಿದ್ದರೆ ನಮಗೆ ದುಃಖವಿಲ್ಲ. ಅವರು ಬದುಕಿದ್ದರೂ ಯಾವನೋ ಒಬ್ಬ ಬಂದು ಸತ್ತುಹೋದನೆಂದು ಹೇಳಿದರೆ ನಮಗೆ ದುಃಖವಾಗುತ್ತದೆ. ಕಾರಣ ಇಷ್ಟೆ: ಸ್ಮೃತಿ ಶಕ್ತಿಯು ಸುಪ್ತಾವಸ್ಥೆಯಲ್ಲಿರುವುದನ್ನು ಬಹಿರ್ಮುಖಿಸುವುದು. ಇಂತಹ ಸಂದರ್ಭಗಳಲ್ಲಿ ಜ್ಞಾನವೇ ಸುಖಗಳಿಗೆ ಕಾರಣವಾಗುತ್ತದೆ. ಪದಾರ್ಥವು ವಸ್ತುತಃ ಸ್ವಸ್ವರೂಪದಿಂದ ದುಃಖವೂ ಅಲ್ಲ, ಸುಖವೂ ಅಲ್ಲ. ಅದು ಜ್ಞಾನಕ್ಕೆ ಸಂಬಂಧಿಸಿದಾಗಲೇ, ಶರೀರಕ್ಕೆ ಸಂಬಂಧಿಸಿದಾಗಲೇ ನಮಗೆ ಸುಖವೋ ದುಃಖವೋ ಗೋಚರವಾಗುವುದು. ನಮಗೆ ಒಂದು ವಿಷಯ ತಿಳಿಯದೆ ಇರುವುದರಿಂದಾಗಲಿ ಸಂಶಯದಿಂದಾಗಲಿ ತಪ್ಪುತಿಳಿವಳಿಕೆಯಿಂದಾಗಲಿ ತಿಳಿಯುವುದರಿಂದ ನಮಗೆ ದುಃಖಗಳು ಪ್ರಾಪ್ತವಾಗುತ್ತವೆ. ಹಾಗೆಯೇ ಊಹಿಸಿಕೊಂಡು ಕಳೆದದ್ದನ್ನು ನೆನೆದುಕೊಂಡು ನಾವು ದುಃಖವನ್ನೋ ಸುಖವನ್ನೋ ಅನುಭವಿಸುತ್ತೇವೆ. ಹಾಗೆಯೇ ಒಬ್ಬನಿಗೆ ಸುಖವಾಗಿರುವುದು ಇನ್ನೊಬ್ಬನಿಗೆ ದುಃಖವಾಗಿ ಪರಿಣಮಿಸಬಹುದು. ಸುಖದುಃಖಗಳು ತ್ರೈಕಾಲಿಕವಾಗಿವೆ. ಇದರಲ್ಲಿ ಹಿಂದಿನದನ್ನು ಮುಂದಿನದನ್ನು ನೆನೆದು ಸುಖದುಃಖಗಳನ್ನು ಅನುಭವಿಸುತ್ತೇವೆ. ಇದರಲ್ಲಿ ವರ್ತಮಾನಕಾಲದ್ದು ಸ್ವಲ್ಪ. ಅನುಕೂಲತೆಯ ವೇದನೆಯು ಸುಖ. ಪ್ರತಿಕೂಲತೆಯ ವೇದನೆಯು ದುಃಖ. ಸುಖದ ಅನುಭವಕ್ಕಿಂತ ಸುಖವನ್ನು ನೆನೆಯುವುದರಲ್ಲಿ ಸುಖವನ್ನು ಅಪೇಕ್ಷಿಸುತ್ತೇವೆ. ನಿಜವಾದ ಸುಖ ಪ್ರಾಪಂಚಿಕವಾದ ಪದಾರ್ಥಗಳ ಸಂಬಂಧದಿಂದ ಬಾರದಿರಬಹುದು. ಇಂದ್ರಿಯಗಳಿಂದ ಅಥವಾ ಮನಸ್ಸಿನಿಂದಲೇ ಬರುವ ಸುಖದುಃಖಗಳು ಕ್ಷಣಿಕವಾದವುಗಳು. ದುಃಖಮಿಶ್ರವಾದುವುಗಳು. ನಿಜವಾದ ಸುಖವು ಪ್ರಾಪಂಚಿಕವಾದ ಪದಾರ್ಥಗಳ ಸಂಬಂಧದಿಂದಲೇ ಬರುವುದಿಲ್ಲ. ಅದು ಜ್ಞಾನರೂಪವಾದದ್ದು. ಸುಖದುಃಖಗಳು ಒಳಗೇ ಇವೆ. ಜ್ಞಾನ ವಿಕಾಸವೇ ಸುಖ–ಸಂತೋಷವು ಕ್ಷಣಿಕವಾದದ್ದು. ಆನಂದವು ಅಂದರೆ ಸ್ವಾತ್ಮಾನಂದವು ತೃಪ್ತಿಯಿಂದ ಪ್ರಾಪ್ತವಾಗತಕ್ಕದ್ದು.

ಪಂಪಭಾರತದಲ್ಲಿಯ ವರದಾ ನದಿ

ಸೀತಾರಾಮ ಜಾಗೀರ್‌ದಾರ್

ಆದಿಕವಿ ಪಂಪನು 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ ಅರಿಕೇಸರಿಗೆ ಪಟ್ಟ ಗಟ್ಟುವ ಸಂದರ್ಭದಲ್ಲಿ ಆ ಅರಿಕೇಸರಿಗೆ ರಾಜ್ಯಾಭಿಷೇಕವು "ವರುಣ ದೇವನಟ್ಟಿದ ಕ್ಷಾರ ಕ್ಷೀರೇಕ್ಷು ದಧಿ ಮಧು ಘೃತ ಸ್ವಾದೂದಕಂಗ (ಳೆಂಬೇ)ೞುಂ ಸಮುದ್ರಂಗಳ **ಚತುರ್ದಶ ಮಹಾನದಿಗಳ ನೀರುಮಂ"** ತಂದು ನಡೆಯಿಸಲಾಯಿತೆಂದು ವರ್ಣಿಸಿದ್ದಾನೆ.[1] ಅರಿಕೇಸರಿಗೆ ಪಟ್ಟಬಂಧನ ಮಹೋತ್ಸವವು ಜರುಗಿದ ಮೇಲೆ ಆತನು ಒಡ್ಡೋಲಗವನ್ನು ಕೊಟ್ಟನು. ಆ ಒಡ್ಡೋಲಗದಲ್ಲಿದ್ದ ಒಬ್ಬ ವೈತಾಳಿಕನು ಎದ್ದುನಿಂತು ಮೃದು ಮಧುರ ಧ್ವನಿಯಿಂದ ಆ ಅರಿಕೇಸರಿಯ ಸ್ತುತಿ ಮತ್ತು ಆತನ ಹಿರಿಮೆ ಗರಿಮೆಗಳ ವರ್ಣನೆಯನ್ನು ಮಾಡುತ್ತಾನೆ. ಆದಾದ ಮೇಲೆ ಮಂಗಳ ಪಾಠಕರಿಬ್ಬರು ಮಂಗಳ ವೃತ್ತಗಳನ್ನು ಓದಿದರು. ಆ ಸಂದರ್ಭದಲ್ಲಿಯೇ ಬಂದ 5 ಮಂಗಳ ವೃತ್ತಗಳಲ್ಲಿ ಮೊದಲನೆಯ ಪದ್ಯವಿಂತಿದೆ:

ರಂಗತ್ತುಂಗ ತರಂಗ ಭಂಗುರ ಲಸದ್ಗಂಗಾ ಜಳಂ ನರ್ಮದಾ
ಸಂಗ ಸ್ವಚ್ಛವನಂ ಪ್ರಸಿದ್ಧ ವರದಾ ಪುಣ್ಯಾಂಬು ಗೋದಾವರೀ॥
ಸಂಗತ್ಪ್ರೋ[ರ್ಜಿ] ತ ವಾರಿಸಾರ ಯಮುನಾ ಸಿಂಧೂರ್ಮಿನೀರಂ ಘಂಜೋ ।
ತ್ತುಂಗಂಗೀಗರಿಗಂಗೆ ಮಂಗಳಮಹಾಶ್ರೀಯುಂ ಜಯಶ್ರೀಯುಮಂ ॥–ಆ14–ಪ 31

ಇಲ್ಲಿ ಬರುವ 'ವರದಾನದಿ' ಇದುವರೆಗೆ ಕನ್ನಡ ನಾಡಿನ ವಿದ್ವಾಂಸರೆಲ್ಲ ಸುಮಾರಾಗಿ ಬನವಾಸಿಯಲ್ಲಿ ಹರಿಯುವ ವರದಾನದಿಯೆಂದು ಏಕಾಭಿಪ್ರಾಯಪಟ್ಟಿದ್ದಾರೆ: ಇತ್ತೀಚೆಗೆ ಪ್ರಕಟವಾದ ಕೆಲ ಅಭಿಪ್ರಾಯಗಳನ್ನು ಉಲ್ಲೇಖಿಸುವೆ:

1) ಡಾ. ಬಿ. ಎಸ್. ಕುಲಕರ್ಣಿ ಅವರು ಪಂಪ ಕವಿಯ ಕಾಲ. ದೇಶ ಹಾಗೂ ವ್ಯಕ್ತಿತ್ವ ಇವುಗಳನ್ನು ಕುರಿತು ಬರೆಯುತ್ತ "ಇದೂ ಅಲ್ಲದೆ ಅರ್ಜುನನಿಗೆ ಅರ್ಥಾತ್ ಎರಡನೆಯ ಅರಿಕೇಸರಿಗೆ ಪಟ್ಟಕಟ್ಟುವಾಗ **ವರದಾನದಿಯ ಪುಣ್ಯಾಂಬುವನ್ನು**

[1] ವಿ. ವಿ. ಆ 14 ಪದ್ಯ 17ರ ಅನಂತರ ಬಂದಿರುವ ವಚನ–ಪುಟ 406 (ಕ.ಸಾ.ಪ.ಮು). ಇಲ್ಲಿ 14 ನದಿಗಳ ಹೆಸರನ್ನು ಪಂಪನು ಹೇಳಿಲ್ಲ. ಇದು ಗಮನಿಸಬೇಕಾದ ವಿಷಯ: ಏಕೆಂದರೆ ಧಾರವಾಡ ಜಿಲ್ಲೆ–ಬನವಾಸಿ ಇವುಗಳ ಪ್ರಸಕ್ತಿ ಇಲ್ಲಿಲ್ಲ – ವರದಾ ನದಿಯದು ಕೂಡ.

ಹಾಕಿದ್ದಂತೆ ಹೇಳಿದ್ದಾನೆ. ಈ ವರದಾನದಿ ಬನವಾಸಿಯ ಮಗ್ಗುಲಲ್ಲಿ ಹರಿಯುವ ನದಿ ಎಂಬುದು ಲಕ್ಷಿಸಬೇಕಾದ ಮಾತು" ಎಂದಿದ್ದಾರೆ[2].

2) ಪಂಪನ ಕೃತಿ ವಿಕ್ರಮಾರ್ಜುನ ವಿಜಯಕ್ಕೆ ಗದ್ಯ ವಿವರಣಾತ್ಮಕ ಟೀಕೆಯನ್ನು "ಪಂಪಭಾರತ ದೀಪಿಕೆ" ಎಂಬ ಹೆಸರಿನಲ್ಲಿ ಡಾ. ಡಿ. ಎಲ್ ನರಸಿಂಹಾಚಾರ್ಯರು ಬರೆದು ಪ್ರಕಟಿಸಿದ್ದಾರೆ. ಅವರಲ್ಲಿ ಶ್ರೀಯುತರು ಈ ಪದ್ಯಕ್ಕೆ ವಿವರಣೆಯನ್ನು ಹೀಗೆ ಬರೆದಿದ್ದಾರೆ: ರಂಗ......ಜಳಂ: ರಂಗತ್ – ನರ್ತಿಸುತ್ತಿರುವ. ತುಂಗ – ಎತ್ತರವಾದ ತರಂಗ – ಅಲೆಗಳ. ಭಂಗುರ – ಒಡೆತದಿಂದ. ಲಸತ್ – ಪ್ರಕಾಶಮಾನವಾದ. ಗಂಗಾ ಜಳಂ – ಗಂಗಾನದಿಯ ನೀರು: ನರ್ಮದಾ ಸಂಗಸ್ವಚ್ಛಪಿನಂ – ನರ್ಮದಾ ನದಿಯ ಕೂಡಲಿನ ಶುಭ್ರವಾದ ನೀರು: ಪ್ರಸಿದ್ಧ ವರದಾ ಪುಣ್ಯಾಂಬು – ಪ್ರಸಿದ್ಧವಾದ ವರದಾ ನದಿಯ ಪವಿತ್ರವಾದ ನೀರು; "ಗೋದಾವರೀ ಸಂಗತ್ಯೂರ್ಜಿತವಾರಿ" – ಗೋದಾವರೀ ನದಿಯಲ್ಲಿ ಸೇರಿರುವ ವರ್ಧಿಸುತ್ತಿರುವ ನೀರು;[3] ಸಾರಯಮುನಾ ನೀಳೋರ್ಮಿ ನೀರಂ– ಸಾರವತ್ತಾದ ಯಮುನಾ ನದಿಯ ನೀಲಿಬಣ್ಣದ ಅಲೆಗಳನ್ನುಳ್ಳ ನೀರು; ಇವೆಲ್ಲಾ ಭುಜೋತ್ತುಂಗಂಗೆ – ಎತ್ತರವಾದ ಭುಜಗಳನ್ನುಳ್ಳ, ಅರಿಗಂಗೆ – ಅರಿಕೇಸರಿಗೆ, ಮಂಗಳಮಹಾಶ್ರೀಯುಮಂ – ಮಂಗಳವೆಂಬ ಮಹಾಸಂಪತ್ತನ್ನೂ, ಜಯಶ್ರೀಯುಮಂ – ಜಯಲಕ್ಷ್ಮಿಯನ್ನೂ, ಈಗೆ – ಕೊಡಲಿ. **ಇಲ್ಲಿ ಪಂಪ ಬನವಾಸಿಯ ಸಮೀಪದಲ್ಲಿ ಹರಿಯುವ ವರದಾನದಿಯನ್ನು ಹೇಳಿರುವುದು ಗಮನಾರ್ಹವಾಗಿದೆ.**[4] ಶ್ರೀ ಡಿ. ಎಲ್.ಎನ್. ಅವರು ಸ್ವೀಕರಿಸಿರುವ ಊಹಿತ ಪಾಠವಾಗಲೀ – ಶ್ರೀಯುತರ ಅನ್ವಯವಾಗಲೀ ಮತ್ತು ಅವರು ಹೇಳಿರುವ ಬನವಾಸಿ ಪ್ರದೇಶದ ವರದಾನದಿ ಎಂಬ ವಿಷಯವಾಗಲೀ ಇವು ಸರಿಯೆಂದು ನಮಗೆ ತೋರುವುದಿಲ್ಲ. ನಮ್ಮ ವಿವರಣೆ ಮುಂದೆ ಬರಲಿದೆ.

3) ಧಾರವಾಡದಲ್ಲಿ ದಿ. 4. 5–12–71ರಲ್ಲಿ ನಡೆದ ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಸ್ಥಾನದಿಂದ ಅಧ್ಯಕ್ಷ ಭಾಷಣದಲ್ಲಿ ಡಾ. ಆರ್. ಸಿ. ಹಿರೇಮಠ ಅವರು "ಮಹಾಕವಿ ಪಂಪನ ಸಂಬಂಧ ಧಾರವಾಡ ಜಿಲ್ಲೆಗೆ ಇರುವುದು ಕೇವಲ ಕಾಲ್ಪನಿಕ ಸಂಗತಿಯಲ್ಲ. ಆತನ ಕಾವ್ಯದಲ್ಲಿ ಈ ಜಿಲ್ಲೆಯ ಪಲವಾರು ಉಲ್ಲೇಖಗಳು ಮೈದೋರಿ ನಿಂತಿವೆ. ವರದಾಪುಣ್ಯಾಂಬು ಕನ್ನಡದ ಮಹಾಕವಿಯ ದೃಷ್ಟಿಯಲ್ಲಿ

---

2 ಜಿ. ಎಸ್. ಕುಲಕರ್ಣಿ 'ಮಹಾಕವಿ ಪಂಪ ಹಾಗೂ ಅವನ ಕೃತಿಗಳು' – ಕರ್ನಾಟಕ ವಿಶ್ವವಿದ್ಯಾಲಯದ ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆ–3–ಪುಟ 13. ಮೊದಲ ಮುದ್ರಣ 1966—ದ್ವಿತೀಯ ಮುದ್ರಣ 1969.

3 'ಗೋದಾವರೀ ಸಂಗತ್ಯೋ [ರ್ಜ] ತವಾರಿ' ಎಂಬ ಪಾಠವನ್ನೆ ಕಿಂಚಿದ್ ವ್ಯತ್ಯಾಸದಿಂದ [ಸಂಗತ್ಯೂರ್ಜಿತವಾರಿ?] ಶ್ರೀಯುತರು ಮೂಲ ಪಾಠವೆಂದು ಸ್ವೀಕರಿಸಿದ್ದಾರೆ.

4 ಡಿ. ಎಲ್. ನರಸಿಂಹಾಚಾರ್: 'ಪಂಪಭಾರತ ದೀಪಿಕೆ', ಪುಟ 565 (1971)

ಗಂಗಾ, ಸಿಂಧೂ. ಸರಸ್ವತೀ ಸಲಿಲಕ್ಕೆ ಸಮಾನವಾಗಿದೆ. ಅಂತೆ ವಿಕ್ರಮಾರ್ಜುನನ ಪಟ್ಟಾಭಿಷೇಕದಲ್ಲಿ ಅದಕ್ಕೆ ಸ್ಥಾನ ದೊರೆತಿದೆ. ಪುಲಿಗೆಱೆಯ ತಿರುಳಗನ್ನಡದಲ್ಲಿ ಕಾವ್ಯವನ್ನು ಬರೆಯುವುದು. ವರದಾನದಿಯನ್ನು ಭಕ್ತಿಭಾವದಿಂದ ಕಾಣುವುದು ಚಾರಿತ್ರಿಕ ದೃಷ್ಟಿಯಿಂದ ಅತ್ಯಂತ ಮಹತ್ವದ ವಿಷಯವಾಗಿದೆ."[5] ಮತ್ತು "ಪಂಪನ ಪೂರ್ವಜರು ವೆಂಗಿವಿಷಯದವರಾಗಿದ್ದುದು ವಸಂತ. ಸಿಡುಂಗೊಂಡ. ಕೊಟ್ಟೂರು ಮೊದಲಾದ ಸಪ್ತ ಗ್ರಾಮಗಳ ವೆಂಗಿಮಂಡಲದಲ್ಲಿದ್ದುದು ಐತಿಹಾಸಿಕ ಸತ್ಯ. ಪಂಪನು ಆ ನಾಡಿನ ಅರಿಕೇಸರಿಯ ಆಸ್ಥಾನದಲ್ಲಿ ಕವಿಯಾಗಿದ್ದು ಬನವಾಸಿಯನ್ನು ಸ್ಮರಿಸಿರುವುದು. **ವರದಾ ನದಿಯನ್ನು ಪೂಜ್ಯ ಭಾವನೆಯಿಂದ ಕಂಡಿರುವುದು,** ಪುಲಿಗೆಱೆಯ ತಿರುಳಗನ್ನಡದಲ್ಲಿ ಕಾವ್ಯವನ್ನು ರಚಿಸಿರುವುದು ಅಷ್ಟೇ ಸತ್ಯಪೂರ್ಣವಾಗಿದೆ"..........ಇತ್ಯಾದಿ.[6]

—ಈ ಎಲ್ಲರ ಪ್ರಕಾರ 'ವರದಾನದಿ' – ಧಾರವಾಡ ಜಿಲ್ಲೆಯ – ಬನವಾಸಿಯ ಪ್ರಾಂತದ ಹತ್ತಿರದ ಒಂದು ನದಿಯೆಂಬುದು ಸ್ಫಟಿಕ ಶಲಾಕೆಯಷ್ಟು ಸ್ಪಷ್ಟವಿದೆ. ಹಿರಿಯರ ಮಾತುಗಳಲ್ಲಿ ತಪ್ಪುಗಳನ್ನೆಣಿಸುವುದು ಸರಿಯಲ್ಲವಾದರೂ ಸತ್ಯವನ್ನು ಹೇಳುವುದು – ಸತ್ಯದ ಸಂಶೋಧನೆ ಮಾಡುವುದು ತಪ್ಪಲ್ಲವಾದುದರಿಂದ ಕೆಳಗಣ ಕೆಲವಿಷಯಗಳ ವಸ್ತುಸ್ಥಿತಿಯನ್ನು ನಾಡಿನ ಮುಂದಿಡುತ್ತಿರುವೆ. ಇಲ್ಲಿ ಬರುವ ವರದಾ ನದಿಗೂ ಎಂದರೆ ಪಂಪನು ಹೇಳುವ ಪ್ರಸಿದ್ಧ ವರದಾ ಪುಣ್ಯಾಂಬುವಿಗೂ ಮತ್ತು ಧಾರವಾಡ ಜಿಲ್ಲೆಯ ಬನವಾಸಿ ದೇಶದ ಬಳಿಯ ವರದಾನದಿಗೂ ಯಾವ ಸಂಬಂಧವೂ ಇಲ್ಲ; ಇದಕ್ಕೆ ಕಾರಣಗಳಿವು:

1) ವರದಾ ನದಿಯನ್ನು ಪಂಪನು ಬನವಾಸಿ ಪ್ರದೇಶದ ಧಾರವಾಡ ಜಿಲ್ಲೆಯಲ್ಲಿರುವ ವರದಾನದಿಯೆಂದು ಸ್ಪಷ್ಟವಾಗಿ ಹೇಳಿಲ್ಲ.

2) 2 ನೆಯದಾಗಿ ವರದಾನದಿಯು ಪ್ರಸಕ್ತ ಬನವಾಸಿ ದೇಶದ ಅಂಗವಾಗಿ ಬಂದಿಲ್ಲ.

3) 3ನೆಯದಾಗಿ ಪಂಪನ ಪ್ರಕಾರ 'ವರದಾಪುಣ್ಯಾಂಬು' ಗೋದಾವರಿ ನೀರಿನ ಜೊತೆಗೆ ಪ್ರವಹಿಸಿದೆ. ಆ ಪದ್ಯಭಾಗವನ್ನು ಅವಧರಿಸಿ: ಪ್ರಸಿದ್ಧ ವರದಾ ಪುಣ್ಯಾಂಬು ಗೋದಾವರೀ ಸಂಗತ್ಯೋ (ರ್ಜಿ) ತ ವಾರಿಸಾರ – ಪ್ರಸಿದ್ಧವಾದ ವರದಾ ನೀರು ಯಾವುದು ಗೋದಾವರಿಯನ್ನು ಸಂಗಮಿಸಿ ಅದರ ವಾರಿ ಸಂಪದವನ್ನು ಅಧಿಕವಾಗಿ ಬೆಳಗುವ ಆ ಒಟ್ಟು ವಾರಿಸಂಪದ.

---

5 ಆರ್. ಸಿ. ಹಿರೇಮಠ. ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ 'ಅಧ್ಯಕ್ಷ ಭಾಷಣ' ಪುಟ 11.

6 ಅದೇ—ಪುಟ 12.

4) ಇನ್ನು ನಾಲ್ಕನೆಯದಾಗಿ ಅತಿ ಮುಖ್ಯವಾದ ವಿಷಯವೆಂದರೆ ಪಂಪನಿಗೆ ಆಶ್ರಯವನ್ನಿತ್ತ 2ನೆಯ ಅರಿಕೇಸರಿಯ ರಾಜ್ಯದ ಸೀಮೆಯಲ್ಲಿಯೇ ಒಂದು ವರದಾನದಿ ಇದ್ದದು. ಅರಿಕೇಸರಿಯ ಸೀಮೆಯೊಳಗಣ ಈ ವರದಾನದಿ ಗೋದಾವರಿಗೂ ಬೆರೆತಿರುವುದು ಖಚಿತವಿರುವಾಗ ಪಂಪನು ಹೇಳಿದ ('ವರದಾ ಪ್ರಸನ್ನಾಂಬು') ಧಾರವಾಡ ಜಿಲ್ಲೆಯ ಬನವಾಸಿ ಪ್ರಾಂತದ ವರದಾನದಿಯಾಗುವುದು ಹೇಗೆ? ಅರಿಕೇಸರಿಯ ರಾಜ್ಯದ ಸೀಮೆಯಲ್ಲಿ ವರದಾ ನದಿ ಇದ್ದುದನ್ನು ಸ್ವಲ್ಪ ವಿವರಿಸಬೇಕು – ಅಷ್ಟೆ.

2ನೆಯ ಅರಿಕೇಸರಿಗೆ (ಅಶ್ಮಕ) ಸಪಾದಲಕ್ಷ ಭೂಮಿ ರಾಜ್ಯಮಂಡಲವಾಗಿತ್ತು. ಈ ಸಪಾದ ಲಕ್ಷದಲ್ಲಿ ಈಗಿನ ಆಂಧ್ರಪ್ರದೇಶದ ನಿಜಾಮಾಬಾದ್. ಆದಿಲಾಬಾದ್. ಕರೀಮ್‌ನಗರ್ ಮತ್ತು ಇವುಗಳಿಗೆ ಹತ್ತಿರದ ಮಹಾರಾಷ್ಟ್ರದ ಹಲವು ಜಿಲ್ಲೆಗಳೂ ಇದ್ದವು. ಆದಿಲಾಬಾದ ಜಿಲ್ಲೆಯು ಪೋದನ (ಬೋದನ) ನಾಡೊಳಗಣ ಭೂಭಾಗವಾಗಿತ್ತು. ಅದು ಅರಿಕೇಸರಿಯ ರಾಜ್ಯದ ಎಲ್ಲೆಯಲ್ಲಿಯೇ ಇದ್ದಿತೆನ್ನುವುದಕ್ಕೆ ಆ ಜಿಲ್ಲೆಯ ಗೋದಾವರೀ ನದಿ ತಟದಲ್ಲಿ ಇರುವ ಜೆನ್ನೂರ ಶಿಲಾಶಾಸನವೇ ಸಾಕ್ಷಿ[7]. ಇದೇ ಆದಿಲಾಬಾದ್ ಭೂಭಾಗದಲ್ಲಿನ ರಾಜೂರ ಹತ್ತಿರ ಪೈನಗಂಗೆಗೆ ಸೇರಿ ಅನಂತರ ಗೋದಾವರಿಯಲ್ಲಿ ವಿಲೀನವಾಗುವ ವರದಾ ನದಿಯೊಂದು ಇದೆ: ಇದು ಗಮನಾರ್ಹವಾದ ಸಂಗತಿ. ಈ ವರದಾ ನದಿ ವಿದರ್ಭದ (ಆದಿಲಾಬಾದ ಜಿಲ್ಲೆಯ ಪಕ್ಕದಲ್ಲಿಯೇ ಇರುವ ಈಗಿನ ಮಹಾರಾಷ್ಟ್ರ ಪ್ರದೇಶ) ಅಮರಾವತಿ – ಹಿಂಗಣಘಾಟ – ಕಾರಂಜಾ ಪ್ರದೇಶದಲ್ಲಿನ ನೀರನ್ನು ಹೊಂದಿಕೊಂಡು ಹರಿದು ಆದಿಲಾಬಾದ ಜಿಲ್ಲೆಯಲ್ಲಿ ರಾಜೂರ್ ಹತ್ತಿರ ಪೈನಗಂಗಾ ನದಿಗೆ ಸೇರಿದೆ. ಈ ವರದಾ ಕಾಳಿದಾಸನ ಕಾಲದಿಂದಲೂ ಪ್ರಸಿದ್ಧ. ಅಂತೆಯೇ ಅದರಲ್ಲಿನ ನೀರನ್ನು. "ಪ್ರಸಿದ್ಧ ವರದಾ ಪ್ರಸನ್ನಾಂಬು" ಎಂದು ಪಂಪನು ಹೇಳಿದ್ದಾನೆ. ಮತ್ತೆ ಅರಿಕೇಸರಿಯ ರಾಜ್ಯದಲ್ಲಿಯೇ ಇದ್ದ ಈ ವರದಾ ಹಾಗೂ ಅತನ ಇಡೀ ರಾಜ್ಯದಲ್ಲಿ ನೀರನ್ನು ಒದಗಿಸುತ್ತ ಹರಿದಿರುವ ಗೋದಾವರಿ ಮತ್ತು ಅದರ ಉಪನದಿಗಳನ್ನೇ ಕವಿ ದೃಷ್ಟಿಯಲ್ಲಿಟ್ಟುಕೊಂಡು ಅವುಗಳನ್ನು ಸ್ತುತಿಸಿದ್ದಾನೆಂದು ನಮಗೆ ತೋರುತ್ತದೆ. 2ನೇ ಅರಿಕೇಸರಿಯ ರಾಜಧಾನಿಯಾಗಿದ್ದ ಬೋದನನಗರದಿಂದ ಕೆಲವೇ ಮೈಲುಗಳ ಅಂತರದಲ್ಲಿರುವ ಗೋದಾವರಿಯು (ಸುಮಾರು 12 ಮೈಲು) ಮತ್ತು ಅದರ ಉಪನದಿಗಳು [ವೃದ್ಧಗಂಗಾ (ಮಾಂಜರಾ). ಗೋತಮಿಗಂಗಾ (ಗೋದಾವರಿ), ಪೈನಗಂಗಾ ಮತ್ತು ವರದಾ] ಜನತೆಯಿಂದ ಪೂಜಿಸಿಕೊಳ್ಳುತ್ತಿದ್ದ ವಿಷಯ ಪಂಪನಿಗೆ ಕಣ್ಣಾರೆ ಕಂಡ ವಿಷಯ. ಗೋದಾವರಿ ಮತ್ತು ಮಾಂಜರಾ ನದಿಗಳು ಬೋದನದ ಹತ್ತಿರವೇ ಇದ್ದು ,ಪರಿಚಿತವಾದಂತೆ (ಬೋದನ ಈ ಎರಡು ನದಿಗಳ ಸಂಗಮದ

---

7 A.R.I.E. (ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ) 1959–60ರ ವರದಿಯಲ್ಲಿ ಗಮನಿಸಲಾಗಿದೆ. ಆಂಧ್ರಪ್ರದೇಶ ಸರ್ಕಾರದ ಪುರಾತತ್ವ ಶಾಖೆಯ 1966–67ರ ವರದಿಯಲ್ಲೂ ಗಮನಿಸಲಾಗಿದೆ. ಇನ್ನೂ ಅಪ್ರಕಟಿತ.

ಹತ್ತಿರವೇ ಇದೆ) ರಾಜ್ಯದ ಎಲ್ಲೆಯಲ್ಲೇ ಇದ್ದ ಆ ವರದಾನದಿಯೂ ಪಂಪನಿಗೆ – ಆ ಆಸ್ಥಾನದ ಮಹಾಕವಿಗೆ – ಪರಿಚಿತವಾದ ನದಿಯೇ ಆಗಿತ್ತೆಂದು ಹೇಳಬಹುದು. “ಪ್ರಸಿದ್ಧ ವರದಾ ಪ್ರಣ್ಯಾಂಬು ಗೋದಾವರೀ ಸಂಗತ್ಯೋ(ರ್ಜಿ)ತ ವಾರಿಸಾರ”[8] ಎಂದರೆ ಪ್ರಸಿದ್ಧವಾದ ವರದಾ ನದಿ ಇತ್ಯಾದಿಗಳ ಸಂಗಮದಿಂದ ವರ್ಧಿತವಾದ ಗೋದಾವರಿಯ ನೀರಿನ ಸಂಪತ್ತು ಎಂದರ್ಥ. ಆದರೆ ಇಲ್ಲಿನ “ಊರ್ಜಿತ” ಎಂಬ ಊಹಿತಪಾಠ[9] ನಮಗೆ ಸರಿಯಲ್ಲವೆಂದು ತೋರುತ್ತದೆ. ವಿಕ್ರಮಾರ್ಜುನ ವಿಜಯದ 'ಘ' ಪ್ರತಿಯ ಪಾಠ:

ರಂಗತ್ತುಂಗ ತರಂಗ ಭಂಗುರ ಲಸದ್ಗಂಗಾ ಜಳಂ ನರ್ಮದಾ।
ಸಂಗಸ್ವಚ್ಛವನಂ **ಪ್ರಸಿದ್ಧ ವರದಾ ಪುಣ್ಯಾಂಬು ಗೋದಾವರೀ॥**
ಸಂಗತ್ಯೋರ್ಜಿತ ವಾರಿಸಾರ ಯಮುನಾ ನೀಳೋರ್ಮಿ ನೀರಂ ಭುಜೋ
ತ್ತುಂಗಂಗೀಗರಿಗಂಗೆ ಮಂಗಳಮಹಾಶ್ರೀಯುಂ ಜಯ ಶ್ರೀಯುಮಂ॥

ಎಂಬುದೇ ಸರಿಯಾದ ಹಾಗೂ ಪಂಪನು ಬರೆದಿರಬಹುದಾದ ಪಾಠವೆಂದು ತೋರುತ್ತದೆ. ಪ್ರಸಿದ್ಧವಾದ ವರದಾ ಜಲ (ಪ್ರಸಿದ್ಧ ವರದಾ ಪ್ರಣ್ಯಾಂಬು) ಗೋದಾವರೀವಾರಿಯ ಜೊತೆಗೆ (ಯಾವುದು) ಬೆರೆತು ಹರಿಯುತ್ತದೆಯೋ (ಸಂಗತ್ ∠ ಸಂಗಚ್ಛತಿ ಇತಿ) ಅದು ಮತ್ತು ಆ ಗೋದಾವರೀವಾರಿಸಾರ (ಗೋದಾವರೀ ಜಲ ಸಂಪತ್ತು) ಯಾವುವು (ಅರಿಕೇಸರಿ ಮತ್ತು ಆತನ ಜನತೆಯಿಂದ)ಪೂಜಿಸಿಕೊಳ್ಳುತ್ತವೆಯೋ(ಯೋಃ + ಅರ್ಜಿತ) (ಅವು) ಅರಿಕೇಸರಿಗೆ ಮಂಗಳವನ್ನುಂಟುಮಾಡಲಿ. ಜಯವನ್ನುಂಟುಮಾಡಲಿ – ಇದು ಪಂಪಮಹಾಕವಿಯ ಮನೋಗತ.[10] 'ಯೋಃ' ಎಂಬ ದ್ವಿವಚನವನ್ನು ಪರಿಭಾವಿಸಬೇಕು. ಆದುದರಿಂದ 'ಪಂಪ ಭಾರತ' ಗ್ರಂಥದಲ್ಲಿ ಬರುವ 'ವರದಾನದಿ' ಧಾರವಾಡ ಜಿಲ್ಲೆಯ ಬನವಾಸಿ ಪ್ರಾಂತದ ಪಕ್ಕದಲ್ಲಿ ಹರಿಯುವ ವರದಾ ನದಿಯಲ್ಲ. ಅದು ಗೋದಾವರಿಗೆ ಸೇರುವ ಅನೇಕ ಉಪನದಿಗಳಲ್ಲೊಂದಾದ ಆ ಅರಿಕೇಸರಿಯ ರಾಜ್ಯದ ಸೀಮೆಯಲ್ಲಿಯೇ ಇದ್ದ ವರದಾ ನದಿ.[11]

---

8 ಪೂಜ್ಯ ಡಿ. ಎಲ್. ಎನ್. ಅವರು 'ಸಾರ' ಎಂಬ ವಿಶೇಷಣವನ್ನು ಯಮುನಾ ನದಿಗೆ ಸೇರಿಸಿ ಹೇಳಿದ್ದಾರೆ. ಅದು ನಮಗೆ ಸರಿಯಲ್ಲವೆಂದು ತೋರುತ್ತದೆ.

9 ಈ ಪಾಠ ವಿಕ್ರಮಾರ್ಜುನ ವಿಜಯವನ್ನು ಸಂಪಾದಿಸಿದ ಪರಿಷತ್ತಿನ ಸಂಪಾದಕರದು: ಇದಕ್ಕೆ ಯಾವ ಪ್ರತಿಯ ಆಧಾರವೂ ಇಲ್ಲ.

10 ಪದ್ಯದ ಮಿಕ್ಕಿನ ಅರ್ಥವನ್ನು ಡಾ॥ ಡಿ. ಎಲ್ ಎನ್. ಸರಿಯಾಗಿಯೇ ವಿವರಿಸಿದ್ದಾರೆ.

11 ಈ ಲೇಖನವನ್ನು ಬರೆಯುವಲ್ಲಿ – ಡಾ॥ ಹಾ. ಮಾ. ನಾಯಕ. ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿ, ಶ್ರೀ ಕೆ. ಟಿ. ವೀರಪ್ಪ, ಮತ್ತು ಸ್ನೇಹಿತರಾದ ಎಚ್. ಎಮ್. ನಾಗರಾಜ ಹಾಗೂ ಜಿ. ಎಸ್. ಭಟ್ ಇವರುಗಳಿಗೆ ಋಣಿಯಾಗಿರುವೆ.

ಕೃಷಿ ನಿರುದ್ಯೋಗ

ಬಿ. ಶ್ರೀಧರ

ಐದನೆಯ ಪಂಚವಾರ್ಷಿಕ ಯೋಜನೆಗೆ ಕಾಲಿಟ್ಟಿರುವ ನಮ್ಮ ಭಾರತದಲ್ಲಿ ವ್ಯವಸಾಯದ ಅಭಿವೃದ್ಧಿ ಒಂದು ಮಹತ್ತರವಾದ ಸಮಸ್ಯೆಯಾಗಿದೆ. ಈ ಸಮಸ್ಯೆ ಹೊಸದೇನು ಅಲ್ಲವಾದರೂ. ಸ್ವಾತಂತ್ರ್ಯ ಬಂದು 25 ವರ್ಷಗಳಾಗಿದ್ದರೂ ಈ ಸಮಸ್ಯೆ ವ್ಯವಸಾಯ ಕ್ಷೇತ್ರದಲ್ಲಿ ಇನ್ನೂ ಪ್ರಬಲವಾಗಿರುವುದನ್ನು ಗಮನಿಸಿದರೆ ಇದು ಎಷ್ಟು ಆಳವಾಗಿ ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಬೇರುಬಿಟ್ಟಿದೆ ಎಂಬುದನ್ನು ತಿಳಿಯಬಹುದು. ಭಾರತ ಸರ್ಕಾರವು ಈಗ ವ್ಯವಸಾಯ ಕ್ಷೇತ್ರದಲ್ಲಿರುವ ನಿರುದ್ಯೋಗ ಮತ್ತು ಅಲ್ಪ ಉತ್ಪಾದನೆಗಳ ಸಮಸ್ಯೆಗಳಿಗೆ ಹೆಚ್ಚು ಗಮನ ನೀಡುವುದು ಅತ್ಯವಶ್ಯ. ನಿರುದ್ಯೋಗವನ್ನು ತೊಲಗಿಸದೆ ಮತ್ತು ಉತ್ಪಾದನೆಯನ್ನು ಅಧಿಕಗೊಳಿಸದೆ ದೇಶದ ಅಭಿವೃದ್ಧಿ ತ್ವರಿತವಾಗಲಾರದು. ಆದ್ದರಿಂದ. ಈ ಸಮಸ್ಯೆಯ ಪರಿಹಾರಕ್ಕೆ ಅಧಿಕ ಪ್ರಮಾಣದ ಸಹಾಯ ನೀಡುವುದು ಯೋಗ್ಯ.

ಯೋಜನೆ ದೇಶದ ಪ್ರಗತಿಗೆ ಪೂರಕ. ಇಂತಹ ಪ್ರಗತಿಪರ ಯೋಜನೆಯು ದೇಶದಲ್ಲಿರುವ ಆರ್ಥಿಕ ಅಸಮತೆಯನ್ನು ಹೋಗಲಾಡಿಸಿ. ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಬೆಳವಣಿಗೆಯನ್ನು ಸಾಧಿಸಲು ಸಹಾಯಮಾಡುವುದು ಅವಶ್ಯಕ. ಇಲ್ಲಿ ಎರಡು ಸಮಸ್ಯೆಗಳನ್ನು ಗಮನಿಸಬೇಕು:

ಅ) ಆದಾಯ ಸಮತೆಯನ್ನು ಸ್ಥಾಪಿಸುವುದು

ಆ) ಉತ್ಪಾದನೆಯನ್ನು ಹೆಚ್ಚಿಸುವುದು.

ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಬೆಳವಣಿಗೆಯನ್ನು ಸಾಧಿಸಬೇಕಾದರೆ ಈ ಎರಡು ವಿಷಯಗಳನ್ನು ಗಮನದಲ್ಲಿಡಬೇಕಾಗುತ್ತದೆ. ಈ ಎರಡರ ಸಾಧನೆಯು ಭಾರತದಲ್ಲಿ ಬಹುಮಟ್ಟಿಗೆ ವ್ಯವಸಾಯದ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಉತ್ಪಾದನಾ ಶಕ್ತಿ ಇರುವ ನಿರುದ್ಯೋಗೀ ಯುವಕರಿಗೆ ಪ್ರಯೋಜನಕಾರೀತಿಯ ಕೆಲಸಗಳನ್ನು ವ್ಯವಸಾಯ ಕ್ಷೇತ್ರದಲ್ಲಿ ನೀಡುವುದು ಪಂಚವಾರ್ಷಿಕ ಯೋಜನೆಯ ಆದ್ಯ ಗುರಿಯಾಗಬೇಕು. ಇದರಿಂದಾಗಿ. ಈ ಕ್ಷೇತ್ರದಲ್ಲಿ ಉತ್ಪಾದನೆಯನ್ನು ಅಧಿಕಗೊಳಿಸಲು ಮತ್ತು ಆದಾಯದಲ್ಲಿರುವ ಅಸಮತೆಯನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ.

ವಾಸ್ತವಿಕ ದೃಷ್ಟಿಯಿಂದ ವ್ಯವಸಾಯ ಕ್ಷೇತ್ರವನ್ನು ಗಮನಿಸಿದರೆ ನಿರುದ್ಯೋಗ ಸಮಸ್ಯೆಯು ಇಲ್ಲಿ ಎಷ್ಟು ಕ್ಲಿಷ್ಟವಾಗಿದೆಯೆಂಬುದನ್ನು ನೋಡಬಹುದು. ಇಲ್ಲಿರುವ ಅಪ್ರತ್ಯಕ್ಷ ನಿರುದ್ಯೋಗ, ಅಲ್ಪ ಉತ್ಪಾದನೆ, ಆದಾಯದ ಅಸಮತೆ ಮುಂತಾದುವುಗಳು ದೇಶದ ಪ್ರಗತಿಗೆ ಭಾರಿ ಅಡ್ಡಿಯನ್ನುಂಟುಮಾಡುತ್ತಿವೆ. ಈ ಸಮಸ್ಯೆಗಳನ್ನು ಮೊದಲು ನಿವಾರಿಸಿದರೆ ಮಾತ್ರ ಉತ್ಪಾದನೆಯನ್ನು ಹೆಚ್ಚಿಸುವುದು ಮತ್ತು ಅಸಮತೆಯನ್ನು ನಿವಾರಿಸುವುದು ಸಾಧ್ಯ. ಆದ್ದರಿಂದ, ವ್ಯವಸಾಯಾಭಿವೃದ್ಧಿಗಾಗಿ ವಿಶೇಷ ಗಮನವನ್ನು ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ನೀಡುವುದು ಸ್ವಾಗತಾರ್ಹ. ಭಾರತದ ಒಟ್ಟು ಕೆಲಸಗಾರರಲ್ಲಿ ಶೇ. 70 ರಷ್ಟು ಕೆಲಸಗಾರರು ವ್ಯವಸಾಯ ಕ್ಷೇತ್ರದಲ್ಲಿದ್ದಾರೆ. ಅಂದರೆ ದೇಶದಲ್ಲಿ ಇರುವ ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕೆ ವ್ಯವಸಾಯ ಕ್ಷೇತ್ರದ ಪಾತ್ರ ಎಷ್ಟು ಮುಖ್ಯವೆಂಬುದು ಇದರಿಂದ ತಿಳಿಯುತ್ತದೆ. ಆದರೂ ಹೆಚ್ಚು ನಿರುದ್ಯೋಗ, ಅಲ್ಪ ಉದ್ಯೋಗ, ಅಪ್ರತ್ಯಕ್ಷ ನಿರುದ್ಯೋಗ ಮುಂತಾದುವುಗಳು ಈ ಕ್ಷೇತ್ರದಲ್ಲೇ ಅಧಿಕವಾಗಿ ಕಾಣಬರುತ್ತವೆ.

ನಿರುದ್ಯೋಗ ಸಮಸ್ಯೆಯು ವ್ಯವಸಾಯ ಕ್ಷೇತ್ರದಲ್ಲಿ ತನ್ನ ವಿವಿಧ ರೂಪದಲ್ಲಿ ತಾಂಡವಾಡುತ್ತಿದೆ. ಆದರೆ ನಿರುದ್ಯೋಗದ ಗಾತ್ರ ಎಷ್ಟೆಂಬುದು ಖಚಿತವಾಗಿ ಹೇಳುವುದು ಬಹು ಕಷ್ಟ. ಈ ಅಸಹಾಯಕತೆ ಈ ಸಮಸ್ಯೆಯನ್ನು ಉಲ್ಬಣಗೊಳಿಸುತ್ತದೆ. ನಿರುದ್ಯೋಗವನ್ನು ನಿರ್ದಿಷ್ಟವಾಗಿ ಅಳೆಯುವುದು ಅಸಾಧ್ಯವಾಗಿದ್ದರೂ ಭೂ–ಜನ ಪ್ರಮಾಣದಲ್ಲಾದ ಇಳಿತ, ಭೂರಹಿತ ಜೀವಿಗಳ ಸಂಖ್ಯೆಯಲ್ಲಾದ ಏರಿಕೆ, ವ್ಯವಸಾಯ ಉತ್ಪಾದನೆಯಲ್ಲಿ ಇಳಿತ, ಕೃಷಿ – ಕೆಲಸಗಾರರಿಗಿರುವ ಕಡಿಮೆ ಆದಾಯ ಮುಂತಾದುವುಗಳಿಂದ ನಿರುದ್ಯೋಗದ ಗಾತ್ರವನ್ನು ಊಹಿಸಬಹುದು. ಈ ವಿಚಾರವನ್ನು ಗಮನಿಸಿ ಭೂರಹಿತ ಶ್ರಮಜೀವಿಗಳ ಸಂಖ್ಯೆಯನ್ನು ತಿಳಿಯಲು ಪ್ರಯತ್ನಿಸಿದರೆ ಪ್ರಾಯಶಃ ಅದು ಈಗ ಶೇ. 65 ರಷ್ಟಕ್ಕಿಂತ ಕಡಿಮೆ ಇರಲಾರದು (ಇದು 1950–51ರಲ್ಲಿ ಶೇ. 51 ರಷ್ಟು, 1956–57 ರಲ್ಲಿ ಶೇ. 57ರಷ್ಟು ಮತ್ತು 1963–64 ರಲ್ಲಿ ಶೇ. 61ರಷ್ಟು ಇದ್ದಿತು). ಯೋಜನಾ ಆಯೋಗದ ಅಭಿಪ್ರಾಯದಂತೆ, ನಿರುದ್ಯೋಗ ಹೊಂದಿರುವ ಕೃಷಿ – ಕೆಲಸಗಾರರ ಸಂಖ್ಯೆ ಎರಡನೇ ಯೋಜನೆಯಲ್ಲಿ 85.00.000: ಮೂರನೇ ಯೋಜನೆಯಲ್ಲಿ 1.64.00.000: ಮತ್ತು ನಾಲ್ಕನೇ ಯೋಜನೆಯಲ್ಲಿ (ಕರಡು) 75.00.000 ಇರುತ್ತದೆ. ಯೋಜನಾ ಆಯೋಗದ ಪ್ರಕಾರ, ನಾಲ್ಕನೇ ಯೋಜನೆಯಲ್ಲಿ ಮೂರನೇ ಯೋಜನೆಯ ಅರ್ಧದಷ್ಟು ನಿರುದ್ಯೋಗವು ವ್ಯವಸಾಯ ಕ್ಷೇತ್ರದಲ್ಲಿದ್ದಹಾಗಾಯಿತು. ಇದು ಸಂಶಯಾಸ್ಪದ. ಏಕೆಂದರೆ ಮೂರನೇ ಯೋಜನೆಯ ಪ್ರಕಾರ 1966–67 ರಿಂದ 1970–71 ರವರೆಗೆ ಸುಮಾರು 2.30.00.000 ಕೆಲಸಗಾರರು ಹೊಸದಾಗಿ ಉಂಟಾಗುತ್ತಾರೆ. ಮತ್ತು ಅವರಲ್ಲಿ 1.53.00.000 ಕೆಲಸಗಾರರು ಕೃಷಿ – ಕೆಲಸಗಾರರು. ಹಾಗಿದ್ದ ಮೇಲೆ ಮೊದಲಿದ್ದ ನಿರುದ್ಯೋಗಿ

ಕೃಷಿ ಕಾರ್ಮಿಕರು ಮತ್ತು ಹೊಸತಾಗಿ ಸೇರಿರುವ ಕೃಷಿ ಕಾರ್ಮಿಕರ ಸಂಖ್ಯೆ ಸುಮಾರು 2.70.00.000 ಆಗಲೇಬೇಕು. ಈ ಸಂಖ್ಯೆಗಳೆಷ್ಟೇ ಇದ್ದರೂ ಕೃಷಿ – ನಿರುದ್ಯೋಗಿಗಳ ಮಟ್ಟ ಮಾತ್ರ ಅತ್ಯಧಿಕವಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಇದಕ್ಕೆ ಬಹು ಮುಖ್ಯ ಕಾರಣ ಭಾರತದ ಜನಸಂಖ್ಯೆ ತ್ವರಿತವಾಗಿ ಏರುತ್ತಿರುವುದು. ಇದರಿಂದಾಗಿ, ಪರಿಮಿತಿ ಗೊಳಪಟ್ಟಿರುವ ವ್ಯಾವಸಾಯಿಕ ಭೂಮಿಯ ಮೇಲೆ ಅಧಿಕ ಒತ್ತಡ ಬಿದ್ದು ಭೂರಹಿತ ಜನರ ಸಂಖ್ಯೆ ಸಹಜವಾಗಿ ಹೆಚ್ಚಾಗುತ್ತದೆ. ಭೂರಹಿತ ಜನಗಳ ಸಂಖ್ಯೆ ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚಿರುವುದು ಅಷ್ಟು ಜನಗಳಿಗೆ ವ್ಯವಸಾಯ ಕ್ಷೇತ್ರದಲ್ಲಿ ಕೆಲಸದ ಅವಕಾಶ ವಿಲ್ಲವೆಂಬುದನ್ನು ಎತ್ತಿ ತೋರಿಸುತ್ತದೆ.

ನಮ್ಮ ದೇಶ ವ್ಯವಸಾಯದ ದೇಶ. ವ್ಯವಸಾಯದಲ್ಲಿ ಉದ್ಯೋಗಕ್ಕೆ ಇರುವಷ್ಟು ಅವಕಾಶ ಬೇರೆ ಯಾವ ಕ್ಷೇತ್ರದಲ್ಲೂ ಇಲ್ಲ. ಹೀಗಿರುವಾಗ ಕೃಷಿಕಾರ್ಮಿಕರ ಸಂಖ್ಯೆ ಜಾಸ್ತಿಯಾಗಿ, ಕೃಷಿಭೂಮಿಯ ವಿಸ್ತೀರ್ಣದಲ್ಲಿ ಏರಿಕೆಯಾಗದಿದ್ದರೆ ಕೃಷಿನಿರುದ್ಯೋಗವು ಅಧಿಕವಾಗಿ ದೇಶದ ಪ್ರಗತಿಗೆ ಮಾರಕವಾಗುತ್ತದೆ. ಈಗ ಭಾರತದಲ್ಲಿ ಶ್ರಮಜೀವಿಗಳ 'ಶ್ರಮ' ವ್ಯರ್ಥವಾಗುತ್ತಿದೆ. ಕೈಗಾರಿಕಾ ಶಕ್ತಿಯನ್ನು ಅಷ್ಟಾಗಿ ಸಂಪಾದಿಸದೆ ಇರುವ ನಮ್ಮ ದೇಶಕ್ಕೆ ಶ್ರಮಜೀವಿಗಳ 'ಶ್ರಮ ಶಕ್ತಿ'ಯೇ ಪ್ರಗತಿಗೆ ಆಧಾರ. ಆದರೂ ಪ್ರಗತಿಗೆ ಪೂರಕವಾಗಬೇಕಾಗಿದ್ದ 'ಶ್ರಮ' ಈಗ ಮಾರಕವಾಗುತ್ತಿದೆ! ಇದರಿಂದ ನಾವು ಒಂದು ವಿಷಯವನ್ನು ಗಮನಿಸಬಹುದು. ಎಷ್ಟು ಜನ ಕೃಷಿ – ಕೆಲಸಗಾರರ 'ಶ್ರಮ' ವ್ಯರ್ಥವಾಗುತ್ತಿದೆಯೋ ಅಷ್ಟು ಜನ ನಿರುದ್ಯೋಗ ಅಥವಾ ಕಡಿಮೆ ಉದ್ಯೋಗದ ಸಮಸ್ಯೆಗಳಿಗೆ ಆಹುತಿಯಾಗಿದ್ದಾರೆ. ಇದು ದೇಶಕ್ಕೆ ಶ್ರೇಯಸ್ಕರವಲ್ಲ. ಆದ್ದರಿಂದ ಇಂತಹ ಸಮಸ್ಯೆಯ ಪರಿಹಾರಕ್ಕೆ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಶೇಷ ಗಮನವನ್ನು ನೀಡುವುದು ಅತ್ಯವಶ್ಯ.

ಭಾರತದ ಅನೇಕ ಕಡೆಗಳಲ್ಲಿ ರೈತರಿಗಿರುವ ಭೂಮಿ ಅತ್ಯಲ್ಪ. ಆದರೆ ಅವರ ಸಂಸಾರ ದೊಡ್ಡದು. ಹೀಗಿದ್ದರೂ ಅವರಿಗೆ ಇತರಕಡೆ ಕೆಲಸದ ಅವಕಾಶ ಸಾಕಷ್ಟು ಇಲ್ಲದ ಕಾರಣವಾಗಿ ಎಲ್ಲರೂ ತಮಗಿರುವಷ್ಟೇ ಅಲ್ಪಭೂಮಿಯಲ್ಲಿ ಕೆಲಸಮಾಡಬೇಕಾಗು ತ್ತದೆ. ಇಂತಹವರು ಸುಮಾರು ಹಳ್ಳಿಗಳ ಒಟ್ಟು ಜನಸಂಖ್ಯೆಯ ಶೇ. 10 ರಷ್ಟಕ್ಕಿಂತ ಹೆಚ್ಚಿರುವರೆಂದು 1970ರಲ್ಲಿ ನ್ಯಾಷನಲ್ ಸ್ಯಾಂಪಲ್ ಸರ್ವೆಯವರು ಅಭಿಪ್ರಾಯಪಟ್ಟಿರು ತ್ತಾರೆ. ಅಲ್ಪ ಭೂಮಿ ಹೊಂದಿರುವ ಈ ತರಹದ ರೈತವರ್ಗವನ್ನು ಕೃಷಿ–ನಿರುದ್ಯೋಗಿ ಗಳ ಸಮೂಹಕ್ಕೆ ಸೇರಿಸಿದರೆ ವ್ಯವಸಾಯ ಕ್ಷೇತ್ರದಲ್ಲಿರುವ ನಿರುದ್ಯೋಗ ಎಷ್ಟೆಂಬುದು ತಿಳಿಯುತ್ತದೆ. ಈ ರೀತಿಯ ಸ್ವೋದ್ಯೋಗಿಕರನ್ನೂ ಮತ್ತು ನಿರುದ್ಯೋಗಿಗಳನ್ನೂ ಒಟ್ಟು ಸೇರಿಸಿದರೆ ಹಳ್ಳಿ ಜನಸಂಖ್ಯೆಯ ಸುಮಾರು ಶೇ. 13-15 ರಷ್ಟು ಇವರಾಗಿರುತ್ತಾರೆ.

ಈ ಸಮಸ್ಯೆಗಳ ಪರಿಹಾರ ಸುಲಭಸಾಧ್ಯವೇನಲ್ಲ. ಇದರ ಪರಿಹಾರಕ್ಕೆ ಸರ್ಕಾರದ ಪ್ರಜೆಗಳ ಮತ್ತು ವಿಜ್ಞಾನದ ಪ್ರಯತ್ನಗಳೆಲ್ಲಾ ಬೇಕು. ವ್ಯವಸಾಯ ಕ್ಷೇತ್ರದಲ್ಲಿ ಉತ್ಪಾದನೆಯನ್ನು ಅಧಿಕಗೊಳಿಸಲು ಮತ್ತು ಈಗ ಇರುವ ಆದಾಯದ ಅಸಮತೆಯನ್ನು

ಕಡಿಮೆಮಾಡಲು ವಿಜ್ಞಾನ ಬಹಳವಾಗಿ ಉಪಕಾರಿಯಾಗಿದೆ. ಸರಿಯಾದ ಶಿಕ್ಷಣಿಕೆ (ವಿಜ್ಞಾನ) ಯನ್ನು ಕೃಷಿವರ್ಗದವರಿಗೆ ನೀಡುವುದು, ನೀರಿನ ಸೌಲಭ್ಯ ಹೆಚ್ಚಿಸುವುದು, ಕ್ರಿಮಿನಾಶಕಗಳ ಉಪಯೋಗ, ಕಳೆ ಕೀಳುವುದು, ಸಸಿ ನೆಟ್ಟಿ ಮಾಡುವುದು .ಉತ್ತಮ ವಾದ, ಸಾರಿಗೆ ಸಂಪರ್ಕಗಳ ಸೌಲಭ್ಯ ಒದಗಿಸುವುದು, ಸಾಧ್ಯವಾದಷ್ಟು ಮಟ್ಟಿಗೆ ಯಂತ್ರೋಪಕರಣಗಳನ್ನು ಉಪಯೋಗಿಸುವುದು ಮುಂತಾದ ಕಾರ್ಯಗಳು ಕೃಷಿ ಕೆಲಸಗಾರರಿಗಿರುವ ಬೇಡಿಕೆಗಳನ್ನು ಅಧಿಕಗೊಳಿಸುತ್ತವೆ. ಈ ಕಾರ್ಯಗಳನ್ನು ವಿಶೇಷವಾಗಿ ಆಚರಿಸುವುದರ ಮೂಲಕ ಕೃಷಿ – ನಿರುದ್ಯೋಗ ಸಮಸ್ಯೆಯನ್ನು ಬಹಳ ಮಟ್ಟಿಗೆ ನಿವಾರಿಸಬಹುದು. ವ್ಯವಸಾಯಕ್ಷೇತ್ರದ ವಿಸ್ತೀರ್ಣ ಈಗ ಇರುವ ಭೂಮಿ ಗಷ್ಟೇ ಸೀಮಿತವಾಗಿರುವುದರಿಂದ, ಈಗಿರುವಷ್ಟೇ ಭೂಮಿಗೆ ಹೆಚ್ಚು – ಹೆಚ್ಚು ಗಮನಕೊಟ್ಟು ಅಧಿಕ ಉತ್ಪಾದನೆಗೆ ಯತ್ನಿಸುವುದು ಅವಶ್ಯಕ. ಈರೀತಿ ಮಾಡುವುದ ರಿಂದ ಕೃಷಿ ನಿರುದ್ಯೋಗ ಕಡಿಮೆಯಾಗುವ ಸಾಧ್ಯತೆ ಇದೆ. ಇರುವಷ್ಟೆ ಭೂಮಿಯಲ್ಲಿ ಎರಡು ಸಲ ಬೆಳೆ ಬೆಳೆಯುವುದು ಮತ್ತು ಮೇಲೆ ಹೇಳಿರುವ ಕಾರ್ಯಗಳನ್ನು ಬಹಳವಾಗಿ ಕಾರ್ಯಗತಮಾಡುವುದು ಒಂದು ವರ್ಷಕ್ಕೆ ಸುಮಾರು 60 ದಿನಗಳ ಕೆಲಸವನ್ನು ಕೃಷಿ – ಕೆಲಸಗಾರರಿಗೆ ಒದಗಿಸುತ್ತವೆ. ನಮ್ಮ ರೈತರು ಹೆಚ್ಚು – ಹೆಚ್ಚಾಗಿ ಯಂತ್ರೋ ಪಕರಣಗಳನ್ನು ಬಳಸಬೇಕು. ಇದರಿಂದ ಸ್ವಲ್ಪಮಟ್ಟಿಗೆ ಕೃಷಿ – ನಿರುದ್ಯೋಗ ತಲೆ ದೋರಬಹುದಾದರೂ ಯಂತ್ರೋಪಕರಣಗಳ ಸಹಾಯದಿಂದ ಹೆಚ್ಚುವರಿ ಕೃಷಿಕಾರ್ಯ ಇದರಿಂದ ಉಂಟಾಗಬಹುದಾದ ಅಧಿಕ ಉತ್ಪಾದನೆ ಮತ್ತು ಉದ್ಯೋಗ ಸಾಧ್ಯತೆಗಳು ಯಂತ್ರೋಪಕರಣಗಳಿಂದ ಉಂಟಾಗಬಹುದಾದ ಕೃಷಿ ನಿರುದ್ಯೋಗವನ್ನು ಹೋಗಲಾಡಿ ಸುತ್ತವೆ. ಈಗಿನ ಮಟ್ಟದಲ್ಲಿ ಹೇಳುವುದಾದರೆ, ನಮ್ಮ ದೇಶದ ವ್ಯವಸಾಯ ಕ್ಷೇತ್ರದಲ್ಲಿ ಯಂತ್ರೋಪಕರಣಗಳ ಬಳಕೆ ಬಹಳ ಕಡಿಮೆ ಇದೆ. ಇದನ್ನು ಸಾಧ್ಯವಾದಷ್ಟು ಮಟ್ಟಿಗೆ ಉಪಯುಕ್ತರೀತಿಯಲ್ಲಿ ಹೆಚ್ಚಿಸಿದ ವಿನಾ ದೇಶದಲ್ಲಿ ಆಹಾರ ಸಾಮಗ್ರಿಗಳ ಕೊರತೆ ನೀಗುವುದು ಅಸಾಧ್ಯ.

ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಸಮಸ್ಯೆಗಳಿಗೆ ಗಮನ ನೀಡುವುದು ಅವಶ್ಯಕ. ಸರಕಾರವು ಭೂಪರಿಮಿತಿಯ ಮಟ್ಟವನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆಮಾಡಿ ಭೂರಹಿತ ರೈತರಿಗೆ ಅನುಕೂಲಮಾಡಿಕೊಡಬೇಕು. ಇದಕ್ಕೆ ತಕ್ಕಂತೆ ಭಾರತದ ಪ್ರಜೆಗಳೂ ಸರ್ಕಾರದೊಡನೆ ಸಹಕರಿಸಿ ಅಧಿಕ ಉತ್ಪನ್ನಕ್ಕಾಗಿ ಪ್ರಯತ್ನಿಸಬೇಕು. ರಾಷ್ಟ್ರೀಕೃತ ಬ್ಯಾಂಕುಗಳು ಇತರ ಎಲ್ಲಾ ವಿಧದ ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳು ತಮ್ಮ ಕರ್ತವ್ಯಗಳನ್ನು ಮರೆಯದೆ ವ್ಯವಸಾಯ ಕ್ಷೇತ್ರಕ್ಕೆ ಎಲ್ಲಾ ರೀತಿಯ ಸಹಾಯಗಳನ್ನು ನೀಡಬೇಕು. ಆಗ ಮಾತ್ರ ವ್ಯವಸಾಯ ಉತ್ಪಾದನೆಯೂ ಅಧಿಕ ವಾಗುತ್ತದೆ ಮತ್ತು ಆದಾಯ ಅಸಮತೆಯೂ ಕರಗುತ್ತದೆ. ಇದರಿಂದ ನಮ್ಮೆ ಲ್ಲರ ಗುರಿಯಾದ 'ಸಾಮಾಜಿಕ ನ್ಯಾಯದೊಡನೆ ದೇಶದ ಪ್ರಗತಿ'ಯನ್ನು ಸಾಧಿ ಸಲು ಸಾಧ್ಯವಾಗುತ್ತದೆ.

ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆ

ಎಚ್. ನರಸಿಂಹಯ್ಯ

ಧರ್ಮ ಅಥವಾ ತಾತ್ವಿಕ ವಿಚಾರಗಳ ಕ್ಷೇತ್ರದಲ್ಲಿ ನಾನು ಪಾಂಡಿತ್ಯವನ್ನು ಪಡೆದುಕೊಂಡಿಲ್ಲ. ನಾನು ವಿಜ್ಞಾನದ ವಿದ್ಯಾರ್ಥಿ. ಆದಕಾರಣ ನಾನು ಸಂಸ್ಕೃತಿಯ ಬಗೆಗಾಗಲೀ. ತಾತ್ವಿಕ ವಿಚಾರಗಳನ್ನು ಕುರಿತಾಗಲೀ ಗೂಢವಾದ ಮತ್ತು ವಾದವಿವಾದಕ್ಕೆ ಅವಕಾಶವನ್ನು ಕೊಡುವ ಪಾಂಡಿತ್ಯಪೂರ್ಣ ವಿವೇಚನೆಯನ್ನು ಮಾಡಲಾರೆ. ಸಂಸ್ಕೃತಿ ಮತ್ತು ಆಧ್ಯಾತ್ಮಿಕ ವಿಚಾರಗಳು ಮಾನವ ಜೀವನದಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿವೆ. ಸಂಸ್ಕೃತಿಯ ಇತಿಹಾಸ ಮನುಷ್ಯ ಸ್ವಭಾವ ಮತ್ತು ಸಮಾಜದ ನೆಲೆ ಬೆಲೆಗಳನ್ನು ನಿರಂತರವಾಗಿ ಅರ್ಥಪೂರ್ಣವನ್ನಾಗಿ ಮಾಡುವುದರ ಕಥೆಯೇ ಆಗಿದೆ. ಅಲ್ಲದೆ ಸಮಾಜದಲ್ಲಿನ ಸಹಬಾಳ್ವೆಗೆ ಅದು ಕಾರಣವೂ ಆಗಿದೆ. ಇದನ್ನು ವಿಪುಲವಾದ ಉದಾಹರಣೆಗಳ ಮೂಲಕ ಮನಗಾಣಬಹುದು. ಆಸೆ ಮತ್ತು ಬಯಕೆಗಳು ಮನುಷ್ಯನ ಅತ್ಯಂತ ಸ್ವಾಭಾವಿಕವಾದ ಗುಣಗಳು. ಆದರೆ ಆ ಗುಣಗಳನ್ನು ಹತೋಟಿಯಲ್ಲಿಟ್ಟುಕೊಂಡು ಅರ್ಥಪೂರ್ಣವಾದ ಸಾಧನೆಗೆ ಪೂರಕವಾಗಿ ಬಳಸಿಕೊಳ್ಳಬೇಕು. ಹಾಗೆ ಆದಾಗ ಅದರಿಂದ ಕ್ರಿಯಾಶೀಲತೆ ಮತ್ತು ಉನ್ನತ ಆದರ್ಶ ಸಾಧನೆ ಸಾಧ್ಯವಾಗುತ್ತದೆ. ಕೇವಲ ಆಕಾಂಕ್ಷೆ ಒರಟುತನದ ಪ್ರದರ್ಶನವಾಗುತ್ತದೆ. ಆಕಾಂಕ್ಷೆ ಸಂಸ್ಕಾರಗೊಂಡಾಗ ಆಧ್ಯಾತ್ಮಿಕ ಅರ್ಥಗಳನ್ನು ಪಡೆದುಕೊಳ್ಳುತ್ತದೆ. ಆಗ ಅದು ಸೇವೆಯ ಮೂಲಕ ತನ್ನನ್ನು ತಾನು ಅರಿತುಕೊಳ್ಳುವಂತೆ ಮಾಡುತ್ತದೆ. ಅನುಕಂಪದ ಕೇಂದ್ರ ವೈಯಕ್ತಿಕವಾದರೂ ಅದು ಸಂಸ್ಕೃತಿಯ ಸಂಸರ್ಗದಿಂದ ವಿಸ್ತಾರಗೊಂಡು ಇಡೀ ಮಾನವತೆಯನ್ನು ಉಳಿಸಿಕೊಳ್ಳುತ್ತದೆ.

ಎಲ್ಲ ದೇಶಕ್ಕೂ ತನ್ನದೇ ಆದ ಸಂಸ್ಕೃತಿ ಇದೆ. ಪ್ರತಿಯೊಬ್ಬನೂ ಸುಸಂಸ್ಕೃತನಾಗಲು. ಆಧ್ಯಾತ್ಮಿಕ ಅರ್ಥಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಾನೆ. ಇಂಥ ಪ್ರಯತ್ನದಲ್ಲಿ ಅವನು ಸಮಾಜದಿಂದ ದೂರ ನಿಲ್ಲುವ ಅಪಾಯವಿದೆ. ದೇಶ ಮತ್ತು ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ಆತ ಸಂಪೂರ್ಣವಾಗಿ ಪರಕೀಯನಾಗಿ ನಿಲ್ಲುತ್ತಾನೆ. ದೈನ್ಯಾವಸ್ಥೆಯಲ್ಲಿರುವ ವರ್ಗವೊಂದರ ಕಡೆಗೆ ಯಾವ ಗಮನವನ್ನೂ ಕೊಡದೆ ದೂರ ನಿಂತು ಪರಿವೀಕ್ಷಣೆ ಅಥವಾ ನಿವೃತ್ತಿ ಮಾರ್ಗವನ್ನು ಕಂಡುಕೊಳ್ಳಲು ಹವಣಿಸುವುದು ಅಸಂಬದ್ಧ. ಅಂಥ ಹವಣಿಕೆ ಕ್ರೌರ್ಯ ಮತ್ತು ಸ್ವಾರ್ಥಪರತೆಯ ಪ್ರಯತ್ನವಾಗುತ್ತದೆ.

ಆತ್ಮಾನೋ ಮೋಕ್ಷಾರ್ಥಂ
ಜಗತ್ ಹಿತಾಯಚ

ಎಂದರೆ ವ್ಯಕ್ತಿಯೊಬ್ಬನು ಮೋಕ್ಷವನ್ನು ದೇಶದ ಹಿತಸಾಧನೆಯ ಮೂಲಕ ಕಂಡು ಕೊಳ್ಳಬೇಕು. ಒಬ್ಬ ವ್ಯಕ್ತಿ, ನಿಜವಾಗಿ ಸುಸಂಸ್ಕೃತನಾಗಬೇಕಾದರೆ, ಆಧ್ಯಾತ್ಮಿಕನಾಗ ಬೇಕಾದರೆ ಆತನಿಗೆ ಸಾಮಾನ್ಯರ ಬಗ್ಗೆ ಕಾಳಜಿ ಇದ್ದರೆ ಮಾತ್ರ ಸಾಲದು; ಅದರ ಜೊತೆಗೆ ತನ್ನ ಸಂಕಷ್ಟಗಳನ್ನು ಸಹಿಸಿಕೊಳ್ಳುವ ಸಾಮರ್ಥ್ಯವೂ ಬೇಕಾಗುತ್ತದೆಂಬುದು ನನ್ನ ಅಭಿಪ್ರಾಯ. ಒಬ್ಬ ವ್ಯಕ್ತಿ ಎಷ್ಟೇ ವಿದ್ಯಾವಂತನಾದರೂ ಅಥವಾ ಎಷ್ಟೇ ಸುಸಂಸ್ಕೃತ ನಾದರೂ ಅವನು ದೀನದಲಿತರ ಬಗ್ಗೆ ಅನುಕಂಪೆಯನ್ನು ತೋರದಿದ್ದರೆ ಅವನನ್ನು ಅಸಂಸ್ಕೃತನೆಂದೇ ಕರೆಯಬೇಕು. ಒಬ್ಬ ಭಿಕ್ಷುಕನ ದಾರುಣಸ್ಥಿತಿ, ತಿಂದು ಬಿಸಾಡಿದ ಊಟದ ಎಲೆಯಲ್ಲಿನ ಅನ್ನದ ಅಗುಳಿಗೆ ಧೂಳಿನಲ್ಲಿ ಕಿತ್ತಾಡುವ ಮನುಷ್ಯ ಮತ್ತು ನಾಯಿಗಳ ಹೋರಾಟದ ದೃಶ್ಯಗಳು ತೀವ್ರವಾದ ವಿಚಾರಕ್ಕೆ ಅವಕಾಶಮಾಡಿಕೊಡಬೇಕು. ಇಂಥ ಹೀನಸ್ಥಿತಿಗೆ ಕಾರಣವಾಗಿರುವ ವ್ಯವಸ್ಥೆಯನ್ನು ಪ್ರತಿಭಟಿಸಿ ದಲಿತರ ಉದ್ಧಾರಕ್ಕೆ ಕಾರಣನಾಗದಿದ್ದ ಪಕ್ಷದಲ್ಲಿ ಅಂಥ ವ್ಯಕ್ತಿಯನ್ನು ವಿದ್ಯಾವಂತನೆಂದಾಗಲೀ, ಆಧ್ಯಾತ್ಮಿಕ ನೆಂದಾಗಲೀ ಗಣಿಸಲು ಸಾಧ್ಯವಿಲ್ಲ.

ಸುಸಂಸ್ಕೃತ ಮತ್ತು ಆಧ್ಯಾತ್ಮಿಕನೆನಿಸಿದ ವ್ಯಕ್ತಿ ಎಲ್ಲ ವಿಧವಾದ ಆರ್ಥಿಕ ಏರುಪೇರುಗಳ, ಶೋಷಣೆ ಮತ್ತು ಸಾಮಾಜಿಕ ಅನ್ಯಾಯಗಳ, ಸಂಕುಚಿತ ಭಾವನೆ ಯನ್ನು ಉದ್ದೀಪಿಸುವ ಧಾರ್ಮಿಕ ಆಚಾರಗಳ ಮತ್ತು ಮೂಢ ನಂಬಿಕೆಗಳ ವಿರುದ್ಧ ಬಂಡಾಯವನ್ನು ತೋರಬೇಕು.

ಮಾನವನ ಇತಿಹಾಸದ ಉದ್ದಕ್ಕೂ ಶೋಷಣೆ ತುಂಬಿದೆ. ನಾಗರಿಕ ಮತ್ತು ಅನಾಗರಿಕ ಸಮೂಹದಲ್ಲಿ ಹೆಚ್ಚು ಬುದ್ಧಿವಂತನಾದವನು ಕಡಿಮೆ ಬುದ್ಧಿವಂತ ನಾದವನನ್ನು ಎಲ್ಲ ಹಂತಗಳಲ್ಲಿಯೂ ನಿರಂತರವಾಗಿ ಶೋಷಿಸುತ್ತಾ ಬಂದಿರುವುದು ಅತೀವ ವ್ಯಥೆಗೆ ಕಾರಣವಾಗಿದೆ. ಶೋಷಣೆಗೆ ದೇವರು, ಧರ್ಮ, ವರ್ಣ, ಜಾತಿ ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಆರ್ಥಿಕ ಸಿದ್ಧಾಂತಗಳು ತಮ್ಮ ಕೊಡುಗೆ ಗಳನ್ನು ನೀಡಿವೆ. ಇಂಥ ಶೋಷಣೆಗೆ ನಮ್ಮ ದೇಶದಲ್ಲಿ ಬೇರೂರಿರುವ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು ಮೂಲ ಕಾರಣಗಳಾಗಿವೆ.

ಜಾತಿಪದ್ಧತಿಯ ಮೂಲದಿಂದ ಹುಟ್ಟಿಕೊಂಡಿರುವ ಸಾಮಾಜಿಕ ಅಸಮಾನತೆಯನ್ನು ನಮ್ಮ ದೇಶ ಎದುರಿಸುತ್ತಿದೆ. ಒಬ್ಬ ಮನುಷ್ಯನ ಏಳುಬೀಳುಗಳನ್ನು ಅವನ ಹುಟ್ಟಿನ ಮೂಲಕ ನಿರ್ಧರಿಸುವುದು ಅನ್ಯಾಯದ ಪರಮಾವಧಿ. ಇಂಥ ಅತಾರ್ಕಿಕ ವ್ಯವಸ್ಥೆಯನ್ನು ವಿದ್ಯಾವಂತನೆನ್ನಿಸಿಕೊಂಡವನು ಸಹಿಸಲಾರ. ಮೂಲಭೂತವಾಗಿ ಅಮಾನವೀಯವಾ ಗಿರುವ ಇಂಥ ವ್ಯವಸ್ಥೆಯನ್ನು ಸುಸಂಸ್ಕೃತ ವ್ಯಕ್ತಿ ಯಾವ ರೀತಿಯಲ್ಲಿಯೂ ಬೆಂಬಲಿಸ ಲಾರ.

ಆಧ್ಯಾತ್ಮಿಕತೆಯೇ ಎಲ್ಲ ಧರ್ಮಗಳ ಸಾರ ಎಂಬುದು ನನ್ನ ಅಭಿಪ್ರಾಯ. ಅದು ಮೂಲಭೂತವಾಗಿ ಮನುಷ್ಯನ ನಡವಳಿಕೆಗೆ ಸಂಬಂಧಿಸಿದ್ದು. ವೈಚಾರಿಕ

ಪ್ರಜ್ಞೆಯ ಬೆಳವಣಿಗೆಯೇ ದಿವ್ಯತ್ವಕ್ಕೆ ದಾರಿಮಾಡಿಕೊಡುತ್ತದೆ. ನಾವು ವೈಜ್ಞಾನಿಕ ಪ್ರಗತಿಯ ಯುಗದಲ್ಲಿ ಬದುಕುತ್ತಿದ್ದರೂ ಮೂಢನಂಬಿಕೆಗಳ ಪ್ರಪಾತದಲ್ಲಿ ಮುಳುಗಿದ್ದೇವೆ. ಅರ್ಥರಹಿತ ಆಚರಣೆಗಳನ್ನು ಯಾಂತ್ರಿಕವಾಗಿ ಮಾಡುತ್ತಿದ್ದೇವೆ. ವೈಚಾರಿಕ ಮನೋಭಾವದ ಮೂಲಕ ಜೀವನ ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದನ್ನು ವಿದ್ಯಾವಂತರು. ವಿಜ್ಞಾನಿಗಳು ಮತ್ತು ಇತರರು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ತರಗತಿಗಳಲ್ಲಿ ತತ್ತ್ವಶಾಸ್ತ್ರವನ್ನು ಬೋಧಿಸುವ ಅಧ್ಯಾಪಕರು. ಜೀವನದಲ್ಲಿ ಅದಾವುದನ್ನೂ ಅಳವಡಿಸಿಕೊಳ್ಳುವುದಿಲ್ಲ. ತತ್ತ್ವಶಾಸ್ತ್ರದ ಬೋಧನೆ ಜೀವನೋಪಾಯಕ್ಕಾಗಿಯೇ ಹೊರತು ಆಚರಣೆ. ಅನುಷ್ಠಾನಗಳಿಗಲ್ಲ. ಅಂತೆಯೇ ವಿಜ್ಞಾನಿ ಮತ್ತು ವಿಜ್ಞಾನವನ್ನು ಬೋಧಿಸುವ ಅಧ್ಯಾಪಕ ತನ್ನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ವೈಜ್ಞಾನಿಕ ಮಾರ್ಗವನ್ನು ಅನುಸರಿಸುವುದಿಲ್ಲ.

ಅತ್ಯಂತ ಯಶಸ್ವಿಯಾಗಿ ಮೂರು ಬಾರಿ ಚಂದ್ರನತ್ತ ನಮ್ಮ ಪಯಣವನ್ನು ಮಾಡಿದ್ದರೂ ಗ್ರಹಣಗಳ ಬಗ್ಗೆ ಎರಡು ಸಿದ್ಧಾಂತಗಳಿವೆ. ಒಂದು ಸಿದ್ಧಾಂತ ತರಗತಿಯ ಪಾಠಪ್ರವಚನಗಳಿಗೆ ಸಂಬಂಧಿಸಿದ್ದಾದರೆ ಮತ್ತೊಂದು ಮನೆಯ ಆಚರಣೆಗಳಿಗೆ ಸಂಬಂಧಿಸಿದ್ದಾಗುತ್ತದೆ. ಒಂದು ಸಿದ್ಧಾಂತವಂತೂ ರಾಹು ಕೇತುಗಳು ಸೂರ್ಯನ ಮೇಲೆ ತಮ್ಮ ಹತೋಟಿಯನ್ನಿಟ್ಟುಕೊಂಡಿವೆಯೆಂದು ವಿವರಿಸುತ್ತದೆ! ಪ್ರಯೋಗಶಾಲೆಯಲ್ಲಿ ಅತ್ಯಂತ ತಾರ್ಕಿಕವಾಗಿ ವರ್ತಿಸುವ ವಿಜ್ಞಾನಿ ತನ್ನ ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಅರ್ಥಹೀನ ವಿಚಾರಗಳಿಗೆ ಮೊರೆಹೋಗುತ್ತಾನೆ. ಇದರಿಂದ ಅವನ ವೈಚಾರಿಕಪ್ರಜ್ಞೆಯೇ ವಿರಾಮವನ್ನು ಪಡೆದುಕೊಂಡಂತೆ ಭಾಸವಾಗುತ್ತದೆ.

ನಮ್ಮ ಅನೇಕ ವಿಜ್ಞಾನಿಗಳಿಗೆ ಸಾಮುದ್ರಿಕ ಮತ್ತು ಜ್ಯೋತಿಷ್ಯದಲ್ಲಿ ಗಾಢವಾದ ನಂಬಿಕೆಗಳಿರುವುದನ್ನು ಗಮನಿಸಿದ್ದೇವೆ. ಕೆಲವು ವಿಜ್ಞಾನಿಗಳು ವಶೀಕರಣ ಸಿದ್ಧಿಯನ್ನು ಹೊಂದಿರುವ ವ್ಯಕ್ತಿಗಳನ್ನು ಪೂರ್ವಾಪರ ವಿವೇಚನೆ ಇಲ್ಲದೆ ಅನುಸರಿಸುತ್ತಿರುವುದನ್ನು ಕಾಣಬಹುದಾಗಿದೆ. ನಮ್ಮ ದೇಶದಲ್ಲಿಯಂತೂ ಮೂಢನಂಬಿಕೆಗಳು ತುಂಬಿತುಳುಕುತ್ತಿವೆ. ಮೂಢ ನಂಬಿಕೆಗಳಲ್ಲಿ ನಂಬಿಕೆಯನ್ನಿಟ್ಟಿರುವ ಅವಿದ್ಯಾವಂತನಿಗಿಂತ ಅಂಥ ನಂಬಿಕೆಗಳಿರುವ ವಿದ್ಯಾವಂತನಿಂದ ಸಮಾಜಕ್ಕೆ ಹೆಚ್ಚು ಅಪಾಯ ಸಂಭವಿಸುತ್ತದೆ. ಎಲ್ಲ ಮೂಢ ನಂಬಿಕೆಗಳೂ ಭಯ ಮತ್ತು ಅಜ್ಞಾನದಿಂದ ಹುಟ್ಟಿದವುಗಳಾಗಿವೆ.

ಈ ಮೂಢ ನಂಬಿಕೆಗಳು ಮನುಷ್ಯನ ಆತ್ಮವಿಶ್ವಾಸಕ್ಕೆ ಧಕ್ಕೆಯನ್ನು ತರುತ್ತವೆ. ಇದರಿಂದ ಮನುಷ್ಯನ ಕ್ರಿಯಾಶೀಲತೆ ಮತ್ತು ನಿರ್ಭೀತಿಯನ್ನು ಮೊಂಡುಗೊಳಿಸುತ್ತವೆ. 'ನಿರ್ಭೀತಿಯೇ ಆಧ್ಯಾತ್ಮಿಕತೆಗೆ ಮೂಲ ದ್ರವ್ಯ. ಹೇಡಿಯಾದವನಿಗೆ ಯಾವ ನೈತಿಕ ನಿಷ್ಠೆಯೂ ಇರುವುದಿಲ್ಲ' ಎಂದು ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ನಮಗೆ ತಿಳಿದಿರುವಂತೆ 'ಅಭೀಃ'. ಎಂದರೆ 'ಹೆದರಿಕೆಯಿಲ್ಲದಿರುವುದು' – ನಮ್ಮ ಉಪನಿಷತ್ತುಗಳ ಎಚ್ಚರದ ಮಾತಾಗಿದೆ. 'ಮೂಢನಂಬಿಕೆಗಳೇ ಮಾನವನ ಅತ್ಯಂತ ದೊಡ್ಡ ಶತ್ರು. ಅಂಧಾಭಿಮಾನ ಇನ್ನೂ ಕೆಡಕು' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಅವರ

ಕೃತಿಶ್ರೇಣಿಯಲ್ಲಿ ಒಂದು ಕಡೆ "ನಿರ್ಮಲಚಿತ್ತರಾಗಿ, ಎಲ್ಲ ವಿಧವಾದ ಮೂಢ ನಂಬಿಕೆಗಳನ್ನೂ ಹೊಡೆದೋಡಿಸಿ, ಪ್ರಕೃತಿಯ ಮಧುರ ಬಾಂಧವ್ಯವನ್ನು ಗಮನಿಸಿ, ಆಧ್ಯಾತ್ಮಿಕತೆಯ ಸತ್ಯವನ್ನು ಮರೆತು ಕೇವಲ ಬಾಹ್ಯಾಚರಣೆಗಳನ್ನು ಕಪಿಮುಷ್ಟಿಯಿಂದ ಹಿಡಿದುಕೊಂಡು ಜೀವನ ನಡೆಸುತ್ತಿರುವ ಮನುಷ್ಯನಿಗೆ ಮತ್ತು ಸಮಾಜಕ್ಕೆ ಪಶ್ಚಾತ್ತಾಪವನ್ನು ಮಾತ್ರ ತೋರಬಹುದು" ಎಂದು ಹೇಳಿರುವುದನ್ನು ಇಲ್ಲಿ ಗಮನಿಸಬೇಕು. ಸ್ವಾಮಿ ರಂಗನಾಥಾನಂದರು ತಮ್ಮ 'ಬದಲಾಗುತ್ತಿರುವ ಸಮಾಜದ ಆದ್ಯಂತಿಕ ಮೌಲ್ಯಗಳು' ಎಂಬ ಕೃತಿಯಲ್ಲಿ "ಯಾವ ಮನಸ್ಸು ತೀವ್ರವಾದ ಉದ್ದಿಶ್ಯದಿಂದ ಪುನಃ ಪುನಃ ಪ್ರಶ್ನಿಸುವುದರ ಮೂಲಕ ಮತ್ತು ಸಮೀಕ್ಷಿಸಿಕೊಳ್ಳುವುದರ ಮೂಲಕ ಉತ್ತರಗಳನ್ನು ಪಡೆದುಕೊಳ್ಳುತ್ತದೆಯೋ ಅಂಥ ಮನಸ್ಸಿಗೆ ಶಕ್ತಿ ಸಾಮರ್ಥ್ಯಗಳು ಒದಗುತ್ತವೆ. ಅದರಿಂದ ಪ್ರಾಪಂಚಿಕ ಜ್ಞಾನ ಮತ್ತು ವಿದ್ಯಮಾನಗಳ ಪೃಥಕ್ಕರಣೆ ನಡೆಯುತ್ತದೆ" ಎಂದು ಹೇಳಿದ್ದಾರೆ.

ನಾವು ನಿಜವಾದ ಧಾರ್ಮಿಕರಾಗಲು ಇಚ್ಛಿಸುವುದಿಲ್ಲ. ಆದರೆ ಧರ್ಮದಿಂದ ಒದಗಿ ಬರುವ ಫಲಗಳು ನಮಗೆ ಬೇಕು. ಧೃತರಾಷ್ಟ್ರನಿಗೆ ಅನೇಕ ಸಹಸ್ರ ವರ್ಷಗಳ ಹಿಂದೆ ವಿದುರ ಹೀಗೆ ಹೇಳುತ್ತಾನೆ.

ಧರ್ಮಸ್ಯ ಫಲಮಿಚ್ಛಂತಿ
ಧರ್ಮಂ ನೇಚ್ಛಂತಿ ಮಾನವಾಃ

ಈ ಮಾತು ಇಂದಿಗೂ ಸತ್ಯವಾಗಿದೆ. ಅದೇ ರೀತಿ ನಾವು ವಿಜ್ಞಾನದ ಫಲಗಳನ್ನು ಇಚ್ಛಿಸುತ್ತೇವೆಯೇ ಹೊರತು ಅದರ ಮೂಲಶಕ್ತಿಯಾದ ವೈಜ್ಞಾನಿಕ ಪ್ರವೃತ್ತಿ ಅಷ್ಟು ಜನಪ್ರಿಯವಾದಂತೆ ತೋರುವುದಿಲ್ಲ. J. W. N. Sullivan ಅವರು ತಮ್ಮ 'Dimitations of Science' ಎಂಬ ಪುಸ್ತಕದಲ್ಲಿ, 'ವಿಜ್ಞಾನದ ಕಡೆಗೆ ನಮ್ಮ ಗಮನ ಮತ್ತು ಗೌರವಗಳು ಮುಖ್ಯವಾಗಿ ಅದರ ಫಲಗಳನ್ನು ಕುರಿತದ್ದಾಗಿದೆಯೇ ಹೊರತು ಅದರ ವಿವೇಚನಾ ದೃಷ್ಟಿ ಆಧುನಿಕ ಜಗತ್ತಿನಲ್ಲಿ ಜನಪ್ರಿಯತೆಯನ್ನು ಪಡೆದು ಕೊಂಡಿಲ್ಲ. ವೈಜ್ಞಾನಿಕ ದೃಷ್ಟಿಯೇ ವಿಜ್ಞಾನದ ಮೂಲಭೂತ ಮೌಲ್ಯ. ವಿಜ್ಞಾನದ ನಿಜವಾದ ಅರ್ಥವಿರುವುದು ಈ ಮೌಲ್ಯದಲ್ಲಿಯೇ"—ಎಂದು ಹೇಳಿದ್ದಾರೆ.

ನಾನು ದೇವರು ಮತ್ತು ಪುನರ್ಜನ್ಮದಲ್ಲಿ ನಂಬಿಕೆಯುಳ್ಳವನು. ನಾನು ದೀನ ದಲಿತರ ಮತ್ತು ತುಳಿತಕ್ಕೆ ಸಿಕ್ಕಿದವರ ನಡುವೆ ದೇವರನ್ನು ಕಾಣಲು ಇಚ್ಛಿಸುತ್ತೇನೆ. ಸಂಸ್ಕೃತಿ ಮತ್ತು ಧಾರ್ಮಿಕ ಆಧ್ಯಾತ್ಮಿಕ ವಿಚಾರಗಳ ಬಗ್ಗೆ ಅರಿವನ್ನು ಪಡೆದುಕೊಳ್ಳಲು ದೇಶದ ನಾನಾ ಭಾಗಗಳಿಂದ ಅಭ್ಯಾಸಿಗಳು ಇಲ್ಲಿ ಬಂದು ಸೇರಿರುವುದು ಸಮಾಧಾನದ ವಿಚಾರವಾಗಿದೆ. ಒಂದು ತಿಂಗಳ ಶಿಬಿರದ ಅನಂತರ, ಭಾಗವಹಿಸಿದವರ ಮನೋಧರ್ಮದಲ್ಲಿ ಉಂಟಾಗುವ ಭಾವನೆಗಳಿಗೆ ಮಹತ್ವದ ಸ್ಥಾನವಿದೆ. ದೇವಸ್ಥಾನಗಳಿಗೆ ಹೋಗುವ, ತೀರ್ಥಯಾತ್ರೆ ಮಾಡುವ, ಪಾಂಡಿತ್ಯಪೂರ್ಣ ಪ್ರವಚನಗಳಲ್ಲಿ ಭಾಗವಹಿಸುವ ಮತ್ತು ಬುದ್ಧ, ಬಸವ, ಗಾಂಧಿ ಜಯಂತಿಗಳಂಥ ಸಮಾರಂಭಗಳಲ್ಲಿ ಭಾಗವಹಿಸುವ

ಸಂಗತಿ. ಯಾಂತ್ರಿಕ ಸ್ಥಿತಿಯನ್ನು ಮುಟ್ಟಿರುವುದು ನೋವನ್ನು ಉಂಟುಮಾಡುವ ವಿಚಾರವಾಗಿದೆ. ಜೀವನದಲ್ಲಿ ನಡೆದುಕೊಳ್ಳುತ್ತಿರುವ ರೀತಿಗೂ ಹೇಳುತ್ತ ಬಂದಿರುವ ಉದಾತ್ತ ವಿಚಾರಗಳಿಗೂ ನಡುವೆ ಅರ್ಥಪೂರ್ಣ ಸಂಬಂಧ ಇಲ್ಲವಾಗಿದೆ. ಇದೂ ಕೂಡ ಒಂದು ಸಣ್ಣ ಪ್ರಮಾಣದ ಪವಾಡವೇ ಸರಿ! ಈ ವಿಚಾರ ಆಶ್ಚರ್ಯದ ಜೊತೆಗೇ ಒಂದು 'ಯಕ್ಷಪ್ರಶ್ನೆ'ಯಾಗಿದೆ. ಈ ಬೇಸಿಗೆಯ ಶಿಬಿರದಲ್ಲಿ ಭಾಗವಹಿಸುತ್ತಿರುವವರಿಗೆ ದೇಶದ ಅನೇಕ ಸಮಸ್ಯೆಗಳೊಡನೆ ಸಂಬಂಧವನ್ನಿಟ್ಟುಕೊಳ್ಳುವುದರ ಕಡೆಗೆ ಗಮನ ಹರಿಯಲಿ. ಇಂಥ ಶಿಕ್ಷಣ ಉದಾತ್ತ ಉದ್ದೇಶಗಳನ್ನು ಪಡೆದುಕೊಳ್ಳುವಂತಾಗಲಿ.

ನ ತ್ವಹಂ ಕಾಮಯೇ ರಾಜ್ಯಂ
ನ ಸ್ವರ್ಗಂ ನಾ ಪುನರ್ಭವಂ
ಕಾಮಯೇ ದುಃಖಂ ತಪ್ತಾನಾಂ
ಪ್ರಾಣಿನಾಂ ಆರ್ತನಾಶನಂ

ಮೇಲಿನ ಮಾತುಗಳನ್ನು ಹೇಳಿದವನು ಭಕ್ತ ಪ್ರಹ್ಲಾದ. ಎಂದರೆ. 'ನಾನು ರಾಜ್ಯವನ್ನು ಬಯಸುವುದಿಲ್ಲ: ಸ್ವರ್ಗವನ್ನು ನಾನು ಆಶಿಸುವುದಿಲ್ಲ: ನನ್ನ ಮೋಕ್ಷವನ್ನು ಕೂಡ ಬಯಸುವುದಿಲ್ಲ: ದುಃಖಿಗಳನ್ನು ಮುಕ್ತರನ್ನಾಗಿ ಮಾಡುವುದೇ ನನ್ನ ಉದ್ದೇಶ'.

ಭಕ್ತ ಪ್ರಹ್ಲಾದನು ಹೇಳಿದ ಈ ಮಾತನ್ನು ತೀವ್ರವಾಗಿ ಪರಿಭಾವಿಸಬೇಕೆಂದು ಬಯಸುತ್ತೇನೆ. ಅವನ ಮನೋಭಾವದಂತೆ ನಮ್ಮ ಆಲೋಚನೆ ಅಧ್ಯಯನಗಳು ನಡೆಯಬೇಕು. ಬಹುಕಾಲದ ಹಿಂದೆ ಭಕ್ತ ಪ್ರಹ್ಲಾದ ವ್ಯಕ್ತಪಡಿಸಿದ ಮಾತುಗಳು ಅತ್ಯಂತ ಸಮಂಜಸವಾಗಿದೆ.

ಶ್ರೀ ಸತ್ಯಸಾಯಿ ಶಿಕ್ಷಣ ಸಮಿತಿಯವರು ದೇಶಾದ್ಯಂತ ಅನೇಕ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದು ಅತ್ಯಂತ ಸಂತೋಷದ ವಿಚಾರ. ಈ ಸಂಸ್ಥೆ ದೇಶದಲ್ಲಿ ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿದೆ. ಇಲ್ಲಿರುವ ಗೌರವಕ್ಕೆ ಪಾತ್ರರಾದ ಸ್ವಾಮೀಜಿಯವರು ಮತ್ತು ಸೇರಿರುವ ಎಲ್ಲರೂ ತಮ್ಮ ಎಲ್ಲ ಶಕ್ತಿ-ಸಾಮರ್ಥ್ಯಗಳನ್ನು ಬಡಜನರ ಉದ್ಧಾರಕ್ಕಾಗಿ ಬಳಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಆರ್ಥಿಕ ಅಸಮಾನತೆ, ಸಾಮಾಜಿಕ ಅನ್ಯಾಯ ಮತ್ತು ಶೋಷಣೆ–ಇವುಗಳ ವಿರುದ್ಧ ನಮ್ಮ ಶಕ್ತಿಸಾಮರ್ಥ್ಯವನ್ನು ಬಳಸಿಕೊಳ್ಳಬೇಕು. ಇಂಥಹ ಸಮಾಜವನ್ನು ಮಾತ್ರ ಸುಸಂಸ್ಕೃತ ಮತ್ತು ದಿವ್ಯತ್ವದಿಂದ ಕೂಡಿದ ಸಮಾಜವೆಂದು ಪರಿಗಣಿಸಲು ಸಾಧ್ಯ.*

---

* ಶ್ರೀ ಸತ್ಯಸಾಯಿ ಕೇಂದ್ರಸಂಸ್ಥೆ ಏರ್ಪಡಿಸಿದ್ದ ಭಾರತೀಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಕುರಿತ ಬೇಸಗೆ ಶಿಬಿರದ ಉದ್ಘಾಟನಾ ಭಾಷಣ

ತೆಲುಗು ಜನಪದ ಗಾಯಕರು

ತಂಗಿರಾಲ ವೆಂಕಟಸುಬ್ಬಾರಾವು

'ಜನಪದ' ಅಂದರೆ 'ಹಳ್ಳಿ' ಎಂದು ಅರ್ಥ. ಜನಪದದಲ್ಲಿರುವವರು ಜಾನಪದರು ಅಥವಾ ಜನಪದರು. ಈ ಜನಪದರು ಹಾಡಿಕೊಳ್ಳುವ ಹಾಡುಗಳು 'ಜನಪದ ಗೀತೆಗಳು'. ಈ ಜನಪದ ಗೀತೆಗಳು ಎರಡು ರೀತಿಯಲ್ಲಿ ಇರುತ್ತವೆ. ಶುದ್ಧ ಗೀತೆಗಳು (Pure Songs), ಕಥನ ಗೀತೆಗಳು (Narrative Songs) ಶುದ್ಧ ಜನಪದ ಗೀತೆಗಳನ್ನು ಇಂಗ್ಲಿಷ್‌ನಲ್ಲಿ 'Folk Songs' ಎನ್ನುತ್ತಾರೆ; ಕಥಾತ್ಮಕವಾದ ಜನಪದ ಗೀತೆಗಳನ್ನು 'Ballads' ಎನ್ನುತ್ತಾರೆ. ತೆಲುಗಿನಲ್ಲಿ Folk songs ನ್ನು 'ಪಲ್ಲೆಪಾಟಲು' (ಹಳ್ಳಿಯ ಹಾಡುಗಳು) ಎಂದೂ, Ballads ನ್ನು 'ವೀರಗಾಥಲು' ಅಥವಾ 'ಜಾನಪದ ಕಥಾಗೇಯಾಲು' (ಲಾವಣಿಗಳು) ಎಂದೂ ಕರೆಯಬಹುದು. ಕಪಿಲೆ ಹಾಡುಗಳು, ಕುಟ್ಟುವ ಹಾಡುಗಳು, ಬೀಸುವ ಕಲ್ಲಿನ ಹಾಡುಗಳು ಮುಂತಾದುವು ಹಳ್ಳಿಯ ಹಾಡುಗಳಿಗೆ ಉದಾಹರಣೆಗಳು. ಪಲ್ನಾಟಿ ವೀರರ ಕಥೆಗಳು, ಕಾಟಮರಾಜನ ಕಥೆಗಳು, ಬೊಬ್ಬಿಲಿ ಕಥೆ, ದೇಶಿಂಗುರಾಜನ ಕಥೆ, ಬಾಲನಾಗಮ್ಮನ ಕಥೆ, ಮೂವರು ಮರಾಠಿಯರ ಕಥೆ ಮುಂತಾದುವು ವೀರಗಾಥೆಗಳಿಗೆ ಒಳ್ಳೆಯ ಉದಾಹರಣೆಗಳು.

ಈ ವೀರಗಾಥೆಗಳನ್ನು ದೇಶದಲ್ಲಿ ಅಲೆಯುವ ಜನರಾದ ಜನಪದ ಗಾಯಕ ಭಿಕ್ಷುಕರು ಹಾಡುತ್ತಿರುತ್ತಾರೆ. ಇವರನ್ನು 'ಗಾಥಾಕಾರರು' ಎಂದೂ, 'ಗಾಥಕರು' ಎಂದೂ ಕರೆಯಬಹುದು. ಆಂಗ್ಲ ದೇಶದಲ್ಲಿ 'ಬ್ಯಾಲೆಡ್ಸ್' ಹಾಡುವ ಇಂತಹವರನ್ನು 'Minstrels' ಎನ್ನುತ್ತಾರೆ. ಫ್ರಾನ್ಸ್ ದೇಶದಲ್ಲಿ 'JONGLEURS' ಎಂದೂ, ಐರ್ಲೆಂಡಿನಲ್ಲಿ 'BARDS' ಎಂದೂ, ಸ್ಕಾಂಡಿನೇವಿಯಾದಲ್ಲಿ (ಎಂದರೆ ಡೆನ್ಮಾರ್ಕ್; ನಾರ್ವೆ, ಸ್ವೀಡನ್ ದೇಶಗಳಲ್ಲಿ) 'SKALDS' ಎಂದೂ, ಜರ್ಮನಿಯಲ್ಲಿ 'MINNE SINGERS' ಎಂದೂ, ಸ್ಪೆಯಿನ್ ದೇಶದಲ್ಲಿ 'TROUBADOURS' ಎಂದೂ ಕರೆಯುತ್ತಾರೆ. ಅರೇಬಿಯಾ ದೇಶದಲ್ಲಿ ಗಾಥಾಕಾರನನ್ನು 'ರಾವೀ' ಎನ್ನುತ್ತಾರೆ.

ಭಾರತ ದೇಶದಲ್ಲಿ ಔತ್ತರೇಯರು ಗಾಥಾಕಾರರನ್ನು 'ಚಾರಣರು' ಎನ್ನುತ್ತಾರೆ. ದೇಶವನ್ನೆಲ್ಲಾ ಚಲಿಸುವವರಾದುದರಿಂದ ಚಾರಣರಾಗಿರಬಹುದು. ವೀರಗಾಥೆಗಳ

ತವರೂರಾದ ರಾಜಾಸ್ಥಾನದಲ್ಲಿ 'ಜೋಪಾಗಳೂ.' 'ಮಿರೋಸೀಗಳೂ' ಎನ್ನುವವರು 'ರಾವಣಹಸ್ತ' ವೆಂಬ ವಾದ್ಯದಿಂದ ವೀರಗಾಥೆಗಳನ್ನು ಹಾಡುತ್ತಿರುತ್ತಾರೆ. ಮಧ್ಯ ಪ್ರದೇಶದಲ್ಲಿ 'ರಾವತ್' ವರ್ಣದವರು ವೀರಗಾಥೆಗಳನ್ನು ಗಾಯನ ಮಾಡುತ್ತಾರೆ. ಉತ್ತರ ಪ್ರದೇಶದಲ್ಲಿ 'ಹರಬೋಲೀ'ಗಳು. ಕನ್ನಡದಲ್ಲಿ 'ಲಾವಣಿಕಾರರು' ಇಂತಹ ಜನಪದ ಗಾಯಕರೇ. ತೆಲುಗಿನಲ್ಲಿ 'ಜಂಗಮುಲು' ಎನ್ನುವ ಶಬ್ದ ದೇಶಸಂಚಾರರಾದ ಈ ಗಾಥಕರಿಗೆ ಕೆಲವು ಮಟ್ಟಿಗೆ ಅನ್ವಯಿಸುತ್ತದೆ. ಆದರೆ ಶಕ್ತಿಕಥೆಗಳೂ. ಪಲ್ನಾಟಿ ವೀರರ ಕಥೆಗಳೂ. ಕಾಟಮರಾಜನ ಕಥೆಗಳೂ ಮುಂತಾದ ಅತಿ ಪ್ರಸಿದ್ಧವಾದ ವೀರಗಾಥೆಗಳನ್ನು 'ಜಂಗಮ'ರು ಹಾಡುವುದಿಲ್ಲ. ಆದ್ದರಿಂದ 'ಜಂಗಮ' ಶಬ್ದಕ್ಕಿಂತ 'ಗಾಥಾಕಾರ' ಶಬ್ದವೇ ತೆಲುಗಿನಲ್ಲಿ ಜನಪದ ಗಾಯಕರೆಲ್ಲರಿಗೂ ಅನ್ವಯಿಸುವ ಶಬ್ದ.

ಪೂರ್ವಕಾಲದಲ್ಲಿ ರಾಜಾಸ್ಥಾನಗಳಲ್ಲಿ ಆ ರಾಜರ. ಅವರ ಪೂರ್ವಜರ ಕೀರ್ತಿ ಪ್ರತಿಷ್ಠೆಗಳನ್ನು. ಶೌರ್ಯ ಸಾಹಸಗಳನ್ನು ಸ್ತುತಿಸಲೋಸುಗ ಮತ್ತು ಬಿರುದು ಗಳನ್ನು ಪಠಿಸಲೋಸುಗ 'ವಂದಿಮಾಗಧರು' 'ಭಟ್ಟರು' ಮುಂತಾದವರು ಇರು ತ್ತಿದ್ದರು. ಇವರೇ ಕಾಲಕ್ರಮದಲ್ಲಿ ಆ ರಾಜರು ಮಾಡಿದ ಯುದ್ಧಗಳನ್ನು ಕುರಿತು ಹಾಡುಗಳನ್ನು ಕಟ್ಟಿ ಹಾಡುವುದನ್ನು ಮೊದಲು ಮಾಡಿದರು. ಅವೇ ವೀರಗಾಥೆ ಗಳು (BALLADS). ಅವುಗಳನ್ನು ಹಾಡುವವರೇ ಗಾಥಾಕಾರರು. ಈ ಪದ್ಧತಿ ಪ್ರಪಂಚದಲ್ಲಿ ಪ್ರತಿ ದೇಶದಲ್ಲೂ ಪ್ರತಿ ರಾಜಾಸ್ಥಾನದಲ್ಲೂ ಇದ್ದಿತು. ಇದು ಗಾಥಾ ಕಾರರ ಅವತರಣೆಯಲ್ಲಿ ಪ್ರಥಮ ಘಟ್ಟ. (ರಾಜಾಸ್ಥಾನಗಳಲ್ಲೂ ಕೂಡ ಮೊದಲು ವಂದಿಮಾಗಧರಂತಹ ಕೀರ್ತಿಗಾಯಕರು ಇರಲಿಲ್ಲವೆಂದೂ. ಆಯಾ ಪ್ರಭುಗಳೇ ತಮ್ಮ ಸಾಹಸದ ಗೀತೆಗಳನ್ನು ತಾವೇ ಹಾಡಿಕೊಳ್ಳುತ್ತಿದ್ದರೆಂದೂ ಕೆಲವು ವಿಮರ್ಶಕರ ಭಾವನೆ).

ರಾಜಾಸ್ಥಾನಗಳಲ್ಲಿನ ಗಾಥಾಕಾರರು ಕ್ರಮೇಣ ಯಾಚಕರಾಗಿ ಮಾರ್ಪಾ ಟಾಗಿ. ಬೇರೆ ಬೇರೆ ಕುಲದವರ ಬಳಿ ಭಿಕ್ಷುಕರಾಗಿ ಬದುಕುವುದು ಎರಡನೆಯ ಘಟ್ಟ. ರಾಜರೂ. ರಾಜ್ಯಗಳೂ ನಶಿಸಿ. ಪ್ರಜಾಪ್ರಭುತ್ವಾದಿ ನೂತನ ರಾಜಕೀಯ ವ್ಯವಸ್ಥೆಗಳು ತಲೆಯೆತ್ತಿದನಂತರ ಈ ಗಾಥಾಕಾರರು ರಾಜರ ಆಸ್ಥಾನಗಳನ್ನು ಬಿಟ್ಟು. ಪೂರ್ವಕಾಲದಲ್ಲಿ ರಾಜ್ಯವಾಳಿದ ಆಯಾ ಕುಲದವರನ್ನು ಯಾಚಿಸುತ್ತಾ. ಅವರ ಪೂರ್ವ ಗಾಥೆಗಳನ್ನು ಗಾಯನ ಮಾಡುತ್ತಾ ಬದುಕುತ್ತಿದ್ದವರು. ಈಗಿನ ನಮ್ಮ ವರ್ಣವ್ಯವಸ್ಥೆಯಲ್ಲಿ ಪ್ರತಿ ವರ್ಣದವರಿಗೂ ಇಂತಹ ಯಾಚಕರಿದ್ದಾರೆ. ಬ್ರಾಹ್ಮಣರಿಗೆ 'ವಿಪ್ರವಿನೋದರು' (ಸೂರ್ಯವಂಶ ಕ್ಷತ್ರಿಯರು). ಕ್ಷತ್ರಿಯರಿಗೆ 'ಭಟ್ರಾಜರು', ವೈಶ್ಯರಿಗೆ 'ವೀರಮುಷ್ಟರು' ಯಾದವರಿಗೆ 'ಕೊಮ್ಮುಲವಾರು' (ಮಾದಿ ಗರು), ರೆಡ್ಡಿಗಳಿಗೆ 'ಪಿಚ್ಚುಗುಂಟ್ಲು'. ಕಮ್ಮಕುಲದವರಿಗೆ 'ಭಟ್ರಾಜರು' (ಗುಂಟೂರು,

ಕೃಷ್ಣಾ ಜಿಲ್ಲೆಗಳಲ್ಲಿ ಕಮ್ಮಕುಲದವರಿಗೂ ಪಿಚ್ಚುಗುಂಟ್ಲೇ ಗೋತ್ರಗಳನ್ನೂ ಹೇಳುತ್ತಿದ್ದಾರೆ). ವೆಲಮ ಕುಲದವರಿಗೆ. ಬಲಿಜ ಕುಲದವರಿಗೆ 'ಮಾಲದಾಸರಿ'ಗಳೂ. ಅಕ್ಕಸಾಲಿಗಳಿಗೆ 'ಪನಸವಾರು', ನೇಕಾರರಿಗೆ 'ಮಿತ್ರ ಅಯ್ಯವಾರುಲು' (ಅಥವಾ 'ಮಿತ್ತರಿ ದಾಸರುಲು'). ಪಂಚಮರಲ್ಲಿ ಹೊಲೆಯರಿಗೆ 'ಮಾಷ್ಟೀಲು'. ಮಾದಿಗರಿಗೆ 'ಡಕ್ಕಲಿವಾರು' ಯಾಚಕರಾಗಿದ್ದಾರೆ.

ಈ ಯಾಚಕರು ಸಂಚಾರ ಗಾಯಕ–ಭಿಕ್ಷುಕರಾಗಿ ಬದಲಾಗುವುದು ಗಾಥಾಕಾರರ ಚರಿತ್ರೆಯಲ್ಲಿ ಮೂರನೆಯ ಘಟ್ಟ. ಆಧುನಿಕ ಕಾಲದಲ್ಲಿ ಪಾಶ್ಚಾತ್ಯ ನಾಗರಿಕತೆ ಮಹಾಮಾರಿಯ ಹಾಗೆ ವ್ಯಾಪಿಸಿ ನಮ್ಮ ಸಂಪ್ರದಾಯಗಳನ್ನೂ. ಸಂಸ್ಕೃತಿಯನ್ನೂ ನಾಶಪಡಿಸುತ್ತಿದೆ. ಅದರ ಫಲವಾಗಿ ನಮ್ಮ ವರ್ಣವ್ಯವಸ್ಥೆಯಲ್ಲಿನ ವಿವಿಧ ವರ್ಣಗಳವರು. ತಮ್ಮ ತಮ್ಮ ಯಾಚಕರನ್ನು ಸೋಮಾರಿಗಳಾಗಿ ಭಾವಿಸಿ ನಿರ್ಲಕ್ಷ್ಯ ಮಾಡುವುದು ನಡೆಯುತ್ತಿದೆ. ಇದರ ಕಾರಣದಿಂದ ಗಾಥಾಕಾರರು ಕ್ಷೀಣಿಸುತ್ತಿದ್ದಾರೆ. ಈ ಯಾಚಕರು ನಮ್ಮ ಅಮೂಲ್ಯ ವೀರಗಾಥಾ ಸಂಪತ್ತನ್ನು ಮೌಖಿಕ ಸಂಪ್ರದಾಯದಲ್ಲಿ ತಲಾತಲಾಂತರದಿಂದ ಸಂರಕ್ಷಿಸಿದ ವಜ್ರ ಪೇಟಿಕೆಗಳೆಂದು ನಮ್ಮಲ್ಲಿ ಬಹಳಷ್ಟು ಜನ ಗುರುತಿಸದೆ ಹೋಗುವುದು ವಿಷಾದಕರ. ಹೀಗೆ ಪಾಶ್ಚಾತ್ಯ ನಾಗರಿಕತೆಯ ಫಲಿತವಾಗಿ ಯಾಚಕರು ಒಂದೇ ವರ್ಣದವರನ್ನು ಆಶ್ರಯಿಸಿ ಬದುಕುವುದು ದುರ್ಲಭವಾಗಿ ಹೋಗಿದೆ. ಆದ್ದರಿಂದ ಅವರು ಎಲ್ಲ ವರ್ಣದವರನ್ನೂ ಯಾಚಿಸುತ್ತಾ. ಸಂಚಾರಗಾಯಕ ಭಿಕ್ಷುಕರಾಗಿ ಬದಲಾಗಿದ್ದಾರೆ. ಇವರಲ್ಲಿ ಕೆಲವರು ಬೇರೆ ವೃತ್ತಿಗಳನ್ನು ಸ್ವೀಕರಿಸಿದರು. ಮತ್ತೆ ಕೆಲವರು ಓದು ಬರಹವನ್ನು ಕಲಿತು ತಮ್ಮ ಕುಲ ವೃತ್ತಿಯನ್ನೇ ವಿಸ್ಮರಿಸಿದರು. ಇದು ಇಂದಿನ ದೈನ್ಯಾವಸ್ಥೆ. ನಾಗರಿಕತೆಗೆ ದೂರವಾಗಿರುವ ಕೆಲವರು ಯಾಚಕರು ಮಾತ್ರ ಪೂರ್ವ ಪದ್ಧತಿಯಲ್ಲಿ ವೀರಗಾಥೆಗಳನ್ನೂ ಇನ್ನೂ ಮೆಲುಕುಹಾಕುತ್ತಿದ್ದಾರೆ. ಇಂತಹವರಿಂದಲೇ ಆಂಧ್ರರ ವೀರಗಾಥಾಜ್ಯೋತಿ ಕೊನೆಯುಸಿರಿನಲ್ಲಾದರೂ ಮಿನುಗು ಮಿನುಗುತ್ತಾ ಇರಬಲ್ಲುದು.

ಆಂಧ್ರ ದೇಶದಲ್ಲಿ ಸಂಚಾರಗಾಯಕ ಭಿಕ್ಷುಕರು ಹಲವು ಬಗೆಗಳವರಿದ್ದಾರೆ: ಬವನೀಲು. ಪಂಬಲವಾರು. ವೀರವಿದ್ಯಾವಂತುಲು. ಕೊಮ್ಮುಲವಾರು. ಪಿಚ್ಚುಕುಂಟ್ಲು. ಪೂಸಲ ಬಲಿಜಲು. ಶಾರದ ಕಾಂಡ್ರು. ವೀರಮುಷ್ಟುಲು. ಜಂಗಮುಲು. ದಾಸರುಲು. ಗರುಡಸ್ತಂಭಂ ದಾಸರುಲು. ಭಾಗವತುಲು. ಬೀರನ್ನಲವಾರು. ಸದ್ದುಲಗೊಲ್ಲಲು. ಗಂಗಿರೆದ್ದುಲವಾರು. ಬಾಲಸಂತುವಾರು. ಬುಡಬುಕ್ಕಲವಾರು. ಚಿಂದು ಮಾದಿಗಲು. ಜೋಗುಲವಾರು. ಜಕ್ಕುಲವಾರು. ಪಟ್ಕರುಲು. ಡಕ್ಕಲಿವಾರು, ಮಾಷ್ಟೀಲು. ಬೊಮ್ಮಲಾಟಗಾಂಡ್ರು ಮುಂತಾದವರು ಅನೇಕರಿದ್ದಾರೆ. ಈ ಗಾಥಾಕಾರರು ಅತಿ ಪ್ರಾಚೀನ ಕಾಲದಿಂದಲೂ ಕೂಡ ತೆಲುಗು ದೇಶದಲ್ಲಿ ವ್ಯಾಪಿಸಿದ್ದಾರೆ ಎನ್ನುವುದಕ್ಕೆ 'ಶ್ರೀನಾಥನ ಕ್ರೀಡಾಭಿರಾಮು' ಪಾಲವೇಕರಿ ಕದಿರೀಪತಿ (ಕ್ರಿ.ಶ.

1650) ಕವಿಯ 'ಶುಕಸಪ್ತತಿ'. ಅಯ್ಯಲರಾಜು ನಾರಾಯಣಾಮಾತ್ಯನ (ಕ್ರಿ.ಶ. 1750) 'ಹಂಸವಿಂಶತಿ' ಮೊದಲಾದ ಕಾವ್ಯಗಳು ಸಾಕ್ಷಿಯನ್ನು ಕೊಡುತ್ತಿವೆ. ಈ ಜನಪದ ಗಾಯಕ ಭಿಕ್ಷುಕರಲ್ಲಿ ವೀರಗಾಥಾಗಾಯನ ಮಾಡುತ್ತಿರುವ ಕೆಲವು ಮುಖ್ಯರನ್ನು ಕುರಿತು ಚರ್ಚಿಸುತ್ತೇನೆ.

1. ಬವನೀಲು (ಬವನೀಯರು) :—

'ಬವನೀಲು' ಎನ್ನುವುದು ಇವರಿಗೆ ಪಂಡಿತರಿಟ್ಟ ಹೆಸರಾಗಿ ತೋರುತ್ತದೆ. ಇವರ ವಾದ್ಯದಿಂದ ಈ ಹೆಸರು ಬಂದಂತಿದೆ. ಇವರ ವಾದ್ಯದ ಹೆಸರು 'ಜಮಿಡಿಕ'. ಈ ಜಮುಡಿಕವನ್ನು ಶಿಷ್ಟರು 'ಬವನಿಕ' ಎನ್ನುತ್ತಾರೆ. 'ಬವನಿಕ'ವನ್ನು ಬಾಜಿಸುವವರಾದುದರಿಂದ 'ಬವನೀಲು' ಆಗಿದ್ದಾರೆ. ಸರ್ಕಾರು ಜಿಲ್ಲೆಗಳಲ್ಲಿ ಜಮಿಡಿಕವನ್ನು 'ಜಮುಕು' ಎನ್ನುತ್ತಾರೆ. ಜಮುಕುಗಳನ್ನು ಬಾಜಿಸುವವರಾದುದರಿಂದ ಇವರನ್ನು 'ಜಮುಕುಲವಾರು' ಎಂದು ಕರೆಯುತ್ತಾರೆ. ಶ್ರೀಕಾಕುಳಂ ಜಿಲ್ಲೆಯಲ್ಲಿ ಬವನೀಯರನ್ನು 'ಬುಡಬುಡಕಲವಾರು' ಎನ್ನುವುದು ಪರಿಪಾಠಿ (ಇದು 'ಬುಡಬುಕ್ಕುಲ' ಶಬ್ದವಲ್ಲ). ಇವರು ತಮ್ಮ ವಾದ್ಯವಾದ ಜಮುಡಿಕವನ್ನು ಬಾಜಿಸುವಾಗ 'ಬುಡಬುಡಕ್–ಬುಡಬುಡಕ್' ಎನ್ನುವ ರೀತಿಯಲ್ಲಿ ಶಬ್ದ ಬರುವುದರಿಂದ ಇವರಿಗೆ 'ಬುಡಬುಡಕಲವಾರು' ಎನ್ನುವ ಹೆಸರು ಇಟ್ಟರೆಂದು ತಿಳಿದುಬರುತ್ತದೆ.

ತೆಲಂಗಾಣದಲ್ಲಿ ಬವನೀಯರನ್ನು 'ಜ್ಯೇಂಡ್ಲವಾರು'. 'ಪಂಬಲವಾರು' ಎಂಬ ಹೆಸರುಗಳಿಂದ ಕರೆಯುವರೆಂದು ಡಾ|| ಬಿ. ರಾಮರಾಜು ಅವರು ತಿಳಿಯಪಡಿಸುತ್ತಿದ್ದಾರೆ. ('ಬವನೀಲು' ಎನ್ನುವ ಶಬ್ದವೇ 'ಜ್ಯೇಂಡ್ಲು' ಆಗಿದೆ). ಆದರೆ ನನಗೆ ತಿಳಿದಂತೆ ಜ್ಯೇಂಡ್ಲುವಾರು ಬೇರೆ. ಪಂಬಾಲವಾರು ಬೇರೆ ಅನಿಸುತ್ತದೆ. ಬವನಿಕ ಎಂಬ ವಾದ್ಯವನ್ನು ಬಾಜಿಸುವವರು ಬವನೀಲು ಅಥವಾ ಜ್ಯೇಂಡ್ಲು ಆದಂತೆ. 'ಪಂಬ' ಎಂಬ ವಾದ್ಯವನ್ನು ಬಾಜಿಸುವವರು ಪಂಬಲವಾರು ಅಥವಾ ಪಂಬಾಲವಾರು ಆಗಿರುತ್ತಾರೆ. ಈ ಪಂಬ ಎನ್ನುವ ವಾದ್ಯ ಜಮಿಡಿಕಕ್ಕಿಂತ ಭಿನ್ನವಾದದು. ಚಿಕ್ಕ ಸ್ಟೈಜಿನ ಪೀರಾಗಳಂತೆ ಈ ಪಂಬಗಳಿರುತ್ತವೆ. ಇವು ಎರಡೆರಡು ಸೇರಿ ಒಂದು ಜೊತೆಯಾಗಿರುತ್ತವೆ. ಈ ಜೊತೆಯನ್ನು 'ಪಂಬಜೋಡು' ಎನ್ನುತ್ತಾರೆ. ಈ ಪಂಬ ಜೋಡನ್ನು ಬಾಜಿಸುತ್ತಾ ಅಂಕಮ್ಮ ಕಥೆಗಳನ್ನು ಹಾಡುವವರು ಪಂಬಲವಾರು. ಇವರು ಮೊಲೆಯರು. ಜಮಿಡಿಕ ಗಳನ್ನು ಬಾಜಿಸುತ್ತಾ ಪರಶುರಾಮನ ಕಥೆಗಳನ್ನು ಹಾಡುವವರು ಬವನೀಲು ಅಥವಾ ಜ್ಯೇಂಡ್ಲವಾರು. ಇವರು ಹೆಚ್ಚಾಗಿ ಮಾದಿಗರು. (ಕೆಲವರು ಮೊಲೆಯರೂ ಕೂಡ ಜಮಿಡಿಕ ಬಾಜಿಸುತ್ತಾ ಪರಶುರಾಮನ ಕಥೆಗಳನ್ನು ಹಾಡುತ್ತಿದ್ದಾರೆ. ಆದರೆ ಇವರು ಸಕೃತ್ತಾಗಿ ಇರುತ್ತಾರೆ.) ಬವನೀಯರು 'ಅಮ್ಮಗಾರಿ ದರ್ಶನಮು' (ಅಮ್ಮನವರ ದರ್ಶನ)ಕ್ಕೆ ಸೇರಿದವರು. ಪಂಬಲವಾರು 'ಅಯ್ಯಗಾರಿ ದರ್ಶನಮು' (ಅಯ್ಯನವರ ದರ್ಶನ)ಕ್ಕೆ ಸೇರಿದವರು. (ಈ ದರ್ಶನ

ಗಳು ಗಾಥಾಕಾರರಲ್ಲಿ ವ್ಯಾಪ್ತಿಯಲ್ಲಿರುವ ಒಂದು ವಿಭಾಗ. ಇದು ಅವರು ಪೂಜಿಸುವ ದೇವರಿಂದ ಬಂದದ್ದೆಂದುಕೊಳ್ಳುತ್ತೇನೆ. ರೇಣುಕಾದೇವಿಯನ್ನು ಪೂಜಿಸುವ ಬವನೀಯರು ಈ ವಿಧವಾಗಿ ಆಮ್ಮನವರ ದರ್ಶನಕ್ಕೆ ಸೇರಿದವರೆಂದು ನಾನು ಊಹಿಸುತ್ತಿದ್ದೇನೆ.) ಆದ್ದರಿಂದ ಬೈಂಡ್ಲವಾರೂ (ಬವನೀಲೂ). ಪಂಬಾಲವಾರೂ ಒಬ್ಬರೇ ಎಂದು ಭಾವಿಸುವುದು ಸಮಂಜಸವಲ್ಲ. ರಾಯಲ ಸೀಮೆಯಲ್ಲಿ ಈ ಬವನೀಯರನ್ನು ಆಸಾದಿವಾರು ಎಂದೂ ಬೈನೀಂಡ್ಲು ಎಂದೂ ಕರೆಯುತ್ತಾರೆ.

ಈ ಬವನೀಯರು ಬಹಳ ಪ್ರಾಚೀನ ಕಾಲದಿಂದಲೂ ಇದ್ದರೆಂದು ತಿಳಿದು ಬರುತ್ತಿದೆ. ಕಾಕತೀಯ ಪ್ರತಾಪರುದ್ರನ ಕಾಲದಲ್ಲಿ (ಕ್ರಿ.ಶ. 1296-1323) ಓರುಗಲ್ಲು ಪಟ್ಟಣದ ನಡು ಬೀದಿಯಲ್ಲಿ ಬವನೀಯರ ಚಕ್ರವರ್ತಿ ಏಕವೀರಾ ಮಹಾದೇವಿ ಎದುರು ನಿಂತು. ಪರಶುರಾಮನ ಕಥೆಗಳನ್ನೆಲ್ಲಾ ಪ್ರೌಢಿಯಿಂದ ಹಾಡಿದಂತೆ ಕ್ರೀಡಾಭಿರಾಮ ಕಾವ್ಯ ಕರ್ತ (ಶ್ರೀನಾಥ ?) ಸಾಕ್ಷ್ಯ ಕೊಡುತ್ತಿದ್ದಾನೆ. ಶ್ರೀ ಕೃಷ್ಣ ದೇವರಾಯರು ತನ್ನ 'ಆಮುಕ್ತಮಾಲ್ಯ'ದ ಪ್ರಬಂಧದಲ್ಲಿ ಜಮಿಡಿಕವನ್ನು ಹೆಸರಿಸಿದ್ದಾನೆ. ಧೂರ್ಜಟಿ ತನ್ನ 'ಕಾಳಹಸ್ತೀಶ್ವರ ಶತಕ'ದಲ್ಲಿ ಪ್ರತಿ ಊರಿನಲ್ಲೂ ಬವನೀಯರೇ ಮಹಾಕವಿಗಳಾಗಿ ಚಲಾವಣೆಯಾಗುತ್ತಿದ್ದರೆಂದು ವಿಷಾದಿಸಿದ್ದಾನೆ. ಇದರಿಂದ ಧೂರ್ಜಟಿ ಕಾಲದಲ್ಲಿ ನಿಜವಾದ ಕವಿಗಳಿಗಿಂತ ಈ ಬವನೀಯರಿಗೇ ಹೆಚ್ಚಿನ ಪ್ರಾಧಾನ್ಯವಿದ್ದಂತೆ ತಿಳಿದುಬರುತ್ತದೆ. ಪಾಲವೇಕರಿ ಕದಿರೀಪತಿ. ಬವನೀಯರನ್ನು, ಜಮಿಲಿಕಗಳನ್ನು, ಪರಶುರಾಮನ ಕಥೆಯನ್ನು ಹಾಡುವ ಮಾತಂಗಿಯನ್ನೂ ಹೆಸರಿಸಿದ್ದಾನೆ.

ಬವನೀಯರು ಸಾಧಾರಣವಾಗಿ ಎಲ್ಲಮ್ಮ (ರೇಣುಕಾದೇವಿ) ನನ್ನು ಪೂಜಿಸುತ್ತಾರೆ. ಎಲ್ಲಮ್ಮನ ಕಥೆಗಳನ್ನೂ (ಪರಶುರಾಮನ ಕಥೆಗಳನ್ನು) ಹಾಡುತ್ತಿರುತ್ತಾರೆ. ಈ ಕಥೆಗಳಿಗೆ 'ಗೌತು ಪುರಾಣಂ' ಎಂಬ ನಾಮಾಂತರ ಕೂಡ ಇದೆ. ವಿಶಾಖಪಟ್ಟಣ ಮತ್ತು ಶ್ರೀಕಾಕುಳ ಜಿಲ್ಲೆಗಳಲ್ಲಿನ ಬವನೀಯರು ಲಕ್ಷ್ಮಣಮೂರ್ಛ. ಅಂಗದ ರಾಯಭಾರಮು, ಗಂಗಾವಿವಾಹಮು. ಮುಂತಾದ ಪರಿಹರೀಪದಗಳನ್ನೂ, ಬೊಬ್ಬಿಲಿ ಕಥೆಯನ್ನೂ ಸಹ ಹಾಡುತ್ತಿದ್ದಾರೆ.

ಪರಶುರಾಮನ ಕಥೆಗಳಲ್ಲಿ ಎಲ್ಲಮ್ಮನ ತಾಯಿಯ ಹೆಸರು 'ಜಮಿಳಿಕಾದೇವಿ'. ಈಕೆಯ ಹೆಸರಿನಿಂದಲೇ ಇವರ ವಾದ್ಯಕ್ಕೆ ಜಮಿಡಿಕ (ಜಮುಕು) ಎಂಬ ಹೆಸರು ಬಂದಿರಬಹುದು. ಇಲ್ಲದೇ ಇದನ್ನು ಬಾಜಿಸುವಾಗ 'ಜಮಿಡಿಕ—ಜಮಿಡಿಕ' ಎಂಬ ರೀತಿಯಲ್ಲಿ ಶಬ್ದ ಬರುತ್ತದಾದುದರಿಂದ ಈ ಹೆಸರು ಬಂದಿರಬಹುದು.

ಬವನೀಯರು ಎರಡು ರೀತಿಯ ಜಮುಕುಗಳನ್ನು ಬಾಜಿಸುತ್ತಾರೆ. ಒಂದು ಚಿಕ್ಕದು ಮತ್ತೊಂದು ದೊಡ್ಡದು. ಚಿಕ್ಕದು ಕೇವಲ ಶೃತಿಗೋಸ್ಕರ

ಮಾತ್ರವೇ ಉಪಯೋಗಿಸಲ್ಪಡುತ್ತದೆ. ದೊಡ್ಡದು ಅತ್ಯದ್ಭುತವಾಗಿ ಶಬ್ದ ಮಾಡುತ್ತಾ ಇವರು ಹಾಡುವ ಹಾಡಿಗೆ ಉಚಿತವಾದ ತಾಳವನ್ನು ಒದಗಿಸುತ್ತದೆ.

ಈ ಬಿವಸೀಯರು ಅಮ್ಮನವರ ಜಾತ್ರೆಗಳಲ್ಲಿ 'ಗಾವುಪಟ್ಟುಟ' ಅಂತಹ ಭಯಂಕರ ಕಾರ್ಯಗಳನ್ನೂ ಮಾಡುತ್ತಾರೆ. (ಬಲಿಪಶುವನ್ನು ಬಾಯಿಂದ ಕಚ್ಚಿ ಕೊಲ್ಲುವುದನ್ನು ಜನಪದರು ಗಾವುಪಟ್ಟುಟ—ಗಾವು ಹಿಡಿಯುವುದು ಎನ್ನುತಾರೆ). ಮಂತ್ರಗಾರ ರಂತೆಯೂ ಸಹ ಬವಸೀಯರು ಪ್ರಸಿದ್ಧಿಗೇರಿದ್ದಾರೆ.

2. ಪಂಬಲನಾರು (ಪಂಬಗಳವರು):—

ಇವರನ್ನು ಕುರಿತು ಮೇಲೆ ಸ್ವಲ್ಪ ವಿವರಿಸಿದ್ದೇನೆ. ಈ ಪಂಬಗಳವರು ಅಯ್ಯನವರ ದರ್ಶನಕ್ಕೆ ಸೇರಿದ ಹೊಲೆಯರು. ಇವರ ವಾದ್ಯ ಪಂಬಜೋಡು. ಈ ವಾದ್ಯದಿಂದಲೇ ಇವರಿಗೆ ಈ ಹೆಸರು ಬಂದಿದೆ. ಪಂಬಗಳವರು ಹೆಚ್ಚಾಗಿ ಅಂಕಮ್ಮ ಕಥೆಗಳನ್ನು ಹಾಡುತ್ತಿರುತ್ತಾರೆ. ಈ ಅಂಕಮ್ಮನನ್ನು ಪೂಜಿಸುವ ಗಮಳ್ಳ (ಹೆಂಡ ತೆಗೆಯುವವರ), ಬಲಿಜ. (ಬಣಜಿಗರು), ಚಾಕಲಿ (ಅಗಸರು) ಮಾಲ (ಹೊಲೆಯರು), ಮುತ್ರಾಸುಗಳನ್ನು ಪಂಬಗಳವರು ಯಾಚಿಸುತ್ತಾರೆ. ನೆಲ್ಲೂರು, ಪ್ರಕಾಶಂ, ಗುಂಟೂರು ಜಿಲ್ಲೆಗಳಲ್ಲಿ ಈ ಪಂಬಗಳವರು ಹೆಚ್ಚಾಗಿದ್ದಾರೆ.

ಪಂಬಗಳವರು ಪೂಜಿಸುವ ಅಂಕಮ್ಮನಿಗೆ ಮಾರಾಸಪ್ಪ ಅಂಕಮ್ಮ ಎಂದು ಹೆಸರು. 'ಪಲ್ನಾಟಿ ಅಂಕಮ್ಮ' ಎಂಬ ಬೇರೊಬ್ಬ ಅಂಕಮ್ಮ ಇದ್ದಾಳೆ. ಆಕೆ ಪಲ್ನಾಟಿ ವೀರರಲ್ಲಿ ಪ್ರಮುಖನಾದ ಕೊಮ್ಮರಾಜು ಪೂಜಿಸಿದ ಅಂಕಮ್ಮ. ಆ ದೇವಾಲಯ ಕಾರೆಂಪೂಡಿ ಎಂಬ ಊರಿನಲ್ಲಿದೆ. ಆ ಪಲ್ನಾಟಿ ಅಂಕಮ್ಮನಿಗೂ ಈ ಮಾರಾಸಪ್ಪ ಅಂಕಮ್ಮನಿಗೂ ಬೇಧವಿದೆ. ಮಾರಾಸಪ್ಪ ಅಂಕಮ್ಮನನ್ನು ಕುರಿತ ಕಥಾಚಕ್ರದಲ್ಲಿ (Ballad-cyle) ಅಂಕಮ್ಮ ಕಥ. ರವದ್ದೇವಿರಾಜು ಕಥ. ಗಂಗುರಾಜು ಕಥ ಎಂದು ಮೂರು ಕಥೆಗಳು ಪ್ರಚಾರದಲ್ಲಿವೆ. ಈ ಕಥೆಗಳೆಲ್ಲವನ್ನೂ ಪಂಬಗಳವರು ವೀರ ಕರುಣ ರಸಗಳನ್ನು ಪೋಷಿಸುತ್ತಾ ಶ್ರಾವ್ಯವಾಗಿ ಗಾಯನ ಮಾಡುತ್ತಾರೆ. ಹಿಮ್ಮೇಳಗಾರರು ಪಂಬಜೋಡನ್ನು ಬಾಜಿಸುತ್ತಾ 'ತಿತ್ತಿ' (ಶೃತಿ ಗೋಸ್ಕರ ಬಳಸುವ ಚರ್ಮದ ಚೀಲ) ಯನ್ನು ಊದುತ್ತಿದ್ದಾಗ, ಕಥೆಗಾರನು ರಾಜ ಕುಮಾರನಂತೆ ವೇಷ ಹಾಕಿಕೊಂಡು, ಬಲಗೈಯಲ್ಲಿ ದೊಡ್ಡ ಕತ್ತಿಯನ್ನು. ಎಡಗೈಯಲ್ಲಿ 'ಜಮಾಜಾಲ' ಎಂಬ ಚಿಕ್ಕ ಕತ್ತಿಯನ್ನು ಹಿಡಿದುಕೊಂಡು. ವೀರಾವೇಶದಿಂದ ಕುಣಿ ಯುತ್ತಾ ಕಥೆಯನ್ನು ಹಾಡುತ್ತಿರುತ್ತಾನೆ.

ಈ ಪಂಬಗಳವರೂ ಸಹ ಬವಸೀಯರಂತೆ ಅಂಕಮ್ಮನ ಜಾತ್ರೆಯಲ್ಲಿ ಬಲಿ ಕೊಡೆಯುವುದು. ಮಂತ್ರ ತಂತ್ರಗಳನ್ನು ಮಾಡುತ್ತಿರುತ್ತಾರೆ.

3. **'ವೀರ ವಿದ್ಯಾವಂತುಲು'** ಅಥವಾ 'ಪಲ್ನಾಟಿವಾರು' (ವೀರ ವಿದ್ಯಾವಂತರು. ಅಥವಾ ಪಲ್ನಾಟಿಯವರು):

ಪಲ್ನಾಟ ವೀರ ಕಥೆಗಳನ್ನು 'ಪಿಚ್ಚುಕುಂಟ್ಲು' ಹಾಡುತ್ತಿರುತ್ತಾರೆಂಬ ಅಪ ಪ್ರಚಾರವೊಂದು ವಿದ್ವಾಂಸರಿಂದ ಸೃಷ್ಟಿಸಲ್ಪಟ್ಟು ದೇಶದಲ್ಲಿ ವ್ಯಾಪಿಸಿದೆ. ಪಲ್ನಾಟಿ ಯುದ್ಧಕ್ಕೆ ಶೈವ ವೈಷ್ಣವ ಭೇದಗಳು ಕಾರಣವೆಂಬ ದುಷ್ಟ ಪ್ರಚಾರದಂತೆಯೇ ಇದೂ ಸಹ ಪಂಡಿತಲೋಕದಲ್ಲಿ ಬೇರೂರಿದೆ. ಪಲ್ನಾಟಿವೀರ ಕಥೆಗಳಿಗೂ, ಪಿಚ್ಚುಕುಂಟ್ಲು ಅವರಿಗೂ ಯಾವ ವಿಧವಾದ ಸಂಬಂಧವೂ ಇಲ್ಲ. ಗುಂಟೂರು ಜಿಲ್ಲೆಯ ಕೆಲವು ಪ್ರಾಂತಗಳಲ್ಲಿ ಪಿಚ್ಚುಕುಂಟ್ಲು ಕೆಲವರು ಪಲ್ನಾಟಿ ವೀರ ಕಥೆಗಳನ್ನು ಹಾಡುತ್ತಿದ್ದಾರೆ. ಇದು ಇತ್ತೀಚಿನ ಕಾಲದಲ್ಲಿ ಹೊಟ್ಟೆಪಾಡಿಗೋಸ್ಕರ ಇವರು ಕೈಹಿಡಿದದ್ದೇ ಹೊರತು ಪ್ರಾಚೀನ ಕಾಲದಿಂದ ಇವುಗಳನ್ನು ಹಾಡುವವರು ಬೇರೆಯಾಗಿದ್ದಾರೆ.

ಪಲ್ನಾಟಿ ವೀರ ಕಥೆಗಳನ್ನು ಗಾಯನ ಮಾಡುವ ಹಕ್ಕು ಪಿಚ್ಚುಕುಂಟ್ಲುರಿಗೆ ಇಲ್ಲ. ಇವರ ಪ್ರಧಾನ ವೃತ್ತಿ ರೆಡ್ಡಿಗಳಿಗೆ ಗೋತ್ರ ಹೇಳುವುದೇ. ರೆಡ್ಡಿಗಳಿಗೆ ಸಂಬಂಧಿಸಿದ ವೀರಗಾಥೆಗಳನ್ನು ಇವರು ಹಾಡುತ್ತಿರುತ್ತಾರೆ. ರಾಯಲ ಸೀಮೆಯಲ್ಲಿನ ಪಿಚ್ಚುಕುಂಟ್ಲು 'ಕುಂಟಿಮಲ್ಲಾರೆಡ್ಡಿ ಕಥ'. 'ಎಲಿನಾಗಿರೆಡ್ಡಿ ಕಥ'. 'ನಾರಸಿಂಹಾರೆಡ್ಡಿ ಕಥ' ಮುಂತಾದುವುಗಳನ್ನು ಹಾಡುತ್ತಿದ್ದಾರೆ. ಗುಂಟೂರು ಜಿಲ್ಲೆಯಲ್ಲಿ ಕೆಲವು ಪಿಚ್ಚುಕುಂಟ್ಲು 'ಕಮ್ಮ' ಕುಲದವರಿಗೂ ಸಹ ಗೋತ್ರಗಳನ್ನು ಹೇಳುತ್ತಿದ್ದಾರೆ. (ರೆಡ್ಡಿ ಕಮ್ಮ ಕುಲಗಳು ಪ್ರಾಚೀನ ಕಾಲದಲ್ಲಿ ಒಂದೇ ಆಗಿದ್ದುವೆಂದು ತಿಳಿದು ಬರುತ್ತಿದೆ)

ಪಲ್ನಾಟಿ ವೀರ ಕಥೆಗಳನ್ನು ಹಾಡುವ ಹಕ್ಕು ಹೊಲೆಯರದು. ಇವರನ್ನು 'ವೀರ ವಿದ್ಯಾವಂತುಲು' ಎಂದೂ 'ಪಲ್ನಾಟಿವಾರು' ಎಂದೂ ಕರೆಯುತ್ತಾರೆ. ಕಾರೆಂಪೂಡಿ ಯಲ್ಲಿ ಪ್ರತಿವರ್ಷವೂ ಕಾರ್ತೀಕ ಮಾಸದಲ್ಲಿ ಜರುಗುವ ವೀರೋತ್ಸವದಲ್ಲಿ ಪಲ್ನಾಟಿ ಕಥೆಗಳನ್ನು ಹಾಡುವ ಹಕ್ಕು ಇವತ್ತಿಗೂ ಇವರಿಗೇ ಇದೆ. (ಪಿಚ್ಚುಕುಂಟ್ಲು ಅವರನ್ನು ಆ ಪರಿಸರಕ್ಕೆ ಕೂಡ ಬರಗೊಡುವುದಿಲ್ಲ). ವೀರ ವಿದ್ಯಾವಂತರು ಪಲ್ನಾಟಿ ವೀರಚರಿತ್ರೆ ಯಲ್ಲಿನ 'ಕನ್ನಮದಾಸನ ಸಂತತಿಯವರಾಗಿರುತ್ತಾರೆಂದು ನನ್ನ ಅಭಿಪ್ರಾಯ. ಈ ಹೊಲೆಯರಲ್ಲದೆ ಕೆಲವರು 'ತೆಲಗ' (ಬಣಜಿಗರು). 'ಕಮಸಾಲಿ' (ಅಕ್ಕಸಾಲಿಗರು) ವರ್ಣಗಳಿಗೆ ಸೇರಿದವರು ಸಹ ಪಲ್ನಾಟಿ ವೀರ ಕಥೆಗಳನ್ನು ಗಾಯನ ಮಾಡುತ್ತಾರೆಂದು ತಿಳಿದುಬರುತ್ತದೆ.

ಪಲ್ನಾಡಿನಲ್ಲಿ ಪಿಚ್ಚುಕುಂಟ್ಲು ಕೆಲವರು ಅನಧಿಕಾರವಾಗಿ ಮಾತ್ರವೇ ಪಲ್ನಾಟಿ ವೀರ ಕಥೆಗಳನ್ನು ಹಾಡುತ್ತಿದ್ದಾರೆಂದು ತಿಳಿಯಬೇಕು. ಪಲ್ನಾಟಿ ವೀರಾಚಾರ ಪೀಠಾಧಿಪತಿಗಳ ಅನುಮತಿ ಇಲ್ಲದೆ ಕತ್ತಿ ಹಿಡಿದು ವೀರಗಾಥಾ ಗಾಯನ ಮಾಡುವ

ಅಧಿಕಾರ ಯಾರಿಗೂ ಇಲ್ಲ. ಈ ಪೀಠಾದಿಪತಿಗಳು ಕಾರೆಂಪೂಡಿಯಲ್ಲಿದ್ದಾರೆ. ಇವರ ಮನೆಯ ಹೆಸರು 'ಪಿಡುಗುವಾರು'. ಇವರು ಆರು ಸಾವಿರ ನಿಯೋಗಿ ಬ್ರಾಹ್ಮಣರು. ಇವರಿಗೆ ತಲೆತಲಾಂತರದಿಂದ ಬರುತ್ತಿರುವ ಒಂದು ದೊಡ್ಡ ಬಿರುದುಗದ್ಯ ಇದೆ. ಇದನ್ನು ಪರಿಶೀಲಿಸಿದರೆ ಇವರು ಬಾಲಚಂದ್ರನ ಸಖನಾದ 'ಅನ ಪೋತು' ವಂಶದವರೆಂದು ಊಹಿಸಲು ಅವಕಾಶವಿದೆ. ವೀರವಿದ್ಯಾವಂತರಿಗೆ ಈ ಪೀಠಾಧಿಪತಿಗಳೇ ಗುರುಗಳು. ಆದ್ದರಿಂದ ಪೀಠಾಧಿಪತಿಗಳು ವೀರ ವಿದ್ಯಾವಂತರಿಗೆ ಮಾತ್ರವೇ ಪಲ್ನಾಟಿ ಕಥೆಗಳನ್ನು ಹಾಡಲಿಕ್ಕೆ ಅನುಮತಿ ಕೊಟ್ಟಿದ್ದಾರೆ; ಪಿಚ್ಚುಕುಂಟ್ಲು ಅವರಿಗೆ ಕೊಡಲಿಲ್ಲ. ಇತ್ತೀಚಿನ ಕಾಲದಲ್ಲಿ ಪಿಚ್ಚುಕುಂಟ್ಲು ಕೆಲವು ಕುಟುಂಬಗಳು ಕಾರೆಂಪೂಡಿ ಪೀಠಾದಿಪತಿಗಳ ಹತ್ತಿರಕ್ಕೆ ಬಂದು ಪಲ್ನಾಟಿವೀರ ಕಥೆಗಳನ್ನು ಹಾಡುತ್ತಾ ಜೀವನ ನಡೆಸುವುದಕ್ಕೋಸ್ಕರ ಅನುಮತಿಯನ್ನು ಬೇಡಿದ್ದಾರೆ. ಒಂದೆರಡು ಪಿಚ್ಚುಕುಂಟ್ಲು ವಂಶಗಳು ವಿರಾಚಾರವನ್ನೂ ಸಹ ಸ್ವೀಕರಿಸಿದ್ದಾರೆ. ಇವರಿಗೆ ಪೀಠಾಧಿಪತಿಗಳು ಬೇರೆಕಡೆಗಳಲ್ಲಿ ಕಥೆಗಳನ್ನು ಹಾಡಿಕೊಳ್ಳುವುದಕ್ಕೆ ಮಾತ್ರವೇ ಅನುಮತಿ ಕೊಟ್ಟಿದ್ದಾರೆ. ಕಾರೆಂಪೂಡಿ ವಿರೋತ್ಸವದಲ್ಲಿ ಕಥೆಗಳನ್ನು ಹೇಳುವ ಅಧಿಕಾರ ಮಾತ್ರ ವೀರವಿದ್ಯಾವಂತರದೇ.

ಪಲ್ನಾಟಿಯವರು ಅಥವಾ ವೀರವಿದ್ಯಾವಂತರು ಚೆನ್ನಕೇಶವನ ದರ್ಶನಕ್ಕೆ ಸೇರಿದ ಹೊಲೆಯರು. ಇವರು ಗುಂಟೂರು, ಪ್ರಕಾಶಂ, ನೆಲ್ಲೂರು ಜಿಲ್ಲೆಗಳಲ್ಲಿ ಅಧಿಕವಾಗಿದ್ದಾರೆ. ಗುಂಟೂರು ಜಿಲ್ಲೆಯಲ್ಲಿ 'ಲಾವೇರು', 'ವೇಮವರಂ', 'ಆಕುಲ ಅಲ್ಲೂರು', ಮುಂತಾದ ಗ್ರಾಮಗಳಲ್ಲಿಯೂ, ಪ್ರಕಾಶಂ ಮತ್ತು ನೆಲ್ಲೂರು ಜಿಲ್ಲೆಗಳಲ್ಲಿ 'ಅಲ್ಲೂರು ಪಾಡು, ಮೊಗುಳ್ಳೂರು, ಶ್ರೀರಾಮ ಪುರಮು, ಗಜ್ಜಲಕೊಂಡ, ಅನ್ನಾರೆಡ್ಡಿ ಪಾಲೆಮು' ಮೊದಲಾದ ಪ್ರಾಂತಗಳಲ್ಲಿ ಇವರಿದ್ದಾರೆ. ಕೃಷ್ಣಾ ಜಿಲ್ಲೆಯಲ್ಲಿ 'ಮಕ್ಕಪೇಟ'ದ ಹತ್ತಿರವಿರುವ 'ರಾಮಚಂದ್ರಪುರಂ'ದಲ್ಲಿ ಕೂಡ ವೀರ ವಿದ್ಯಾವಂತರಿದ್ದಾರೆಂದು ತಿಳಿಯುತ್ತದೆ.

ಪಲ್ನಾಟಿ ವೀರಕಥಾ ಗಾಯನದಲ್ಲಿ ವೀರಜೋಡು, (ಪಂಬಜೋಡು) ಅದರ ಮೇಲೆ ಎರಡು ಗಂಟೆಗಳು, ತಿತ್ತಿ, ತಾಳ, ಕತ್ತಿ, ಗುಧಾಣ ಉಪಯೋಗಿಸುತ್ತಾರೆ. ಕಥೆಯನ್ನು ಹಾಡುವ ಪ್ರಧಾನ ವ್ಯಕ್ತಿ ಪಲ್ನಾಟಿ ವೀರನಂತೆ ವೇಷ ಹಾಕಿಕೊಳ್ಳುತ್ತಾನೆ. ಈತನು ಹನ್ನೆರಡು ಬಿರುದುಗಳನ್ನು ಧರಿಸಬೇಕೆಂದು ನಿಯಮವಿದೆ. ಅವು: "ಕಾಲಿ ಕೋಕ, ತಲಗುಡ್ಡ, ಕಲಿಕಿ ತುರಾಯಿ, ಉಮ್ಮಾಡಿ ಪಟ್ಟಿ (ಬೆಳ್ಳಿಯ ತಗಡಿನಿಂದ ಮಾಡಲ್ಪಟ್ಟದ್ದು), ಚಂದ್ರವಂಕ, ಅಂದೆ, ಕತ್ತಿ – ಡಾಲು, ವೀರಜೋಡು, ತಿತ್ತಿ, ತಾಳಮು, ಬೊಡ್ಡುಗಂಟೆ, ಜಂದೆಂಗುಡ್ಡ". ಇದರಲ್ಲಿ 'ಡಾಲು' (ಗುಧಾಣ)ಗೆ ಬದಲಾಗಿ ಕೆಲವರು ಚಿಕ್ಕ ಹಿಡಿ ಕತ್ತಿಯನ್ನು ಉಪಯೋಗಿಸುತ್ತಾರೆ. ಇದನ್ನು 'ಜಮುಜಾಲ' ಎನ್ನುತ್ತಾರೆ. ದೊಡ್ಡ ಕತ್ತಿಯನ್ನು 'ಅಡ್ಡಕತ್ತಿ' ಎನ್ನುತ್ತಾರೆ. ಬಲಗೈಯಲ್ಲಿ ಅಡ್ಡಕತ್ತಿ, ಎಡಗೈಯಲ್ಲಿ ಜಮುಜಾಲ; ಬಲಗಾಲಿಗೆ ಬಿರುದು ಅಂದಿಗೆ; ತಲೆಗೆ ಹನ್ನೆರಡು ಮಳಪೇಟ; ಪೇಟದೊಳಗೆ ಕಲಿಕಿತುರಾಯಿ; ಆ ಕಲಿಕಿ ತುರಾಯಿಯ ಬಲಪಕ್ಕಕ್ಕೆ ಚಂದ್ರವಂಕ,

(ಅರ್ಧಚಂದ್ರ), ಮತ್ತು ಉಪ್ಪಾರುಹು ಪಿಟ್ಟ (ಚಿಕ್ಕ ಪಕ್ಕಿಯ ಗೊಂಬೆ): ಕುತ್ತಿಗೆಯಲ್ಲಿ 'ಪಿಂಜಮಲದಂಡ' (ಒಂದುವಿಧದ ಮಣಿಯ ಹಾರ); ಹಣೆಯ ಮೇಲೆ ಮತ್ತು ಕುತ್ತಿಗೆಯ ಕೆಳ ಬಲಪಕ್ಕದ ಎದೆಗೆ ತಿರುಮಣಿ (ಅಕ್ಕ ಪಕ್ಕಗಳಲ್ಲಿ ಬಿಳಿಯ ಮತ್ತು ಮಧ್ಯೆ ಕೆಂಪು ನಾಮ); ಎಡಪಕ್ಕದ ಎದೆಗೆ ಜಂದೆಂಗುಡ್ಡ (ಜನಿವಾರದ ಬಟ್ಟೆ. ಇದು ಬಿಳಿ ಮತ್ತು ಕೆಂಪು ಬಣ್ಣದಿಂದ ಕೂಡಿದ ಏಳು ಮಳ ಉದ್ದವಿರುತ್ತದೆ): ಹರಾಯಿ: ಜಂದೆಂ (ಜನಿವಾರ); ಬೊಡ್ಡುಗಂಟ (ಹೊಕ್ಕಳಗಂಟೆ – ತ್ರಿಕೋಣಾಕಾರವಾಗಿರುವ ಬಟ್ಟೆ – ಇದರ ಸುತ್ತಲೂ ಮಣಿಗಳೂ ಮಧ್ಯದಲ್ಲಿ ಗಂಟೆ ಕಟ್ಟಲ್ಪಟ್ಟಿರುತ್ತವೆ): ಬಲಭಾಗದಲ್ಲಿ ತೊಡೆಮೇಲೆ ಬರುವಂತೆ ಓಲಾಡುತ್ತಾ 'ಕುರುಪ್ಪೋತು ಸವರಮು' (ಚಾಮರ) – ಇದು ಪಲ್ನಾಟಿ ವೀರಕಥೆಗಾರನ ವೇಷ. ಹೀಗೆ ಹನ್ನೆರಡು ಬಿರುದುಗಳನ್ನು ಧರಿಸಿ. ಕತ್ತಿಯನ್ನು ತಿರುವುತ್ತಾ ವೀರಾವೇಶದಿಂದ ಕಥೆಯನ್ನು ಹಾಡುತ್ತಿದ್ದರೆ. ಆದಿನದ ಪಲ್ನಾಟಿ ಬಾಲ ಚಂದ್ರನೇ ದಿವಿಯಿಂದ ಭುವಿಗೆ ಇಳಿದು ಬಂದಂತಿರುತ್ತದೆ.

ಈ ವೀರಾವೇಶವು ಒಬ್ಬ ಗಾಯಕನಲ್ಲಿ ಮಾತ್ರವಲ್ಲದೆ ಒಂದೊಂದು ಸಲ ಶ್ರೋತೃಗಳಲ್ಲೂ ಪ್ರಸ್ಫುಟವಾಗುತ್ತಿರುತ್ತದೆ. ಪಲ್ನಾಟಿ ವೀರ ಕಥೆಗಳನ್ನು ಮಹಾ ಆವೇಶದಿಂದ ಹಾಡುವಾಗ – ಮುಖ್ಯವಾಗಿ ಕನ್ನಮದಾಸನ ವೀರತ್ವವನ್ನು ಪ್ರಶಂಸಿಸುವಾಗಲೂ ಅವನ ಯುದ್ಧ ಕೌಶಲವನ್ನು ವರ್ಣಿಸುವಾಗಲೂ, ಶ್ರೋತೃಗಳಾಗಿರುವ ಕೆಲವು ಹೊಲೆಯರಿಗೆ ವೀರರು ಮೈಮೇಲೆ ಬಂದಂತಾಗಿ ತೂಗಾಡುತ್ತಾರೆ. ಆಗ ಕಥೆಗಾರನ ಕೈಯಲ್ಲಿನ ಅಡ್ಡಗತ್ತಿಯನ್ನು ಆ ತೂಗುವಿಕೆ ಬಂದ ಶ್ರೋತೃವಿಗೆ ಕೊಡುತ್ತಾರೆ. ಆತನು ಆ ಕತ್ತಿಯ ಮೊನೆಯಿಂದ ತನ್ನ ಗುಂಡಿಗೆಯಮೇಲೆ ಪರಚಿಕೊಳ್ಳುತ್ತಾನೆ. ನೆತ್ತರು ಬೊಟ– ಬೊಟಾ ಸುರಿಯುತ್ತದೆ. ಹಾಗಲ್ಲದೆ ಆ ತೂಗುವಿಕೆ ತಗ್ಗುವುದಿಲ್ಲ. ಇದು ಪಲ್ನಾಡಿನಲ್ಲಿ ಇಂದಿಗೂ ನಡೆಯುತ್ತಿರುವ ಯಥಾರ್ಥ ಸಂಘಟನೆ.

ಪಲ್ನಾಟಿ ವೀರ ಕಥಾ ಗಾಯನದಲ್ಲಿ ಕಥೆಗಾರನೊಂದಿಗೆ ಮೂವರು ಹಿಮ್ಮೇಳಗಾರರಿರುತ್ತಾರೆ. ಒಬ್ಬನು ವೀರ ಜೋಡು ಬಾಜಿಸುತ್ತಾನೆ. ಎರಡನೆಯವನು ಶಿಶ್ತಿ ಊದುತ್ತಾನೆ. ಮೂರನೆಯವನು ತಾಳ ಹಾಕುತ್ತಾ 'ಆ..... ಆ' ಎಂಬ ಧ್ವನಿ ಕೂಡಿಸುತ್ತಾನೆ. ಕಥೆಗಾರನೂ. ಹಿಮ್ಮೇಳಗಾರರೂ ಎಲ್ಲರೂ ನಿಂತೇ ಇರುತ್ತಾರೆ. ಈ ವೀರ ಗಾಯನದಲ್ಲಿ ಸ್ವಲ್ಪ ಅಭಿನಯ. ಸ್ವಲ್ಪ ನಾಟ್ಯ (ಕುಣಿಯುವಿಕೆ) ಕೂಡ ಮಿಳಿತವಾಗಿರುತ್ತದೆ. ಪಲ್ನಾಟಿ ವೀರ ಕಥಾಗಾಯನ ಶ್ರೀನಾಥನ ಕ್ರೀಡಾಭಿರಾಮ ಕಾವ್ಯದ ಒಂದು ಸೀಸ ಪದ್ಯದಲ್ಲಿ ವಿಪುಲವಾಗಿ ವರ್ಣಿಸಲ್ಪಟ್ಟಿದೆ. ಇದರಿಂದ ಈ ವೀರಗಾಯನವು ಪ್ರತಾಪ ರುದ್ರನ ಕಾಲದಿಂದಲೂ ಸಹ ಆಂಧ್ರದೇಶದಲ್ಲಿ ವ್ಯಾಪ್ತಿಯಲ್ಲಿದೆ ಎಂದು ತಿಳಿಯುತ್ತದೆ.

ಪಲ್ನಾಟಿ ವೀರಕಥಾಗಾಯನ ಹೆಚ್ಚಾಗಿ ಏಕ ತಾಳದಲ್ಲಿ ನಡೆಯುತ್ತದೆ. ಸಂದರ್ಭಕ್ಕೆ ಸರಿಯಾಗಿ ಅಟತಾಳ ಮತ್ತು ಆದಿತಾಳ ಕೂಡ ಬೀಳುತ್ತಿರುತ್ತವೆ. ಪಲ್ನಾಟಿವೀರ

ಕಥೆಗಳು ಹೆಚ್ಚಾಗಿ ರಾತ್ರಿವೇಳೆ ಬೆಳದಿಂಗಳಿನಲ್ಲಿ ಹಾಡಲ್ಪಡುತ್ತವೆಯೇ ಹೊರತು ದೀಪದ ಬೆಳಕಿನಲ್ಲಿ ಹಾಡಲ್ಪಡುವುದಿಲ್ಲ. ಈ ಆಚಾರವು ಏಕೆ ಬಂದಿದೆಯೋ ತಿಳಿದುಬರುವುದಿಲ್ಲ.

ಪಲ್ನಾಟಿ ಕಥೆಗಳನ್ನು ವೀರ ಜೋಡು. ಕತ್ತಿ. ಗುಥಾಣಿ, ತಿತ್ತಿ, ತಾಳ ಇವುಗಳಿಂದ ಹಾಡಬೇಕೇ ಹೊರತು. ತಂಬುರ (ತಂಬೂರಿ) ಗುಮ್ಮೆಟ್ಲು (ಒಂದು ಜನಪದ ವಾದ್ಯ) ದಿಂದ ಹಾಡಬಾರದು. ಇದು ಪೀಠಾಧಿಪತಿಗಳ ಶಾಸನ. ಈ ಶಾಸನವನ್ನು ಧಿಕ್ಕರಿಸಿದವರ ಮೇಲೆ ಸಿವಿಲ್. ಕ್ರಿಮಿನಲ್ ಚಾರ್ಜು ತೆಗೆದುಕೊಳ್ಳುವ ಅಧಿಕಾರ ಪೀಠಾಧಿಪತಿಗಳಿಗಿದೆ. ಅಸಲು. ಪೀಠಾಧಿಪತಿಗಳ ಅನುಮತಿ ಇಲ್ಲದೆ ಕತ್ತಿಹಿಡಿದು ಪಲ್ನಾಟಿ ಕಥೆಗಳನ್ನು ಯಾರೂ ಹಾಡಕೂಡದು. ಇದನ್ನು ಅತಿಕ್ರಮಿಸಿದವರ ಮೇಲೆ ಸಹ ಪೀಠಾಧಿಪತಿಗಳು ಚಾರ್ಜು ತೆಗೆದುಕೊಳ್ಳುತ್ತಾರೆ. ನಿಜವಾಗಿ ನೋಡುವುದಾದರೆ ವೀರಜೋಡು. ತಿತ್ತಿ ಮೊದಲಾದ ವಾದ್ಯಗಳಿಂದ ಬರುವ ಆವೇಶವು ತಂಬೂರಿ ಗುಮ್ಮೆಟ್ಲುದಿಂದ ಬರುವುದಿಲ್ಲ.

ಪಲ್ನಾಟಿ ವೀರ ಕಥೆಗಳನ್ನು ಗಾಯನಮಾಡುವ ವೀರವಿದ್ಯಾವಂತರು ಮೊಟ್ಟ ಮೊದಲು ವೀರರ ಕುಲದೇವರಾದ ಚೆನ್ನಕೇಶವನನ್ನು ಪ್ರಾರ್ಥಿಸುತ್ತಾರೆ. ತರುವಾಯ ಆದಿ ಶಕ್ತಿ ಅಂಕಾಳಮ್ಮನನ್ನು ಪ್ರಾರ್ಥಿಸುತ್ತಾರೆ. ನಂತರ ಅರವತ್ತಾರು ಜನ ವೀರ ಪಲ್ನಾಟಿ ನಾಯಕರನ್ನು ಪ್ರಾರ್ಥಿಸುತ್ತಾರೆ. ಕೆಲವರು ಪಲ್ನಾಟಿಯುವರು, ದೈವಾಂಶ ದಿಂದ ಹುಟ್ಟಿದ 'ಕಾರುಜೊಲ್ಲಡು' ಎಂಬ ಪೆದ್ದನನ ಕುದುರೆಯನ್ನು ಕೂಡ ಸ್ತುತಿಸುತ್ತಾರೆ, ಅನಂತರ ಕಥೆ ಪ್ರಾರಂಭಿಸುತ್ತಾರೆ. ಇವರು ಮಾಡುವ ಪ್ರಾರ್ಥನೆಗಳಲ್ಲಿ ಪಲ್ನಾಟಿ ವೀರರ ಪ್ರಾರ್ಥನೆ ಅತ್ಯಂತ ವೀರರಸಸ್ಫೋರಕವಾಗಿದ್ದು, ಶ್ರೋತೃಗಳ ಹೃದಯಗಳನ್ನು ಘೇರಿಘ್ಲಾನದಂತೆ ಕಲಕಿಹಾಕುತ್ತದೆ. ಇದು ತುಂಬ ರಸವತ್ತಾದ ಜನಪದ ಕಾವ್ಯ.

ಪಲ್ನಾಟಿ ವೀರ ಕಥೆಯನ್ನು ಹಾಡುವವರನ್ನು ವೀರವಿದ್ಯಾವಂತರೆಂದು ಕರೆದಂತೆ, ಚೆನ್ನಕೇಶವನನ್ನು ಕುಲದೇವನನ್ನಾಗಿ ಪೂಜಿಸುವ ವರ್ಣಗಳವರನ್ನು 'ಆಚಾರವಂತರು' ಎಂದು ಕರೆಯುತ್ತಾರೆ. ಇವರು ಹಿಂದುಗಳಲ್ಲಿ ಎಲ್ಲ ವರ್ಣದವರಲ್ಲೂ ಇದ್ದಾರೆ. ಕಮ್ಮ. ಈಡಿಗ (ಹೆಂಡ ತೆಗೆಯುವವರು). ಕುಮ್ಮರಿ (ಕುಂಬಾರ). ಚಾಕಲಿ. ಮಾಲ ಕೋಮಟಿ (ಚೆಟ್ಟರು) ರೆಡ್ಡಿ. ವೆಲಮ, ತೆಲಗ. ಮುಂತಾದ ವರ್ಣಗಳವರು ಕರಮಂತ್ರದ ದಿನದಂದು (ಸತ್ತದಿನದಿಂದ ಹದಿನೈದನೆಯ ದಿನ) ಪಲ್ನಾಟಿ ವೀರ ಕಥೆಗಳನ್ನು ಹಾಡಿಸುತ್ತಾರೆ.

ಕಾರೆಂಪೂಡಿಯಲ್ಲಿನ ವೀರರ ಗುಡಿಯಲ್ಲೂ ಚೆನ್ನಕೇಶವನ ಗುಡಿಯಲ್ಲೂ ಪಲ್ನಾಟಿ ವೀರರ ಆಯುಧಗಳಿವೆ. ವೀರೋತ್ಸವದಂದು ಕೆಲವು ವರ್ಣಗಳವರು ಈ ಆಯುಧ ಗಳನ್ನು ಅಲಂಕರಿಸಿ ಪೂಜಿಸುತ್ತಾರೆ ಇವರನ್ನು 'ದೇವುಳ್ಳವಾರು' (ದೇವರವರು) ಎನ್ನು ತ್ತಾರೆ.

ಆಚಾರವಂತರು. ದೇವರವರು. ಮೇಲೆ ಹೇಳಿದ ಇತರ ಕುಲದವರು ವೀರ ವಿದ್ಯಾವಂತರನ್ನು ಆಧರಿಸುತ್ತಾರೆ.

ಕಾರೆಂಪೂಡಿ ರಣಕ್ಷೇತ್ರದಲ್ಲಿ ಪ್ರತಿವರ್ಷವೂ ಕಾರ್ತೀಕ ಬಹುಳ ಅಮಾವಾಸ್ಯೆಯ ರಾತ್ರಿಯಿಂದ ಮೊದಲುಗೊಂಡು ಐದುದಿನಗಳವರೆವಿಗೆ ವೀರೋತ್ಸವ ಜರಗುತ್ತದೆ. ಈ ಉತ್ಸವದಲ್ಲಿ "ಕೋಡಿಪ್ರೋರು", 'ರಾಜಗಾವು ಕಥೆ', 'ಲಂಕನ್ನ ಒರುಗು' ಮುಂತಾದ ವೀರಗಾಥೆಗಳನ್ನು ಪಲ್ನಾಟಿಯವರು (ವೀರ ವಿದ್ಯಾವಂತರು) ವೇಷಗಳನ್ನು ಧರಿಸಿ ಪ್ರದರ್ಶಿಸುತ್ತಾ ಹಾಡುತ್ತಾರೆ.

4. **ಕೊಮ್ಮುಲವಾರು** (ಕೊಂಬುಗಳವರು):

'ಕೊಮ್ಮುಲವಾರು' ಗಂಗೆಯ ದರ್ಶನಕ್ಕೆ ಸೇರಿದ ಮಾದಿಗರು. ಇವರು ತಾವು ಜಾಂಬವಂತನ ವಂಶದವರೆಂದು ಹೇಳಿಕೊಳ್ಳುತ್ತಾರೆ. ಈ ಕೊಂಬುಗಳವರನ್ನೇ ಚಿತ್ತೂರು ಜಿಲ್ಲೆಯಲ್ಲಿ 'ಭಟ್ಟುವಾರು' ಎಂದೂ ಕರೆಯುತ್ತಿದ್ದಾರೆ.

ಕೊಂಬುಗಳವರು ಯಾದವರನ್ನು ಯಾಚಿಸುತ್ತಾರೆ. ಅವರ ಗೋತ್ರಗಳನ್ನೂ ಹೇಳುತ್ತಾರೆ. ಕಾಟಮರಾಜನ ಕಥೆಗಳನ್ನೂ 'ವಿಷ್ಣುಭಾಗವತ' ಎಂಬ ನಾಮಾಂತರವಿರುವ ಕಂಸನ ಕಥೆಯನ್ನೂ ಇವರು ಹಾಡುತ್ತಿರುತ್ತಾರೆ. ಈ ಕಥೆಗಳನ್ನು ಹಾಡುವುದರಲ್ಲಿ ವೀರಣಗಳು. ಶ್ರುತಿ. ತಾಳಗಳು. ಕೊಂಬುಗಳು ಉಪಯೋಗಿಸುತ್ತಾರೆ. ತಮ್ಮ ವೀರಗಾಥಾ ಸಂಪತ್ತನ್ನು ಕಾಪಾಡುತ್ತಿರುವವರಾದುದರಿಂದ ಯಾದವರು ಇವರನ್ನು ಹೆಚ್ಚಾಗಿ ಪ್ರೀತಿಸುತ್ತಾರೆ. ಕಾಟಮರಾಜನ ಕಥೆಗಳೆಲ್ಲಾ ಈ ಕೊಂಬುಗಳವರ ಹತ್ತಿರ ತಾಳಪತ್ರ ಗ್ರಂಥ ರೂಪದಲ್ಲಿಯೂ. ಮುಖಸ್ಥವಾಗಿಯೂ ಇವೆ.

ಗಂಗೆಯ ಜಾತ್ರೆಗಳಲ್ಲಿ ಈ ಕೊಂಬುಗಳವರು ಸೇರಿ. ಗಾವುಪಿಡಿಯುವುದೂ, ಕೊಂಬುಗಳನ್ನು ಊದುವುದೂ, 'ತಾನಕ'ಗಳನ್ನು ಹಾಡುವುದೂ, ಕಾಟಮರಾಜನ ಕಥೆಯನ್ನು ಹೇಳುವುದೂ ಮಾಡುತ್ತಿರುತ್ತಾರೆ.... (ಕನಿಗಿರಿಸೀಮೆಯ ಪ್ರಭುವಾದ ಕಾಟಮರಾಜನಿಗೂ. ನೆಲ್ಲೂರಿನ ರಾಜನಾದ ನಲ್ಲಸಿದ್ಧಿಗೂ ನಡೆದ ಯುದ್ಧದಲ್ಲಿ ಕಾಟಮರಾಜನ ಪಕ್ಷವಹಿಸಿ ಎತ್ತುಗಳು. ಹಸುಗಳು ಹೋರಾಡಿವವು. ಇವುಗಳ ಶೌರ್ಯವನ್ನು ವರ್ಣಿಸುವ ಹಾಡುಗಳಿಗೆ 'ತಾನಕ'ಗಳು ಎಂದು ಹೆಸರು).

ಕಾಟಮರಾಜನ ಸೈನ್ಯದಲ್ಲಿ ಪ್ರತ್ಯೇಕವಾಗಿ 'ಗೋಸಂಗಿ' ದಳವಿತ್ತೆಂದು ಕಥೆಗಳಿಂದ ತಿಳಿದುಬರುತ್ತದೆ. (ಗೋಸಂಗಿ = ಮಾದಿಗರು) ಅವರ ನಾಯಕನು 'ಬೀರಿನೀಡು'. ಈತನು ಮಾತಂಗ ವೀರನು. ಈ ಬೀರಿನೀಡನ ಸಂತತಿಯವರೇ ಅಂದಿನಿಂದ ಇಂದಿನವರೆಗೂ. ಈ ಕಥೆಗಳನ್ನು ಗಾಯನ ಮಾಡುತ್ತಿದ್ದಾರೆಂದು ನನ್ನ ಊಹೆ. ಇವರೇ ಇಂದು ಕೊಂಬುಗಳವರು ಎಂದು ಕರೆಯಲ್ಪಡುತ್ತಿದ್ದಾರೆ.

ಪಲ್ನಾಟಿ ವೀರರ ಕಥೆಗಳನ್ನು ಹಾಡುವ ಹಕ್ಕು ಕನ್ನಮ ದಾಸನ ಸಂತತಿಯಾಗಿ ಗುರುತಿಸಲ್ಪಡುತ್ತಿರುವ ವೀರ ವಿದ್ಯಾವಂತರಿಗಿರುವಂತೆಯೇ, ಕಾಟಮರಾಜನ ಕಥೆಗಳನ್ನು ಹಾಡುವ ಹಕ್ಕು ಬೀರಿನೀಡುವಿನ ಸಂತತಿಯವರಾದ ಕೊಂಬುಗಳವರಿಗೆ ಮಾತ್ರವೇ ಇದೆ. ಕೆಲವು ಪ್ರದೇಶಗಳಲ್ಲಿ 'ಪೂಜಗೊಲ್ಲಲು', 'ಪಿಕಿಲಿವಾರು', 'ಎರ್ರಗೊಲ್ಲಲು', ಮುಂತಾದವರು ಕೂಡ ಈ ಕಥೆಗಳನ್ನು ಹಾಡುತ್ತಿದ್ದಾರೆ. ಆದರೆ ನಿಜಕ್ಕೆ ಗೊಲ್ಲರು ಈ ಕಥೆಗಳನ್ನು ಹಾಡಬಾರದು. ಪಲ್ನಾಟಿ ವೀರರ ಕಥೆಗಳನ್ನು ವೀರ ವಿದ್ಯಾವಂತರೇ ಅಲ್ಲದೆ 'ತೆಲಗಲು', 'ಕಂಸಾಲುಲು', 'ಪಿಚ್ಚುಕುಂಟ್ಲು' ಮುಂತಾದವರು ಕೂಡ ಹಾಡುತ್ತಿದ್ದಂತೆ, ಕಾಟಮ ರಾಜನ ಕಥೆಗಳನ್ನು ವಿವಿಧ ಶಾಖೆಗಳಿಗೆ ಸೇರಿದ ಗೊಲ್ಲರೂ ಹಾಡುವುದು ನಡೆಯುತ್ತಿದೆ. ಕೊಂಬುಗಳವರಿಗೆ ವಾಕ್‌ಶುದ್ಧಿ ಕಮ್ಮಿ ಎಂದು ಆದ್ದರಿಂದ ಈ ಗಾಥಾ ಗಾಯನಕ್ಕೆ ಉಪಕ್ರಮಿಸಿದೆವೆಂದು ಕೆಲವು ಯಾದವ ಗಾಥಾಕಾರರು ನಮ್ಮೊಂದಿಗೆ ಹೇಳಿದರು.

ಕಾಟಮರಾಜು – ನಲ್ಲಸಿದ್ಧಿಯರ ಯುದ್ಧ ಜರುಗಿದ ತರುವಾಯ, ಕಾಟಮರಾಜನ ಸೋದರನಾದ 'ಭಕ್ತಿರನ್ನ' ಬೀರಿನೀಡುವಿನ ಸಂತತಿಯಾದ ಮಾದಿಗರನ್ನು ಕರೆದು ಯಾದವರ ಕಥೆಗಳನ್ನು ಲೋಕದಲ್ಲಿ ವ್ಯಾಪಿಸಲು ಅನುಮತಿ ಕೊಟ್ಟನೆಂದು ಹೇಳುತ್ತಾರೆ. ಭಕ್ತಿರನ್ನ ಕಾಶಿಯಿಂದ ತನ್ನೊಂದಿಗೆ ಹನ್ನೆರಡು ಜನ ಶಿಷ್ಯರನ್ನು ತಂದನು. ಅವರೆಲ್ಲರೂ ಯಾದವರ ಕಥೆಗಳನ್ನು ವ್ಯಾಪಿಸುವಂತೆ ಮಾಡಲು ವಿನಿಯೋಗಿಸಲ್ಪಟ್ಟರು. ತನ್ನ ಶಿಷ್ಯರೊಂದಿಗೆ ಕೊಂಬುಗಳವರೂ ಸಹ ಹದಿಮೂರನೆಯ ಭಾಗಕ್ಕೆ ಅರ್ಹರೆಂದು ಭಕ್ತಿರನ್ನ ನಿಶ್ಚಯಿಸಿದನಂತೆ. ಕಾಟಮರಾಜನ ಕಥೆಗಳನ್ನು ಹೇಳುತ್ತಾ, ಯಾದವರನ್ನು ಆಶ್ರಯಿಸಿ ಜೀವಿಸಲ್ಪಡಬೇಕೆಂದೂ ಭಕ್ತಿರನ್ನ ಕೊಂಬುಗಳವರಿಗೆ ಹೇಳಿದನಂತೆ.

ಈ ಕೊಂಬುಗಳವರು ಯಾವ ಯಾದವನ ಮನೆಯ ಮುಂದೆ ಕಥೆ ಹೇಳಿದರೂ, ಆತನು ಇವರನ್ನು ಸನ್ಮಾನಿಸಿ ತೀರಲೇಬೇಕು. ಹಾಗೆ ಮಾಡದಿದ್ದರೆ ಈ ಕೊಂಬುಗಳವರು ಆತನ ಮನೆಯ ಮುಂದೆ 'ಗುಡಾರು' (ಬೀಡು) ಹಾಕುತ್ತಾರೆ. (ಇದೂ ಸಹ ಭಕ್ತಿರನ್ನನ ಶಾಸನವಂತೆ). ಹೀಗೆ ಬೀಡು ಬಿಟ್ಟರೆ ಆ ಮನೆಯವರಿಗೆ ಅಶುಭ ಉಂಟಾಗುತ್ತದೆ. ಹೀಗೆ ಬೀಡು ಬಿಟ್ಟನಂತರವೂ ಆ ಮನೆಯವರು ಈ ಕೊಂಬುಗಳವರನ್ನು ಗೌರವಿಸದಿದ್ದರೆ ಆ ಗುಡಾರವನ್ನು ಕಿತ್ತು ಬನ್ನಿ ಎಂದು ಭಕ್ತಿರನ್ನ ಹೇಳಿದನಂತೆ. ಹೀಗೆ ಮನೆಯ ಮುಂದೆ ಗುಡಾರವನ್ನು ಕಿತ್ತುಹಾಕಿದರೆ ಆ ಮನೆಯಲ್ಲಿನ ಯಾದವರೆಲ್ಲರೂ ನಶಿಸಿಹೋಗುತ್ತಾರೆಂದು ಭಕ್ತಿರನ್ನನ ಶಾಪವಂತೆ. ಆದ್ದರಿಂದ ಕೊಂಬುಗಳವರನ್ನು ಯಾದವರು ಅತ್ಯಂತ ಭಕ್ತಿಶ್ರದ್ಧೆಗಳಿಂದ ಆದರಿಸುತ್ತಾರೆ. ಈ ಭಕ್ತಿರನ್ನನ ಶಾಪದ ಮಾತು ಹೇಗಿದ್ದರೂ, ತಮ್ಮ ಪೂರ್ವಿಕರ ಕಥೆಗಳನ್ನು ಕಾಪಾಡಿದವರಾದುದರಿಂದ ಈ ಕೊಂಬುಗಳವರ ಮೇಲೆ ಯಾದವರಿಗೆ ಅಭಿಮಾನವಿರುವುದು ಸಹಜವಲ್ಲವೇ!

ಕಾಟಮರಾಜನ ಕಥೆಗಳನ್ನು ಹಾಡುವ ಗಾಥಾಕಾರರು 'ಬಡುಗುಲ ಆಚಾರ'ಕ್ಕೆ ಸೇರಿದವರು. ಈ ಬಡುಗುಲ ಆಚಾರಕ್ಕೆ ಆರು ಮುಖ್ಯ ವಸ್ತುಗಳಿರಬೇಕು. ಅವು: 'ಗುಡಾರು', 'ಕೊಮ್ಮು', 'ವೀರಣಮು', 'ಜೊಲ್ಲಾವು', 'ವೀರದ್ರಾಡು', 'ಬಸವದೇವುಡು', ಇವುಗಳನ್ನು ಕುರಿತು ಸ್ವಲ್ಪ ವಿವರಿಸುತ್ತೇನೆ:

(1) **ಗುಡಾರು** (ಗುಡಾರ):

ಕಥೆಯನ್ನು ಹೇಳುವ ಪ್ರದೇಶದಲ್ಲಿ ಬಟ್ಟೆಗಳಿಂದ ದೊಡ್ಡ ಗುಡಾರ ಹಾಕುತ್ತಾರೆ. ಆ ಗುಡಾರದೊಳಗೆ ಗೋಡೆಗಳಿಗೆ ಯಾದವರ ಕುಲದೈವವಾದ ಗಂಗೆ. ಕಾಟಮರಾಜನ ಕಥೆಗಳಲ್ಲಿನ ಪ್ರಧಾನ ಘಟ್ಟಗಳು ಚಿತ್ರಿಸಲ್ಪಟ್ಟ ದೊಡ್ಡ ದೊಡ್ಡ ಬಟ್ಟೆಗಳನ್ನು ಜೋಡಿಸುತ್ತಾರೆ. ಈ ಬಟ್ಟೆಗಳಿಗೆ 'ತೆರಚೀರಲು' (ತೆರೆಸೀರೆಗಳು) ಎಂದು ಹೆಸರು. ಈ ತೆರೆ ಸೀರೆಗಳಿಂದಲೇ ಈ ಗಾಥಾಕಾರರಿಗೆ 'ತೆರಚೀರ ಭಕ್ತುಲು' (ತೆರೆ ಸೀರೆಯ ಭಕ್ತರು) ಎಂಬ ಹೆಸರು ಬಂದಿದೆ. ತೆಲಂಗಾಣದಲ್ಲಿ 'ಪಾಂಡವುಲವಾರು' ಎಂಬ ಜನಪದ ಗಾಯಕರೂ ಸಹ ಹೀಗೆಯೇ ಕಥೆಯಲ್ಲಿನ ಪ್ರಧಾನ ಘಟ್ಟಗಳನ್ನು ಚಿತ್ರರೂಪದಲ್ಲಿ ಪ್ರದರ್ಶಿಸಿ ಭಾರತದ ಕಥೆಗಳನ್ನು ಹಾಡುತ್ತಿರುತ್ತಾರೆ. ಇಂಗ್ಲೆಂಡ್‌ನಂತಹ ವಿದೇಶಗಳಲ್ಲೂ ಸಹ ವೀರಗಾಥಾ ಗಾಯನದಲ್ಲಿ ಇಂತಹ ಚಿತ್ರರೂಪ ಪ್ರದರ್ಶನ ಇದೆಯೆಂದು ತಿಳಿದು ಬರುತ್ತದೆ.

(2) **ಕೊಮ್ಮು** (ಕೊಂಬು):

ಹಿತ್ತಾಳೆಯಿಂದ ಮಾಡಲ್ಪಟ್ಟು. ಡೊಂಕಾಗಿ ಉದ್ದವಾಗಿರುವ ಕೊಳವೆಗೆ ಕೊಂಬು ಎಂದು ಹೆಸರು. ಕಥಾಗಾಯನ ಪ್ರಾರಂಭಿಸುವುದಕ್ಕೆ ಮೊದಲು. ಯಾದವರ ಗೋತ್ರಗಳನ್ನು ಹೇಳುವಾಗ, 'ತಾಸಕ'ಗಳನ್ನು ಹಾಡುವಾಗಲೂ. ಕೊಂಬುಗಳವರು ಈ ಕೊಂಬನ್ನು ಊದುತ್ತಾರೆ. ಈ ಕೊಂಬಿನ ಧ್ವನಿ ಶಂಖಾರವದಂತೆ ಭಯವನ್ನು ಉಂಟುಮಾಡುತ್ತದೆ.

(3) **ವೀರಣಮುಲು** (ವೀರಣಗಳು):

ಅಂಕಮ್ಮನ ಕಥೆಗಳಲ್ಲೂ ಪಲ್ನಾಟಿವೀರರ ಕಥೆಗಳಲ್ಲೂ ಉಪಯೋಗಿಸುವ ಪಂಬಜೋಡುವಿನಂತಹವುಗಳೇ ಈ ವೀರಣಗಳು. ಆದರೂ ಪಂಬಜೋಡುವಿಗೂ ಇವಕ್ಕೂ ಸ್ವಲ್ಪ ಭೇದವಿದೆ. ಪಂಬಜೋಡು ದೊಡ್ಡದು. ಅದರ ಶಬ್ದ ಬಹಳ ಹೆಚ್ಚು. ಅದರಮೇಲೆ ಗಂಟೆಗಳಿರುತ್ತವೆ. ಪಲ್ನಾಟಿ ಕಥೆಗಳಲ್ಲಿ ಉಪಯೋಗಿಸುವ ಪಂಬಜೋಡನ್ನು ವೀರಜೋಡು ಎನ್ನುತ್ತಾರೆ. ಈ ಕಾಟಮರಾಜನ ಕಥೆಯಲ್ಲಿ ಬಳಸುವ ವೀರಣಗಳು ವೀರಜೋಡುವಿಗಿಂತ ಚಿಕ್ಕದು. ಶಬ್ದವೂ ಕಡಿಮೆಯೇ. ಪಂಬಜೋಡುವಿನಂತೆ ಈ ವೀರಣಗಳೂ ಸಹ ಎರಡು ಇರುತ್ತವೆ. ಒಂದು ವಾದ್ಯ

ಕಾರನ ತೊಡೆಯಮೇಲೆ ತಗುಲುತ್ತಿರುತ್ತದೆ. ಅದರ ಮೇಲೆ ತಗಲುತ್ತಾ ಎರಡನೆ ಯದಿರುತ್ತದೆ. ಮೊದಲನೆಯದು ಶೃತಿಕಡಿಮೆ. ಎರಡನೆಯದು ಶೃತಿಹೆಚ್ಚು. ಮೊದಲನೆಯ ವೀರಣವು ಬೇವು ಅಥವಾ 'ರೇಲ' (ಒಂದು ಜಾತಿಯ ಮರ) ಚಕ್ಕೆಯಿಂದ ಮಾಡಲ್ಪಟ್ಟಿರುತ್ತದೆ. ಎರಡನೆಯದು ಹಿತ್ತಾಳೆಯಿಂದ ಮಾಡಲ್ಪಟ್ಟಿರು ತ್ತದೆ. (ಪಲ್ನಾಟಿ ವೀರರ ಕಥೆಗಳಲ್ಲಿ ಉಪಯೋಗಿಸುವ ವೀರ ಜೋಡುವಿನಲ್ಲಿ ಎರಡೂ ಹಿತ್ತಾಳೆಯಿಂದಲೇ ಮಾಡಲ್ಪಟ್ಟಿರುತ್ತವೆ). ಈ ವೀರಣಗಳು ಬಳ್ಳದಷ್ಟು ಅಗಲವಾಗಿ ಎರಡು ಗೇಣುದ್ದವಿರುತ್ತವೆ. ಪಲ್ನಾಟಿ ವೀರ ಜೋಡುವಿನಲ್ಲಿ ಮೊದಲನೆಯದು ಹೆಚ್ಚೂ ಕಮ್ಮಿ ವೀರಣದಷ್ಟೇ ಇರುತ್ತದೆ. ಆದರೆ ಎರಡನೆಯದು ಮಾತ್ರ ಇದಕ್ಕೆ ಎರಡರಷ್ಟು ಪ್ರಮಾಣದಲ್ಲಿರುತ್ತದೆ. ಈ ವೀರಣಗಳಿಗೆ ಮೇಕೆ ಅಥವಾ ಜಿಂಕೆಯ ಚರ್ಮವನ್ನು ಉಪಯೋಗಿಸುತ್ತಾರೆ.

(4) **ಬೊಲ್ಲಾವು** (ಬಿಳಿಯ ಹಸು):

ಇದು ಎರ್ರಗಡ್ಡಪಾಡುವಿನ ಹೋರಾಟದಲ್ಲಿ ಭಾಗವಹಿಸಿದ ಒಂದು ಕೊಂಬಿನ ಬಿಳಿಯ ಹಸುವಿನ ಗೊಂಬೆ. (ಇದು ವಿಷ್ಣು ಮೂರ್ತಿಯ ಅವತಾರವೆಂದು ಯಾದವರು ಭಾವಿಸುತ್ತಾರೆ). ಇದನ್ನು ಮರದ ಚಕ್ಕೆಯಿಂದಾಗಲಿ, ಹಿತ್ತಾಳೆಯಿಂದಾಗಲಿ ಮಾಡು ತ್ತಾರೆ. ತಾನಕಗಳನ್ನು ಹಾಡುತ್ತಿರುವಾಗ, ತಾನಕಗಳಿಗೆ ಸಂಬಂಧಿಸಿದವರು ಈ ಹಸುವಿನ ಗೊಂಬೆಯನ್ನು ತಲೆಯ ಮೇಲೆ ಇಟ್ಟುಕೊಂಡು ಮೈಮೇಲೆ ಬಂದು ಕುಣಿಯುತ್ತಾರೆ.

(5) **ವೀರದ್ರಾಡು** (ವೀರನಹಗ್ಗ):

ಪಲ್ನಾಟಿ ವೀರರ ಕಥೆಗಳಲ್ಲಿ ಬ್ರಹ್ಮನಾಯುಡು ಮಾಡಿದ ಶಿವನಂದುಲ ಕೋಟೆ ಯುದ್ಧದಲ್ಲಿ ಯಾದವರು ಅವನಿಗೆ ಸಹಾಯ ಮಾಡಿದರಂತೆ. ಆದ್ದರಿಂದ ಬ್ರಹ್ಮ ನಾಯುಡು ಶಿವನಂದುಲ ಕೋಟೆಯ ದೋಚುವಿಕೆಯಲ್ಲಿ ಲಭಿಸಿದ 'ಗುಡಾರು', 'ವೀರ ದ್ರಾಳ್ಳು'. ಗಂಗ ಮತ್ತು ಪೋತು ರಾಜರ ವಿಗ್ರಹಗಳು. ಯಾದವರಿಗೆ ಬಹುಮಾನವಾಗಿ ಕೊಟ್ಟನಂತೆ. ತಾನಕಗಳನ್ನು ಹಾಡುತ್ತಿರುವಾಗ ಮೈಮೇಲೆ ಬಂದು ಕುಣಿಯುವವರನ್ನು ಈ ವೀರನ ಹಗ್ಗಗಳಿಂದ ಕಾಲುಗಳಮೇಲೆ ಕೈಗಳ ಮೇಲೆ ಹೊಡೆಯುತ್ತಾರೆ. ಈ ವೀರನ ಹಗ್ಗಗಳು ಮೂರು ಗಂಟುಗಳಿಂದಿರುವ ಬಾರಷ್ಟು ಹಗ್ಗಗಳು,

(6) **ಬಸವದೇವ್ರುಡು** (ಬಸವ ದೇವ):

ಯರ್ರಗಡ್ಡ ಪಾಡುವಿನಲ್ಲಿ ಯಾದವರು ಬಿದ್ದುಹೋದರೆಂಬ ವಾರ್ತೆಯನ್ನು ದೊನಕೊಂಡಕ್ಕೆ ತಂದವನು ಬಸವದೇವ. ಈ ಬಸವದೇವನ ವಿಗ್ರಹವೂ ಸಹ ಗಾಥಾ ಕಾರರ ಹತ್ತಿರವಿರುತ್ತದೆ. ಇದನ್ನು ಇವರು ಪೂಜಿಸುತ್ತಾರೆ.

ಕೊಂಬುಗಳವರು ಈ ಕಥೆಗಳನ್ನು ಹಾಡುತ್ತಿರುವಾಗ ವೀರಣಗಳನ್ನೇ ಅಲ್ಲದೆ, ಶೃತಿ ನಿಲ್ಲಿಸಿಕೊಳ್ಳಲು ತಿತ್ತಿ. ಲಯಕ್ಕೆ ತಾಳಗಳನ್ನೂ ಕೂಡ ಉಪಯೋಗಿಸುತ್ತಾರೆ. ಇದರಲ್ಲಿ ಪ್ರಧಾನ ಕಥೆಗಾರನಿಗೆ ಪಲ್ನಾಟಿವೀರರ ಕಥೆಗಾರನಿಗೆ ಇದ್ದಂತಹ ವೇಷ ವಿರುವುದಿಲ್ಲ. ಆದರೆ ನಿಲುವಂಗಿ, ಹನ್ನೆರಡು ಮಳ ಪೇಟ. ಕಾಲುಗಳಿಗೆ ಗೆಜ್ಜೆಗಳು, ನಡುಪಟ್ಟಿ. ಕೈಯಲ್ಲಿ ಕರವಸ್ತ್ರ ಮಾತ್ರವಿರುತ್ತದೆ. ಈ ಪ್ರಧಾನ ಕಥೆಗಾರನಿಗೆ ಮೂವರು ಹಿಮ್ಮೇಳಗಾರರಿರುತ್ತಾರೆ. ಇವರಲ್ಲಿ ಒಬ್ಬ ತಿತ್ತಿ ಹಿಡಿಯುತ್ತಾನೆ. ಎರಡನೆಯವನು ವೀರಣಗಳನ್ನು ಬಾಜಿಸುತ್ತಾನೆ. ಮೂರನೆಯವನು ತಾಳ ಹಾಕುತ್ತಾನೆ. ಇಷ್ಟೇ ಅಲ್ಲದೆ ಈ ಮೂವರಲ್ಲಿ ಇಬ್ಬರು ಕಥೆಗಾರನು ಹೇಳುತ್ತಿರುವುದಕ್ಕೆ 'ಅ......'ಗೊಡುತ್ತಾರೆ.

ಕಥೆಗಾರನು ಮೊದಲು ಗಣ ನಾಯಕನನ್ನು ಪ್ರಾರ್ಥಿಸುತ್ತಾನೆ. ನಂತರ ಗಂಗೆ ಯನ್ನು ಪ್ರಾರ್ಥಿಸುತ್ತಾನೆ. ಅನಂತರ ಕೆಲವು ಚಿಲ್ಲರೆ ಹಾಡುಗಳನ್ನು ಹಾಡುತ್ತಾನೆ. ಇವುಗಳಲ್ಲಿ ಸಾಧಾರಣವಾಗಿ ಬಿಳಿಯ ಹಸುವಿನ ಹಾಡು, 'ಏರುವ ಗಂಗೆಯ ಹಾಡು' (ನದಿ ಮಧ್ಯ ನೆಲಸಿದ ಗಂಗೆಗೆ 'ಏರುವ ಗಂಗೆ' ಎಂದು ಹೆಸರು). 'ಪಾಪನೂಕ' ಆಕೆಯ ಸುವ್ವಿ ಹಾಡುಗಳು (ಕಾಟಮರಾಜನ ತಂಗಿ ಪಾಪನೂಕ) ಇರುತ್ತವೆ. ಈ ಚಿಲ್ಲರೆ ಹಾಡುಗಳನ್ನು ಹಿಮ್ಮೇಳಗಾರರೂ ಸಹ ಹಾಡುತ್ತಿರುತ್ತಾರೆ.

5. **ಪಿಚ್ಚುಕುಂಟ್ಲು** (ಪಿಚ್ಚು ಕುಂಟರು):

'ಪಿಚ್ಚುಕ ಗುಂಟ್ಲು' – 'ಪಿಚ್ಚೆಕುಂಟ್ಲು' – 'ಪಿಚ್ಚುಕ ಕುಂಟ್ಲು' – 'ಭಿಕ್ಷಕುಂಟ್ಲು' 'ಪಿಚ್ಚು ಕುಂಟ್ಲು' – 'ಪಿಚ್ಚಿಕುಂಟ್ಲು' ಇತ್ಯಾದಿ ವಿವಿಧನಾಮಗಳಿಂದ ಇವರು ಕರೆಯಲ್ಪಡು ತ್ತಿದ್ದಾರೆ. 'ಪಿಚ್ಚುಕ' ಶಬ್ದವು 'ಭಿಕ್ಷುಕ' ಶಬ್ದ ಭವವಾಗಿರಬಹುದು. ಈ ಪಿಚ್ಚುಕುಂಟ್ಲು ರೆಡ್ಡಿಗಳನ್ನು. ಯಾದವರನ್ನು ಯಾಚಿಸುತ್ತಾರೆ. ಗುಂಟೂರು. ಕೃಷ್ಣಾಜಿಲ್ಲೆಗಳಲ್ಲಿ. ಕಮ್ಮವಾರಿಗೂ ಸಹ ಪಿಚ್ಚುಕುಂಟ್ಲುರೇ ಗೋತ್ರಗಳನ್ನು ಹೇಳುತ್ತಿದ್ದಾರೆ. ಏನಾದರೂ ಇವರು ಪ್ರಧಾನವಾಗಿ ರೆಡ್ಡಿಗಳಿಗೆ– ಅವರಲ್ಲೂ 'ಮೋಟಾಟಿರೆಡ್ಡಿ'ಗಳಿಗೆ ವಂದಿಮಾಗಧರು. ರಾಯಲ ಸೀಮೆಯಲ್ಲಿ ಈ ಮೋಟಾಟಿರೆಡ್ಡಿಗಳು. ರಾಜ್ಯಗಳನ್ನಾಳಿದ ಪ್ರಭುಗಳು. ನೊಸ್ಸಂಕೋಟೆಯನ್ನು ಪಾಲಿಸಿದ ಉಯ್ಯಾಲವಾಡ ನಾರಸಿಂಹಾರೆಡ್ಡಿ ಮೋಟಾಟಿಕುಲ ದವನೇ. ಈತನು ಬ್ರಿಟಿಷರ ವಿರುದ್ಧ ದಂಗೆ ಎದ್ದು ದೊಡ್ಡ ಕ್ರಾಂತಿಯನ್ನು ಎಬ್ಬಿ ಸಿದನು – (ಕ್ರಿ. ಶ. 1845–47). ಈ ಕ್ರಾಂತಿಯ ಬಗ್ಗೆ ಒಂದು ಒಳ್ಳೆಯ ವೀರಗಾಥೆ (ಲಾವಣಿ) ಇದೆ. ಈ ವೀರ ಗಾಥೆಯನ್ನು ಪಿಚ್ಚುಕುಂಟರೇ ಹಾಡುತ್ತಿದ್ದಾರೆ. ಪಾಲ್ಕುರಿಕೆ ಸೋಮನಾಥನು (ಕ್ರಿ. ಶ. ಹದಿಮೂರನೆಯ ಶತಮಾನದ ಉತ್ತರಾರ್ಧ) ತನ್ನ 'ಪಂಡಿ ತಾರಾಧ್ಯ ಚರಿತ್ರೆ'ಯಲ್ಲಿ ಪಿಚ್ಚುಕುಂಟರನ್ನು ವಿಕಲಾಂಗರನ್ನಾಗಿ ಹೆಸರಿಸಿದ್ದಾನೆ.

ಈ ಪಿಚ್ಚುಕುಂಟರ ಹುಟ್ಟುವಿಕೆಯನ್ನು ಕುರಿತು ಎರಡು ವಿಚಿತ್ರ ಕಥೆಗಳನ್ನು ಡಾ। ಬಿ. ರಾಮರಾಜು ಅವರು ಹೇಳಿದ್ದಾರೆ. (ನೋಡಿ 'ತೆಲುಗು ಜಾನಪದ ಗೇಯ

ಸಾಹಿತ್ಯಮು' ಪುಟ. ೭೬೩). ನನಗೆ ಬೇರೊಂದು ಕಥೆ ಲಭಿಸಿದೆ. ಪಿಚ್ಚಕುಂಟರು ರೆಡ್ಡಿಗಳಿಗೆ ಗೋತ್ರಗಳನ್ನು ಹೇಳುವುದರ ಜೊತೆಗೆ ಅವರ ಪೂರ್ವಜರನ್ನು ಕುರಿತ ವೀರಗಾಥೆಗಳನ್ನೂ ಸಹ ಗಾಯನ ಮಾಡುತ್ತಿರುತ್ತಾರೆ. ರಾಯಲ ಸೀಮೆಯಲ್ಲಿನ ಪಿಚ್ಚ ಕುಂಟರು 'ಕುಂಟಿ ಮಲ್ಲಾರೆಡ್ಡಿ' ಕಥೆಯೆಂಬ 'ರೆಡ್ಡಿಪುರಾಣವನ್ನು (ರೆಡ್ಡಿಗಳ ಪುರಾಣವನ್ನು). 'ಪಲನಾಟಿ ರೆಡ್ಡಿ ಕಥೆ' ಎಂಬ ಶೈವ ಜನಪದ ಗಾಥೆಯನ್ನು. 'ವೇಮಾರೆಡ್ಡಿ ಕಥೆ' ಎಂಬ ಕವಿಯೋಗಿ ವೇಮನನ ಚರಿತ್ರೆಯನ್ನು. (ಉಯ್ಯಾಲವಾಡ ನಾರಸಿಂಹಾ ರೆಡ್ಡಿಯ ಕಥೆಯನ್ನೂ) ಹಾಡುತ್ತಿದ್ದಾರೆ. ಇವುಗಳಲ್ಲಿ. ಕುಂಟಿ ಮಲ್ಲಾರೆಡ್ಡಿ ಕಥೆಯಲ್ಲಿ ಪಿಚ್ಚುಕುಂಟರು ರೆಡ್ಡಿಗಳ ಸಂತಾನವೆಂದು ಹೇಳಲ್ಪಟ್ಟಿದ್ದಾರೆ. ಇವರ ವಂಶ ವೃಕ್ಷವು ಆ ಕಥೆಯಲ್ಲಿ ಈ ರೀತಿ ಇದೆ:—

ಕಲ್ಪವೃಕ್ಷ
- ಆದಿರೆಡ್ಡಿ (ಹೆಂಡತಿ: ಆದೆಮ್ಮ)
  - ಬಚ್ಚಿರೆಡ್ಡಿ (ಹೆಂಡತಿ : ಪೊನ್ನಮ್ಮ)
    - ಉತ್ತಮಾರೆಡ್ಡಿ (ಹೆಂಡತಿ: ಪೆದ್ದಮಂಗಮ್ಮ)
      - ರೆಡ್ಲು (ಕಾಪುಲು)
    - ಸತ್ಯಮಾರೆಡ್ಡಿ (ಹೆಂಡತಿ: ಚಿನ್ನಮಂಗಮ್ಮ)
      - ಕುಂಟಿಮಲ್ಲಾರೆಡ್ಡಿ (ಹೆಂಡತಿ: ಪಿಚ್ಚಮ್ಮ)
        - ಪಿಚ್ಚುಕುಂಟ್ಲು
    - 3 4 5 6 7 8 9 10 11 12

ಕಲ್ಪವೃಕ್ಷದ ಕೆಳಗಡೆ ಆದಿರೆಡ್ಡಿ ಹುಟ್ಟಿದ. ಆದಿರೆಡ್ಡಿಯ ಹೆಂಡತಿ ಆದೆಮ್ಮ ಈ ದಂಪತಿಗಳಿಗೆ ಬಚ್ಚಿರೆಡ್ಡಿ ಹುಟ್ಟಿದ. ಬಚ್ಚಿರೆಡ್ಡಿಯ ಹೆಂಡತಿ ಪೊನ್ನಮ್ಮ. ಈಕೆಗೆ ಹನ್ನೆರಡು ಜನ ಗಂಡುಮಕ್ಕಳು ಹುಟ್ಟಿದರು. ಇವರಲ್ಲಿ ದೊಡ್ಡವನು ಉತ್ತಮಾ ರೆಡ್ಡಿ ಎರಡನೆಯವನು ಸತ್ಯಮಾರೆಡ್ಡಿ. ಉತ್ತಮಾರೆಡ್ಡಿಯ ಹೆಂಡತಿ ದೊಡ್ಡಮಂಗಮ್ಮ. ಸತ್ಯಮಾರೆಡ್ಡಿಯ ಹೆಂಡತಿ ಚಿಕ್ಕಮಂಗಮ್ಮ. ಉತ್ತಮಾ ರೆಡ್ಡಿಯ ಸಂತಾನವೇ ಇಂದಿನ ರೆಡ್ಡಿಗಳಲ್ಲಿನ ವಿವಿಧ ಶಾಖೆಗಳು. ಎರಡನೆಯವನಾದ ಸತ್ಯಮಾರೆಡ್ಡಿಗೆ ಶ್ರೀಶೈಲ ಮಲ್ಲಿಕಾರ್ಜುನನ ವರದಿಂದ ಕುಂಟಿಮಲ್ಲಾರೆಡ್ಡಿ ಹುಟ್ಟಿದ. ಇವನು ಕುಂಟ. ಆದ್ದರಿಂದಲೇ ಕುಂಟಿಮಲ್ಲಾರೆಡ್ಡಿ ಎಂಬ ಹೆಸರು ಬಂದಿದೆ. ಈತನ ಹೆಂಡತಿ ಹೆಸರು ಪಿಚ್ಚಮ್ಮ. ಹೆಸರು ಮಾತ್ರವಲ್ಲದೆ ಈಕೆ ನಿಜವಾಗಿಯೂ ಹುಚ್ಚಳಂತೆ. ಈ ದಂಪತಿಗಳ ಸಂತಾನವೇ ಪಿಚ್ಚುಕುಂಟ್ಲು. (ಹುಚ್ಚುಕುಂಟರು – ತಾಯಿ ಹುಚ್ಚಳಾದ್ದರಿಂದ 'ಪಿಚ್ಚಿ' ಎಂಬ ಪದವೂ. ತಂದೆ ಕುಂಟನಾದ್ದರಿಂದ 'ಕುಂಟ್ಲು' ಎಂಬ ಪದವೂ ಸೇರಿ 'ಪಿಚ್ಚುಕುಂಟ್ಲು' ಆದರು.)

ಮೇಲಿನ ಕಥೆಯ ಆಧಾರದಿಂದ ಪಿಚ್ಚುಕುಂಟರು ರೆಡ್ಡಿಗಳಿಗೆ ಸೋದರರೆಂದು ತಿಳಿಯುತ್ತದೆ. ಇಂದಿನ ರೆಡ್ಡಿಗಳೂ ಸಹ ಇವರನ್ನು ಸೋದರ ತುಲ್ಯರಂತೆ ಅಭಿಮಾನಿಸುತ್ತಾರೆ. ರೆಡ್ಡಿಗಳಲ್ಲಿ ಎಷ್ಟು ಉಪಶಾಖೆಗಳಿವೆಯೋ ಈ ಪಿಚ್ಚುಕುಂಟರಲ್ಲೂ ಅಷ್ಟು ಉಪಶಾಖೆಗಳಿವೆ.

ಡಾ। ರಾಮರಾಜು ಅವರು ಶೇಖರಿಸಿದ ಒಂದು ಕಥೆಯಲ್ಲಿ – ತ್ರಿಮೂರ್ತಿಗಳು ತಮ್ಮ ವಿವಾಹದ ಸಮಯದಲ್ಲಿ ತಮ್ಮ ಗೋತ್ರಗಳನ್ನು ಹೇಳಲೋಸುಗ ಒಬ್ಬ ಪಿಚ್ಚು ಕುಂಟನನ್ನು ಸೃಷ್ಟಿಸಿದರೆಂದೂ, ಆತನಿಗೆ ಒಂದು ಕಾಲು ಇಲ್ಲವೆಂದು. ಆತನ ಸಂತಾನವೇ ಇಂದಿನ ಪಿಚ್ಚುಕುಂಟ್ಲು ಎಂದಿದೆ. – ಎರಡನೆಯ ಕಥೆಯಲ್ಲಿ – ಏಳುಮಂದಿ ಯಾದವ ಕಾಂತೆಯರು ಸಂತಾನಕ್ಕೋಸ್ಕರ ಶಿವನನ್ನು ಕುರಿತು ತಪಸ್ಸುಮಾಡಿದರೆಂದೂ. ಶಿವನು ಅವರಿಗೆ ಒಬ್ಬ ಕುಂಟು ಹುಡುಗನನ್ನು ಕೊಟ್ಟು ಸಾಕಿ ಸಲಹಿ ಎಂದೂ ನಂತರ ಯಾದವ ಸ್ತ್ರೀಯರು ಗರ್ಭಿಣಿಯರಾಗಿ ಏಳು ಮಂದಿ ಹೆಣ್ಣು ಮಕ್ಕಳನ್ನು ಹೆತ್ತರೆಂದೂ. ಶಿವನ ಆಜ್ಞೆಯನ್ನು ಅನುಸರಿಸಿ ತಮ್ಮ ಹೆಣ್ಣು ಮಕ್ಕಳನ್ನು ಆ ಕುಂಟನಿಗೆ ಕೊಟ್ಟು ಮದುವೆ ಮಾಡಿದರೆಂದೂ. ಆತನ ಸಂತಾನವೇ ಪಿಚ್ಚುಕುಂಟ್ಲು ಎಂದಿದೆ.

ಪಿಚ್ಚುಕುಂಟ್ಲು ಎಲ್ಲರೂ ಶೈವರು. ಶ್ರೀಶೈಲಮಲ್ಲಿಕಾರ್ಜುನನು ಇವರ ಆರಾಧ್ಯ ದೈವ. ಇವರು ಹಾಡುವ ಎಲ್ಲ ಕಥೆಗಳಲ್ಲೂ ಮಲ್ಲಿಕಾರ್ಜುನನ ಪ್ರಸಕ್ತಿ ತಪ್ಪದೆ ಬರುತ್ತದೆ. ಜಂಗಮರು ಇವರಿಗೆ ಗುರುಗಳೂ ಮತ್ತು ಪುರೋಹಿತರು.

ರಾಯಲ ಸೀಮೆಯಲ್ಲಿನ ಪಿಚ್ಚುಕುಂಟ್ಲು ಎಲನಾಗಿರೆಡ್ಡಿ ಕಥೆಯನ್ನು ಎಂಟು ರಾತ್ರಿಗಳು ಹಾಡುತ್ತಾರೆ. ಗುಂಟೂರು ಜಿಲ್ಲೆಯ ಪಿಚ್ಚುಕುಂಟ್ಲು ಕೆಲವರು ಪಲ್ನಾಟಿ ವೀರ ಕಥೆಗಳನ್ನು ಸಹ ಹಾಡುತ್ತಿದ್ದಾರೆ. ಪಿಚ್ಚುಕುಂಟ್ಲರು ಮೊದಲು ಗಂಟೆ. ತಿತ್ತಿ ಮಾತ್ರವೇ ಉಪಯೋಗಿಸಿ ಕಥೆಗಳನ್ನು ಹಾಡುತ್ತಿದ್ದರು. ನಂತರ ಜಂಗಮರ ಪ್ರಭಾವದಿಂದಲೋ ಏನೋ, ತಂಬೂರಿ. ಗುಮ್ಮೆಟ್ಲಗಳನ್ನೂ ಉಪಯೋಗಿಸಲು ಮೊದಲು ಮಾಡಿದರು. ಈ ಗುಮ್ಮೆಟ್ಲು ಹಿತ್ತಾಳೆಯಿಂದ ಮಾಡಲ್ಪಟ್ಟವು. ತೆಲಂಗಾಣ ದಲ್ಲಿನ ಜಂಗಮರು ಉಪಯೋಗಿಸುವ 'ಬುಡಿಗೆಲು' ಸಹ ಇಂತಹವೇ. ತೆಲಂಗಾಣದಲ್ಲಿನ ಪಿಚ್ಚುಕುಂಟ್ಲು ಜಂಗಮರು ಹಾಡುವ ವೀರಗಾಥೆಗಳನ್ನು ಹಾಡುತ್ತಿದ್ದಾರೆ.

ಗಾಥಾಕಾರರು ಸಾಧಾರಣವಾಗಿ ನಿಂತು ಕುಣಿಯುತ್ತಾ ವೀರ ಗಾಥೆಗಳನ್ನು ಹಾಡುತ್ತಿರುತ್ತಾರೆ. ಆದರೆ ರಾಯಲ ಸೀಮೆಯಲ್ಲಿನ ಪಿಚ್ಚು ಕುಂಟ್ಲು ಕುಳಿತುಕೊಂಡೇ ಹಾಡುತ್ತಾರೆ. ತೆಲಂಗಾಣದಲ್ಲಿನ 'ಡಕ್ಕಲವಾರು'. 'ಮಾಷ್ಟೀಲು' ಸಹ. ಇವರಂತೆಯೇ ಕುಳಿತು ಕಥಾಗಾಯನ ಮಾಡುತ್ತಾರೆ.

6. **ಗೊಲ್ಲ ಸುದ್ದುಲವಾರು** (ಗೊಲ್ಲ ಸೂಕ್ತಿಗಳವರು):

'ಗೊಲ್ಲ ಸೂಕ್ತುಲು' (ಗೊಲ್ಲರ ಸೂಕ್ತಿಗಳು) ಎಂಬಶಬ್ದದಿಂದ 'ಗೊಲ್ಲಸುದ್ದುಲು' ಎಂಬ ಶಬ್ದ ಏರ್ಪಟ್ಟಿತು. ಕಾಲಕ್ರಮದಲ್ಲಿ ಇದು ಕಾಟಮ ರಾಜನ ಕಥೆಗಳನ್ನು ಹಾಡುವ

ಒಂದು ವರ್ಗಕ್ಕೆ ಹೆಸರಾಗಿ ಬದಲಾಗಿದೆ. ಈ ಗೊಲ್ಲಸುದ್ದುಲವಾರು 'ಬಡುಗುಲ' ಆಚಾರಕ್ಕೆ ಸೇರಿದ ಗೊಲ್ಲರಲ್ಲಿ ಒಂದು ಶಾಖೆ. ಇವರು ಯಾದವರನ್ನು ಯಾಚಿಸುತ್ತಾರೆ. ಸುದ್ದುಗಳನ್ನು (ಸೂಕ್ತಿಗಳನ್ನು) ಹಾಡುವ ಗೊಲ್ಲರಾದ್ದರಿಂದ ಇವರಿಗೆ 'ಸುದ್ದುಲ ಗೊಲ್ಲಲು' ಎಂಬ ನಾಮಾಂತರವಿದೆ. ರಾಯಲಸೀಮೆಯಲ್ಲಿ ಇವರನ್ನು 'ಸುದ್ದುಲನ್ನಲು' ಎನ್ನುತ್ತಾರೆ. ನೆಲ್ಲೂರು, ಪ್ರಕಾಶಂ ಜಿಲ್ಲೆಗಳಲ್ಲಿ ಇವರನ್ನು 'ಯಾಚಕುಲು' ಎಂದೂ 'ತೆರಚೀರ ಭಕ್ತುಲು' ಎಂದೂ ಕರೆಯುತ್ತಾರೆ. ಇವರು ಪೂಜಗೊಲ್ಲರು. (ಯಾದವರಲ್ಲಿ ಒಂದು ಶಾಖೆ). ತೆಲಂಗಾಣದಲ್ಲಿ 'ಎರ್ರಗೊಲ್ಲಲು' (ಕೆಂಪುಗೊಲ್ಲರು – ಇದು ಯಾದವರಲ್ಲಿ ಇನ್ನೊಂದು ಶಾಖೆ) ಈ ವೃತ್ತಿಯಲ್ಲಿದ್ದಾರೆ. ಈ ಸುದ್ದುಗಳವರು ಮೇಕೆಗಳನ್ನು ಸಾಕುತ್ತಾರೆ.

ಕಾಟಮರಾಜನ ಚಿಕ್ಕಪ್ಪನ ಮಗನಾದ 'ಭಕ್ತಿರನ್ನ' ಕಾಶಿಯಿಂದ ತನ್ನೊಂದಿಗೆ ಹನ್ನೆರಡು ಜನ ಶಿಷ್ಯರನ್ನು ಕರೆತಂದನೆಂದೂ, ಅವರನ್ನು ಕಾಟಮರಾಜನ ಕಥೆಗಳನ್ನು ಗಾಯನ ಮಾಡುತ್ತಾ ಯಾದವರನ್ನು ಯಾಚಿಸಿ ಬದುಕಿ ಎಂದು ಹೇಳಿದನೆಂದೂ ಆ ಶಿಷ್ಯರ ಸಂತಾನವೇ ಇಂದಿನ ಗೊಲ್ಲಸುದ್ದುಗಳವರೆಂದು ಒಂದು ಪ್ರತೀತಿ. ಈ ಹನ್ನೆರಡು ಜನ ಶಿಷ್ಯರಿಗೆ ಅಲ್ಲದೇ ಹದಿಮೂರನೆಯವನಾಗಿ ಕೊಂಬುಗಳವನಿಗೂ ಸಹ ಭಕ್ತಿರನ್ನ ಕಾಟಮರಾಜನ ಕಥೆಯನ್ನು ಹಾಡುವ ಅಧಿಕಾರ ಕೊಟ್ಟನೆಂದು ಹೇಳುತ್ತಾರೆ. ಪಲ್ನಾಟಿ ವೀರರ ಕಥೆಗಳನ್ನು ಹಾಡುವ ಅಧಿಕಾರ ಹೊಲೆಯರಾದ ವೀರವಿದ್ಯಾವಂತರಿಗಿರುವಂತೆಯೇ, ಕಾಟಮರಾಜನ ಕಥೆಗಳನ್ನು ಹಾಡುವ ಅಧಿಕಾರವು ನಿಜಕ್ಕೂ ಮಾದಿಗರಾದ ಕೊಂಬುಗಳವರದು ಮಾತ್ರ. ಗೊಲ್ಲಸುದ್ದುಲು ಅಥವಾ ಸುದ್ದುಲಗೊಲ್ಲಲು ಕೊಂಬುಗಳವರನಂತರ ಹೇಳತಕ್ಕವರು ಮಾತ್ರ.

ಈ ಗೊಲ್ಲಸುದ್ದುಗಳವರು ದೊಡ್ಡ ಗುಡಾರವನ್ನು ಹಾಕಿ, ಅದರಲ್ಲಿ ಕಾಟಮರಾಜನ ಕಥಾವೃತ್ತಾಂತಗಳನ್ನು ಗೊಂಬೆಗಳ ರೂಪದಲ್ಲಿ ಚಿತ್ರಿಸಲ್ಪಟ್ಟ ತೆರೆ ಸೀರೆಯನ್ನು ಕಟ್ಟಿ, ವೀರಣಗಳು, ಕೊಂಬುಗಳು, ತಾಳಗಳು, ಶ್ರುತಿ, ಮುಂತಾದ ವಾದ್ಯಗಳಿಂದ ಆ ಗುಡಾರದಲ್ಲಿ ಕಾಟಮರಾಜನ ಕಥೆಗಳನ್ನು ಹಾಡುತ್ತಾರೆ.

ಅಯ್ಯಲರಾಜು ನಾರಾಯಣಾಮಾತ್ಯುಡು ಎಂಬ ಕವಿ ತನ್ನ 'ಹಂಸವಿಂಶತಿ' ಎಂಬ ಕಾವ್ಯದಲ್ಲಿ ಸುದ್ದುಲ ಗೊಲ್ಲರನ್ನು ವಿಪುಲವಾಗಿ ವರ್ಣಿಸಿದ್ದಾನೆ.

> "ಕೊಮ್ಮುಲು, ವೀರಣಾಲು, ಜಿಗಿಗುಲ್ಕೆಡು ವ್ರಾತಲ ಕೃಷ್ಣಲೀಲಲಂ
> ಗ್ರಮ್ಮುಗುಡಾರು, ವೀರುಡಗು ಕಾಟಮರಾಜು ಕಥಾನುಲಾಪಮುಲ್
> ಬಮ್ಮೆನ ಪ್ರಸ್ತಿಕಾಲು, ಮುಖಪಟ್ಟಿಡಿ ಕಟ್ಟು ರುಮಾಲಲು, ನ್ನೆಜಾ
> ಸೊಮ್ಮುಲು, ನಾಮಮುಲ್ ವೆಲಯು ಸುದ್ದುಲಗೊಲ್ಲಲು ವಚ್ಚಿರೆಂತಯುನ್"

(ಕೊಂಬುಗಳು, ವೀರಣಗಳು, ತಳತಳ ಹೊಳೆಯುವ ಕೃಷ್ಣಲೀಲೆಗಳನ್ನು ತೋರಿಸುವ ಚಿತ್ರಗಳಿಂದ ಕೂಡಿದ ಗುಡಾರಗಳು, ವೀರನಾದಂತಹ ಕಾಟಮರಾಜನ ಕಥೆಗಳು

ಬರೆಯಲ್ಪಟ್ಟ ಪುಸ್ತಕಗಳು: ಪೇಟ ಸುತ್ತುವ ರುಮಾಲುಗಳು, ಸುಂದರವಾದ ಆಭರಣಗಳು: ನಾಮಗಳು – ಇವುಗಳಿಂದ ಒಪ್ಪುತ್ತಿದ್ದ ಸುದ್ದುಲಗೊಲ್ಲರು ಬಂದರು).

7. **ಪೊಡಪೋತುಲವಾರು** (ಪೊಡಪೋತುಗಳವರು):

ವಿಶಾಖ ಪಟ್ಟಣಂ ಜಿಲ್ಲೆಯಲ್ಲಿ ಯಾದವರ ಗುರುಗಳಾಗಿ ಹೇಳಲ್ಪಡುವ ಒಂದು ಪ್ರತ್ಯೇಕವಾದ ಜಾತಿ ಇದೆ. ಇವರನ್ನು 'ಪೊಡಪೋತುಲವಾರು' ಎಂದು ಕರೆಯುತ್ತಾರೆ. ಇವರು ಕೊಂಬುಗಳವರಂತಹವರೇನೋ ತಿಳಿಯದು. ಯಾದವ ಕುಲಕ್ಕೆ ಸೇರಿದವರು ಮಾತ್ರವಲ್ಲ. ಇವರು ಯಾದವರ ಯಾಚಕರು ಮತ್ತು ಗುರುಗಳು. ಇವರನ್ನು ಯಾದವರು ಹೆಚ್ಚಾಗಿ ಗೌರವಿಸುತ್ತಾರೆ.

ವಿಶಾಖಪಟ್ಟಣಂ ಜಿಲ್ಲೆಯಲ್ಲಿರುವ ಈ ಪೊಡಪೋತುಗಳವರು ಯಾದವರಿಗೆ ಗೋತ್ರಗಳನ್ನು ಹೇಳಿ. ಕಾಟಮರಾಜನ ಕಥೆಗಳನ್ನು ಹಾಡುತ್ತಾರೆ. ಇವರಿಗೆ ವಾದ್ಯಗಳೇನೂ ಇಲ್ಲ. ಇವರು ಕಾಟಮರಾಜನ ಕಥೆಗಳನ್ನು 'ಅಕಪದಾಲು' ಅಂತೆ ಹಾಡುತ್ತಾರೆ. (ಹಿಮ್ಮೇಳಗಾರರು 'ಅ......' ಎನ್ನುವ ರೀತಿಯಲ್ಲಿ ಕೂಗುತ್ತಿರಲು. ಪ್ರಧಾನ ಕಥೆಗಾರನು ಲಾವಣಿಯನ್ನು ಹಾಡುತ್ತಾ ಮುಂದುವರಿಯುತ್ತಾನೆ. ಇಂತಹ ಹಾಡುಗಳಿಗೆ 'ಅಕ' ಪದಗಳು ಎಂದು ಹೆಸರು). ಇವರು ಯಾದವರ ಮನೆಯ ಹತ್ತಿರ ತಿಂಗಳು ಗಟ್ಟಲೆ ಇದ್ದು ಕಾಟಮರಾಜನ ಕಥೆಗಳನ್ನು ಹಾಡುತ್ತಾರೆ.

ಈ ಪೊಡಪೋತುಗಳವರು ಮೂಡಣ ಗೋದಾವರಿ ಜಿಲ್ಲೆಯಲ್ಲೂ ಸಹ ಇದ್ದಾರೆ.

8. **ಬೀರನ್ನಲವಾರು** (ಬೀರಣ್ಣರವರು):

ಯಾದವರನ್ನು ಕೊಂಬುಗಳವರು. ಸುದ್ದುಗೊಲ್ಲರು. ಪೊಡಪೋತುಗಳವರು ಯಾಚಿಸಿದಂತೆಯೇ. ತೆಲಂಗಾಣದಲ್ಲಿ ಯಾದವರಲ್ಲಿ ಒಂದು ಶಾಖೆಯಾದ 'ಕುರುಮಗೊಲ್ಲಲು' (ಕುರುಬರು) ಎಂಬುವರನ್ನು ಬೀರಣ್ಣರವರು ಯಾಚಿಸುತ್ತಾರೆ. 'ಬೀರನ್ನ' ಇವರ ಕುಲದೈವ. ಈ ಬೀರಣ್ಣನ ಕಥೆಗಳನ್ನು ಹಾಡುವುದರಿಂದ ಇವರಿಗೆ ಈ ಹೆಸರು ಸಿದ್ಧಿಸಿರಬಹುದು. (ಪಲ್ನಾಟಿ ಕಥೆಗಳನ್ನು ಹಾಡುವವರು ಪಲ್ನಾಟಿಯವರಾದಂತೆ).

ಬೀರಣ್ಣರವರು ಬಾಜಿಸುವ ವಾದ್ಯಕ್ಕೆ 'ಒಗ್ಗು' ಎಂದು ಹೆಸರು. ಇದು ಬುಡಬುಕ್ಕಗಳವರ ಕೈಯಲ್ಲಿರುವ ಢಮರುಗ ಆಕಾರದಲ್ಲಿ ಇದ್ದು – ಅದಕ್ಕಿಂತ ದೊಡ್ಡದಾಗಿರುತ್ತದೆ. ಈ ಒಗ್ಗುವನ್ನು ಬಾಜಿಸುವುದರಿಂದ ಇವರಿಗೆ 'ಒಗ್ಗುವಾರು'. ಅಥವಾ 'ಒಗ್ಗೋಳ್ಳು' ಎಂದೂ ಹೆಸರು. ಇವರು ಹೇಳುವ ಕಥೆಗಳನ್ನು 'ಒಗ್ಗುಲ ಕಥೆಗಳು' ಎನ್ನುತ್ತಾರೆ. ಬೀರಣ್ಣನ ಕಥೆಯನ್ನು. ಕೊಮುರೆಲ್ಲಿಮಲ್ಲನ್ನ ಕಥೆಯನ್ನು ಬೀರಣ್ಣರವರು ಹಾಡುತ್ತಿರುತ್ತಾರೆ. ಇವರು ಯಾಚಿಸುವ ಕುರುಬರಿಗೆ ಬೀರಪ್ಪ ಇಲ್ಲವೇ ಬೀರನ್ನ ಆರಾಧ್ಯದೈವ. ಈತನು ಕಾಟಮರಾಜನ ಕಥೆಗಳಲ್ಲಿ ಬರುವ ಬೀರಿನೀಡು ಆಗಬಹುದು. ಮಲ್ಲಿಕಾರ್ಜುನ ಸ್ವಾಮಿ ಕೂಡ ಕುರುಬರಿಗೆ ಮನೆದೇವರು.

ಗಾಥಾಕಾರರೆಲ್ಲರೂ ತಮ್ಮ ಕಥೆಗಳನ್ನು ರಾತ್ರಿಯಲ್ಲಿ ಹಾಡುತ್ತಿದ್ದರೆ. ಈ ಜೀರಣ್ಣ ರವರು ಮಾತ್ರ ತಮ್ಮ ಕಥೆಗಳನ್ನು ಮಟ್ಟ ಮಧ್ಯಾಹ್ನದ ಸಮಯದಲ್ಲಿ ಹಾಡುವುದು ವಿಚಿತ್ರವಾಗಿದೆ. ಜೀರಣ್ಣರವರು ಕಾಪು (ಒಕ್ಕಲಿಗ) ಗಳಿಗೂ, ಬ್ರಾಹ್ಮಣರಿಗೂ ಹುಟ್ಟಿದ ರೇಮು ಕೊಮಿರೆಲ್ಲಿ ಮಲ್ಲನ್ನನ ಕಥೆಯಿಂದ ಊಹಿಸಬಹುದು. ಜೀರಣ್ಣರವರು ತಮ್ಮ ಗಾಥಾಗಾಯನದಲ್ಲಿ ಒಗ್ಗುವಿನ ಜೊತೆಗೆ ದೊಡ್ಡ ದೊಡ್ಡ ಡೋಲುಗಳು ತಮ್ಮಟಗಳನ್ನು ಕೂಡ ಉಪಯೋಗಿಸುತ್ತಿರುತ್ತಾರೆ

9. **ಜಂಗಮುಲು** (ಜಂಗಮರು)

ತೆಲುಗಿನಲ್ಲಿ ಪಲ್ನಾಟಿವೀರ ಕಥೆಗಳನ್ನೂ, ಕಾಟಮರಾಜನ ಕಥೆಗಳನ್ನೂ ಹಾಡುವ ಗಾಥಾಕಾರರ ನಂತರ, ಹೇಳಲ್ಪತಕ್ಕವರು ಜಂಗಮರು. ತೆಲುಗು ವೀರ ಗಾಥಾ ಸಂಪತ್ತಿನಲ್ಲಿ ಅರ್ಧಭಾಗ ಈ ಜಂಗಮರಿಂದಲೇ ಪರಿಪುಷ್ಟವಾಯಿತು. ವೀರಾವೇಶದಿಂದ ಕಥೆಯನ್ನು ಹಾಡುವುದರಲ್ಲಿ ಜಂಗಮರಿಗೆ ಜಂಗಮರೇ ಸಾಟಿ.

ಜಂಗಮರು ಒಂದು ಪ್ರತ್ಯೇಕವಾದ ರಗಳೆಯಲ್ಲಿ ಕಥೆಗಳನ್ನು ಹಾಡುತ್ತಾರೆ. ಇವಕ್ಕೆ ಜಂಗಮ ರಗಳೆಯೆಂದು ಹೆಸರು. ಈ ರಗಳೆ ವೀರರಸಾವೇಶಕ್ಕೆ ತಕ್ಕಂತಿರುತ್ತದೆ. ಬೊಬ್ಬಿಲಿಕಥೆ, ದೇಶಿಂಗರಾಜನ ಕಥೆ, ಮೂವರು ಮರಾಟೀಯರ ಕಥೆ, ಕಾಂಭೋಜ ರಾಜನ ಕಥೆ, ಬಾಲನಾಗಮ್ಮನ ಕಥೆ, ಮುಂತಾದ ವೀರಗಾಥೆಗಳನ್ನು ಜಂಗಮರ ಬಾಯಿಂದಲೇ ಕೇಳಬೇಕು. ಬೊಬ್ಬಿಲಿ ಪರಸೆಯಲ್ಲಿರುವ ಕಥೆಗಳನ್ನು ಕೀರ್ತನೆಗಳಿಂದಲೂ, ಪದ್ಯಗಳಿಂದಲೂ ತುಂಬಿ, ಯಕ್ಷಗಾನ ದೋರಣೆಗೆ ಬದಲಾಯಿಸಿ, 'ಜಂಗಮ ಕಥೆಗಳು' ಎಂಬ ಒಂದು ಪ್ರತ್ಯೇಕ ಪ್ರಕ್ರಿಯೆಯನ್ನು ಬೆಳೆಸಿದವರು ಈ ಜಂಗಮರೇ. ಸಿರಿಯಾಳ ಚರಿತ್ರೆ, ಘಣ್ಟಾಣರಾಯನ ಚರಿತ್ರೆ, ವಾಮನ ವಿಜಯ, ದೇವಯಾನಿ, ಮುಂತಾದವು, ಇಂತಹ ಜಂಗಮ ಕಥೆಗಳಿಗೆ ಉದಾಹರಣೆಗಳು.

ಜಂಗಂ ಕಥೆಗಾರನು ಬಲಗೈಯಿಂದ ತಂಬೂರಿಯನ್ನು ಮೀಟುತ್ತಾ, ಎಡಗೈಯಿಂದ ಅಂದಿಗೆಗಳನ್ನು ಬಾಜಿಸುತ್ತ, ಕಾಲುಗಳಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತಾ, ಮಹೋದ್ರೇಕದಿಂದ ಕಥೆಯನ್ನು ಹಾಡುತ್ತಿರಲು – ಆತನಿಗೆ ಎರಡು ಕಡೆಗಳಲ್ಲಿರುವ ಹಿಮ್ಮೇಳಗಾರರು ಗುಮ್ಮಟಗಳನ್ನು ಢಣ ಢಣ ಬಾಜಿಸುತ್ತಿರುತ್ತಾರೆ. ಈ ಗುಮ್ಮಟಗಳನ್ನು 'ಗುಮ್ಮೆತಲು ಬುಡಿಗಲು, ಬುರ್ರಲು, ಡಕ್ಕೀಲು, ಡಿಕ್ಕೀಲು, ಡಿಂಕೀಲು'. ಎಂಬ ಹೆಸರುಗಳಿಂದ ವಿವಿಧ ಪ್ರಾಂತ್ಯಗಳಲ್ಲಿ ಕರೆಯುತ್ತಾರೆ. ತೆಲಂಗಾಣದಲ್ಲಿ ಗುಮ್ಮಟವನ್ನು 'ಬುಡಿಗೆ' ಎನ್ನುತ್ತಾರೆ. ಬುಡಿಗೆಗಳನ್ನು ಉಪಯೋಗಿಸುವ ಜಂಗಮರನ್ನು 'ಬುಡಿಗೆ ಜಂಗಮರೆನ್ನುತ್ತಾರ' ಜಂಗಮರೆಲ್ಲರೂ ವೀರಶೈವರು. ಎಲ್ಲ ಜಾತಿಯ ಶೈವರನ್ನೂ ಇವರು ಯಾಚಿಸುತ್ತಾರೆ. ತೆಲಂಗಾಣದಲ್ಲಿ ಇವರು ಬಣಜಿಗರನ್ನು, ಪಂಚದಾಯ

ಕುಲಪವರನ್ನು, ಕೋಮಟಿಗರನ್ನು ಯಾಚಿಸುತ್ತಾರೆಂದು ಡಾ| ಜಿ. ರಾಮರಾಜು ಅವರು ತಿಳಿಯಪಡಿಸುತ್ತಾರೆ. ಅಡಿದಮು ಸೂರಕವಿ ತನ್ನ 'ರಾಮಲಿಂಗೇಶ ಶತಕ'ದಲ್ಲಿ 'ಜಂಗಾಲ ಪಾಲು ದೇವಾಂಗುಲವಿತ್ತಂಬು' (ದೇವಾಂಗದವರ ಹಣ ಜಂಗಮರಿಗೇ ಸೇರುತ್ತದೆ). ಎನ್ನುವುದರಿಂದ ಇವರು ಪ್ರಧಾನವಾಗಿ ದೇವಾಂಗದವರನ್ನು ಯಾಚಿಸಿ ಜೀವಿಸುವರೆಂದು ಭಾವಿಸಬಹುದು. ದೇವಾಂಗ ನವರೆಂದರೆ ವೀರಶೈವರಾದ ನೇಕಾರರು.

ಜಂಗಮರು ಪ್ರಾಚೀನಕಾಲದಿಂದಲೂ, ಕಥೆಗಳನ್ನು ಹಾಡುವುದರಲ್ಲಿ ತೆಲುಗು ನಾಡಿನಲ್ಲಿ ಹೆಚ್ಚಿನ ಪ್ರಸಿದ್ಧಿ ಪಡೆದವರು. ಧೇನುವಕೊಂಡದವರು ರಚಿಸಿದ 'ವಿರಾಟ ಪರ್ವಮು' ಜಂಗಮರ ಕಥೆಯಲ್ಲಿ ಜಂಗಮರ ವರ್ಣನೆ ಚೆನ್ನಾಗಿದೆ. ಇದು 'ಜಂಗಂ ರಗಳೆ' ಎಂಬ ಛಂದಸ್ಸಿನಲ್ಲಿ ಹೇಳಲ್ಪಟ್ಟ ವರ್ಣನೆ.

> "ಭಾರತಮೊಕ ಕಥ ಚೇಯುಮನುಚುನನು ಪ್ರಾರ್ಥಿಂಪಗ ಜೂಚಿ
> ನೇರಚೆಯಿಂಪಗ ಬೂನಿತಿ ಜಂಗಮುವಾರಿಕಿ ನುಪಕೃತಿಗಾ
> ನೀಟುಗ ವಿಭೂತಿ ರೇಖಲು ದೀರ್ಚ್ಚಿಯು ನಿಲ್ವುಟಂಗೀಲ್‌ದೊಡಿಗೀ
> ವೇಟು ರುಮಾಲಾಲ್ ಪೇಟುಪಾಗಾಲ್ ವಲ್ಲೆವಾಟುಲೊಸರದ್ಧಾಲ್ಚೀ
> ಜೋಡು ಗುಮ್ಮೆಟಲ್ ದಟ್ಟುಚುವಂತಲು ಬಾಡುಚು ಮರಿಯೊಕಡು
> ಪೋಡಿಮಿಗಾ ಚೇಬೂನಿ ಸಿತಾರಾ ಭುಜಮುನ ಧರಿಯಿಂಚೀ
> ಗಜ್ಜೆಲು ಮುವ್ವಲು ಅಂದೆಲು ಪದಮುಲ ಘಲ್ಲನಿ ಮ್ರೋಯುಗನೂ
> ತರಝಣುತ ತಕಯೆನಿ ನಾಟ್ಯಮು ಸಲ್ಪುಚು ತಂಬುರ ಮೀಟುಚುನೂ
> ಸಂಗತಿಗಾ ಸಭವಾರಿಕೆಲ್ಲಿ ಪ್ರಸಂಗಪೂರ್ವಕಮುಗಾ
> ಚೆಂಗುನ ದುಮುಕುಚು ಜಂಗಂಬುಲಕುನು ಜೀವನಧನ ಮನಗಾ"

(ಜಂಗಮರು ಭಾರತವನ್ನು ಒಂದು ಜಂಗಂ ಕಥೆಯಾಗಿ ಬರೆಯಬೇಂದು ನನ್ನನ್ನು ಪ್ರಾರ್ಥಿಸಲು, ನಾನು ಅವರಿಗೆ ಉಪಕಾರವಾಗುವಂತೆ ಇದನ್ನು ರಚಿಸುತ್ತಿದ್ದೇನೆ. ಲಕ್ಷಣವಾಗಿ ವಿಭೂತಿ ಪಟ್ಟೆಗಳನ್ನೆಳೆದು. ನಿಲುವಂಗಿ ತೊಟ್ಟು. ಉತ್ತರೀಯ. ಪಾಗಗಳನ್ನು ಹಾಕಿಕೊಂಡು, ಹಿಮ್ಮೇಳಗಾರರು ಜೋಡು ಗುಮ್ಮಟಗಳನ್ನು ತಟ್ಟುತ್ತಾ. ಇನ್ನೊಬ್ಬನು ಹಾಡುತ್ತಾ, ತಂಬೂರಿಯನ್ನು ಭುಜದಲ್ಲಿ ಧರಿಸಿ. ಕಾಲುಗಳಲ್ಲಿ ಗೆಜ್ಜೆ ಮತ್ತು ಅಂದಿಗೆ ಗಳು ಘಲ್ ಎಂದು ಮೊಳಗುತ್ತಿರಲು, 'ತರಝಣುತ ತಕ' ಎಂದು ನಾಟ್ಯಮಾಡುತ್ತಾ, ತಂಬೂರಿ ಮೀಟುತ್ತಾ, ಸಭೆಯವರಿಗೆಲ್ಲಾ ಸಂಗತಿ ಸಂದರ್ಭಗಳನ್ನು ಹೇಳುತ್ತಾ. 'ಚೆಂಗ್' ಎಂದು ಕುಣಿಯುತ್ತಿರುವ ಜಂಗಮರಿಗೆ ಜೀವನ ಧನವಾಗಿ ರಚಿಸುತ್ತಿದ್ದೇನೆ)

10. ಶಾರದ ಕಾಂಡ್ರು (ಶಾರದ ಕಾರರು):

ಇವರು ತೆಲಂಗಾಣದಲ್ಲಿ ವ್ಯಾಪಿಸಿದ್ದಾರೆ. ಇವರ ವೇಷಗಳು. ಕಥೆಗಳು ಹೇಳುವ ರೀತಿ. ಎಲ್ಲ ಜಂಗಮರಂತೇ ಇರುತ್ತವೆ. ಜಂಗಮರಿಗೆ ಜಂಗಂರಗಳೆಯಂತೆ ಶಾರದಕಾರ

ರಿಗೂ ಕೂಡ ಒಂದು ಪ್ರತ್ಯೇಕವಾದ ಧಾಟಿ ಇದೆ. ಇದನ್ನು 'ಶಾರದ ಧಾಟಿ' ಎನ್ನುತ್ತಾರೆ. ಇದು ಅಂತ್ಯ ಪ್ರಾಸಗಳಲ್ಲಿ ನಡೆಯುವ 'ದರುವು'. ಒಂದೊಂದು ಪಾದದಲ್ಲಿ ಮಾತ್ರೆಗಳು 3 + 5 + 5 + 3 ರಂತೆ ಇರುತ್ತವೆ. (ಇದನ್ನು ಕನ್ನಡದ ಮಂದಾನಿಲ ರಗಳೆಗೆ ಹೋಲಿಸಬಹುದು). ಇದನ್ನೇ "ತಕಿಟ. ಕಿಟ ತಕಿಟ. ಕಿಟತಕಿಟ. ತಕಿಟ" ಎಂದೂ ಸಹ ನಿರೂಪಿಸಬಹುದು. ಉದಾಹರಣೆಗೆ ಪೋಡಿಪದ್ದಿ ಬುಚ್ಚಿನ್ನ ಪಂತುಲು ರಚಿಸಿದ 'ಗೋಪಿಕಾವಸ್ತ್ರಾಪಹರಣಂ' ಎನ್ನುವ ಶಾರದ ಕಥೆಯಲ್ಲಿ ಈ ದರುವನ್ನು ನೋಡಿರಿ.

‖ ಅಂಗ ‖ ಅಪ್ಪುಡು, ಕೃಷ್ಣುಂಡು, ಮೋದಮುಲ, ರಂಗ
ಗಜ್ಜೆ. ಲಂದೆಲುನು. ಘನತಮೊ. ರಂಗ
ಘಳ್ಳು. ಘಳ್ಳುಮನಿ. ಮ್ರೋಯುಚುಂ. ಡಂಗ
ಮುದ್ದು. ನಾಟ್ಯಮುಲು. ಸಲ್ಪುಚುಂ. ಡಂಗ"

ಶಾರದ ಕಾರರು ಹೆಚ್ಚಾಗಿ 'ಶಾರದ ರಾಮಾಯಣಮು', 'ಶಾರದ ಹರಿಶ್ಚಂದ್ರ', 'ಶಾರದ ಸಾರಂಗಧರ'. ಮುಂತಾದ ಕಥೆಗಳನ್ನು ಹಾಡುತ್ತಿರುತ್ತಾರೆ.

ಪ್ರಾಚೀನ ಸಾಹಿತ್ಯದಲ್ಲಿ ಗಾಥಾಕಾರರೆಲ್ಲರ ಪ್ರಸಕ್ತಿಯಿದೆ. ಆದರೆ ಶಾರದ ಕಾರರ ಪ್ರಸಕ್ತಿ ಮಾತ್ರವಿಲ್ಲ. ಆದ್ದರಿಂದ ಇವರನ್ನು ಆಧುನಿಕರಾಗಿ ತಿಳಿಯಬೇಕಾಗಿದೆ. ಇವರು ತಾವು ಬಾಜಿಸುವ ತಂಬೂರಿಯನ್ನು 'ಶಾರದ' ಎಂದು ಕರೆಯುತ್ತಾರೆ. ಹಾಡುವುದರಲ್ಲಿ ಇವರು ಪ್ರತಿ ದರುವು ಕೊನೆಯಲ್ಲಿ 'ಓ ಭಾರತಿ ಕರುಣಾ ಮತಿ. ಭಳಿ ಶಾರದ ಕರುಣಾ ನಿಧಿ' ಎಂಬ ಪುನರಾವೃತ್ತಿ (Refrain) ಯನ್ನು ಆಲಾಪಿಸುತ್ತಾರೆ. ಇದು ಜಂಗಂ ಕಥೆಗಳಲ್ಲಿನ 'ತಂದಾನ ತಾನ' ದಂತದ್ದೇ.

ಈ ಶಾರದಕಾರರು ಶಾರದ ಧಾಟಿಯಲ್ಲಿರುವ ಕಥೆಗಳನ್ನಲ್ಲದೆ. ಜಂಗಮರು ಹಾಡುವ ಬೊಬ್ಬಿಲಿ ಧಾಟಿಯ ಕಥೆಗಳನ್ನೂ ಹಾಡುತ್ತಿದ್ದಾರೆ.

ಶಾರದ ಕಾರರು ಶೈವರು. ಇವರಲ್ಲಿ ಕೆಲವರು ಲಿಂಗಧಾರರೂ ಇದ್ದಾರೆ. ಇವರಿಗೆ ಜಂಗಮರು ಗುರುಗಳು.

11. **ಪೂಸಲ ಬಲಿಜಲು** (ಮಣಿಗಳ ಬಣಜಿಗರು):

ರಾಯಲ ಸೀಮೆಯಲ್ಲಿ. ಮುಖ್ಯವಾಗಿ ಚಿತ್ತೂರು ಜಿಲ್ಲೆಯಲ್ಲಿ 'ಪೂಸಲ ಬಲಿಜಲು' ವ್ಯಾಪಿಸಿದ್ದಾರೆ. 'ಪೂಸಲು' (ಮಣಿಗಳನ್ನು) ಮಾರುವುದರಿಂದ ಇವರಿಗೆ ಈ ಹೆಸರು ಬಂದಿದೆ. ಇವರು ಜಂಗಮರನ್ನು. ಶಾರದ ಕಾರರನ್ನು ಹೋಲುತ್ತಾರೆ. ಅವರಂತೆಯೇ ಇವರೂ ವೀರಗಾಥೆಗಳನ್ನು ಗಾಯನಮಾಡುತ್ತಾರೆ. ಬೊಬ್ಬಿಲಿ ಕಥೆ. ದೇಶಿಂಗು

ರಾಜನ ಕಥೆ. ಬಾಲನಾಗಮ್ಮನ ಕಥೆ. ಕಾಂಭೋಜರಾಜನ ಕಥೆ. ಮೂವರು ಮರಾಠೀಯರ ಕಥೆ ಲಕ್ಷ್ಮಮ್ಮನ ಕಥೆ. ಚೆನ್ನಮ್ಮನ ಕಥೆ. ಕಾಮಮ್ಮನ ಕಥೆ. ಮುಂತಾದ ಸಾಂಪ್ರದಾಯಿಕ ವೀರಗಾಥೆಗಳನ್ನು ಮಣೆಗಳುಬಣಜಿಗರು ಹಾಡುತ್ತಿರುತ್ತಾರೆ. ಇವರ ವೇಷವೆಲ್ಲಾ ಜಂಗಮರ ವೇಷದಂತಿರುತ್ತದೆ.

ಈ ಮಣಿಗಳ ಬಣಜಿಗರು ವೈಷ್ಣವರು. ಕಂಚಿ ಪ್ರಾಂತದಲ್ಲಿನ ಶ್ರೀವೈಷ್ಣವರು ಇವರ ಗುರುಗಳು. ಇವರು ತಮಿಳು ದೇಶದಿಂದ ಬಂದು ಚಿತ್ತೂರು ಜಿಲ್ಲೆಯಲ್ಲಿ ನೆಲೆಯೂರಿರಬಹುದು. ವ್ಯವಸಾಯ ಮಾಡುವುದು, ಮಣಿಗಳನ್ನು ಮಾರಿಕೊಳ್ಳುವುದು ಇವರ ವೃತ್ತಿ. ಜಂಗಮರು ವೀರಶೈವರಾದರೂ ಅವರು ಹಾಡುವ ಕಥೆಗಳಲ್ಲಿ ಶೈವ ಪಕ್ಷಪಾತ ಇಲ್ಲದಂತೆ. ಮಣಿಗಳ ಬಣಜಿಗಳು ಶ್ರೀ ವೈಷ್ಣವರಾದರೂ ಇವರು ಹಾಡುವ ಕಥೆಗಳಲ್ಲಿ ವೈಷ್ಣವ ಪಕ್ಷಪಾತ ಕಿಂಚಿತ್ತೂ ಇರದು. ಇವರು ಎಲ್ಲರೀತಿಯ ಕಥೆಗಳನ್ನೂ ಹಾಡುತ್ತಿರುತ್ತಾರೆ. ಆದರೂ ಇವರು ವೆಂಕಟೇಶ್ವರನ ಕಥೆಯನ್ನು. ವರಾಹಾವತಾರ ಚರಿತ್ರೆಯನ್ನು, ಚಿನ್ನಮ್ಮನ ಕಥೆಯನ್ನು, ಸ್ವಲ್ಪ ಪ್ರತ್ಯೇಕ ಶ್ರದ್ಧೆಯಿಂದ ಹಾಡುತ್ತಾರೆಂಬುದು ಸತ್ಯ. ಈ ಕಥೆಗಳಲ್ಲಿ ಇವರಿಗೆ ವಿಶಿಷ್ಟವಾದ ಅಭಿನಿವೇಶವಿದೆ. ಹೀಗೆಯೇ ಜಂಗಮರು ಸಿರಿಯಾಳನ ಕಥೆಯನ್ನು. ಶ್ರೀಶೈಲ ಮಾಹಾತ್ಮ್ಯವನ್ನು ಹಾಡುವುದರಲ್ಲಿ ಸ್ವಲ್ಪ ವೈಶಿಷ್ಟ್ಯವನ್ನು ಪ್ರದರ್ಶಿಸುತ್ತಾರೆ.

ಮಣಿಗಳ ಬಣಜಿಗರು ಪ್ರಾಚೀನ ವೀರಗಾಥೆಗಳನ್ನಲ್ಲದೆ ಆಧುನಿಕ ಸಂಘಟನೆಗಳನ್ನು ಕುರಿತೂ ಕಥೆಗಳನ್ನು ಹೆಣೆದು ಹಾಡುತ್ತಿದ್ದಾರೆ. ಸುಬ್ಬಿರೆಡ್ಡಿ ಕಥೆ, ಚೆನ್ನಕೃಷ್ಣಾರೆಡ್ಡಿ ಕಥೆ, ಯಲ್ಲಮಂದನಾಯುಡು ಕಥೆ. ಒಡ್ಡುಕಿಂದ ಭಯ್ಯಾರೆಡ್ಡಿ ಕಥೆ. ಕಲಿಚೆರ್ಲ ನರಸಿಂಹಾರೆಡ್ಡಿ ಕಥೆ ಮುಂತಾದುವು ಚಿತ್ತೂರು ಜಿಲ್ಲೆಯಲ್ಲಿ ಮಣಿಗಳ ಬಣಜಿಗರಿಂದ ಹೆಣೆಯಲ್ಪಟ್ಟ ಅತ್ಯಾಧುನಿಕ ವೀರಗಾಥೆಗಳು.

ಈ ಮಣಿಗಳ ಬಣಜಿಗರಲ್ಲಿ ಕೆಲವರು ಶುದ್ಧ ವೈಷ್ಣವ ವೇಷದಿಂದ 'ಜೇ ಗಂಟೆ' (ಕೈಯಲ್ಲಿ ಹಿಡಿದ ಗಂಟೆ) ಯನ್ನು ಬಾಜಿಸುತ್ತಾ ವೆಂಕಟೇಶ್ವರನ ಕಥೆಯನ್ನೂ. ವೇಮನನ ಕಥೆಯನ್ನೂ ಹಾಡುತ್ತಿದ್ದಾರೆ. ಇವರನ್ನು "ಗರುಡಸ್ತಂಭಂ ದಾಸರುಲು" (ಗರುಡ ಸ್ತಂಭದ ದಾಸರು) ಎಂದು ಕರೆಯುತ್ತಾರೆ. ಇವರು ಹಾಡುವ ಕಥೆಗಳನ್ನು 'ಜಾಗಟ ಕಥಲು' ಎನ್ನುತ್ತಾರೆ. 'ಜೇಗಂಟ ಕಥಲು' ಎನ್ನುವ ಶಬ್ದವೇ ಜನಪದ ವ್ಯವಹಾರದಲ್ಲಿ 'ಜಾಗಟ ಕಥಲು' ಆಗಿ ಬದಲಾವಣೆಯಾಗಿದೆ. 'ಜೇಗಂಟ' ಎನ್ನುವುದು 'ಚೇತಿ ಗಂಟ' (ಕೈಯ ಗಂಟೆ) ಶಬ್ದಭವವು.

12. ಡಕ್ಕಲವಾರು–ಮಾಷ್ಟೀಲು (ಡಕ್ಕಗಳವರು–ಮಾಷ್ಟೀಯರು)

ಮಾದಿಗರನ್ನು ಯಾಚಿಸುವವರು 'ಡಕ್ಕಲವಾರು'; ಹೊಲೆಯರನ್ನು ಯಾಚಿಸುವವರು 'ಮಾಷ್ಟೀಲು'. ಇವರು ಹಿಂದೂ ಸಮಾಜದಲ್ಲಿ ಅತ್ಯಂತ ನಿಮ್ನ ಕುಲದವರಂತೆ



ಬವನೀಲು (ಪ್ರಕಾಶಂ ಜಿಲ್ಲೆ)



ಪಂಬಲವಾರು (ಪ್ರಕಾಶಂ ಜಿಲ್ಲೆ)



ಕೊಮ್ಮುಲವಾರು (ಕನಿಗಿರಿ)



ಪಿಚ್ಚುಕುಂಟ್ಲು (ಕರ್ನೂಲು ಜಿಲ್ಲೆ)



ಗೊಲ್ಲಸುದ್ದುಲವಾರು (ಮೊನಕೊಂಡ ಪ್ರಕಾಶಂ ಜಿಲ್ಲೆ)



ಪೂಸಲ ಬಲಿಜಲು (ಚಿತ್ತೂರು ಜಿಲ್ಲೆ)



ಗರುಡಸ್ತಂಭಂ ದಾಸರುಲು (ಚಿತ್ತೂರು ಜಿಲ್ಲೆ)

ಭಾವಿಸಲ್ಪಡುತ್ತಿದ್ದಾರೆ. ಇವರು ರಾಯಲಸೀಮೆಯ ಕರ್ನೂಲು ಜಿಲ್ಲೆಯಲ್ಲಿ. ತೆಲಂಗಾಣದಲ್ಲಿನ ಮಹಬೂಬು ನಗರದಲ್ಲೂ ಅಧಿಕವಾಗಿದ್ದಾರೆ.

ಪಕ್ಕಿಗಳವರು. ಮಾಷ್ಟೀಯರು ತಾವು ಹಾಡುವ ಕಥೆಗಳಿಗೆ ಒಂದು ಒಳ್ಳೆಯ ವಾದ್ಯ ಉಪಯೋಗಿಸುತ್ತಾರೆ. ಇದರ ಹೆಸರು 'ಮೆಟ್ಲ ಕಿನ್ನರ' (ಮನೆಗಳ ಕಿನ್ನರಿ). ಇದು ಮೂರು ಸೋರೆಕಾಯಿಗಳಿಂದ ಮಾಡಲ್ಪಟ್ಟಿರುತ್ತದೆ. ಇದು ಅತ್ಯಂತ ಶ್ರಾವ್ಯವಾದ ಧ್ವನಿಕೊಡುತ್ತದೆ. 'ಮಿಯಾಸಾಬು ಕಥೆ'. 'ಪಂಡುಗ ಶಾಯನ್ನ ಕಥೆ', 'ಪೆಂಗಳ ರೆಡ್ಡಿ ಕಥೆ'. 'ಪುಲಗರ ಜಾಲಿ ಸಾಬು ಕಥೆ'. 'ಸಕ್ಕಿಪಲ್ಲಿ ರಾಮುಡು ಕಥೆ' ಮುಂತಾದ ಗಜಕಳ್ಳರ ವೀರಗಾಥೆಗಳನ್ನು ಈ ಪಕ್ಕಿಗಳವರು ಮಾಷ್ಟೀಯರು ಹಾಡುತ್ತಿರುತ್ತಾರೆ.

ಈ ಕಿನ್ನರಿ ಕಥೆಗಳಲ್ಲಿ ಕಥೆಗಾರನು ಒಬ್ಬನೇ ಹಾಡುತ್ತಾನೆ. ಈತನಿಗೆ ಹಿಮ್ಮೇಳಗಾರರಿರುವುದಿಲ್ಲ. ಕಥೆಗಾರನ ಗಾಯನಕ್ಕೆ ಆತನ ಕೈಯಲ್ಲಿನ ಮನೆಗಳ ಕಿನ್ನರಿಯೇ ಮಧುರವಾಗಿ ಹಿಮ್ಮೇಳ ಕೊಡುತ್ತದೆ. ಹಿಮ್ಮೇಳಗಾರರಿಲ್ಲದೆ ಗಾಥಾಗಾಯನ ಮಾಡುವುದು ಈ ಕಿನ್ನರಿ ಕಥೆಗಳಲ್ಲಿನ ಪ್ರತ್ಯೇಕತೆ.

ಈ ಕಥೆಗಳಲ್ಲಿ ಬೇರೊಂದು ಪ್ರತ್ಯೇಕತೆಯೂ ಇದೆ. ವೀರಗಾಥೆಗಳು ಆವೇಶ ಪ್ರಧಾನ. ಆದ್ದರಿಂದ ಗಾಥಾಕಾರರು ಯಾವಾಗಲೂ ನಿಂತು. ಕುಣಿಯುತ್ತಾ – ಹಾಡುವುದು ಪರಿಪಾಟಿ. ಆದರೆ ಈ ಕಿನ್ನರಿ ಕಥೆಗಳಲ್ಲಿ ಕಥೆಗಾರನು ಕುಳಿತೇ ಹಾಡುತ್ತಾನೆ. ಇದೊಂದು ಆಶ್ಚರ್ಯಕರವಾದ ಸಂಗತಿ. (ರಾಯಲ ಸೀಮೆಯಲ್ಲಿನ ಬುಡ್ಬುಕುಂಟರು ಸಹ ಕುಳಿತೇ ಗಾಥಾಗಾಯನ ಸಾಗಿಸುತ್ತಾರೆ). ಇವರ ಮನೆಗಳ ಕಿನ್ನರಿಯ ಧ್ವನಿ ಅಚ್ಚ ಬುಲ್ ಬುಲ್‌ತಾರಿನ ಧ್ವನಿಯಂತೇ ಇರುತ್ತದೆ.

ಆಂಧ್ರದೇಶದಲ್ಲಿ ಇಂತಹ ಗಾಥಾಕಾರರು ಇನ್ನೂ ಎಷ್ಟೋ ಮಂದಿ ಇದ್ದಾರೆ. ಅವರಲ್ಲಿ ಮುಖ್ಯಸ್ವರೂಪದಲ್ಲಿರುವ ವೀರಗಾಥೆಗಳು ನಾಗರಿಕತೆಯ ಪ್ರಭಾವದಿಂದ ನಶಿಸಿ ಹೋಗುವುದಕ್ಕೆ ಮುಂಚೆಯೇ ಅವುಗಳನ್ನು ಸಂರಕ್ಷಿಸಿಕೊಳ್ಳಬೇಕಾದ ಬಾಧ್ಯತೆ ಪ್ರತಿ ಸಾಹಿತ್ಯ ತಪಸ್ವಿಗೂ ಇದೆ.

[ತೆಲುಗಿನಿಂದ ಕನ್ನಡಕ್ಕೆ: ಬಿ. ಜಿ. ಪಾಂಡುರಂಗಯ್ಯಶೆಟ್ಟಿ]

ಸಮುದ್ರದಿಂದ ಸಿಹಿನೀರು

ಹೆಚ್. ಆರ್. ಕೃಷ್ಣಮೂರ್ತಿ


ನಾಗರಿಕತೆ ಮುಂದುವರೆದು ದೇಶಗಳು ಬೆಳೆದಂತೆಲ್ಲಾ ಪ್ರಕೃತಿದತ್ತವಾದ ಸೌಲಭ್ಯಗಳೆಲ್ಲವೂ ಕಡಿಮೆಯಾಗುತ್ತಾ ಬರುತ್ತಿದೆ. ಶುದ್ಧವಾದ ಗಾಳಿ, ಬೆಳಕು. ನೀರುಗಳಲ್ಲಿ ಕೊರತೆ ಕಂಡುಬರುತ್ತಿರುವುದರೊಡನೆ, ನಾಗರಿಕತೆಯ ಪ್ರತೀಕವೆನಿಸಿದ ದೊಡ್ಡ ದೊಡ್ಡ ಕಾರ್ಖಾನೆಗಳಿಂದ, ಜನದಟ್ಟಣೆಯಿರುವ ನಗರಗಳಿಂದ. ಹುಟ್ಟಿ ಬಿಡಿಸುವ ಶಬ್ದಗಳಿಂದ ಇವುಗಳೆಲ್ಲವೂ ಮಲಿನವಾಗುತ್ತಿವೆ. ಕೊರತೆಯಾದ ವಸ್ತುಗಳನ್ನೆಲ್ಲಾ ಬೇರೆಯ ಮೂಲಗಳಿಂದ ಪಡೆಯಲೆತ್ನಿಸುವ ಸಾಹಸವೂ ಕಂಡುಬರುತ್ತಿದೆ.

ನಿತ್ಯ ಜೀವನದಲ್ಲಿ ನೀರಿನ ಪಾತ್ರ ತುಂಬ ಹಿರಿದು. ಕುಡಿಯುವುದರಿಂದ ಹಿಡಿದು ಕಬ್ಬಿಣದ ತಯಾರಿಕೆಯವರೆಗೂ ನೀರು ಅವಶ್ಯಕ. ಕಲ್ಕತ್ತಾ, ಬೊಂಬಾಯಿಗಳಲ್ಲಿ ದಿನವೊಂದಕ್ಕೆ ಬೇಕಾದ ಕುಡಿಯುವ ನೀರಿನ ಪ್ರಮಾಣ 450 ಹಾಗೂ 350 ಮಿಲಿಯನ್ ಗ್ಯಾಲನ್‌ಗಳು. ಈಗ ದೊರೆಯುತ್ತಿರುವುದು 200 ಹಾಗೂ 180 ಮಿಲಿಯನ್ ಗ್ಯಾಲನ್‌ಗಳು. ಒಂದು ಟನ್ ಉಕ್ಕನ್ನು ತಯಾರಿಸಲು 65.000. ಒಂದು ಬ್ಯಾರಲ್ ಪೆಟ್ರೋಲಿಯಂ ಉತ್ಪಾದನೆಗೆ 770, ಒಂದು ಟನ್ ಕೃತಕ ರಬ್ಬರಿಗೆ 600.000 ಗ್ಯಾಲನ್‌ಗಳಷ್ಟು ಶುದ್ಧವಾದ ನೀರು ಬೇಕು. ವರ್ಷಗಳು ಉರುಳಿದಂತೆ ಅವಶ್ಯವಾಗುತ್ತಿರುವ ಈ ನೀರಿನ ಪ್ರಮಾಣ ವಿಜ್ಞಾನಿಗಳನ್ನು ದಿಕ್ಕುಗೆಡಿಸುವಂತಾಗಿದೆ. ಶುದ್ಧ ನೀರು ದೊರೆಯದೆ ಎಷ್ಟೋ ಕಾರ್ಖಾನೆಗಳು ಉತ್ಪಾದನೆಗೆ ತೊಡಗದೇ ನಿಂತಿವೆ. ಭೂಮಿಯ ಮೇಲೆ ಇರುವ 326.017.300 ಘನಮೈಲಿಗಳಷ್ಟು ನೀರಿನಲ್ಲಿ ಶೇಕಡಾ 97.2 ಭಾಗ ಸಮುದ್ರದ ಉಪ್ಪುನೀರಾಗಿದ್ದು. ಇದರಿಂದ ಶುದ್ಧವಾದ ಸಿಹಿನೀರನ್ನು ತಯಾರಿಸಲು ಸಾಧ್ಯವಾದರೆ. ಬಹುಶಃ ಪ್ರಪಂಚದಲ್ಲಿ ನೀರಿನ ಕೊರತೆಯೇ ಇಲ್ಲದಂತಾಗಿ ಕೈಗಾರಿಕೆ ಹಾಗೂ ವ್ಯವಸಾಯಕ್ಕೆ ಅದ್ಭುತವಾದ ಸಹಾಯವಾಗಬಹುದು. ಈ ದಿಕ್ಕಿನಲ್ಲಿ ಈಗ ಅಪಾರವಾದ ಸತತ ಪ್ರಯೋಗಗಳು ನಡೆದಿವೆ. ಹಾಗೂ ಪ್ರಪಂಚದ ಇಪ್ಪತ್ತು ರಾಷ್ಟ್ರಗಳಲ್ಲಿ ಈಗಾಗಲೇ ಈ ವಿಧಾನವನ್ನು ಸಣ್ಣ ಪ್ರಮಾಣದಲ್ಲಿ ಅನುಸರಿಸುತ್ತಿದ್ದಾರೆ.

ಸಮುದ್ರದ ಅಪಾರವಾದ ಜಲರಾಶಿಯಿಂದ ಉಪ್ಪನ್ನು ಬೇರ್ಪಡಿಸಿ ಸಿಹಿನೀರನ್ನು ಪಡೆಯಲು ಅನುಸರಿಸಬಹುದಾದ ವಿಧಾನಗಳು ಹಲವಾರು. ಈ ವಿವಿಧ ಕ್ರಮಗಳಿಗೆ

ಬೇಕಾದ ಶಕ್ತಿಯನ್ನು ಶಾಖ ಹಾಗೂ ವಿದ್ಯುತ್ ಮೂಲಗಳಿಂದ ಪಡೆಯಲಾಗುತ್ತಿದೆ. ಆಯಾ ಪ್ರದೇಶದ ಭೌಗೋಳಿಕ ಲಕ್ಷಣಗಳ ಮೇಲೆ ಅಲ್ಲಿಗೆ ಸೂಕ್ತವಾದ ವಿಧಾನವನ್ನು ಆರಿಸಿಕೊಳ್ಳಬೇಕಾಗಿದೆ.


ಬಹು ಹಿಂದಿನಿಂದಲೂ ನಾವಿಕರು ಉಪಯೋಗಿಸುತ್ತಿರುವ ವಿಧಾನ ಸೂರ್ಯ ಶಕ್ತಿಯಿಂದ ನಡೆಯುವ ಬಾಷ್ಪೀಕರಣ ಕ್ರಿಯೆ (Evaporation). ಸೂರ್ಯನ ಶಾಖದಿಂದ ಸಮುದ್ರದ ನೀರನ್ನು ಆವಿಯನ್ನಾಗಿಸಿ, ಆವಿಯಿಂದ ಉಪ್ಪನ್ನು ಬೇರ್ಪಡಿಸಿ ಸಿಹಿ ನೀರನ್ನು ಪಡೆಯಬಹುದು. ಸಣ್ಣ ಪ್ರಮಾಣದಲ್ಲಿ ಮಾತ್ರ ಇದರಿಂದ ನೀರನ್ನು ಪಡೆಯಬಹುದಾಗಿದ್ದು. ಹೆಚ್ಚಿನ ಪ್ರಮಾಣದ ಉತ್ಪಾದನೆ ಆರ್ಥಿಕವಾಗಿ ಲಾಭದಾಯಕವಲ್ಲ ಆದರೂ ಸಹ ಪ್ರಪಂಚದಲ್ಲೇ ಅತ್ಯಂತ ದೊಡ್ಡದಾದ ಸೌರಶಕ್ತಿ ಬಾಷ್ಪೀಕರಣ ಕೇಂದ್ರವನ್ನು ಗ್ರೀಕಿನ 'ಪ್ಯಾಟ್‌ಮೋಸ್' (Patmos) ಎಂಬಲ್ಲಿ ಇತ್ತೀಚೆಗೆ ಸ್ಥಾಪಿಸಿದ್ದಾರೆ. ಈ ವಿಧಾನದಲ್ಲಿ ಉಪಯೋಗಿಸುವ ಉಪಕರಣವನ್ನು ಚಿತ್ರ 1ರಲ್ಲಿ ತೋರಿಸಲಾಗಿದೆ.



ಚಿತ್ರ. 1

ಕಪ್ಪು ಬಣ್ಣ ಬಳಿದಿರುವ ಸಿಮೆಂಟಿನ ದೊಡ್ಡ ಪಾತ್ರೆಗಳಲ್ಲಿ ಸಮುದ್ರದ ನೀರನ್ನು ಸಂಗ್ರಹಿಸಿ. ಓರೆಯಾಗಿ ಅದರ ಮೇಲೆ ಮುಚ್ಚಿರುವ ಗಾಜು ಅಥವಾ ಪ್ಲಾಸ್ಟಿಕ್ಕಿನ ಮೂಲಕ ಸೂರ್ಯನ ಕಿರಣಗಳನ್ನು ಹಾಯಿಸಲಾಗುತ್ತದೆ. ಆವಿಯಾಗಿ ಮೇಲೇರುವ ಸಮುದ್ರದ ನೀರು ಗಾಜಿನ ಮೇಲೆ ಸಂಗ್ರಹಿತವಾಗಿ ಅಲ್ಲಿಂದ ಗಾಜಿನ ಮೇಲೆ ಹರಿದು ಅದಕ್ಕಾಗಿಯೇ ಇಡಲಾಗಿರುವ ಪಾತ್ರೆಗಳಲ್ಲಿ ಸಂಗ್ರಹಿತವಾಗುತ್ತದೆ. ಈ ವಿಧಾನವನ್ನು ಇನ್ನೂ ಉತ್ತಮಗೊಳಿಸಿ ಉತ್ಪಾದನಾ ಸಾಮರ್ಥ್ಯವನ್ನು ಅಧಿಕಗೊಳಿಸಬಹುದು.

ಸಮುದ್ರದ ನೀರನ್ನು ಆವಿಯನ್ನಾಗಿಮಾಡಲು ಸೂರ್ಯಶಕ್ತಿಯನ್ನಲ್ಲದೇ ಇತರ ಮೂಲಗಳಿಂದಲೂ ಶಕ್ತಿಯನ್ನು ಪಡೆಯಬಹುದು. ಗ್ಲಾಸ್ಗೋ ವಿಶ್ವವಿದ್ಯಾಲಯದ ಪ್ರೊಫೆಸರ್ ರಾಬರ್ಟ್ ಸಿಲ್ವರ್‌ರವರು ಕಂಡುಹಿಡಿದ "ಅನೇಕ ಸ್ಫುರಣ ಬಾಷ್ಪೀಭವನ" ವಿಧಾನ (Multi-flush Evaporation) ಪ್ರಪಂಚದ ಎಲ್ಲ ರಾಷ್ಟ್ರಗಳ ಗಮನ ಸೆಳೆದಿದೆ. ಸಾಮಾನ್ಯವಾಗಿ. ಅನೇಕ ಹಂತಗಳಲ್ಲಿ ಒಂದೇ ಕ್ರಿಯೆಯನ್ನು ಪುನರಾವರ್ತಿಸಿ ಹೆಚ್ಚಿನ ಪ್ರಮಾಣದಲ್ಲಿ ಸಿಹಿನೀರನ್ನು ಪಡೆಯಬಹುದು. ಈ ವಿಧಾನದ ಉಪಕರಣವನ್ನು ಚಿತ್ರ 2ರಲ್ಲಿ ತೋರಿಸಲಾಗಿದೆ.



ಚಿತ್ರ 2

A ಸಮುದ್ರದ ನೀರನ್ನು ಬಿಸಿ ಮಾಡುವ ಆವಿಯ ಕೋಣೆ B ನೀರಿನ ಮಟ್ಟವನ್ನು ಮೇಲೇರಿಸುವ ತಡೆಗಳು [weirs] C D ಉಪ್ಪುನೀರು E ಶುದ್ಧನೀರಿನ ಹನಿಗಳು F ಶುದ್ಧನೀರು G ಸಮುದ್ರದ ನೀರು


ಈ ವಿಧಾನದಲ್ಲಿ ಬಿಸಿಯಾದ ಸಮುದ್ರದ ನೀರನ್ನು. ಒಂದರ ಪಕ್ಕದಲ್ಲಿ ಒಂದರಂತೆ ಜೋಡಿಸಲಾಗಿರುವ ಅನೇಕ ಕಡಿಮೆ ಒತ್ತಡದ ಪಾತ್ರೆಗಳ ಮೂಲಕ ಹಾಯಿಸಲಾಗುತ್ತದೆ. ಕಡಿಮೆ ಒತ್ತಡದ ಪಾತ್ರೆಗಳಲ್ಲಿ ಪ್ರವಹಿಸುವಾಗ ಒಮ್ಮೆಗೇ ನೀರು ಆವಿಯಾಗುತ್ತದೆ. ಹೀಗೆ ಆವಿಯಾದ ಸಮುದ್ರದ ನೀರು ಅನಂತರ ಘನೀಭವಿಸಿ ಸಿಹಿನೀರಾಗಿ ಶೇಖರ

ವಾಗುತ್ತದೆ. ಇಂತಹ ಒಂದು ಸಣ್ಣ ಯೋಜನೆಯು ಕೈಗಾರಿಕೆಯನ್ನು ಕಟ್ಟಲು ಬೇಕಾಗುವ ಪದಾರ್ಥಗಳು ಹಾಗೂ ಅವುಗಳ ಬೆಲೆ ಕಡಿಮೆಯಾಗಿರುವುದರಿಂದಲೂ, ಮತ್ತು ಹೆಚ್ಚಿನ ಸಾಮರ್ಥ್ಯವಿರುವುದರಿಂದಲೂ ಈ ವಿಧಾನ ತುಂಬ ಜನಪ್ರಿಯ ವಾಗುತ್ತಿದೆ. ಕುವೈತ್‌ನಲ್ಲಿ ಇಂತಹ ಇಪ್ಪತ್ತು ಉತ್ಪಾದನಾ ಕೇಂದ್ರಗಳಿಂದ ಗಂಟೆ ಯೊಂದಕ್ಕೆ ಎರಡು ಮಿಲಿಯನ್ ಗ್ಯಾಲನ್ ಶುದ್ಧನೀರನ್ನು ಪಡೆಯಲಾಗುತ್ತಿದೆ. ಪ್ರಪಂಚದಲ್ಲಿ ಸಮುದ್ರದ ನೀರಿನಿಂದ ಪಡೆಯುತ್ತಿರುವ ಪ್ರತಿ ಐದು ಗ್ಯಾಲನ್ ಶುದ್ಧನೀರಿನಲ್ಲಿ ನಾಲ್ಕು ಗ್ಯಾಲನ್‌ಗಳನ್ನು ಮೇಲಿನ ವಿಧಾನದಿಂದ ಪಡೆಯಲಾಗುತ್ತಿದೆ. ಏಥೆನ್ಸ್ (Athens) ನಲ್ಲಿ ನಡೆದ ಯೂರೋಪಿನ ವಿಜ್ಞಾನಿಗಳ ಸಮ್ಮೇಳನದಲ್ಲಿ ಅಣುಶಕ್ತಿ ಕೇಂದ್ರಗಳಿಂದ ದೊರೆಯುವ ಆವಿಯನ್ನು ಈ ಮೇಲಿನ ವಿಧಾನದಲ್ಲಿ ಸಮುದ್ರದ ನೀರನ್ನು ಬಿಸಿಮಾಡಲು ಉಪಯೋಗಿಸುವ ಸಾಧ್ಯತೆಯನ್ನು ಚರ್ಚಿಸಲಾಯಿತು. ಭಾರತ ಸರ್ಕಾರದ ಅಣುಶಕ್ತಿ ಕೇಂದ್ರದವರು ಈ ವಿಧಾನವನ್ನು ಅನುಸರಿಸಲು ವಿಶೇಷ ಹಾಗೂ ವ್ಯಾಪಕವಾದ ಅಧ್ಯಯನದಲ್ಲಿ ತೊಡಗಿದ್ದಾರೆ.

ಬ್ರಿಟನ್ನಿನ ವಿಜ್ಞಾನಿಗಳು ಇತ್ತೀಚೆಗೆ ಸಮುದ್ರದ ನೀರನ್ನು ಹೆಪ್ಪುಗಟ್ಟಿಸುವುದರ ಮೂಲಕ ಶುದ್ಧನೀರನ್ನು ಪಡೆಯುವ ಇನ್ನೊಂದು ಮಾರ್ಗವನ್ನು ಕಂಡುಹಿಡಿದಿದ್ದಾರೆ. ನೀರಿನ ಹೆಪ್ಪುಗಟ್ಟುವ ತಾಪ (Freezing point) ಅದರಲ್ಲಿರುವ ಉಪ್ಪಿನ ಪ್ರಮಾಣದ ಮೇಲೆ ನಿರ್ಧರಿತವಾಗುತ್ತದೆ. ಈ ವಿಧಾನದಲ್ಲಿ ತಂಪಾದ ಬ್ಯೂಟೇನ್ ದ್ರವವನ್ನು (Liquid Butane) ಸಮುದ್ರದ ನೀರಿನ ಮೇಲೆ ಹರಡುತ್ತಾರೆ. ಇದರಿಂದಾಗಿ ಶುದ್ಧನೀರು ಹೆಪ್ಪುಗಟ್ಟಿ ಮಂಜಿನ ಗಡ್ಡೆಯ ರೂಪದಲ್ಲಿ ಬೇರೆಯಾಗುತ್ತದೆ. ಈ ಮಂಜಿನ ಗಡ್ಡೆಗಳನ್ನು ಬೇರ್ಪಡಿಸಿ, ಅದನ್ನು ಕರಗಿಸಿ ಅದರಿಂದ ಶುದ್ಧ ನೀರನ್ನು ಪಡೆಯಬಹುದು. ಇದರೊಡನೆ ಮಿಶ್ರಿತವಾಗಿರುವ ಬ್ಯೂಟೇನನ್ನು ಸುಲಭವಾಗಿ ಬೇರ್ಪಡಿಸಬಹುದು. ಇಸ್ರೇಲಿನ ವಿಜ್ಞಾನಿಗಳು ಹೆಪ್ಪುಗಟ್ಟಿಸುವ ಇನ್ನೊಂದು ವಿಧಾನವನ್ನು ಅನುಸರಿಸುತ್ತಿದ್ದಾರೆ. ಇದರಲ್ಲಿ ಸಮುದ್ರದ ನೀರನ್ನು ನಿರ್ವಾತದ (Vacuum) ಮೂಲಕ ಹಾಯಿಸಿದಾಗ, ಅದರ ಬಾಷ್ಪೀಭವನದ ತಾಪ (Boiling point) ಹೆಪ್ಪುಗಟ್ಟಿಸುವ ತಾಪಕ್ಕೆ (Freezing point) ಸಮನಾಗುತ್ತದೆ. ಹೀಗಾದಾಗ ನೀರಿನ ಒಂದು ಭಾಗ ತಕ್ಷಣವೇ ಆವಿಯಾಗುತ್ತದೆ. ಹಾಗೂ ಇನ್ನೊಂದು ಭಾಗ ಹೆಪ್ಪುಗಟ್ಟುತ್ತದೆ. ಮಂಜಿನಗಡ್ಡೆಯನ್ನು ಬೇರ್ಪಡಿಸಿ ಕರಗಿಸುತ್ತಾರೆ ಹಾಗೂ ಆವಿಯನ್ನು ಘನೀಭವಿಸುತ್ತಾರೆ.

"ವಿದ್ಯುತ್ ಪಾರ ಪೃಥಕ್ಕರಣ" (Electro-dialysis) ಎಂಬ ಹೊಸ ಕ್ರಮವೊಂದು ಇನ್ನೂ ಪ್ರಯೋಗದ ಹಂತದಲ್ಲಿಯೇ ಇರುವ ವಿಧಾನ. ಉಪ್ಪು ನೀರಿನಲ್ಲಿರುವ ಸೋಡಿಯಂ ಹಾಗೂ ಕ್ಲೋರೈಡ್ ಅಯಾನುಗಳಾಗಿ ಬೇರ್ಪಟ್ಟು ವಿಘಟಿತ ಸ್ಥಿತಿಯಲ್ಲಿ ಇರುತ್ತವೆ. (Na CL .) ವಿದ್ಯುತ್ತನ್ನು ಈ ನೀರಿನ ಮೂಲಕ

ಕಳುಹಿಸುವುದರಿಂದ ಈ ಎರಡು ಅಯಾನುಗಳನ್ನು ಸಂಪೂರ್ಣವಾಗಿ ಬೇರ್ಪಡಿಸ ಬಹುದು. ಇದನ್ನು ಚಿತ್ರ3ರಲ್ಲಿ ತೋರಿಸಿದೆ.



ಚಿತ್ರ 3

1 ಸೋಡಿಯಂ ಅಯಾನನ್ನು ಮಾತ್ರ ಬಲಗಡೆಗೆ ಬಿಡುವ ಅರ್ಧವ್ಯಾಪನ ಪೊರೆ

2 ಕ್ಲೋರೈಡ್ ಅಯಾನನ್ನು ಎಡಗಡೆಗೆ ಬಿಡುವ ಅರ್ಧವ್ಯಾಪನ ಪೊರೆ

ಈ ವಿಧಾನದಲ್ಲಿ ಅನೇಕ 'ಅರ್ಧವ್ಯಾಪನ ಪೊರೆ'ಗಳನ್ನು (Semi-permeable membrane) ಉಪಯೋಗಿಸುತ್ತಾರೆ. ಪ್ರತಿಯೊಂದು ಅರ್ಧವ್ಯಾಪನ ಪೊರೆಗೂ ತನ್ನದೇ ಆದ ಒಂದು "ಆಯ್ಕೆಯ" ರೀತಿಯಿರುತ್ತದೆ. ಅಂದರೆ ಕೆಲವು ಪೊರೆಗಳು ಕೇವಲ ಸೋಡಿಯಂ ಅಯಾನುಗಳನ್ನು ತನ್ನ ಮೂಲಕ ಹರಿಯಲು ಬಿಟ್ಟರೆ, ಮತ್ತೆ ಕೆಲವು ಕೇವಲ ಕ್ಲೋರೈಡ್ ಅಯಾನುಗಳನ್ನು ಮಾತ್ರ ಬಿಡುತ್ತವೆ. ಈ ರೀತಿಯ ಪೊರೆಗಳನ್ನು ಚಿತ್ರದಲ್ಲಿ ತೋರಿಸಿರುವಂತೆ ಜೋಡಿಸಿದಾಗ ಸೋಡಿಯಂ ಹಾಗೂ ಕ್ಲೋರೈಡ್ ಅಯಾನುಗಳು ಬೇರ್ಪಟ್ಟು ಶುದ್ಧ ನೀರು ದೊರೆಯುತ್ತದೆ. ಈ ರೀತಿ ಬೇರ್ಪಡೆಗೆ ಅವಶ್ಯವಾಗುವ ವಿದ್ಯುಚ್ಛಕ್ತಿ, ಸಮುದ್ರದ ನೀರಿನಲ್ಲಿರುವ ಉಪ್ಪಿನ ಪ್ರಮಾಣದ ಮೇಲೆ ನಿರ್ಧಾರವಾಗುವುದರಿಂದ, ಪ್ರಸ್ತುತದಲ್ಲಿ ಈ ಯೋಜನೆ ತುಂಬಾ ದುಬಾರಿಯಾಗಿದೆ.

ಪ್ರಯೋಗದ ಹಂತದಲ್ಲಿಯೇ ಇರುವ, ಅತ್ಯಂತ ಸುಲಭ ದರದಲ್ಲಿ ಉತ್ಪಾದನೆಗೆ ತೊಡಗಬಲ್ಲ ಲಕ್ಷಣಗಳಿರುವ ಕಡೆಯ ವಿಧಾನವನ್ನು "ಹಿಮ್ಮೊಗ ಸೂಕ್ಷ್ಮಾಭಿಸರಣ" (Reverse osmosis) ಎನ್ನುತ್ತಾರೆ. ಸಮುದ್ರದ ನೀರನ್ನು ಹೆಚ್ಚಿನ ಒತ್ತಡಕ್ಕೆ ಗುರಿಪಡಿಸಿ ಅವುಗಳನ್ನು ನಿರ್ದಿಷ್ಟವಾದ ಅರ್ಧವ್ಯಾಪನ ಪೊರೆಗಳ ಮೂಲಕ ಹರಿಸಿದಾಗ ಉಪ್ಪು ನೀರಿನಿಂದ ಬೇರ್ಪಟ್ಟು ಶುದ್ಧವಾದ ನೀರು ದೊರೆಯುತ್ತದೆ. ಇದಕ್ಕೆ ಅವಶ್ಯವಾಗಿರುವ ಅರ್ಧವ್ಯಾಪನ ಪೊರೆಗಳನ್ನು ರಾಳದಿಂದ (resin) ತಯಾರಿಸುತ್ತಾರೆ. ಅರ್ಧವ್ಯಾಪನ ಪೊರೆಗಳ ಬೆಲೆ, ಅವುಗಳ ಕಾರ್ಯನಿರ್ವಾಹಕ ಶಕ್ತಿ, ಅವುಗಳ ಕೆಲಸದ ಅವಧಿ ಹಾಗೂ ಸಾಮರ್ಥ್ಯ ಇವುಗಳನ್ನು ಇನ್ನೂ ನಿರ್ಧರಿಸಬೇಕಾಗಿದೆ. ಬಹುಶಃ ಈ

ನೂತನ ಯೋಜನೆ ತುಂಬ ಜನಪ್ರಿಯವಾಗಿ ತುಂಬ ಸುಲಭ ದರದಲ್ಲಿ ನೀರು ದೊರೆಯಬಹುದು.

ವಿಶ್ವರಾಷ್ಟ್ರ ಸಂಸ್ಥೆಯ ಯುನೆಸ್ಕೋದ ವರದಿಯಂತೆ ಪ್ರಪಂಚದಲ್ಲಿ ಪ್ರಸ್ತುತದಲ್ಲಿ 50 ಲಕ್ಷ ಗ್ಯಾಲನ್ ಸಿಹಿನೀರನ್ನು ದಿನವೊಂದಕ್ಕೆ ಸಮುದ್ರದಿಂದ ಪಡೆಯಲಾಗುತ್ತಿದೆ. ಈ ಪ್ರಮಾಣವನ್ನು ಕ್ರಮೇಣ ಅಧಿಕಗೊಳಿಸಿದಲ್ಲಿ ಕೈಗಾರಿಕೆ ಹಾಗೂ ವ್ಯವಸಾಯಗಳಿಗೆ ಅತ್ಯಂತ ಪ್ರಯೋಜನಕಾರಿಯಾಗಬಲ್ಲದು. ವ್ಯವಸಾಯದಿಂದ ಉತ್ಪನ್ನಕ್ಕೆ ಕೇವಲ ಮಳೆಯ ಮೇಲೆ ಅವಲಂಬಿತವಾಗಿರುವ ದೇಶಗಳಿಗೆ ಈ ಸಮುದ್ರದಿಂದ ಪಡೆದ ಶುದ್ಧ ನೀರು ಒಂದು ವರವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಭಾರತ ಸರ್ಕಾರವೂ ಈ ದಿಕ್ಕಿನಲ್ಲಿ ಪ್ರಯತ್ನ ನಡೆಸುತ್ತಿರುವುದು ಸ್ವಾಗತಾರ್ಹ.

ಅವಿಶ್ರಾಂತ ಭೂಗರ್ಭ

ವೈ. ಲಿಂಗರಾಜು


ಭೂಚರಿತ್ರೆಯ ಪುಟಗಳನ್ನು ತಿರುವಿ ಓದಿದಾಗ ಭೂಮಿಯು ಈಗಿನ ತನ್ನ ಮೇಲ್ಮೈ ಲಕ್ಷಣಗಳನ್ನು ಪಡೆಯುವ ಮುನ್ನ ನಾನಾ ರೂಪಗಳನ್ನು ತಳೆದಿತ್ತೆಂಬುದನ್ನು ತಿಳಿಯಬಹುದು. ಹಿಂದೆ ಟೆತಿಸ್ ಸಾಗರವಿದ್ದಲ್ಲಿ ಈಗ ಪ್ರಪಂಚದಲ್ಲೇ ಅತಿ ಎತ್ತರದ ಶಿಖರವುಳ್ಳ ಹಿಮಾಲಯ ಪರ್ವತವು ಜನ್ಮವೆತ್ತಿದೆ. ಕೆಲವು ಸಮತಟ್ಟಾದ ಪ್ರದೇಶಗಳು ಕುಸಿದು ಸರೋವರಗಳಾಗಿವೆ, ಕೆಲವೆಡೆಗಳಲ್ಲಿ ಭೂಮಿಯೇ ಬಾಯ್ತೆರೆದು ಲಾವಾರಸವನ್ನು ಉಗುಳುತ್ತಿದೆ. ಒಮ್ಮೊಮ್ಮೆ ಕಂಪಿಸುವ ಭೂಭಾಗಗಳು ಮಾನವತೆಯನ್ನು ನಡುಗಿಸಿ ಪ್ರಾಣರಾಶಿಯನ್ನೇ ಹಾರಿಸಿಕೊಂಡು ಹೋಗಿವೆ. ಇದನ್ನೆಲ್ಲಾ ಗಮನಿಸಿದಾಗ ಯಾವುದೋ ನಿಗೂಢ ಚಲನಾ ಶಕ್ತಿಗಳು ಭೂಗರ್ಭದಲ್ಲಿ ಅಡಗಿವೆ ಎಂಬುದು ಖಚಿತ. ಈ ಚಲನೆಗಳು ವೈವಿಧ್ಯಮಯ ಮತ್ತು ಇವುಗಳ ಉಗಮಕ್ಕೆ ಕಾರಣಗಳು ಬಹಳ.

ಚಲನೆಗಳ ವೈವಿಧ್ಯತೆ

ಚಲನೆಗಳನ್ನು ಅವುಗಳ ತೀವ್ರತೆ ಮತ್ತು ವೈಶಾಲ್ಯತೆಗನುಗುಣವಾಗಿ ಎರಡು ರೀತಿಗಳಾಗಿ ವಿಂಗಡಿಸಬಹುದು. ಮೊದಲನೆಯದು ತತ್ಕ್ಷಣದಲ್ಲಿ ಉಂಟಾಗುವ ಅಲ್ಪ ಚಲನೆ. ಇಂತಹ ಚಲನೆಗಳು ಭೂಮಿಯನ್ನು ಕಂಪಿಸುವ ಅಥವಾ ಭೂಕಂಪನಕ್ಕೆ ಕಾರಣೆ ಸುವ ಚಲನೆಗಳನ್ನುಂಟುಮಾಡುವವಾಗಿರುತ್ತವೆ. ಎರಡನೆಯದು ನಿಧಾನವಾದರೂ ಅತಿ ದೊಡ್ಡ ಪ್ರಮಾಣದ ಚಲನೆಗಳು. ಇವು ಪರ್ವತ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗುವ ಮತ್ತು ಸಮುದ್ರಗಳ ಆಕಾರವನ್ನು ಬದಲಿಸುವ ಚಲನೆಗಳಾಗಿರುತ್ತವೆ. ಭೂಮಿಯ ಮೇಲ್ಮೈಗೆ ಸಮಾನಾಂತರವಾಗಿ ಸಂಕುಚಿತ ಬಲ (Compressional force) ವರ್ತಿಸಿದಾಗ ಹೊರ ಪದರಗಳು ಮಡಿಕೆಗೊಳ್ಳುತ್ತವೆ. (ಪರ್ವತ ನಿರ್ಮಾಣ). ಹಾಗೆಯೇ ವಿರುದ್ಧ ದಿಕ್ಕಿಗೆ ಚಲಿಸುವ ಬಲಗಳು ಪರಸ್ಪರ ವರ್ತಿಸಿದಾಗ (tangential force)ಪದರದಲ್ಲಿ ಬಿರುಕು ಮತ್ತು ಕುಸಿತಗಳುಂಟಾಗುತ್ತವೆ. ಕೆಲವುವೇಳೆ ತೀವ್ರವಾಗಿ ಉಂಟಾದ ಮಡಿಕೆಗಳು ಪಕ್ಕದಲ್ಲಿ ಕುಸಿತವನ್ನುಂಟುಮಾಡುತ್ತವೆ. ಹೆಚ್ಚಿನ ಮಟ್ಟಿಗೆ ಆಯಾ ಸ್ಥಳದಲ್ಲಿರುವ ಶಿಲೆಗಳ ತಡೆತ-ಶಕ್ತಿಯೂ ಉಂಟಾಗುವ ಬದಲಾವಣೆಗೆ ಕಾರಣ. ಈಗ ಪ್ರಪಂಚದಲ್ಲಿರುವ ಪರ್ವತ ಶ್ರೇಣಿಗಳು ಸಾವಿರಾರು ಶತಮಾನಗಳ ಕಾಲವನ್ನು ತೆಗೆದುಕೊಂಡು ಸ್ವಲ್ಪಸ್ವಲ್ಪವಾಗಿಯೇ ಏರುತ್ತಾ ಈಗಿನ ಎತ್ತರವನ್ನು ತಲುಪಿವೆ.

ಭೂಗರ್ಭದ ರಚನೆ

ಈ ಎಲ್ಲ ಚಲನೆಗಳ ಕಾರಣವನ್ನು ತಿಳಿಯುವ ಮೊದಲು ಭೂಗರ್ಭದ ರಚನೆಯನ್ನು ತಿಳಿಯುವುದು ಸೂಕ್ತ. ಭೂಕಂಪನ ಮಾಪಕದಿಂದ (siesmograph) ಕಂಪನದ ಅಲೆಗಳ ವೇಗವನ್ನು ತಿಳಿದು ಭೂಗೋಳದ ಒಳರಚನೆಯನ್ನು ಅರಿಯಲಾಗಿದೆ. ಭೂಗೋಳದ ತ್ರಿಜ್ಯವು ಸುಮಾರು 6350 ಕಿ. ಮೀ. ಗಳಷ್ಟಿದ್ದು ಅದರಲ್ಲಿ ಮೇಲಿನ 15 ರಿಂದ 40 ಕಿ. ಮೀ. ಗಳಷ್ಟು ಭಾಗವು (ಸಾಗರದಾಳದಲ್ಲಿ 15 ಕಿ. ಮೀ. ಮತ್ತು ಭೂಭಾಗದಲ್ಲಿ 40 ಕಿ. ಮೀ.) ಭೂಮಿಯ ಹೊರಪದರ (crust) ವಾಗಿದ್ದು ಇದರ ಸರಾಸರಿ ಸಾಂದ್ರತೆಯು 2.5 ರಿಂದ 3ರ ವರೆಗೂ ಇರುತ್ತದೆ. ಈ ಪದರಕ್ಕೂ ಕೆಳಗಿರುವ ವಲಯವೇ ಮ್ಯಾಂಟಲ್. ಈ ಪದರವು ಸುಮಾರು 2900 ಕಿ. ಮೀ. ದಪ್ಪವಿದ್ದು ಶಾಖ 3000° ಸೆಂಟಿಗ್ರೇಡಿನಷ್ಟಿರುತ್ತದೆ ಮತ್ತು ಅಲ್ಲಿನ ಒತ್ತಡ ಅಪಾರ. ಅಗ್ನಿ ಪರ್ವತಗಳಿಂದ ಆಚೆಗೆ ನುಗ್ಗುವ ಲಾವಾರಸವು ಉಗಮವಾಗುವುದು ಇಲ್ಲಿಯೇ ಮತ್ತು ಕೆಲವು ಭೂಕಂಪಗಳ ಪ್ರಾರಂಭವಾಗುವುದೂ ಇಲ್ಲಿಯೇ. ಮ್ಯಾಂಟಲ್‌ನ ಕೆಳಗಿನ ವಲಯವೇ ಭೂಗೋಳದ ಮಧ್ಯಭಾಗ. ಇದು ಸುಮಾರು 3450 ಕಿ. ಮೀ. ನಷ್ಟು ತ್ರಿಜ್ಯವುಳ್ಳದಾಗಿದ್ದು ಇದನ್ನು ಒಳ ಮತ್ತು ಹೊರ ಕೋರ್ ಎಂದು ವಿಂಗಡಿಸಲಾಗಿದೆ. ಇದರಲ್ಲಿ ಹೊರಭಾಗವು ದ್ರವ ಸ್ಥಿತಿಯಲ್ಲಿದ್ದು ಒಳಗಿನ ಭಾಗವು ನಿಕ್ಕಲ್ ಮತ್ತು ಕಬ್ಬಿಣದಿಂದ ಕೂಡಿರುತ್ತದೆ ಎಂದು ತಿಳಿಯಲಾಗಿದೆ.



ಚಿತ್ರ 1


ಭೂಮಿಯ ಛೇದ ಚಿತ್ರ

A ಒಳ ಕೋರ್ B ಹೊರ ಕೋರ್ C ಮ್ಯಾಂಟಲ್ D ಹೊರ ಪದರ

ಚಲನೆಗೆ ಕಾರಣಗಳು

ಭೂಮಿಯು ಉಗಮವಾದಾಗ ಅತಿಯಾದ ಶಾಖವನ್ನು ಹೊಂದಿದ್ದು ಕ್ರಮೇಣ ಹೊರ ಪದರವು ತಣ್ಣಗಾಗಿ ಸಂಕುಚಿತಗೊಂಡು ನಾನಾ ಚಲನೆಗಳು ಉಗಮವಾದುವೆಂದು ಪರಿಗಣಿಸಲಾಗಿದೆ. ಹೀಗೆ ಸಂಕುಚಿತಗೊಳ್ಳುವಾಗ ಭೂಗರ್ಭದಲ್ಲಿ ಚಲನಬಲವು ಹೊರ ಪದರದ ಮೇಲ್ಮೈಗೆ ಲಂಬವಾಗಿ ವರ್ತಿಸಿದಾಗ ಭೂಮಿಯ ಹೊರ ಪದರದ ಭಾಗಗಳು ಸುತ್ತಲಿನ ದಿಕ್ಕುಗಳಲ್ಲಿ ಚಲಿಸುತ್ತವೆ. ಇಂತಹ ಚಲನೆಗಳಿಂದ ಸಮುದ್ರದ ಪಾತ್ರಗಳುಂಟಾಗುವ ಅಥವಾ ಎತ್ತರದ ಭೂಭಾಗಗಳುಂಟಾಗುವ ಕಾರ್ಯವಾಗುತ್ತದೆ.

ಭೂಮಿಯ ಹೊರಪದರದಲ್ಲಿರುವ ಶಿಲೆಗಳಲ್ಲಿ ಅಲ್ಲಲ್ಲೇ ವಿಕಿರಣಶೀಲ ಖನಿಜಗಳಿದ್ದು ಅವುಗಳು ತಮ್ಮ ಚಟುವಟಿಕೆಯಿಂದ ಶಾಖೋತ್ಪತ್ತಿಯುಂಟುಮಾಡುತ್ತವೆ. ಹೀಗೆ ಉಂಟಾದ ಶಾಖವು ಹೊರಪದರದ ಹೊರಹೊಮ್ಮಲಾರದೆ ಅಲ್ಲಲ್ಲಿಯೇ ಶೇಖರಗೊಂಡು 1150° ಸೆಂಟಿಗ್ರೇಡಿನವರೆಗೂ ಹೆಚ್ಚಾದ ಶಾಖವುಂಟಾದಾಗ ಅದು ಶೇಖರಗೊಂಡ ಸುತ್ತಮುತ್ತಲಿನ ಭಾಗಗಳೆಲ್ಲಾ ಕರಗಲ್ಪಡುತ್ತವೆ. ನಂತರ ಕರಗಿದ ಭಾಗದಲ್ಲಿ ಶಾಖವು ತಗ್ಗಲ್ಪಟ್ಟು ಸಂಕುಚಿತಗೊಂಡು ಘನರೂಪಕ್ಕೆ ಹಿಂತಿರುಗಿದಾಗ ಕುಸಿದ ಭಾಗವು ಸ್ವಸ್ಥಾನಕ್ಕೇರುತ್ತದೆ. ಇಂತಹ ಶಾಖದ ಏರಿಕೆ ಮತ್ತು ತಗ್ಗುವಿಕೆಯ ಕಾರ್ಯಕ್ಕೆ "ಉಷ್ಣಚಕ್ರೀಯ ಪ್ರಕ್ರಿಯೆ" (thermal cycle) ಎಂದು ಕರೆಯಲಾಗಿದೆ.




ಚಿತ್ರ 2

ಹೊರಪದರದ ಮೇಲೆ ಪರಿಣಾಮವನ್ನುಂಟುಮಾಡುವ ಪರಸ್ಪರ ವಿರುದ್ಧ ಬಲಗಳು ಮತ್ತು ಸಂಕುಚಿತ ಬಲಗಳು

ಮತ್ತೊಂದು ಸಿದ್ಧಾಂತದ ಪ್ರಕಾರ ಮ್ಯಾಂಟಲ್‌ನ ಕೆಳವಲಯವು ಕೋರ್ ಭಾಗಕ್ಕೆ ತಾಗಿದ್ದು ಅಲ್ಲಿನ ಹೆಚ್ಚಿನ ಶಾಖಕ್ಕೆ ಈಡಾಗಿ ವಿಕಾಸಗೊಳ್ಳುತ್ತವೆ ಮತ್ತು ತೂಕವೂ ಕಡಿಮೆಯಾಗುತ್ತದೆ. ತತ್ಪರಿಣಾಮವಾಗಿ ಒಂದು ಹಂಡೆಯಲ್ಲಿನ ನೀರು ಕೆಳಗಿನ ಒಲೆಯ ಶಾಖಕ್ಕೆ ಕಾದು ಮೇಲಕ್ಕೆ ಹೋಗುವಂತೆ ಕೆಳವಲಯದ ಮ್ಯಾಂಟಲ್ ಭಾಗವು ಮೇಲಕ್ಕೂ ಮೇಲಿನ ಭಾಗವು ಕೆಳಕ್ಕೂ ಬರುತ್ತದೆ. ಇದಕ್ಕೆ "ಸಂವಹನಕೋಶ ಸಿದ್ಧಾಂತ"

(Convection cell hypothesis) ಎಂದು ಹೆಸರು. ಈ ಸಿದ್ಧಾಂತದ ಪ್ರಕಾರ ಮೇಲಿನ ವಸ್ತುವು ಕೆಳಗಿಳಿಯುವಾಗ ಹೊರಪದರದ ಭಾಗವು ಕುಸಿಯುತ್ತದೆ. ಹಾಗೆ ಕುಸಿದ ಭಾಗದಲ್ಲಿ ಹಗುರಾದ ವಸ್ತುಗಳು ತುಂಬಿರುತ್ತವೆ. ಹಾಗೆ ಕಾರ್ಯೋನ್ಮುಖಿಯಾದ ವಸ್ತುಗಳನ್ನು ಕೆಳಗೆ ತಂದು ಕೆಲಕಾಲ ಕೆಳಮುಖ ಸೆಳೆತವನ್ನು ಸ್ಥಗಿತಗೊಳಿಸಬಹುದು. ಹಾಗೆ ಕೆಳವಲಯವು ತಣ್ಣಗಿನ ವಸ್ತುಗಳಿಂದ ತುಂಬಲ್ಪಟ್ಟಾಗ ಬರ್ಫದ ತುಣುಕೊಂದನ್ನು (ice) ನೀರಿನಲ್ಲಿ ಬಲವಂತವಾಗಿ ಮುಳುಗಿಸಿದಾಗ ಅದು ಪುನಃ ಮೇಲಕ್ಕೆ ಬರುವಹಾಗೆ ಮೇಲೆಬಂದ ವಸ್ತುಗಳು ಪರ್ವತವನ್ನೇ ನಿರ್ಮಿಸಿರಬಹುದೆಂದು ಈ ಸಿದ್ಧಾಂತ ತಿಳಿಸುತ್ತದೆ.



ಚಿತ್ರ 3
ಭೂಮಿಯೊಳಗಿನ ಸಂವಹನ ಕೋಶ

ಭೂಗೋಳದಲ್ಲಿನ ಎಲ್ಲ ಖಂಡಗಳಲ್ಲಿಯೂ ಈ ರೀತಿಯ ಚಲನೆಗಳುಂಟಾಗಿರುವುದನ್ನು ಅದರ ಚರಿತ್ರೆಯುದ್ದಕ್ಕೂ ಕಾಣಬಹುದು. ಒಮ್ಮೆ ಸಾಗರದಾಳದಲ್ಲಿ ಮಡಿಕೆಗೊಂಡಿದ್ದ ಪ್ರದೇಶವು ಕ್ರಮೇಣ ಮೇಲಕ್ಕೆತ್ತಲ್ಪಟ್ಟು ಪರ್ವತಾಕಾರವನ್ನು ಪಡೆದಿರುವುದಕ್ಕೆ ನಾವು ಕಾಣುವ ಸಂಚಿತ ಶಿಲೆಗಳೇ (sedimentary rocks) ಸಾಕ್ಷಿ. ಈ ಶಿಲೆಗಳ ಪದರಗಳು ಮಡಿಕೆಗೊಂಡಿರುವುದನ್ನು ಸ್ಪಷ್ಟವಾಗಿ ಪ್ರದರ್ಶಿಸುತ್ತವೆ. ಅಲ್ಲದೆ ಈ ಶಿಲೆಗಳಲ್ಲಿ ನಾವು ಸಾಗರದಾಳಗಳಲ್ಲಿ ವಾಸಿಸುತ್ತಿದ್ದ ಪ್ರಾಣಿಗಳ ಪಳೆಯುಳಿಕೆಗಳನ್ನೂ ಮತ್ತು ಶಿಲಾನಿರ್ಮಾಣ ಕಾರ್ಯದಲ್ಲಿ ಭಾಗಿಯಾದ ಶಿಲಾಕಣಗಳ ಗುಣಗಳು ನೀಡುವ ಕುರುಹುಗಳನ್ನೂ ಕಾಣಬಹುದು. ಇದಕ್ಕೆ ಒಳ್ಳೆಯ ನಿದರ್ಶನ ಹಿಮಾಲಯದ ಶಿಲೆಗಳಲ್ಲಿ ಕಂಡುಬರುವ ಸಮುದ್ರವಾಸಿ ಜೀವಿಗಳ ಪಳೆಯುಳಿಕೆಗಳು.

ಗ್ರಂಥಋಣ

Principles of physical geology by Arthur Holmes
The earth by Frantlyn M Branley
The interior of the earth by K. E. Bullen (Scientific American)
The earth's heat by A. E. Benfield (Scientific American)

ಹಾಲೋಗ್ರಫಿ

ಟಿ. ವೈ. ರಾಮಚಂದ್ರನ್

ಛಾಯಾ ಚಿತ್ರಣವು ಬಹಳ ಹಿಂದಿನಿಂದ ಬೆಳೆದು ಬಂದ ಒಂದು ಕಲೆ. ಹತ್ತೊಂಬತ್ತನೆಯ ಶತಮಾನದಿಂದಲೂ ಕಣ್ಣಿಗೆ ಗೋಚರವಾಗುವ ದೃಶ್ಯಗಳನ್ನು, ಒಂದು ತಟ್ಟೆಯ ಮೇಲಾಗಲಿ ಅಥವಾ ದ್ಯುತಿ ಸೂಕ್ಷ್ಮ ಕಾಗದದ ಮೇಲಾಗಲಿ, ಶಾಶ್ವತವಾಗಿರುವಂತೆ ಮುದ್ರಿಸುವ ಕಾರ್ಯಗಳು ಯಶಸ್ವಿಯಾಗಿ ನಡೆಯುತ್ತಲೇ ಇವೆ. ಈ ವಿಧಾನವೇ 'Photography' ಅಥವಾ ಛಾಯಾಚಿತ್ರಣ ವಿಧಾನ. ಒಂದು ವಸ್ತುವಿನ ಛಾಯಾ ಚಿತ್ರವನ್ನು ರಚಿಸಬೇಕಾದರೆ, ಛಾಯಾಚಿತ್ರಗ್ರಾಹಿ (Camera) ಯನ್ನು ಉಪಯೋಗಿಸುತ್ತೇವೆ. ಇದರಿಂದ ರಚಿತವಾದ ಛಾಯಾಚಿತ್ರವು ಯಾವ ಬದಿಯಿಂದ ನೋಡಿದರೂ, ಒಂದೇ ರೀತಿ ಕಾಣುತ್ತದೆ. ಇದಕ್ಕೆ ದ್ವಿವಿಮಿತಿ (Two-dimensional) ಚಿತ್ರವೆಂದು ಹೆಸರು. ಮೂರನೆಯ ವಿಮಿತಿ ಅಥವಾ ಆಳ ಚಿತ್ರದಲ್ಲಿ ಮೂಡಿರುವುದಿಲ್ಲ. ಅಂದರೆ ಚಿತ್ರವು ಪರಿಪೂರ್ಣವಾಗಿರುವುದಿಲ್ಲ.

1960 ರಲ್ಲಿ ಲೇಸರ್ ಬೆಳಕನ್ನು ಕಂಡುಹಿಡಿದ ನಂತರ ವಸ್ತುವಿನ ಅಥವಾ ದೃಶ್ಯದ "ತ್ರಿವಿಮಿತಿ ಛಾಯಾ ಚಿತ್ರಣ" (Three-dimensional Photography) ಅಥವಾ ಪರಿಪೂರ್ಣ ಚಿತ್ರಣ ಸಾಧ್ಯವಾಯಿತು. 1948ರಲ್ಲಿ ಬ್ರಿಟಿಷ್ ವಿಜ್ಞಾನಿ ಡಾ॥ ಡೆನಿಸ್ ಗೇಬರ್ ಈ ಚಿತ್ರೀಕರಣ ವಿಧಾನವನ್ನು ಮೊದಲ ಬಾರಿಗೆ ಕಂಡುಹಿಡಿದರು. ಶ್ರೇಷ್ಠವಾದ ಈ ಸಂಶೋಧನೆಯ ಫಲವಾಗಿ ಅವರಿಗೆ 1971ನೇ ಇಸವಿಯ ಭೌತಶಾಸ್ತ್ರ ವಿಭಾಗದ ನೋಬೆಲ್ ಪಾರಿತೋಷಕವು ದೊರಕಿತು. ಅವರು ಕಂಡು ಹಿಡಿದ ವಿಧಾನವು 'ಹಾಲೋಗ್ರಫಿ' ಎಂದು ಪ್ರಸಿದ್ಧವಾಗಿದೆ.

'ಹಾಲೋಗ್ರಫಿ' ಗ್ರೀಕ್ ಭಾಷೆಯಿಂದ ಬಳಸಿಕೊಂಡ ಪದ. ಗ್ರೀಕ್ ಭಾಷೆಯಲ್ಲಿ ಇದಕ್ಕೆ "ಸಂಪೂರ್ಣ ಚಿತ್ರ ರಚನೆ" ಎಂದು ಅರ್ಥ. ಈ ತಂತ್ರದಲ್ಲಿ ಒಂದು ದೃಶ್ಯ ಅಥವಾ ವಸ್ತುವಿನ ಛಾಯೆಯನ್ನು ಸಂಪೂರ್ಣವಾಗಿ ಚಿತ್ರಿಸಿ, ನಂತರ ಅದರ ಪುನರುತ್ಪತ್ತಿ ಮಾಡಲಾಗುತ್ತದೆ. ಛಾಯಾ ಚಿತ್ರಣವಾದ ತೆರೆಯನ್ನು ಸಾಮಾನ್ಯ ಕ್ರಮಕ್ಕನುಸಾರವಾಗಿ ಸಂಸ್ಕರಿಸಿದರೆ, ದೃಶ್ಯದ ಅಥವಾ ವಸ್ತುವಿನ 'ಹಾಲೋಗ್ರಾಂ' ಸಿದ್ಧವಾಗುತ್ತದೆ. ಇದರಲ್ಲಿ ಮೂಡಿರುವ ಚಿತ್ರವನ್ನು ಬೇರೆ ಬೇರೆ ಕೋನಗಳಿಂದ ನೋಡಿದಾಗ, ಬೇರೆ ಬೇರೆಯಾಗಿ ಕಾಣುತ್ತದೆ. ಬಹಳ ಹಿಂದೆ, ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಸಾಮರ್ಥ್ಯ

ವನ್ನು ಉತ್ಪನ್ನ ಪಡಿಸಲು ಈ ತಂತ್ರವು ವಿಜ್ಞಾನಿಗಳ ಕಲ್ಪನೆಯಲ್ಲಿದ್ದರೂ, ಅನೇಕ ವರ್ಷಗಳವರೆಗೆ ಅದು ಒಂದು ಕನಸಾಗಿಯೇ ಉಳಿಯಿತು. 1960ರಲ್ಲಿ ಲೇಸರ್ ಬೆಳಕನ್ನು ಕಂಡುಹಿಡಿದ ನಂತರ ಆ ಕನಸು ನನಸಾಯಿತು. 1962ರಿಂದ 1964ರ ಅವಧಿಯಲ್ಲಿ ಈ ವಿಧಾನವು ಅತಿ ಕ್ಷಿಪ್ರವಾಗಿ ಬೆಳೆಯಿತು.

ಕೆಲವು ವಿಷಯಗಳಲ್ಲಿ ಈ ತಂತ್ರವು 'Photography'ಯನ್ನು ಹೋಲುವುದಾದರೂ, ಮೂಲವಾಗಿ ಇದು ಅದರಿಂದ ಬೇರೆಯಾಗಿರುತ್ತದೆ. ಈ ಎರಡು ವಿಧಾನಗಳೂ ಬೇರೆ ಬೇರೆ ಕ್ಷೇತ್ರಗಳಲ್ಲಿ ಉಪಯೋಗಿಸಲ್ಪಡುತ್ತವೆ. ಕೆಲವು ಕ್ಷೇತ್ರಗಳಲ್ಲಿ Photography ಗಿಂತ ಹಾಲೋಗ್ರಫಿಯನ್ನು ಉತ್ತಮವಾಗಿ ಮತ್ತು ಯಶಸ್ವಿಯಾಗಿ ಉಪಯೋಗಿಸಬಹುದಾದರೂ. ಫೋಟೋಗ್ರಫಿಯ ಉಪಯುಕ್ತತೆಗಳು ಅದ್ವಿತೀಯವಾದುವು. ಕೆಲವು ಕಾರ್ಯಗಳು ಹಾಲೋಗ್ರಫಿಯಿಂದ ಸಾಧ್ಯವೇ ಹೊರತು. ಫೋಟೋಗ್ರಫಿಯಿಂದಲ್ಲ.

Photography ಯಲ್ಲಿ ಪ್ರತಿಬಿಂಬದ ಬೆಳಕಿನ ವಿನ್ಯಾಸವನ್ನು (Irradiance distribution) ದ್ವಿವಿಮಿತಿಯಲ್ಲಿ ಮುದ್ರಿಸಲಾಗುತ್ತದೆ. ದೃಶ್ಯದಲ್ಲಿ ಅನೇಕ ಬಿಂದುಗಳಿಂದ ಬೆಳಕು ಪ್ರತಿಫಲಿಸಲ್ಪಡುತ್ತದೆ. ಪ್ರತಿಫಲಿತವಾದ ಬೆಳಕಿನ ಅಲೆಗಳು ಒಟ್ಟುಗೂಡಿ ಒಂದು "ಸಂಪೂರ್ಣ ತರಂಗ"ವಾಗುತ್ತದೆ. ಇವಕ್ಕೆ 'ವಸ್ತು ತರಂಗ' (Object wave) ಎಂದು ಕರೆಯಬಹುದು. ಈ ಸಂಮಿಶ್ರಿತ (Complex) ತರಂಗವು ಮಸೂರದ ಮೂಲಕ ಹಾದಾಗ. ವಸ್ತುವಿನ ಪ್ರತಿಬಿಂಬವು ಏರ್ಪಡುತ್ತದೆ. ಈ ತರಂಗವು ದ್ಯುತಿ ಸೂಕ್ಷ್ಮವುಳ್ಳ ತಟ್ಟೆಯ ಮೇಲೆ ಪತನವಾದರೆ. ವಸ್ತುವಿನ ಪ್ರತಿಬಿಂಬವು ಅದರ ಮೇಲೆ ಮುದ್ರಿತವಾಗುತ್ತದೆ.


Holography ವಿಧಾನವೇ ಬೇರೆ. ಇದರಲ್ಲಿ ವಸ್ತುವಿನ ಪ್ರತಿಬಿಂಬವು ಮುದ್ರಿತವಾಗುವ ಬದಲು. "ವಸ್ತು ತರಂಗವೇ" ಮುದ್ರಿತವಾಗುತ್ತವೆ. ಈ ಮುದ್ರಣದ ಮೇಲೆ ಬೆಳಕು ಬಿದ್ದಾಗ. ಮುದ್ರಿಸಲ್ಪಟ್ಟ ಮೊದಲಿನ ವಸ್ತು ತರಂಗವು ಪುನರ್ರಚಿತವಾಗುತ್ತದೆ. ಪುನರ್ರಚಿತ ವಸ್ತು ತರಂಗವನ್ನು ಸೂಕ್ತ ರೀತಿಯಲ್ಲಿ ನೋಡಿದರೆ. ಮೊದಲಿನ ವಸ್ತು ಅಥವಾ ದೃಶ್ಯ ಗೋಚರವಾಗುತ್ತದೆ.

ಒಂದು ಸನ್ನಿ ಬೆಳಕಿನ ಮೂಲದಿಂದ ಏಕವರ್ಣದ ಬೆಳಕನ್ನು ಉತ್ಪತ್ತಿಮಾಡಿ ಅದನ್ನು ಹಾಲೋಗ್ರಫಿಯಲ್ಲಿ ಉಪಯೋಗಿಸಲಾಗುವುದು. ಈ ಸಮನ್ವಿತ (Coherent) ಬೆಳಕು. ಕಾಲಕ್ಕನುಗುಣವಾಗಿ, ಸ್ಥಿರವಾದ ದ್ಯುತಿ ಸಂಪಾತ (Interference) ಪರಿಣಾಮಗಳನ್ನು ಪ್ರದರ್ಶಿಸುತ್ತದೆ. ಸಮನ್ವಿತ ಬೆಳಕಿನ ಒಂದು ಕಿರಣಾವಳಿಯು ಎರಡು ಭಾಗವಾಗಿ. ಒಂದು ಭಾಗದ ಬೆಳಕು ನೇರವಾಗಿ ಚಿತ್ರೀಕರಣವಾಗಬೇಕಾದ ವಸ್ತು ಅಥವಾ

ದೃಶ್ಯದ ಮೇಲೂ ಮತ್ತೊಂದು ಭಾಗದ ಬೆಳಕು ನೇರವಾಗಿ ಛಾಯಾಗ್ರಾಹಕ ತಟ್ಟೆ ಅಥವಾ ತೆರೆಯ ಮೇಲೂ ಬೀಳುತ್ತವೆ. ದೃಶ್ಯದ ಮೇಲೆ ಬೀಳುವ ಬೆಳಕು ಚದುರಿ 'ದ್ಯುತಿನಮನ' (Diffraction) ಹೊಂದುತ್ತದೆ. ದೃಶ್ಯದಿಂದ ಪ್ರತಿಫಲನಗೊಂಡ ಬೆಳಕು ತೀವ್ರತೆ (Intensity) ಯಲ್ಲಿಯೂ ಮತ್ತು ನೆಲೆ (Phase) ಯಲ್ಲಿಯೂ ವ್ಯತ್ಯಾಸ ಗೊಳ್ಳುತ್ತದೆ. ಮತ್ತೊಂದು ಭಾಗದ ಬೆಳಕು ನೇರವಾಗಿ ಪತನವಾಗುವುದರಿಂದ ಅದರಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ. ತೆರೆಯ ಮೇಲೆ ನೇರವಾಗಿ ಬೀಳುವ ಈ ಬೆಳಕಿಗೆ 'ಆಧಾರ ತರಂಗ' (Reference wave) ಎಂದು ಹೆಸರು. 'ವಸ್ತು ತರಂಗ' ಮತ್ತು 'ಆಧಾರ ತರಂಗ'ಗಳು ಸಮನ್ವಿತವಾದುದರಿಂದ, ಅವು ದ್ಯುತಿಸೂಕ್ಷ್ಮ ತೆರೆಯ ಮೇಲೆ ಸಂಧಿಸಿದಾಗ, ಸ್ಥಿರವಾದ ದ್ಯುತಿಸಂಪಾತ ನಮೂನೆಗಳು (Interference pattern) ಏರ್ಪಡುತ್ತವೆ. ಈ ನಮೂನೆಯಲ್ಲಿ ಬೇರೆ ಬೇರೆ ಪ್ರಕಾಶವುಳ್ಳ ಸಂಮಿಶ್ರಿತ ಕರೆ (Fringes) ಗಳ ಸಮೂಹವೇ ಇರುತ್ತದೆ. ಇವೆಲ್ಲವೂ ಸಂಪೂರ್ಣವಾಗಿ ತೆರೆಯ ಮೇಲೆ ಮುದ್ರಿತವಾಗುತ್ತವೆ. ಎಲ್ಲಾ ವಿವರಗಳನ್ನೂ ಪಡೆದಿರುವ ಈ ದ್ಯುತಿ ಸಂಪಾತ ನಮೂನೆಗಳ ತೆರೆಗೆ 'ಹಾಲೋಗ್ರಾಂ' ಎಂದು ಹೆಸರು. ಈ ನಮೂನೆಗಳು ಬೇರೆ ಬೇರೆ ದೃಶ್ಯಗಳಿಗೆ ಬೇರೆ ಬೇರೆಯಾಗಿರುತ್ತವೆ. ದೃಶ್ಯ ಮುದ್ರಿತವಾದ ಹಾಲೋಗ್ರಾಂನಲ್ಲಿ ದ್ಯುತಿ ಸಂಪಾತ ಕರೆಗಳಿಗನುಗುಣವಾಗಿ, ಪೂರ್ಣದರ್ಶಕ ಮತ್ತು ಅಪಾರದರ್ಶಕ ವಿಸ್ತೀರ್ಣಗಳ ಸಂಮಿಶ್ರಿತ ವಿನ್ಯಾಸಗಳು ಇರುತ್ತವೆ. ಈಗ ಹಾಲೋಗ್ರಾಮನ್ನು ಮೊದಲಿನ ಆಧಾರ ತರಂಗದ ಬೆಳಕಿಗೆ ಒಡ್ಡಿದಾಗ ಪಾರದರ್ಶಕ ಭಾಗಗಳಿಂದ ಬೆಳಕು ಹಾದು, ನಿರ್ಗಮಿಸುವ ಬೆಳಕು ಸಂಮಿಶ್ರಿತ ತರಂಗವಾಗಿರುತ್ತದೆ. ಮುದ್ರಿತವಾಗಿರುವ ದ್ಯುತಿ ಸಂಪಾತ ಕರೆಗಳ ಕ್ರಿಯೆಯಿಂದ, ಹಾಲೋಗ್ರಾಂನಿಂದ ಹಾದು ಬರುವ ಬೆಳಕು ಮೂರು ಪ್ರತ್ಯೇಕ ಅಂಗಗಳಾಗಿ ವಿಂಗಡಿಸಲ್ಪಡುತ್ತದೆ. ಅದರಲ್ಲಿ ಒಂದು ಅಂಗವು ಮೊದಲಿನ 'ವಸ್ತು ತರಂಗ'ವನ್ನು ಹೋಲುತ್ತದೆ. ಸರಿಯಾದ ದೃಷ್ಟಿಸಾಧನದಿಂದ ಈ ಬೆಳಕನ್ನು ನೋಡಿದರೆ, ಮೊದಲಿನ ದೃಶ್ಯವು ಇದ್ದಂತೆಯೇ ಗೋಚರವಾಗುತ್ತದೆ. ಹಾಲೋಗ್ರಫಿ ವಿಧಾನದಲ್ಲಿ ಗಮನಿಸಬೇಕಾದ ಎರಡು ಮುಖ್ಯ ಅಂಶಗಳು – ಮೊದಲನೆಯದಾಗಿ, ಒಂದು ತೆರೆಯ ಮೇಲೆ ಸಂಮಿಶ್ರಿತ ದ್ಯುತಿಸಂಪಾತ ನಮೂನೆಗಳನ್ನು ಮುದ್ರಿಸುವುದು ಮತ್ತು ಎರಡನೆಯದಾಗಿ, ತೆರೆಯನ್ನು ಸೂಕ್ತ ಬೆಳಕಿನಿಂದ ಪ್ರಕಾಶಿಸಿದಾಗ, ಅದರಿಂದ ಹೊರ ಬರುವ ಬೆಳಕು 'ವಸ್ತುತರಂಗ'ವನ್ನು ಹೋಲುವಂತೆ ಅಳವಡಿಸುವುದು.


ಸರಳ ಹಾಲೋಗ್ರಾಂಗಳ ತಯಾರಿಕೆ

ಚಿತ್ರ 1ರಲ್ಲಿ ಲೇಸರ್ ಬೆಳಕಿನ ಕಿರಣಾವಳಿಯು ಸೂಜಿ ರಂಧ್ರದ ಮೂಲಕ ಹಾದು ಅದರ ಒಂದು ಭಾಗವು ಒಂದು ಸಮತಲ ದರ್ಪಣದ ಮೇಲೆ ಪತನವಾಗಿ ಅದರಿಂದ ಪ್ರತಿಫಲಿತವಾಗುತ್ತದೆ. ನಂತರ ಅದು ದ್ಯುತಿ ಸೂಕ್ಷ್ಮ ತೆರೆಯ ಮೇಲೆ ನೇರವಾಗಿ ಬೀಳುತ್ತದೆ. ಕಿರಣಾವಳಿಯ ಮತ್ತೊಂದು ಭಾಗವು ದೃಶ್ಯದಿಂದ ಪ್ರತಿಫಲನವಾಗಿ




ಚಿತ್ರ 1

ತೆರೆಯ ಮೇಲೆ ಬೀಳುತ್ತದೆ. ಈ ಎರಡು ಬೆಳಕೂ ವ್ಯತಿಸಂಪಾತಕ್ಕೊಳಗಾಗಿ ಒಂದು ಹಾಲೋಗ್ರಾಂ ಸೃಷ್ಟಿಯಾಗುತ್ತದೆ. ತೆರೆಯನ್ನು ಸಂಸ್ಕರಿಸಿ. ಅದರ ಸ್ಥಾನದಲ್ಲೇ ಇಟ್ಟು ವಸ್ತುವನ್ನು ಅದರ ಸ್ಥಾನದಿಂದ ತೆಗೆದು. ಲೇಸರ್ ಬೆಳಕನ್ನು ಮೊದಲಿನಂತೆಯೇ ಹಾಯಿಸಿ, ಹಾಲೋಗ್ರಾಂ ಮೂಲಕ ನೋಡಿದರೆ. ವಸ್ತು ಅಥವಾ ದೃಶ್ಯವು ಮೊದಲಿದ್ದಂತೆಯೇ ಅದೇ ಸ್ಥಾನದಲ್ಲಿರುವಂತೆ ಭಾಸವಾಗುತ್ತದೆ (ಚಿತ್ರ 2). ದೃಶ್ಯದ ಈ ಮಿಥ್ಯಬಿಂಬದ ಜೊತೆಗೆ. ವೀಕ್ಷಕನ ಪಾರ್ಶ್ವದಲ್ಲಿ ದೃಶ್ಯದ ಸತ್ಯಬಿಂಬವೂ ಏರ್ಪಡುತ್ತದೆ (ಚಿತ್ರ 3). ಹಾಲೋಗ್ರಾಂ ಮೇಲೆ ಬೀಳಿಸುವ ಬೆಳಕಿನ ಮೂಲದ ಸ್ಥಾನವನ್ನು ಸೂಕ್ತವಾಗಿ ಅಳವಡಿಸಿದರೆ. ಸ್ಪಷ್ಟವಾದ ಮತ್ತು ಸ್ವಲ್ಪವೂ ಬದಲಾವಣೆಯಿಲ್ಲದ ವಸ್ತುವಿನ ತ್ರಿವಿಮಿತಿ ಸತ್ಯಬಿಂಬವು. ಹಾಲೋಗ್ರಾಂ ಮುಂದೆ ಏರ್ಪಡುತ್ತದೆ.



ಚಿತ್ರ 2



ಚಿತ್ರ 3

ಮುದ್ರಣವಾಗುವ ಮಧ್ಯವರ್ತಿಯ ಅಥವಾ ತೆರೆಯ ದಪ್ಪವು, ಮುದ್ರಿತ ವಾದ ವ್ಯತಿಸಂಪಾತ ಕರೆಗಳ ಅಂತರಕ್ಕೆ ಸಮವಾಗಿ ಅಥವಾ ಅದಕ್ಕಿಂತ ಹೆಚ್ಚಾ ಗಿದ್ದರೆ, ಅಂತಹ ಹಾಲೋಗ್ರಾಂಗೆ "ಗಾತ್ರ ಹಾಲೋಗ್ರಾಂ" (Volume Hologram) ಎಂದು ಹೆಸರು. ಇವು "ಸರಳ ಹಾಲೋಗ್ರಾಂ"ಗಳಿಗಿಂತಲೂ ಕೆಲವು ವಿಷಯಗಳಲ್ಲಿ ಹೆಚ್ಚು ಉಪಯುಕ್ತವಾದುವು. ಗಾತ್ರ ಹಾಲೋಗ್ರಾಂನಲ್ಲಿ ಪತನ ಕಿರಣದ ಪ್ರತಿ ಯೊಂದು ದಿಕ್ಕಿನಲ್ಲೂ ಒಂದೇ ಪ್ರತಿಬಿಂಬವು ರಚಿತವಾಗುತ್ತದೆ.

ಹಾಲೋಗ್ರಫಿಗೆ ಲೇಸರ್ ಬೆಳಕು ಅತ್ಯವಶ್ಯಕ. ಲೇಸರ್ ಬೆಳಕಿಗೂ ಸಾಮಾನ್ಯ ವಾದ ಬೆಳಕಿಗೂ ಇರುವ ವ್ಯತ್ಯಾಸವಾದರೂ ಏನು? ಲೇಸರ್ ಎಂಬ ಪದವು ಒಂದು ಪ್ರಥಮಾಕ್ಷರಿ. ಇಂಗ್ಲಿಷಿನಲ್ಲಿ "Light Amplification by Stimulated Emission of Radiating" (LASER) ಎಂಬ ಪದಗಳ ಮೊದಲ ಅಕ್ಷರಗಳನ್ನು ಕೂಡಿಸಿ ರಚಿಸಿದ ಹೊಸ ಪದ. RADAR (Radio Angle Detection And Ranging) ಎಂಬ ಪದವನ್ನು ಕನ್ನಡದಲ್ಲಿ 'ವಿಪಮದೂ' (ವಿದ್ಯುತ್ಕಾಂತೀಯ ಅಲೆಗಳಿಂದ ಪತ್ತೆ ಮತ್ತು ದೂರನಿರ್ದೇಶನ) ಎಂದು ಕರೆದರೆ, LASER ನ್ನು, 'ವಿಪ್ರವಿಬೆವ' (ವಿಸರಣ ಪ್ರಚೋದಿತ ವಿಸರ್ಜನೆಯಿಂದ ಬೆಳಕಿನ ಅಲೆಗಳ ವರ್ಧನೆ) ಎಂದು ಕರೆಯಬಹುದು.

ಸಾಮಾನ್ಯವಾದ ಬೆಳಕಿನಲ್ಲಿ, ವೃಗ್ವರ್ಣಪಟಲದ ಎಲ್ಲಾ ಬಣ್ಣದ ಬೆಳಕು ಗಳೂ ಇರುತ್ತವೆ. ಈ ಬೆಳಕುಗಳ ಅಂಗಗಳನ್ನೆಲ್ಲಾ ಕೂಡಿಸಿ, ಶುದ್ಧವಾದ, ಒಂದೇ ಆವರ್ತ ಸಂಖ್ಯೆಯುಳ್ಳ, ಮತ್ತು ಒಂದೇ ನೇರದಲ್ಲಿ ಚಲಿಸುವ ಬೆಳಕಾಗಿ ಪರಿವರ್ತಿಸಿ ದರೆ, ಆಗ ಅದು ಅತಿ ತೀಕ್ಷ್ಣವಾದ ಲೇಸರ್ ಬೆಳಕಾಗುತ್ತದೆ. ಸಾಮಾನ್ಯವಾದ ಬೆಳಕಿನಿಂದ ಹಾಲೋಗ್ರಾಂನ್ನು ರಚಿಸಿದರೆ, ಅದು ಚಿತ್ರೀಕರಣವಾದ ವಸ್ತುವಿನ ಬಗ್ಗೆ

ವನನ್ನೂ ತಿಳಿಸುವುದಿಲ್ಲ. ಒಂದು ಛಾಯಾಚಿತ್ರಗ್ರಾಹಿಯಿಂದ ರಚಿಸಿದ ಚಿತ್ರವನ್ನು ಸಂಸ್ಕರಿಸಿದಾಗ ಅದು 'ನೆಗೆಟಿವ್' ಆಗುತ್ತದೆ. ಅಂದರೆ, ವಸ್ತುವಿನಲ್ಲಿರುವ ಬಿಳಿಯ ಭಾಗವು ಇದರಲ್ಲಿ ಕಪ್ಪಾಗಿಯೂ ಮತ್ತು ಕಪ್ಪು ಭಾಗವು ಬೆಳ್ಳಗೂ ಮುದ್ರಿತ ವಾಗಿರುತ್ತದೆ. ಇದರ ಮೂಲಕ ಬೆಳಕನ್ನು ಹಾಯಿಸಿ, ಇದರಲ್ಲಿಯ ಕಪ್ಪು ಮತ್ತು ಬಿಳಿಯ ಭಾಗಗಳನ್ನು ಕ್ರಮವಾಗಿ ಬಿಳಿ ಮತ್ತು ಕಪ್ಪು ಭಾಗಗಳನ್ನಾಗಿ 'ಪಾಸಿ ಟಿವ್' ಮೇಲೆ ಮುದ್ರಿಸಲಾಗುತ್ತದೆ. ಅಂದರೆ ಈ ಛಾಯಾ ಚಿತ್ರಣದಲ್ಲಿ 'ಪಾಸಿ ಟಿವ್' ಮತ್ತು 'ನೆಗೆಟಿವ್' ಬೇರೆ ಬೇರೆಯಾಗಿರುತ್ತವೆ. ಆದರೆ, ಹಾಲೋಗ್ರಫಿ ಯಲ್ಲಿ ಪಾಸಿಟಿವ್ ಮತ್ತು ನೆಗೆಟಿವ್‌ಗಳ ಮೇಲೆ ಲೇಸರ್ ಬೆಳಕನ್ನು ಹಾಯಿಸಿ ದಾಗ, ದೃಶ್ಯದ ಒಂದೇ ರೀತಿಯ ಪ್ರತಿಬಿಂಬವು ನಿರ್ಮಾಣವಾಗುತ್ತದೆ. ಸಾಮಾನ್ಯ ವಾದ ಬೆಳಕಿನಲ್ಲಿರುವ ವಿದ್ಯುತ್ಕಾಂತೀಯ ಅಲೆಗಳು, ವಿವಿಧ ಕಂಪನ ಸಂಖ್ಯೆಗಳುಳ್ಳ ದ್ದಾಗಿದ್ದು, ಇವು ಚಲಿಸದಂತೆ ದ್ಯುತಿ ಪ್ರತಿರೋಧ ಕ್ರಿಯೆಯಿಂದ ಕ್ಷಣ ಕ್ಷಣಕ್ಕೂ ಬದಲಾಯಿಸುತ್ತಿರುತ್ತವೆ. ಆದರೆ ಲೇಸರ್ ಬೆಳಕು ಒಂದೇ ಆವರ್ತ ಸಂಖ್ಯೆ ಯುಳ್ಳದ್ದಾಗಿ, ಒಂದೇ ತೀಕ್ಷ್ಣತೆಯಿಂದ, ಮೈದಾನದಲ್ಲಿ ಸೈನಿಕರು ಶಿಸ್ತಿನಿಂದ ಚಲಿಸು ವಂತೆ, ಪ್ರತಿರೋಧವಿಲ್ಲದೆ ಚಲಿಸುತ್ತದೆ.

ಹಾಲೋಗ್ರಫಿ ತಂತ್ರದಲ್ಲಿ ಸಾಮಾನ್ಯವಾಗಿ ಮತ್ತು ಹೆಚ್ಚಾಗಿ ಉಪಯೋಗಿ ಸುವ ಬೆಳಕು, ಅನಿಲ ಲೇಸರ್ ಬೆಳಕು (Gas Lasers). ಇಂದು ಅನೇಕ ಅನಿಲ ಲೇಸರ್ ಗಳು ಬಳಕೆಯಲ್ಲಿದ್ದರೂ, ಹಾಲೋಗ್ರಫಿಯಲ್ಲಿ, He-Ne ಲೇಸರ್ ಹೆಚ್ಚು ಉಪಯೋಗಕಾರಿ. ಘನಸ್ಥಿತಿ ಲೇಸರ್‌ಗಳಲ್ಲಿ ಹಾಲೋಗ್ರಫಿಗೆ ಉಪಯೋಗಿ ಸುವ ಬೆಳಕು Ruby Laser. ಈ ಬೆಳಕು ಸ್ಫುರಿತ (Pulsed) ವಾದ್ದರಿಂದ, ಅನಿಲ ಲೇಸರ್‌ಗಿಂತಲೂ ಹೆಚ್ಚು ಅನುಕೂಲವಾಗಿರುತ್ತದೆ.

ಛಾಯಾಗ್ರಾಹಕ ತೆರೆಯ ಮೇಲೆ ನಡೆಯುವ ಕ್ರಿಯೆಯನ್ನು ಅರಿಯಲು ದ್ಯುತಿಸಂಪಾತ ಅಥವಾ ದ್ಯುತಿ ಪ್ರತಿರೋಧದ (Interference) ತಿಳಿವಳಿಕೆಯು ಅವಶ್ಯಕ. ನೀರಿನ ಮೇಲೆ ತೇಲುವ ಎಣ್ಣೆ ಅಥವಾ ಸೋಪಿನ ಗುಳ್ಳೆ, ಬಣ್ಣ ಬಣ್ಣವಾಗಿ ಕಾಣಲು ಈ ಕ್ರಿಯೆಯು ಕಾರಣ. ಇದನ್ನು 1801 ರಲ್ಲೇ Thomas Young ವಿವರಿಸಿದ್ದನು. ಬೆಳಕು ವಿದ್ಯುತ್ಕಾಂತೀಯ ಅಲೆಗಳಂತೆ ಆಕಾಶದಲ್ಲಿ ಚಲಿಸುತ್ತದೆ. ಹೀಗೆ ಚಲಿಸುವಾಗ, ಕೆಲವು ಅಲೆಗಳು ಇತರ ಅಲೆಗಳಿಂದ ಕ್ರಮ ಬದ್ಧವಲ್ಲದ ರೀತಿಯಲ್ಲಿ ಹಿಂದುಳಿದರೆ, ಅವು ಒಂದನ್ನೊಂದು ಘರ್ಷಿಸಿ, "ವಿನಾಶಾ ತ್ಮಕ ಪ್ರತಿರೋಧ"ಕ್ಕೆ (Destructive interference) ಕಾರಣವಾಗುತ್ತವೆ. ಹಾಗ ಲ್ಲದೆ, ಅಲೆಗಳು ಕ್ರಮಬದ್ಧವಾಗಿ ಹಿಂದುಳಿದರೆ, ಅವು ಹಿಂದಿರುವ ಅಲೆಗಳ ಶಕ್ತಿ ಯನ್ನು ವರ್ಧಿಸಿ, "ರಚನಾತ್ಮಕ ಪ್ರತಿರೋಧ"ಕ್ಕೆ (Constructive interference) ಕಾರಣವಾಗುತ್ತವೆ. ಛಾಯಾಗ್ರಾಹಕ ತೆರೆಯ ಮೇಲಿರುವ ಪ್ರಕಾರ ಸೂಕ್ಷ್ಮವಸ್ತುವಿ

ನಲ್ಲಿ. ಲೇಸರ್‌ನ ನೇರ ಮತ್ತು ಪ್ರತಿಫಲಿತ ಬೆಳಕುಗಳಿಂದ ಏರ್ಪಡುವ ರಚನಾತ್ಮಕ ಪ್ರತಿರೋಧವು ಅಸಾಧಾರಣ ಗುಣಗಳುಳ್ಳ ಹಾಲೋಗ್ರಾಂನ್ನು ಸೃಷ್ಟಿಸುತ್ತದೆ.

ಹಾಲೋಗ್ರಫಿಯ ಸ್ವಾರಸ್ಯವಾದ ಒಂದು ವಿಷಯ-ಹಾಲೋಗ್ರಾಂನ್ನು ಅನೇಕ ಚೂರುಗಳನ್ನಾಗಿ ಮಾಡಿದಾಗ್ಯೂ, ಪ್ರತಿಯೊಂದು ಚೂರು ಸಂಪೂರ್ಣ ಪ್ರತಿಬಿಂಬದ ರಚನೆಗೆ ಬೇಕಾದ ಎಲ್ಲಾ ಅಂಶಗಳನ್ನೂ ಪಡೆದಿರುತ್ತದೆ. ಚೂರು ಚಿಕ್ಕದಾದಂತೆಲ್ಲಾ ಪ್ರತಿ ಬಿಂಬದ ಸ್ಪಷ್ಟತೆ ಕಡಿಮೆಯಾಗುತ್ತದೆ. ಒಂದೇ ತ್ರಿವಿಮಿತಿ ಹಾಲೋಗ್ರಾಂ. ಬೇರೆ ಬೇರೆ ಪಾರ್ಶ್ವಗಳಿಂದ ಮತ್ತು ಬೇರೆ ಬೇರೆ ದೂರಗಳಿಂದ ತೆಗೆದ ಅನೇಕ ಸಾಂಪ್ರದಾಯಿಕ ಛಾಯಾಚಿತ್ರಗಳಿಗೆ ಸಮವಾಗಿರುತ್ತದೆ. ಸೂಕ್ತ ದೃಷ್ಟಿ ಸಾಧನದಿಂದ ಹಾಲೋ ಗ್ರಾಂನಲ್ಲಿರುವ ದೃಶ್ಯವನ್ನು ವಿವಿಧ ಬದಿಯಿಂದ ವಿವಿಧ ರೀತಿಯಲ್ಲಿ ನೋಡಬಹುದು. ಒಂದೇ ಒಂದು ಹಾಲೋಗ್ರಾಂ ಒಂದು ಸಾವಿರ ಛಾಯಾಚಿತ್ರಗಳಿಗೆ ಸಮವೆಂದು ಹೇಳಿದರೆ. ಆಶ್ಚರ್ಯವಾಗಲಾರದು. ಬಣ್ಣ ಬಣ್ಣದ ಲೇಸರ್‌ಗಳಿಂದ, ಬಣ್ಣಬಣ್ಣದ ಹಾಲೋಗ್ರಾಂಗಳನ್ನು ತಯಾರಿಸಬಹುದು.

ಸಾಮಾನ್ಯವಾದ ಛಾಯಾಚಿತ್ರಣದಲ್ಲಿ ಮಸೂರವನ್ನು ಉಪಯೋಗಿಸುತ್ತೇವೆ. ಹಾಲೋಗ್ರಫಿಯಲ್ಲಿ ಮಸೂರದ ಅವಶ್ಯಕತೆಯಿಲ್ಲ. ಲೇಸರ್ ಬೆಳಕು ನೇರವಾಗಿ ತೆರೆಯ ಮೇಲಿರುವ ಪ್ರಕಾಶ ಸೂಕ್ಷ್ಮವಸ್ತುವಿನ ಮೇಲೆ ಬೀಳುತ್ತದೆ. ಚಿತ್ರಣ ವಾಗಬೇಕಾದ ದೃಶ್ಯದಿಂದ ಪ್ರತಿಫಲಿತವಾದ. ವಿವಿಧ ತೀಕ್ಷ್ಣತೆಯುಳ್ಳ ಬೆಳಕು ತೆರೆಯ ಮೇಲೆ ಪತನವಾಗಿ. ರಾಸಾಯನಿಕ ಕ್ರಿಯೆ ನಡೆಸಿದಾಗ. ವಸ್ತುವಿನ ಪ್ರತಿ ಯೊಂದು ಭಾಗದ ಛಾಯೆಯು ತೆರೆಯ ಮೇಲೆ ದಾಖಲೆಯಾಗುತ್ತದೆ. ಈ ದಾಖಲೆಗಳ ಗುರುತುಗಳಲ್ಲಿ ಲೇಸರ್‌ನಿಂದ ಹೊರಟ ನೇರ ಮತ್ತು ಪ್ರತಿಫಲಿತ ಬೆಳಕು ಗಳು ವ್ಯತಿಪ್ರತಿರೋಧಕ್ಕೊಳಗಾಗಿರುತ್ತವೆ.

ಸಂಪೂರ್ಣ ಛಾಯಾ ಚಿತ್ರಣ ವಿಧಾನವು ಹೊಸದಾದರೂ, ಒಂದು ಬಿಂದು ವಿನ ಛಾಯಾ ಚಿತ್ರಣವನ್ನು 1818 ರಲ್ಲೇ ಫ್ರೆಂಚ್ ವಿಜ್ಞಾನಿ Augustin Fresnel ತೋರಿಸಿಕೊಟ್ಟಿದ್ದನು. ಅದು 'Fresnel Zone Plate' ಎಂಬ ಹೆಸರಿ ನಿಂದ ಪ್ರಸಿದ್ಧಿಯಾಗಿದೆ.

ಹಾಲೋಗ್ರಫಿ ತಂತ್ರದಲ್ಲಿ ಅನೇಕ ಅಸಾಧಾರಣ ಗುಣಗಳಿದ್ದು, ಅದು ವಿಜ್ಞಾನದ ಒಂದು ಅತಿ ಮುಖ್ಯ ಸಾಧನೆಯಾಗುವುದರಲ್ಲಿ ಸಂದೇಹವಿಲ್ಲ. ಇದರ ಉಪ ಯುಕ್ತತೆಗಳು ಅನೇಕ. ಇದನ್ನು ಉಪಯೋಗಿಸುವ ಕ್ಷೇತ್ರಗಳಲ್ಲಿ. ತ್ರಿವಿಮಿತಿಯ ವರ್ಣ ಚಲನ ಚಿತ್ರಗಳ (Three-dimensional Colour Photography) ತಯಾರಿಕೆ, ದೂರ ಛಾಯಾದರ್ಶಕ (Television), ಗಣಕ ಯಂತ್ರದ ನೆನಪು ಸಾಧನಗಳು (Computer memories) ಮತ್ತು ದೇಹದ ಒಳಭಾಗಗಳ ಸಂಪೂರ್ಣ ಛಾಯಾಚಿತ್ರಣ ಹಲವು.

ಮಂಥನ

I "ನಾಗಬೆತ್ತ"

ಸಾಧು ಸನ್ಯಾಸಿಗಳು ಹಿಡಿಯುತ್ತಿದ್ದ ಈ ಹೆಸರಿನ ದಂಡವು ಕನ್ನಡ (ಮತ್ತು ತೆಲುಗು) ಜನಪದ ಸಾಹಿತ್ಯದಲ್ಲಿಯೂ ತೆಲುಗು ಸಾಹಿತ್ಯದಲ್ಲಿಯೂ ಕಾಣಿಸಿಕೊಳ್ಳುತ್ತದೆ. ನನ್ನ ಗಮನಕ್ಕೆ ಬಂದ ಕೆಲವು ಆಕರಗಳನ್ನು ಕೆಳಗೆ ಕೊಡುತ್ತೇನೆ.

(i) ಎಲ್. ಆರ್ ಹೆಗ್ಗಡೆ ಅವರು ತಮ್ಮ 'ಜಾನಪದ ಅಭಿಮಾನ್ಯ' ಎಂಬ ಲೇಖನದಲ್ಲಿ (ಸಾಧನೆ, 2. i. ಜನವರಿ-ಮಾರ್ಚ್ 1973) ಹೇಳುವ ಕತೆಯಲ್ಲಿ (ಪುಟ 115) ಕಾಳಿಂಗ ಋಷಿಯ ವಿಷಯ ಬರುತ್ತದೆ. ಅವನ ಹತ್ತಿರವಿದ್ದ ಪೆಟ್ಟಿಗೆಯಲ್ಲಿ "ನಾಗಬೆತ್ತ, ಹೀಲಿ ಕುಂಚ, ಜೀವದ ಕಡಿ(ಡ್ಡಿ?), ಅಮೃತದ ನೀರು — ಸತ್ತವರನ್ನು ಬದುಕಿಸುವ ಜಾನಪದ ಸಾಧನಗಳು" ಇದ್ದುವಂತೆ.

(ii) "ಧವಳ ಶ್ರೀ"ಯವರು ಪ್ರಕಟಿಸಿರುವ **ಜಾನಪದ ಕಥಾಮೃತ**ದಲ್ಲಿ (ಪುಟ 16) ನಾಗಬೆತ್ತದ ಹೆಸರಿದೆ. ದೊರೆಮಗನೊಬ್ಬ ಕಲ್ಲಾಗಿ ನಿಂತಾಗ, ಋಷಿ ಅದಕ್ಕೆ 'ಕುಂತಾಲ ಚೆಂಬಿ'ನ ನೀರು ಚಿಮುಕಿಸಿ ನಾಗಬೆತ್ತದಿಂದ ನಿವಾಳಿಸಿದಾಗ, ದೊರೆ ಮಗ ಎಚ್ಚರಗೊಂಡನಂತೆ. ಅದೇ ದೊರೆಮಗ ಇನ್ನೊಮ್ಮೆ ಸುಟ್ಟು ಬೂದಿಯಾದಾಗಲೂ ಅದೇ ರೀತಿ ಬದುಕಿಸಲ್ಪಟ್ಟನಂತೆ.


(iii) ಎಲ್. ಗುಂಡಪ್ಪನವರು ಸಂಪಾದಿಸಿರುವ **ನಾಡ ಪದಗಳು** ಗ್ರಂಥದಲ್ಲಿ (ಪುಟ 104) ನಂಜುಂಡನು (=ಶಿವ) ದೇವೀರಮ್ಮನಿಗೆ ಹೇಳುವ ಮಾತಿನಲ್ಲಿ ನಾಗ ಬೆತ್ತದ ಉಲ್ಲೇಖವಿದೆ.

> ಕಾವೀ ಕಂತೆ ಕೊಡೆ ನಾಗಬೆತ್ತಾ ಕೊಡೆ
> ಹೋಗುತೇನಿ ನಾನು ನನದೇಶ.

(iv) ಆರ್. ಶೇಷಶಾಸ್ತ್ರಿ ಸಂಗ್ರಹಿಸಿರುವ ಅಪ್ರಕಟಿತ ಜನಪದ ಕಥನಗೀತ ವೊಂದರಲ್ಲಿ ಹೆಣ್ಣಿನ ನಡುವನ್ನು ನಾಗಬೆತ್ತಕ್ಕೆ ಹೋಲಿಸಲಾಗಿದೆ.

(v) ತೆಲುಗಿನ ಕಾವ್ಯಗಳಲ್ಲಿ ನಾಗಬೆತ್ತದ ಹೆಸರು ಕಂಡುಬರುವ ಕೆಲವು ಆಕರ ಗಳಂ ಹೀಗಿವೆ: ಅಲ್ಲಸಾನಿ ಪೆದ್ದನನ ಮನು ಚರಿತ್ರಮು (4.85), ಪಿಂಗಳಿ ಸೂರನನ **ಕಳಾಪೂರ್ಣೋದಯಮು** (2.50), ವೆಂಕಟನಾಥನ ಪಂಚತಂತ್ರ ಕಾವ್ಯ(4.10[illegible]).

ಇಲ್ಲೆಲ್ಲ ನಾಗಬೆತ್ತವು ಋಷಿಗಳು ಅಥವಾ ಸಿದ್ಧರು ಹಿಡಿದಿರುತ್ತಿದ್ದ ದಂಡ ಎಂಬುದು ಸ್ಪಷ್ಟವಾಗಿದೆ. **ಶ್ರೀ ಸೂರ್ಯರಾಯಾಂಧ್ರ ನಿಘಂಟುವು** (IV. ಪು. 611) ಕೋಶದಲ್ಲಿ 'ನಾಗಬೆತ್ತಮು' ಎಂಬುದಕ್ಕೆ 'ನಾ ಗ ಪ ಡಿ ಗ ಕೋ ೀ ಲ' (=ನಾಗರ ಹೆಡೆಯ ಕೋಲು) ಎಂದರ್ಥ ಹೇಳಿದೆ.[1]



ನಾಗಬೆತ್ತ

ಈಚೆಗೆ ದೊರಕಿದ ಒಂದು ನಾಗಬೆತ್ತದ ಮಾದರಿಯ ಚಿತ್ರವನ್ನು ಇಲ್ಲಿ ಕೊಟ್ಟಿದೆ.[2] ಎರಡು ಅಡಿ ಎರಡು ಅಂಗುಲ ಉದ್ದವಿರುವ ಈ ಸುಂದರವಾದ ಮರದ ಕೋಲು ಹಾವಿನಂತೆ ಬಳುಕಿದೆ; ಒಂದು ತುದಿಯಲ್ಲಿ ಚಿಕ್ಕಹೆಡೆ, ಕೆಳಗೆ ಅಡ್ಡ ಗುರುತುಗಳಿವೆ. ಇದು ಮಠದಲ್ಲಿ ದೊರಕಿದುದರಿಂದ ಅಲ್ಲಿನ ಮಹಂತರು ಇದನ್ನು ಹಿಡಿದುಕೊಳ್ಳುತ್ತಿದ್ದರೆಂಬುದರಲ್ಲಿ ಅನುಮಾನವಿಲ್ಲ. ಇಂತಹ ಕೋಲುಗಳಲ್ಲಿ ಮಾಂತ್ರಿಕ ಶಕ್ತಿ ಇರು

---

1 ಈ ಉಲ್ಲೇಖಗಳ ಕಡೆ ನನ್ನ ಗಮನ ಸೆಳೆದ ಡಾ. ಟಿ. ವಿ. ಸುಬ್ಬಾರಾವು ಅವರಿಗೆ ನಾನು ಕೃತಜ್ಞ. ತೆಲುಗು ಜನಪದ ಕತೆ ಕಾವ್ಯಗಳಲ್ಲಿಯೂ ತಾವು ನಾಗಬೆತ್ತದ ವಿಷಯವನ್ನು ನೋಡಿರುವುದಾಗಿ ಅವರು ತಿಳಿಸುತ್ತಾರೆ.

2 ತೀರ್ಥಹಳ್ಳಿ ತಾಲ್ಲೂಕಿನ ಕಪಿಲೆ ದುರ್ಗದ (ಭುವನಗಿರಿ ದುರ್ಗ) ಪೂಜ್ಯ ಸ್ವಾಮೀಜಿಯವರಾದ ಶ್ರೀ ಮಹಾಮಹಂತ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ಕೃಪೆ ಮಾಡಿ ಕೊಟ್ಟ ಈ ನಾಗಬೆತ್ತ ಈಗ ಕನ್ನಡ ಅಧ್ಯಯನ ಕೇಂದ್ರದಲ್ಲಿದೆ.

ತ್ತದೆಂದು ಎಲ್ಲರೂ ನಂಬಿದ್ದರು. ಅಂತಹ ಶಕ್ತಿ ಇತ್ತೋ ಇಲ್ಲವೋ ತಿಳಿಯದು; ಆದರೆ ಅವುಗಳನ್ನು ಹಿಡಿದ ವ್ಯಕ್ತಿಗಳ ಬಗ್ಗೆ ಸಾಮಾನ್ಯ ಜನಕ್ಕೆ ಒಂದು ಬಗೆಯ ವಿಸ್ಮಯ ಮಿಶ್ರಿತ ಗೌರವ ಭಾವನೆ ಉಂಟಾಗುವುದಕ್ಕೆ ಅವು ಕಾರಣವಾಗುತ್ತಿದ್ದುವೆಂಬುದರ ಬಗ್ಗೆ ಸಂದೇಹವಿಲ್ಲ. ನಾಗಬೆತ್ತವು ಬೇರೆ ರೀತಿಗಳಲ್ಲಿರಲೂ ಸಾಧ್ಯ. ಎರಡು ಮೂರು ಬೆತ್ತ ಗಳು ಹೆಣೆದುಕೊಂಡು ತುದಿಯಲ್ಲಿ ಹಾವಿನ ಹೆಡೆಯಂತಿರುವ ಬೆತ್ತಗಳು ಇವೆಯಂತೆ. (ಕೆಸರಿನಲ್ಲಿ ಬೆಳೆಯುವ ಒಂದು ಬಗೆಯ ಜೊಂಡಿಗೆ 'ನಾಗಬೆತ್ತ' ಎಂಬ ಹೆಸರೇ ಇದೆ.)

ವಿಶ್ವಾದ್ಯಂತ ಸರ್ಪವು ಪುರಾಣಗಳಲ್ಲಿ, ಜನಪದ ಕತೆಗಳಲ್ಲಿ ಬೇರೆ ಬೇರೆ ಅರ್ಥ ಸಂಕೇತಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅದು ಮೋಸ, ಅಪಾಯ, ಸಾವು ಪಾಪಗಳಿಗೆ ಸಂಕೇತವಾದಂತೆ ಆರೋಗ್ಯ, ಜ್ಞಾನ, ಬೆಳಕಿಗೂ ಸಂಕೇತವಾಗಿದೆ. ಕೆಲವು ದೇಶಗಳಲ್ಲಿ ಅದು ಪುನರ್ಜನ್ಮಕ್ಕೂ ಸಂಕೇತವಾಗಿದೆ†. ಭಾರತದಲ್ಲಿ ಅದು ಶಿವನ ತೊಡುಗೆ, ವಿಷ್ಣು ವಿನ ಶಯ್ಯೆ, ಭೂಮಿಯನ್ನು ಹೊತ್ತು ನಿಂತಿರುವ ಆಧಾರ. ಯೋಗಿಗಳ ಕುಂಡಲಿನೀ ಶಕ್ತಿಯು ಸರ್ಪ ರೂಪವಾಗಿದೆ ಎಂದು ಕಲ್ಪಿಸಿರುವುದು ಇಲ್ಲಿ ಗಮನಾರ್ಹ. 'ನಾಗ' ಕಲ್ಪನೆ ಬಹು ಸ್ವಾರಸ್ಯವಾದ ವಿಷಯವಾದರೂ, ಅದರ ಬಗ್ಗೆ ವಿಲಂಬಿಸುವುದಕ್ಕೆ ಇದು ಸ್ಥಳ ಅಲ್ಲವೇ ಅಲ್ಲ.

ಎಂ. ಚಿದಾನಂದಮೂರ್ತಿ

2 ಗುಬ್ಬಿ ಮಲ್ಲಣ್ಣ (1430)ನ 'ಏಕಾಕ್ಷರ ನಿಘಂಟು ಟೀಕೆ' : ಒಂದು ಟಿಪ್ಪಣಿ

ವರರುಚಿ ಸಂಸ್ಕೃತದಲ್ಲಿ 37ನೇ ಶ್ಲೋಕ ಪರಿಮಿತಿಯುಳ್ಳ 'ಏಕಾಕ್ಷರ ನಿಘಂಟು' ಎಂಬ ಸಣ್ಣ ಕೋಶವನ್ನು ರಚಿಸಿದ್ದಾನೆ. ಈ ಕೃತಿಗೆ ಮಲ್ಲಿಕಾರ್ಜುನನೆಂಬ ಕವಿಯ ಕನ್ನಡ ಟೀಕೆ[1] ಇದೆ. ಕನ್ನಡ ಟೀಕಾಕಾರ ತಾನು ಟೀಕೆಯನ್ನು ವಿರಚಿಸಿದ ಉದ್ದೇಶ ಹಾಗೂ ತನ್ನ ಹೆಸರನ್ನು ಕೃತಿಯ ಕೊನೆಯಲ್ಲಿ ಈ ಕೆಳಕಂಡಂತೆ ಹೇಳಿದ್ದಾನೆ:

> ಏಕಾಕ್ಷರ ನಿಘಂಟಾಖ್ಯೋ
> ವಿದುಷಾಂ ಹಿತಕಾಮ್ಯಯಾ
> ವ್ಯಾಖ್ಯಾತೋಯಂ ಮಯಾ ಸಮ್ಯಕ್
> ಮಲ್ಲಿಕಾರ್ಜುನ ಧೀಮತಾ [ಶ್ಲೋಕ 38]

---

† Gertrude Jobes: Dictionary of Mythology, Folklore and Symbols, II (New York, 1962), Pp. 1418-9.

[1] ಕನ್ನಡ ಅಧ್ಯಯನ ಕೇಂದ್ರ (ಬೆಂಗಳೂರು ವಿಶ್ವವಿದ್ಯಾಲಯ)ದ ಸಂಗ್ರಹ [ಓಲೆ ಕೃತಿ]

ಈ ಟೀಕಾಕಾರ ಹಾಗು ಕೃತಿಯ ಬಗೆಗೆ ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರಾಗಲಿ ಅಥವಾ ಇನ್ನಾವ ಸಂಶೋಧಕರಾಗಲಿ ಏನನ್ನೂ ತಿಳಿಸಿಲ್ಲ.

ಏಕಾಕ್ಷರ ನಿಘಂಟು ಟೀಕಾಕಾರ ಮಲ್ಲಿಕಾರ್ಜುನ ಯಾರು? ಅವನ ಕಾಲವೇನು? ಮುಂತಾದ ಪ್ರಶ್ನೆಗಳಿಗೆ ಕೃತಿಯಿಂದ ಯಾವ ಉತ್ತರವೂ ಸಿಗುವುದಿಲ್ಲ. ಈ ವಿಷಯಗಳ ಬಗೆಗೆ ಕೃತಿ ಮೌನತಾಳಿದೆ. ಆದರೂ ಈ ಬಗೆಗೆ ನಾವು ಪೂರ್ಣ ನಿರಾಶರಾಗಬೇಕಾಗಿಲ್ಲ.

ಪ್ರೊ. ಸಿ. ಮಹಾದೇವಪ್ಪನವರು ಪರಿಷ್ಕರಿಸಿ ಪ್ರಕಟಿಸಿರುವ "ಭಾವಚಿಂತಾರತ್ನ"ದ 'ಪೀಠಿಕೆ'ಯ ಕೆಲವಂಶಗಳು ಮಲ್ಲಿಕಾರ್ಜುನ ಯಾರು? ಎನ್ನುವುದರ ಬಗೆಗೆ ಖಚಿತವೆನ್ನಬಹುದಾದ ಮಾಹಿತಿಯನ್ನು ನೀಡುತ್ತವೆ. ಅಲ್ಲಿ ಮಹಾದೇವಪ್ಪನವರು 'ವಾತುಲ ಶುದ್ಧಾಖ್ಯ ತಂತ್ರದ ಟೀಕೆ'ಯನ್ನು ಕುರಿತು[2] ಈ ಕೆಳಕಂಡ ರೀತಿ ತಿಳಿಸಿದ್ದಾರೆ.

ಗುಬ್ಬಿಯ ಮಲ್ಲಣ್ಣನ ಟೀಕಾ ಗ್ರಂಥದ ಮೊದಲಲ್ಲಿ ಶಿವಸ್ತುತಿಯ ಒಂದು ವೃತ್ತವಿದೆ. ಆ ಬಳಿಕ ಈ ಶ್ಲೋಕವಿದೆ.

ಶ್ರೀಮಚ್ಛುದ್ಧಾಖ್ಯತಂತ್ರೇಸ್ಮಿನ್
ಮಲ್ಲಿಕಾರ್ಜುನ ಧೀಮತಾ
ಕರ್ಣಾಟ ಭಾಷೆಯಾ ಟೀಕಾ
ಕ್ರಿಯತೇದ್ಯ ಮಯಾ ಸ್ಫುಟಂ

ಈ ಶ್ಲೋಕಕ್ಕೆ ಅರ್ಥವನ್ನು ತಿಳಿಸುವಲ್ಲಿ 'ಮಲ್ಲಿಕಾರ್ಜುನ ಧೀಮತಾ' ಎಂಬ ಭಾಗಕ್ಕೆ ಶ್ರೀ ಮದಮರಗುಂಡ ಮಲ್ಲಿಕಾರ್ಜುನನ ಚಿದಂಶವನ್ನುಳ್ಳಂಥ. ಮತ್ತೆ ಮಲ್ಲಿಕಾರ್ಜುನನೆಂಬ ಬುದ್ಧಿವಾನುವಾದ ತನ್ನಿಂದ ಕರ್ಣಾಟಕ ಭಾಷೆಯಲ್ಲಿ ಈ ಶುದ್ಧವೆಂಬ ಹೆಸರುಳ್ಳ ವಾತುಲಾಗಮದಲ್ಲಿಯ ಟೀಕೆ ಸ್ಪಷ್ಟವಾಯಿತೆಂದು ಹೇಳಿರುವನು.

ಮೇಲಿನ 'ಏಕಾಕ್ಷರ ನಿಘಂಟು ಟೀಕೆ' ಹಾಗೂ 'ವಾತುಲಾಗಮ ಟೀಕೆ'ಗಳೆರಡರಲ್ಲೂ ಕವಿಯ ಹೆಸರು 'ಮಲ್ಲಿಕಾರ್ಜುನ ಧೀಮತಾ' ಎಂದೇ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಇದೆ. ಅಲ್ಲದೆ ಗುಬ್ಬಿಯ ಮಲ್ಲಣ್ಣನಿಗೆ ಸಂಸ್ಕೃತದಲ್ಲಿ ಆಳವಾದ ಹಾಗು ವಿಸ್ತೃತವಾದ ಪರಿಚಯವಿದ್ದುದಕ್ಕೆ ಆತನ 'ಗಣಭಾಷ್ಯರತ್ನಮಾಲೆ' ಯಲ್ಲಿ ಉದಾಹರಿಸಿರುವ ವಿವಿಧ ಆಗಮ. ಪುರಾಣ. ಶ್ರುತಿ. ಸ್ಮೃತಿಗಳ ಉಲ್ಲೇಖಗಳೆ ಸಾಕ್ಷಿಯಾಗಿವೆ.

ಹೀಗಾಗಿ 'ಏಕಾಕ್ಷರ ನಿಘಂಟು' ವಿನ ಟೀಕಾಕರ್ತೃತ್ವ ಗುಬ್ಬಿಯ ಮಲ್ಲಣ್ಣನಿಗೆ ಸಲ್ಲುತ್ತದೆ. ಇದರಿಂದ ಗುಬ್ಬಿಯ ಮಲ್ಲಣ್ಣ ಕನ್ನಡದಲ್ಲಿ (1) "ಗಣಭಾಷ್ಯರತ್ನಮಾಲೆ"

---

2 ಭಾವ ಚಿಂತಾರತ್ನ, ಪೀಠಿಕೆ, ಪು. viii (1954)

(2) 'ವಾತುಲ ತಂತ್ರಟೀಕೆ' ಗಳೊಡನೆ ಮೂರನೆಯ ಕೃತಿಯಾದ 'ಏಕಾಕ್ಷರ ನಿಘಂಟು ಟೀಕೆ'ಯನ್ನು ರಚಿಸಿದಂತೆ ತಿಳಿಯುತ್ತದೆ.

ಗುಬ್ಬಿಯ ಮಲ್ಲಣ್ಣನ ಕಾಲದ ಬಗೆಗೆ ಒಂದು ಮಾತನ್ನಾಡಬಹುದು. 'ಕರ್ಣಾಟಕ ಕವಿಚರಿತೆ'ಯಲ್ಲಿ ಆರ್. ನರಸಿಂಹಾಚಾರ್ಯರು ಗುಬ್ಬಿಮಲ್ಲಣ್ಣನ ಕಾಲವನ್ನು[3] ಸು. 1475 ಎಂದು ಊಹಿಸಿದ್ದಾರೆ. ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿ ಅವರು ಲಕ್ಕಣದಂಡೇಶನ 'ಶಿವತತ್ತ್ವ ಚಿಂತಾಮಣಿ'ಯಲ್ಲಿ ಗುಬ್ಬಿಯ ಮಲ್ಲಣ್ಣನ ಹೆಸರು ಉಕ್ತವಾಗಿರುವುದನ್ನು ತಿಳಿಸಿ ಮಲ್ಲಣ್ಣ ಸು. 1428 (ಅಥವಾ 1430)[4] ರಲ್ಲಿ ಇರಬಹುದೆಂದು ನಿರ್ಧರಿಸಿದ್ದಾರೆ.

ಎಸ್. ಶಿವಣ್ಣ

[3] ಕರ್ಣಾಟಕ ಕವಿ ಚರಿತೆ, ದ್ವಿತೀಯ ಸಂಪುಟ, ಪುಟ 101 (1919)

[4] ಗುಬ್ಬಿಯ ಮಲ್ಲಣ್ಣ ಮತ್ತು ತೋಂಟದ ಸಿದ್ಧೇಶ್ವರರ ಕಾಲವಿಚಾರ, ಪ್ರಬುದ್ಧ ಕರ್ಣಾಟಕ 30–1, ಪುಟ 13–31

ಈ ಸಂಚಿಕೆಯ ಲೇಖಕರು

ಕ. ವೆಂ. ರಾಜಗೋಪಾಲ	ಕನ್ನಡ ಪ್ರಾಧ್ಯಾಪಕರು ಎಂ. ಇ. ಎಸ್. ಕಾಲೇಜು ಮಲ್ಲೇಶ್ವರಂ, ಬೆಂಗಳೂರು-560003
ಎಂ. ವಿ. ಸೀತಾರಾಮಯ್ಯ	54, ಅರವಿಂದ, 3ನೇ ಕ್ರಾಸ್ ಗವಿಪುರಂ ಬಡಾವಣೆ, ಬೆಂಗಳೂರು-560019
ವಿನಾಯಕ	ಸತ್ಯ ಸಾಯಿ ವಿದ್ಯಾ ಸಂಸ್ಥೆ ಕಾಡುಗೋಡಿ, ವೈಟ್‌ಫಿಲ್ಡ್ (ಆರ್. ಎಸ್.). ಬೆಂಗಳೂರು
ಎಂ. ಎಸ್. ಎಸ್. ರಾವ್	ಸಿ. 6, ಹೌಸಿಂಗ್ ಸೊಸೈಟಿ ಬಾಗಲಕೋಟೆ, ಬಿಜಾಪುರ ಜಿಲ್ಲೆ
ಕೆ. ಎಸ್. ನರಸಿಂಹಸ್ವಾಮಿ	397, ಒಂದನೇ ಬ್ಲಾಕ್, ಜಯನಗರ ಬೆಂಗಳೂರು-560011
ವೈ. ಕೆ. ಸಂಧ್ಯಾ	ದ್ವಿತೀಯ ಎಂ. ಎ. ವಿದ್ಯಾರ್ಥಿನಿ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560039
ಕೆ. ಎಂ. ಕೋದಂಡರಮ್	ಕನ್ನಡ ಅಧ್ಯಾಪಕರು ನ್ಯಾಷನಲ್ ಕಾಲೇಜು ಗೋರೀಬಿದನೂರು
ಬೆ. ಗೋ. ರಮೇಶ್	72, ಅಂಬಿಕಾ, 6ನೇ ಕ್ರಾಸ್ ಮಲ್ಲೇಶ್ವರಂ,ಬೆಂಗಳೂರು-560009
ಜಯಸುದರ್ಶನ	769, 5ನೇ ಬ್ಲಾಕ್, ರಾಜಾಜಿ ನಗರ್ ಬೆಂಗಳೂರು-560010
ಪಿ. ಕೆ. ಗಾಯತ್ರಿ	114 (ಮಹಡಿ), 4ನೇ ಮೇನ್ ಮಲ್ಲೇಶ್ವರಂ, ಬೆಂಗಳೂರು-560003
ಕೆ. ಟಿ. ಪಾಂಡುರಂಗಿ	ರೀಡರ್ ಮತ್ತು ಮುಖ್ಯಸ್ಥರು ಸಂಸ್ಕೃತ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560039
ಡಿ. ರಘುನಾಥರಾವ್	ಕನ್ನಡ ಅಧ್ಯಾಪಕರು ಮುಲ್ಕಿ (ದಕ್ಷಿಣ ಕನ್ನಡ ಜಿಲ್ಲೆ)
ಎಂ. ಆರ್. ಲಕ್ಷ್ಮೀದೇವಿ	ಕನ್ನಡ ಅಧ್ಯಾಪಕಿ ಆಚಾರ್ಯ ಪಾಠಶಾಲಾ ಕಾಲೇಜು ನರಸಿಂಹರಾಜಾ ಕಾಲೋನಿ ಬೆಂಗಳೂರು-560019

ಟಿ. ಬಿ. ಚಂದ್ರಶೇಖರಯ್ಯ	ಅರ್ಥಶಾಸ್ತ್ರ ವಿಭಾಗ ಸೆಂಟ್ರಲ್ ಕಾಲೇಜು ಬೆಂಗಳೂರು-560009
ಎಸ್. ಟಿ. ಶಿವಪ್ಪ	ಕನ್ನಡ ಅಧ್ಯಾಪಕ. ಪ್ರಥಮ ದರ್ಜೆ ಕಾಲೇಜು ಸಿರಿಗೆರೆ. ಚಿತ್ರದುರ್ಗ ಜಿಲ್ಲೆ
ಜೆ. ರುದ್ರಪ್ಪ	ನಿವೃತ್ತ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು 112, ಗಾಂಧೀ ನಗರ ಬೆಂಗಳೂರು-560009
ಸೀತಾರಾಮ ಜಾಗೀರ್‌ದಾರ್	ಶಾಸನ ಸಹಾಯಕ ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ, ಮೈಸೂರು-570006
ಬಿ. ಶ್ರೀಧರ	ಅರ್ಥಶಾಸ್ತ್ರ ವಿಭಾಗ ನ್ಯಾಷನಲ್ ಕಾಲೇಜು ಗೌರೀಬಿದನೂರು
ಡಾ. ಎಚ್. ನರಸಿಂಹಯ್ಯ	ಉಪಕುಲತಿ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560039
ಡಾ. ಟಿ. ವಿ. ಸುಬ್ಬರಾವ್	ತೆಲುಗು ಅಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560039
ಎಚ್. ಆರ್. ಕೃಷ್ಣಮೂರ್ತಿ	52. ನಾಲ್ಕನೇ ಕ್ರಾಸ್ ನರಸಿಂಹರಾಜ ಕಾಲೋನಿ ಬೆಂಗಳೂರು-560019
ವೈ. ಲಿಂಗರಾಜು	ಗಣಿ ಮತ್ತು ಭೂಗರ್ಭ ಶಾಸ್ತ್ರ ವಿಭಾಗ 1334 'ಟಿ' 26ನೇ ಮೇನ್. 32ನೇ ಕ್ರಾಸ್ ಜಯನಗರ. ಬೆಂಗಳೂರು-560011
ಟಿ. ವೈ. ರಾಮಚಂದ್ರನ್	ಭೌತಶಾಸ್ತ್ರ ವಿಭಾಗ ಮಹಾರಾಣಿ ಕಾಲೇಜು ಬೆಂಗಳೂರು–560001
ಡಾ. ಎಂ. ಚಿದಾನಂದಮೂರ್ತಿ	ಕನ್ನಡ ರೀಡರ್, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560039
ಎಸ್. ಶಿವಣ್ಣ	ಸಂಶೋಧನ ಸಹಾಯಕ ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು- 560009

ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣೆಗಳು

ಪಠ್ಯ ಪುಸ್ತಕಗಳು			ರೂ.	ಪೈ.
1.	ಪಿ. ಯು. ಸಿ. ಗಣಿತಶಾಸ್ತ್ರ ಭಾಗ 1 ಎಫ್. ಜೆ. ನೊರೋನ್ನ ಮತ್ತು ಇತರರು	ಪಿ.ಯು.ಸಿ	4	00
2.	ಕಾವ್ಯಲಹರಿ (ಎರಡನೆಯ ಮುದ್ರಣ) ಸಂ: ಆರ್. ಎಸ್. ಮುಗಳಿ ಮತ್ತು ಇತರರು	ಪಿ.ಯು.ಸಿ	2	50
3.	ಮನಃಶಾಸ್ತ್ರ ಪ್ರವೇಶಿಕೆ ಎಸ್. ಕೆ. ರಾಮಚಂದ್ರರಾವ್	I ಬಿ.ಎ.	3	50
4.	ಬೀಜರೇಖಾಗಣಿತ ಮತ್ತು ತ್ರಿಕೋಣಮಿತಿ ಜಿ. ಟಿ. ನಾರಾಯಣರಾವ್	I ಬಿ.ಎಸ್.ಸಿ.	3	20
5.	ರಾಜ್ಯಶಾಸ್ತ್ರ ಪ್ರವೇಶಿಕೆ ಹೆಚ್. ಆರ್. ದಾಸೇಗೌಡ ಮತ್ತು ಎಂ. ಎ. ಸಿಂಗಮ್ಮಾಳ್	I ಬಿ.ಎ.	3	80
6.	ಸಂಗೀತಶಾಸ್ತ್ರ ಪ್ರಕಾಶಿಕೆ ಟಿ. ಆರ್. ನಾಗರತ್ನ	I ಬಿ.ಎ.	3	20
7.	ಸಂಗೀತಶಾಸ್ತ್ರ ಬೋಧಿನಿ ಜಿ. ಚನ್ನಮ್ಮ	ಪಿ.ಯು.ಸಿ.	2	50
8.	ಅರ್ಥಶಾಸ್ತ್ರ ಹೆಚ್. ಆರ್. ಸಾಖರೆ	ಪಿ.ಯು.ಸಿ.	3	20
9.	ಭೌತವಿಜ್ಞಾನ ಬಿ. ವಿ. ನಾರಾಯಣರಾವ್	ಪಿ.ಯು.ಸಿ.	4	00
10.	ಸಾಮಾನ್ಯ ಭೌತಶಾಸ್ತ್ರ ಮತ್ತು ಜಡವಸ್ತುವಿನ ಗುಣಗಳು ಕೆ. ಶೇಷಾದ್ರಿ ಅಯ್ಯಂಗಾರ್	I ಬಿ.ಎಸ್‌ಸಿ.	3	30
11.	ವಾಣಿಜ್ಯಶಾಸ್ತ್ರ ಟಿ. ಹೆಚ್. ನಾರಾಯಣರಾವ್	ಪಿ.ಯು.ಸಿ.	3	00
12.	ಭೂಗೋಳಶಾಸ್ತ್ರ ಎ. ಕುಮಾರಸ್ವಾಮಿ	ಪಿ.ಯು.ಸಿ.	4	80
13.	ಪಿ.ಯು.ಸಿ. ಗಣಿತಶಾಸ್ತ್ರ ಭಾಗ 2 ಎಫ್. ಜೆ. ನೊರೋನ್ನ ಮತ್ತು ಇತರರು	ಪಿ.ಯು.ಸಿ.	4	50
14.	ಆರ್ಥಿಕ ಅಭಿವೃದ್ಧಿ ಟಿ. ಎನ್. ವಿಜಯಪ್ಪ ಮತ್ತು ಕೃಷ್ಣನಾಯಕ್	I ಬಿ.ಎ.	7	00
15.	ನೀತಿಶಾಸ್ತ್ರ ಎಸ್. ರಂಗಾಚಾರ್	1 ಬಿ.ಎ.	3	40

16.	ಗಣಿತ ತರ್ಕ ಪ್ರವೇಶಿಕೆ	II ಬಿ.ಎಸ್‌ಸಿ.	2	00
	ಎಫ್. ಜೆ. ಸೊರೋಸ್ನ ಮತ್ತು ಇತರರು			
17.	ಧ್ವನಿ ಮತ್ತು ಪ್ರಾಯೋಗಿಕ ಭೌತಶಾಸ್ತ್ರ	I ಬಿ.ಎಸ್‌ಸಿ.	3	00
	ಕೆ. ಶೇಷಾದ್ರಿ ಅಯ್ಯಂಗಾರ್			
18.	ಮತಧರ್ಮ ತತ್ವಶಾಸ್ತ್ರ	I ಬಿ.ಎ.	3	50
	ಎಂ. ಯಾಮುನಾಚಾರ್ಯ			
19.	ಗೃಹವಿಜ್ಞಾನ ಪ್ರವೇಶಿಕೆ	ಪಿ.ಯು.ಸಿ.	7	50
	ಎಂ. ಆರ್. ವಿಶಾಲಾಕ್ಷಿ ಮತ್ತು ಎಲ್. ವಾಸಂತಿ			
20.	ದೃಢಚಲನೆ	I ಬಿ.ಎಸ್‌ಸಿ.	2	00
	ಜಿ. ಟಿ. ನಾರಾಯಣರಾವ್			
21.	ಸಂಸ್ಕೃತ ಗದ್ಯ ಪದ್ಯ ಮಂಜರಿ	I ಬಿ.ಎ./ಬಿ.ಎಸ್‌ಸಿ.	3	00
	ಕೆ. ಟಿ. ಪಾಂಡುರಂಗಿ			
22.	ರಸಾಯನಶಾಸ್ತ್ರ	I ಬಿ. ಎಸ್‌ಸಿ.	5	00
	ಟಿ. ಎಚ್. ವೆಂಕಟಶೆಟ್ಟಿ ಮತ್ತು ಇತರರು			
23.	ಬೀಜಗಣಿತ	I ಬಿ.ಎಸ್‌ಸಿ.	5	00
	ಸಿ. ಎನ್. ಶ್ರೀನಿವಾಸ ಅಯ್ಯಂಗಾರ್			
24.	ಲೆಕ್ಕಶಾಸ್ತ್ರ	ಪಿ.ಯು.ಸಿ.	4	00
	ಎಚ್. ಶ್ರೀನಿವಾಸಮೂರ್ತಿ			
25.	ಪ್ರಾಯೋಗಿಕ ಭೌತಶಾಸ್ತ್ರ	ಪಿ.ಯು.ಸಿ.	1	25
	ಬಿ. ವಿ. ನಾರಾಯಣರಾವ್			
26.	ನಾದಶಾಸ್ತ್ರ ಚಂದ್ರಿಕೆ	II ಬಿ.ಎ.	3	00
	ಜಿ. ಚನ್ನಮ್ಮ ಮತ್ತು ಟಿ. ಆರ್. ನಾಗರತ್ನ			
27.	ಗಾನಶಾಸ್ತ್ರದಾಯಿನಿ	III ಬಿ.ಎ.	4	50
	ಟಿ. ಆರ್. ನಾಗರತ್ನ			
28.	ಸಂವಿಧಾನ ಮತ್ತು ಸರ್ಕಾರ	II ಬಿ.ಎ.	10	00
	ಹೆಚ್. ಆರ್. ದಾಸೇಗೌಡ			
29.	ಭೌತವಿಜ್ಞಾನ	II ಬಿ.ಎಸ್‌ಸಿ.	4	00
	ವಿ. ಚೆಲುವರಾಜ ಅಯ್ಯಂಗಾರ್			
30.	ಸಾಂಖ್ಯಿಕಶಾಸ್ತ್ರ	II ಬಿ.ಕಾಂ.	3	00
	ಪಿ. ಎಸ್. ನಾರಾಯಣರಾವ್			
31.	ಶೈಕ್ಷಣಿಕ ಮನೋವಿಜ್ಞಾನ	III ಬಿ.ಎ.	4	50
	ಎಂ. ಬಸವಣ್ಣ			
32.	ಭೌತಶಾಸ್ತ್ರ	ಪಿ.ಯು.ಸಿ.	5	00
	ಹೆಚ್. ಡಿ. ಶಿದ್ದರಂಗಪ್ಪ			

33.	ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು ಭಾಗ 1 ಕೃಷ್ಣನಾಯಕ್	II ಬಿ.ಎ.	7	00
34.	ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು ಭಾಗ 2 ಟಿ. ಎನ್. ವಿಜಯಪ್ಪ	II ಬಿ.ಎ.	4	50
35.	ಸಾಮಾಜಿಕ ಮನೋವಿಜ್ಞಾನ ಆರ್. ಎ. ಫಣಿಶಾಯಿ	II ಬಿ.ಎ.	4	25
36.	ಕಾವ್ಯ ಸಂಪುಟ ಸಂ: ಜಿ. ಎಸ್. ಶಿವರುದ್ರಪ್ಪ	ಪಿ.ಯು.ಸಿ.	2	00
37.	ಭಾರತೀಯ ಸಂಗೀತ ವಾದ್ಯಗಳು ಎಲ್. ರಾಜಾರಾವ್	ಬಿ.ಎ.	3	25
38.	ಪರಮಾಣು ಮತ್ತು ಅದರ ರಚನೆ ಕೆ. ಶೇಷಾದ್ರಿ ಅಯ್ಯಂಗಾರ್	ಬಿ.ಎಸ್‌ಸಿ.	3	00
39.	ಪರಮಾಣು ಕೇಂದ್ರ ಮತ್ತು ಅದರ ಶಕ್ತಿ ಕೆ. ಶೇಷಾದ್ರಿ ಅಯ್ಯಂಗಾರ್	ಬಿ.ಎಸ್‌ಸಿ..	4	00
40.	ಸಂಗೀತ ಮೀಮಾಂಸೆ ಎಂ. ಆರ್. ಶಂಕರಮೂರ್ತಿ	ಬಿ.ಎಸ್‌ಸಿ.	4	00
41.	ಸಮಾಜಶಾಸ್ತ್ರ ಹೆಚ್. ಚನ್ನಬಸವಯ್ಯ ಮತು ಇತರರು	ಬಿ.ಎ.	5	00
42.	ಆಧುನಿಕ ಬೀಜಗಣಿತ ಪ್ರವೇಶಿಕಾ ಡಿ. ವಿ. ರಾಮಣ್ಣ ಮತ್ತು ಎಂ. ಕೆ. ಇಂದಿರಾದೇವಿ	II ಬಿ.ಎಸ್‌ಸಿ.	3	50
43.	ಭಾರತ: ಆರ್ಥಿಕ ಮತ್ತು ಪ್ರಾದೇಶಿಕ ಭೂವಿವರಣೆ ಎಂ. ವಾಸುದೇವರಾವ್	III ಬಿ.ಎ.	6	00
44.	ಭೂವಿಜ್ಞಾನ ಪರಿಚಯ ಸಿ. ನಾಗಣ್ಣ ಮತ್ತು ಎಂ. ಸೂರ್ಯನಾರಾಯಣ ಶಾಸ್ತ್ರಿ	ಬಿ.ಎಸ್‌ಸಿ.	4	00
45.	ಸರ್ಕಾರದ ಸ್ವರೂಪ ಪರಿಚಯ ಹೆಚ್. ಆರ್. ದಾಸೇಗೌಡ	ಪಿ.ಯು.ಸಿ.	3	00
46.	General Science Part I M. Shadaksharaswamy et. al.	I B.A.	3	00
47.	General Science Part II M. Shadaksharaswamy et. al.	II B.A.	1	30
48.	General Science (Two Chapters) M. Shadaksharaswamy et al.	I B.A.	0	50
49.	Social Science B. R. A. Rao et. al.	B.Sc.	3	50

ಕನ್ನಡ ಅಧ್ಯಯನ ಕೇಂದ್ರ ಮಾಲೆ

50. ವರ್ಣನಾತ್ಮಕ ವ್ಯಾಕರಣ		2	50
ಹೆಚ್. ಎಸ್. ಬಿಳಿಗಿರಿ			
51. ತಿಮ್ಮಪ್ಪದಾಸರ ಅರ್ಚನ		12	00
ಸಂ: ಎಂ. ವಿ. ಸೀತಾರಾಮಯ್ಯ	(ಕ್ಯಾಲಿಕೊ)	15	00
52. ಸಂಶೋಧನ ತರಂಗ ಭಾಗ 2		10	00
ಎಂ. ಚಿದಾನಂದ ಮೂರ್ತಿ	(ಕ್ಯಾಲಿಕೊ)	15	00
53. ವಿಜ್ಞಾನ ಮತ್ತು ಸಮಾಜ		4	00
ವಿವಿಧ ಲೇಖಕರು	(ಕ್ಯಾಲಿಕೊ)	5	00
54. ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ		4	50
ವಿವಿಧ ಲೇಖಕರು	(ಕ್ಯಾಲಿಕೊ)	6	00
55. ಪ್ರಾಯೋಗಿಕ ವಿಮರ್ಶೆ		6	00
ಸಂ: ಜಿ. ಎಸ್. ಶಿವರುದ್ರಪ್ಪ			
ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ	(ಕ್ಯಾಲಿಕೊ)	7	50
56. ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು		6	00
ಸಂ: ಜಿ. ಎಸ್. ಶಿವರುದ್ರಪ್ಪ			
57. ಲಾವಣಿಗಳು		7	00
ಸಂ: ಕೆ. ಮರುಳಸಿದ್ದಪ್ಪ			
58. ವಾಕ್ಯ ಮಾಣಿಕ್ಯ ಕೋಶ		5	00
ಸಂ: ಜಿ. ಎಸ್. ಶಿವರುದ್ರಪ್ಪ			
ಎಸ್. ವಿದ್ಯಾಶಂಕರ್			
59. ಸಾಹಿತ್ಯ ವಾರ್ಷಿಕ 1971		6	50
ಸಂ: ಜಿ. ಎಸ್. ಶಿವರುದ್ರಪ್ಪ			
60. ಲಕ್ಷಾಪತಿ ರಾಜನ ಕಥೆ		5	00
ಸಂ: ಚಂದ್ರಶೇಖರ ಕಂಬಾರ			
61. ಮಾತಾಡು ಲಿಂಗವೇ		9	00
ಸಂ: ಚಂದ್ರಶೇಖರ ಕಂಬಾರ			
62. ಕನ್ನಡ ನಾಟಕ: ಪರಂಪರೆ ಮತ್ತು ಪ್ರಯೋಗ		6	00
ಸಂ: ಜಿ. ಎಸ್. ಶಿವರುದ್ರಪ್ಪ			

ದತ್ತಿ ಮತ್ತು ವಿಶೇಷೋಪನ್ಯಾಸ ಮಾಲೆ

63. ಸಾರ್ವಜನಿಕದಲ್ಲಿ ಸಾತ್ತ್ವಿಕ		1	50
ಡಿ. ವಿ. ಗುಂಡಪ್ಪ			
64. ಭಾರತೀಯ ಕಾವ್ಯ ಮೀಮಾಂಸೆ		2	00
ಕೆ. ಕೃಷ್ಣಮೂರ್ತಿ			

65.	ಕರ್ನಾಟಕ ಶಾಸನ ಸಮೀಕ್ಷೆ ಕೆ. ವಿ. ರಮೇಶ್	2	50
66.	ವಚನಕಾರ ಸಿದ್ಧಲಿಂಗಯತಿ ವಿವಿಧ ಲೇಖಕರು	3	50
67.	ಸತ್ಯ ಮತ್ತು ಮೌಲ್ಯ ವಿ. ಸೀತಾರಾಮಯ್ಯ	6	00
68.	ಭರತನ ನಾಟ್ಯಶಾಸ್ತ್ರ ಆದ್ಯ ರಂಗಾಚಾರ್ಯ	2	50
69.	Phonetics in the Study of Classical Languages in the East Suniti Kumara Chatterjee	1	50
70.	Art of decision-making in an age of science S. Bhagavantham	1	50
71.	Public Law-Some Aspects	5	00
	A. T. Markose (Calico)	7	50
72.	Man and Society	4	00
	K. Subba Rao (Calico)	6	00
73.	Medical Science in Ancient India S. L. Bhatia	3	50
74.	Search for industrial harmony P. B. Gajendragadkar	3	50
75.	Universe in Hindu Thought R. N. Dandekar	2	50
76.	Origin of Indian Thought S. K. Ramachandra Rao	6	00
77.	Technology Transfer Y. Nayudamma	1	00

ಪ್ರಚಾರೋಪನ್ಯಾಸ ಮಾಲೆ

78.	ನಗೆಯ ನೆಲೆ ಎಸ್. ಕೆ. ರಾಮಚಂದ್ರರಾವ್	0	50
79.	ನಕ್ಷತ್ರಲೋಕ ಜಿ. ಟಿ. ನಾರಾಯಣರಾವ್	0	50
80.	ಭಯ – ಸರಳ ವಿಶ್ಲೇಷಣೆ ಎಂ. ಶಿವರಾಂ	0	50

81. ಶ್ರೀ ಕವಿ ಲಕ್ಷ್ಮೀಶ	0	50
ಜಿ. ಎಸ್. ಸಿದ್ಧಲಿಂಗಯ್ಯ		
82. ಶಾಂತಿನಾಥ ಕವಿ	0	50
ಕಮಲಾ ಹಂಪನಾ		
83. ಉತ್ತಂಗಿ ಚನ್ನಪ್ಪ	0	50
ಸ. ಸ. ಮಾಳವಾಡ		
84. ಬಯಲಾಟಗಳು	0	50
ಚಂದ್ರಶೇಖರ ಕಂಬಾರ		
85. ನಾಟಕದಲ್ಲಿ ನವ್ಯತೆ	0	50
ಪಿ. ಲಂಕೇಶ್		
86. ದ್ರಾವಿಡ ಸಂಖ್ಯಾವಾಚಕಗಳು	0	50
ಹಂಪ. ನಾಗರಾಜಯ್ಯ		
87. ಉಪಭಾಷೆ	0	50
ಕೃಷ್ಣ ಪರಮೇಶ್ವರ ಭಟ್ಟ		
88. ಅರವಿಂದರ ವಿಚಾರಧಾರೆ	0	50
ಸಿ. ಕೆ. ವೆಂಕಟರಾಮಯ್ಯ		
89. ಪೂರ್ಣಯೋಗಿ ಶ್ರೀ ಅರವಿಂದರು	0	50
ಕೋ. ಚನ್ನಬಸಪ್ಪ		
90. ಪ್ರಾಚೀನ ಸಂಸ್ಕೃತಿ	0	50
ಎಸ್. ಕೆ. ರಾಮಚಂದ್ರರಾವ್		
91. ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	0	50
ಎನ್. ಜಿ. ಚಂದ್ರಶೇಖರಯ್ಯ		
92. ಸಣ್ಣ ಕೈಗಾರಿಕೆಗಳು	0	50
ಆರ್. ಎಸ್. ಆರಾಧ್ಯ		
93. ವಿವಾಹ ಪದ್ಧತಿಗಳು	0	50
ಎಸ್. ಕೆ. ರಾಮಚಂದ್ರರಾವ್		
94. ಪಾನೀಯಗಳು	0	50
ಕೆ. ಎಸ್. ಲಕ್ಷ್ಮಣರಾವ್		
95. ಚಂದ್ರಲೋಕಯಾತ್ರೆ	0	50
ಪಿ. ಎಸ್. ವೆಂಕಟಸ್ವಾಮಿ ಶೆಟ್ಟಿ		
96. ಬೆಳಕಿನ ಸ್ವರೂಪ	0	50
ಬಿ. ವಿ. ನಾರಾಯಣರಾವ್		
97. ದೂರದರ್ಶನ	0	50
ಕೆ. ಶೇಷಾದ್ರಿ ಅಯ್ಯಂಗಾರ್		

98.	ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು ಕೆ. ಶೇಷಾದ್ರಿ ಅಯ್ಯಂಗಾರ್	0	50
99.	ಕುರುಡು ಎಸ್. ಟಿ. ಪುಟ್ಟಣ್ಣ	0	50
100.	ಕಣ್ಣಿನ ರೋಗಗಳು ಎಸ್. ಟಿ. ಪುಟ್ಟಣ್ಣ	0	50
101.	ಕ್ಷಯ ಎಂ ಬಸವರಾಜೆ ಅರಸು	0	50
102.	ಮೂತ್ರಪಿಂಡದ ಕೆಲವು ರೋಗಗಳು ಎಂ. ಬಸವರಾಜೆ ಅರಸು	0	50
103.	ಉಕ್ಕು: ತಯಾರಿಕೆ ಮತ್ತು ರಚನೆ ಕೆ. ಆರ್. ಮೋಹನ್	0	50
104.	ನೀರಾವರಿ ಸಮಸ್ಯೆಗಳು ಕೆ. ಎನ್. ಶಿವಶಂಕರರಾವ್	0	50
105.	ಅಂತರ್ಜಾಲ ಸಿ. ನಾಗಣ್ಣ	0	50
106.	ಪಂಪ ತ. ಸು. ಶಾಮರಾಯ	0	50

ಇತರ

107.	ಕುದುರೆ ಮುಖದೆಡೆಗೆ ಜಿ. ಟಿ. ನಾರಾಯಣರಾವ್	3	00
108.	ಹಾಡುಂಟೇ ನನ್ನ ಮಡಿಲಲ್ಲಿ ಎಲ್. ಆರ್. ಹೆಗಡೆ	3	00
109.	ಗುರುನಾನಕ್ ತ. ಸು. ಶಾಮರಾಯ	3	50
110.	ಶಿವಶರಣ್ಯಾಸಂಪುಟ ಸಂ: ಎಚ್. ದೇವೀರಪ್ಪ	15	00
111.	ಕನ್ನಡ ಭಾಷಾ ಸಾಹಿತ್ಯ ಲೇಖಿನ ಸೂಚಿ ಟಿ. ವಿ. ವೆಂಕಟರಮಣಯ್ಯ	25	00
112.	ಟಾಲ್‌ಸ್ಟಾಯ್ ವಿಚಾರಧಾರೆ ಮೂಲ: ಟಾಲ್‌ಸ್ಟಾಯ್	4	00

113. ಸಮಾಜದ ಮೇಲೆ ವಿಜ್ಞಾನದ ಪ್ರಭಾವ 2 00
ಮೂಲ: ಬರ್ಟ್ರಂಡ್ ರಸೆಲ್ [ಅನು: ಪಿ. ವಿ. ನಾರಾಯಣ]

114. Mysore State Year Book 1967–1968 10 00
Ed : G. S. Dikshit

115. Tamil Cheyyul (Tamil) 2 00
Ed. T. K. Nagambal et. al.

ಅಚ್ಚಿನಲ್ಲಿ

116.	ಜ್ಯಾಮಿತಿ	ಜಿ. ಟಿ. ನಾರಾಯಣರಾವ್
117.	ವಿಶ್ಲೇಷಣ ಗಣಿತಶಾಸ್ತ್ರ	ಆರ್. ಗುರುರಾಜರಾವ್
118.	ಪೆರಿಯ ಪುರಾಣ	ಅನು: ಎಲ್. ಗುಂಡಪ್ಪ
119.	ಬೆಳಕು ಮತ್ತು ಅದರ ಸ್ವರೂಪ	ಕೆ. ಶೇಷಾದ್ರಿ ಅಯ್ಯಂಗಾರ್
120.	ಸಸ್ಯ ರಚನಾಶಾಸ್ತ್ರ (ಥೈಲೋಫೈಟ ಮತ್ತು ಬ್ರಯೋಫೈಟ)	ಕೆ. ಲಕ್ಷ್ಮಿನರಸಿಂಹ ಮೂರ್ತಿ
121.	ವಿಸ್ತೃತ ವ್ಯವಹಾರ ಶಾಸ್ತ್ರ	ಕೆ. ಗುರುಬಸಪ್ಪ
122.	ಉಷ್ಣ ಮತ್ತು ಉಷ್ಣಬಲ ಕ್ರಿಯಾ ಶಾಸ್ತ್ರ	ಕೆ. ಶೇಷಾದ್ರಿ ಅಯ್ಯಂಗಾರ್
123.	ಶಿಕ್ಷಣ: ತತ್ವ ಹಾಗೂ ತಂತ್ರ	ಎಸ್. ಬಿ. ಗಜೇಂದ್ರಗಡ್
124.	ಇಪ್ಪತ್ತೆರಡು ಜಾನಪದ ಕಥೆಗಳು	ಸಂ: ಸಿ. ವೀರಣ್ಣ
125.	ಶಾಸನ ಪದ್ಯ ಮಂಜರಿ	ಆರ್. ನರಸಿಂಹಾಚಾರ್
126.	ಸರ್ವಜ್ಞನ ವಚನಗಳು	ಸಂ: ಎಲ್. ಬಸವರಾಜು
127.	ಕನ್ನಡ ಪಾಠಗಳು 2	ಸಂ: ಎಂ. ಚಿದಾನಂದ ಮೂರ್ತಿ ಚಂದ್ರಶೇಖರ ಕಂಬಾರ
128.	ಸಾಹಿತ್ಯ ವಾರ್ಷಿಕ 1972	ಸಂ: ಜಿ. ಎಸ್. ಶಿವರುದ್ರಪ್ಪ
129.	ಗುಮಟೆಯ ಪದಗಳು	ಸಂ: ಎಲ್. ಆರ್. ಹೆಗಡೆ
130.	ಶಾಸನಗಳಲ್ಲಿ ಗಿಡಮರಗಳು	ಬಿ. ಜಿ. ಎಲ್. ಸ್ವಾಮಿ
131.	ಮೂರ್ತಿ ಶಿಲ್ಪ: ನೆಲೆ–ಹಿನ್ನೆಲೆ	ಎಸ್. ಕೆ. ರಾಮಚಂದ್ರರಾವ್
132.	ಕ್ವಾಂಟಂ ಚಲನ ಶಾಸ್ತ್ರ	ಎಚ್. ವಿ. ಶ್ರೀರಂಗರಾಜು
133.	Kriyasakti Vidyaranya	T. N. Mallappa

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560039

ಬೆಂಗಳೂರು
ವಿಶ್ವವಿದ್ಯಾಲಯದ ಪ್ರಕಟಣೆಗಳ ವಿವರಗಳಿಗೆ
ದಯವಿಟ್ಟು ವ್ಯವಹರಿಸಿ :

ಕೋ-ಆರ್ಡಿನೇಟರ್
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು-560039

ಈಸ್ಟರ್ನ್ ಪ್ರೆಸ್, ಬೆಂಗಳೂರು-560